ಶನಿವಾರ, ನವೆಂಬರ್ 15, 2025 | ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮಕ್ಕಳ ಸಂಭ್ರಮ

ಮಕ್ಕಳ ದಿನಾಚರಣೆ ಅಂಗವಾಗಿ ಬೀದರ್‌ನಲ್ಲಿ ಶುಕ್ರವಾರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದ ಬಳಿಕ ಬಾಲಕಿಯರಿಬ್ಬರು ಕಂಡಿದ್ದು ಹೀಗೆ...

ಇಶಾಗೆ ಡಬ್ಲ್ಯುಜಿಎಂ ಪಟ್ಟ

ಬೆಳ್ತಂಗಡಿಯ ಇಶಾ ಶರ್ಮಾ ಅವರು ಕರ್ನಾಟಕದ ಮೊದಲ ಮಹಿಳಾ ಗ್ರ್ಯಾಂಡ್ ಮಾಸ್ಟರ್ ಗೌರವಕ್ಕೆ ಪಾತ್ರರಾಗಿದ್ದಾರೆ. ಅವರು ಶುಕ್ರವಾರ ಮೂರನೇ ನಾರ್ಮ್ ಪೂರೈಸಿದರು

ಜಾನುವಾರು ಕೊಂಬು ಆಕರ್ಷಣೆಗೆ ಇಂಬು

ಕೃಷಿ ಮೇಳದಲ್ಲಿ ಗಮನ ಸೆಳೆದ ಆಸಿಲ್ ಕೋಳಿ, ಬ್ಯಾಟರಿ ಚಾಲಿತ ಸೌದೆ ಒಲೆ, ಗಿರಣಿಗಳು • 85 ಕೆ.ಜಿ. ತೂಕದ ಟಗರಿಗೆ ₹2.40 ಲಕ್ಷ ಬೆಲೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳದ ಎರಡನೇ ದಿನವಾದ ಶುಕ್ರವಾರ ವಿಶಿಷ್ಟ, ವಿಭಿನ್ನ ಕೊಂಬುಗಳ ಜಾನುವಾರುಗಳನ್ನು ನೋಡಲು ಜನರು ಮುಗಿಬಿದ್ದರು.

ಆಸಿಲ್ ಕೋಳಿ, ಬ್ಯಾಟರಿ ಚಾಲಿತ ಸೌದೆ ಒಲೆ, ಮನೆಯಲ್ಲೇ ಇಟ್ಟುಕೊಳ್ಳಬಹುದಾದ ಸಣ್ಣ ಗಿರಣಿಗಳು, ಔಷಧ ಸಿಂಪಡಿಸಬಲ್ಲ ಡ್ರೋನ್‌ಗಳು ಒಂದೆಡೆ ಗಮನ ಸೆಳೆದರೆ, ಇನ್ನೊಂದೆಡೆ ಮೊಗದಗಲ ಅರಳಿ ನಿಂತ ಸೂರ್ಯಕಾಂತಿ ಹೂವುಗಳೊಂದಿಗೆ ಫೋಟೊ ತೆಗೆದುಕೊಳ್ಳುವುದರಲ್ಲಿ ಯುವಜನರು ನಿರತರಾಗಿದ್ದರು.

ಬೆಳಿಗ್ಗೆಯಿಂದಲೇ ತಂಡೋಪತಂಡವಾಗಿ ಬಂದವರು ವೇದಿಕೆ ಕಡೆಗೆ ತಲೆ ಹಾಕುತ್ತಿರಲಿಲ್ಲ. ಪ್ರದರ್ಶನಗಳತ್ತ ತೆರಳಿ ಕುತೂಹಲದಿಂದ ನೋಡಿ, ವಿವರ ಪಡೆಯುತ್ತಿದ್ದರು.

ನಾಟಿಕೋಳಿಯಂತೆ ಮನೆಯ ಹಿತ್ತಿಲಲ್ಲಿ ಸಾಕಬಹುದಾದ ಅಸಿಲ್ ಕ್ರಾಸ್ (ಅಸಲಿ ಕೋಳಿ ಕ್ರಾಸ್) ಕೋಳಿಗಳನ್ನು ನೋಡಿ ಆಕರ್ಷಿತರಾಗುತ್ತಿದ್ದ ಅನೇಕರು ಪಕ್ಕದಲ್ಲೇ ಮಾರುತ್ತಿದ್ದ ಅವುಗಳ ಮರಿಗಳನ್ನು ಖರೀದಿಸಿ ಒಯ್ದರು.

ಜಿಕೆವಿಕೆಯಲ್ಲಿ ನಡೆಯುತ್ತಿರುವ ಕೃಷಿ ಮೇಳದ ಮಳಿಗೆಯೊಂದಕ್ಕೆ ಶುಕ್ರವಾರ ಕೆ.ಎಚ್. ಮುನಿಯಪ್ಪ, ಎಂ.ಸಿ.ಸುಧಾಕರ್, ದಿನೇಶ್ ಗುಂಡೂರಾವ್, ಎಸ್.ಈ. ಸುಧೀಂದ್ರ ಭೇಟಿ ನೀಡಿದರು

ಮಾಂಸಕ್ಕೂ, ಮೊಟ್ಟೆಗೂ ಬಳಸಬಹುದಾದ ಕೋಳಿಗಳು ಇವಾಗಿದ್ದು, ನಾಟಿಕೋಳಿಗಿಂತ ಎರಡು ಪಟ್ಟು ದೊಡ್ಡದಾಗಿ ಬೆಳೆಯುತ್ತವೆ ಎಂದು ಮಾರಾಟಗಾರರು ಮಾಹಿತಿ ನೀಡಿದರು.

ಕಳಿಂಗ ಬ್ರೌನ್, ಗಿರಿರಾಜ ಕೋಳಿಗಳು, ಮಾಂಸತಳಿ ಬಾತುಕೋಳಿ, ಮೊಟ್ಟೆತಳಿ ಬಾತುಕೋಳಿಗಳ ಬಗ್ಗೆಯೂ ಜನರಿಗೆ ಕುತೂಹಲ ಉಂಟಾಗಿತ್ತು.

ಬ್ಯಾಟರಿ ಚಾಲಿತ ಸೌದೆ ಒಲೆ: ಬ್ಯಾಟರಿ ಇದ್ದ ಮೇಲೆ ಸೌದೆ ಯಾಕೆ ಎಂದು ಪ್ರಶ್ನೆ ಕೇಳುತ್ತಲೇ ಅನೇಕರು ಸೌದೆ ಒಲೆಯನ್ನು ಕುತೂಹಲದಿಂದ ನೋಡಿದರು. ಸೌದೆಯ ನಾಲ್ಕು ಸಣ್ಣ ತುಂಡುಗಳಿದ್ದರೆ ಒಂದು ಮನೆಗೆ ಒಂದು ಹೊತ್ತಿನ ಆಹಾರವನ್ನು ತಯಾರಿಸಲು ಸಾಧ್ಯ. ಬೆಂಕಿ ನಂದದಂತೆ ನಿಧಾನವಾಗಿ ಗಾಳಿಯನ್ನು ಬ್ಯಾಟರಿ ವ್ಯವಸ್ಥೆ ಮೂಲಕ ಮಾಡಲಾಗಿದೆ. ಹೊಗೆಯೂ ಹೆಚ್ಚಿಲ್ಲದ, ಸೌದೆಯೂ ಹೆಚ್ಚು ಬೇಕಾಗಿಲ್ಲದ, ಹಳ್ಳಿ ಮನೆಗಳಿಗೆ ಹೊಂದಿಕೆಯಾಗುವ ಈ ಒಲೆಯು ಜನರನ್ನು ಸೆಳೆದಿತ್ತು.

ಬೀಜೋತ್ಪಾದನೆಗೆ ಪ್ರಸಿದ್ಧವಾದ ನಾಟಿ ಸುವರ್ಣ ಟಗರು ತನ್ನ ಬೆಲೆಯಿಂದಲೇ ಗೈರತ್ತು ಪಡೆದಿತ್ತು. ಟಗರು ಬೇಕಿದ್ದರೆ ಅದು ಎಷ್ಟು ಕೆ.ಜಿ. ಇದೆ ಎಂಬುದರ ಮೇಲೆ ಬೆಲೆ ನಿರ್ಧರಿಸಲಾಗಿತ್ತು. ನಾಟಿ ಹಸುವಿನಷ್ಟು ದೊಡ್ಡದಾಗಿದ್ದ ಈ ಟಗರುಗಳು 80ರಿಂದ 85 ಕೆ.ಜಿ. ತೂಕದವರೆಗೆ ಇದ್ದವು. ಕೆ.ಜಿ.ಗೆ ₹3000 ದರ ನಿಗದಿ ಮಾಡಲಾಗಿದ್ದು, 80 ಕೆ.ಜಿ.ಯ ಟಗರಿಗೆ ₹2.40 ಲಕ್ಷ ಬೆಲೆ ನಿಗದಿ ಮಾಡಲಾಗಿತ್ತು.

ಶ್ರೀಕೃಷ್ಣ ಗೋಶಾಲಾ ಮತ್ತು ಬೇರೆ ಬೇರೆ ಗೋಶಾಲೆಯವರ ಪ್ರದರ್ಶನದಲ್ಲಿದ್ದ ವಿವಿಧ ನಮೂನೆಯ ಕೊಂಬುಗಳಿದ್ದ ಹಳ್ಳಿಕಾರ್, ಓಂಗಲ್, ಬದ್ರಿ, ಅಧಿಕ ಹಾಲು ಕೊಡುವ ಎಮ್ಮೆ, ಕೊಂಬು ಇಲ್ಲದ ರಾಠಿ ಮುಂತಾದ ತಳಿಗಳು ತಮ್ಮ ವೈಶಿಷ್ಟ್ಯದ ಕಾರಣಕ್ಕೆ ಗಮನ ಸೆಳೆದವು. ಗಾಣದ ಎತ್ತು, ಉದ್ದ ಕಿವಿಯ ಆಡುಗಳನ್ನು ನೋಡುವುದಕ್ಕೂ ಪ್ರೇಕ್ಷಕರ ಸಂಖ್ಯೆ ಹೆಚ್ಚಿತ್ತು.

ಕತ್ತಿ, ಚಾಕುಗೆ ಬೇಡಿಕೆ: ಮನೆಯಲ್ಲಿ ಬಳಸಬಹುದಾದ ಕತ್ತಿ, ಚಾಕುಗಳು ವೈವಿಧ್ಯಮಯವಾಗಿದ್ದರಿಂದ ಜನರು ಖರೀದಿಸಲು ಮುಗಿಬಿದ್ದಿದ್ದರು. ಜೇಬಿನಲ್ಲಿ ಇಟ್ಟುಕೊಂಡು ಹೋಗಬಲ್ಲ ಸಣ್ಣ ಚಾಕು, ಕತ್ತಿಗಳಿಂದ ಹಿಡಿದು ಗಿಡಗಳನ್ನೆಲ್ಲ ಸಲೀಸಾಗಿ ಸವರಬಲ್ಲ ದೊಡ್ಡ ಕತ್ತಿಗಳೂ ಇದ್ದವು.



ತನ್ನ ಕೊಂಬು ಮೂಲಕವೇ ಜನರನ್ನು ಆಕರ್ಷಿಸಿದ ಜಫರಾಬಾದಿ ತಳಿ

ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

11.85 ಲಕ್ಷ ಜನರು ಭೇಟಿ

ಉದ್ಘಾಟನೆಯ ದಿನ 8.5 ಲಕ್ಷ ರೈತರು, ವಿದ್ಯಾರ್ಥಿಗಳು, ಕೃಷಿ ಆಸಕ್ತರು ಭಾಗವಹಿಸಿದ್ದರೆ ಎರಡನೇ ದಿನ 11.85 ಲಕ್ಷ ಜನರು ಭೇಟಿ ನೀಡಿದರು. ₹1.08 ಕೋಟಿ ವಹಿವಾಟು ನಡೆದಿದೆ ಎಂದು ವಿಶ್ವವಿದ್ಯಾಲಯದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮಧ್ಯಾಹ್ನ ರಿಯಾಯಿತಿ ದರದಲ್ಲಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಒಟ್ಟು 13,840 ಮಂದಿ ಊಟ ಮಾಡಿದರು. ಪ್ರಾಯೋಜಕರು ಮೊಟ್ಟೆ ಒದಗಿಸಿದ್ದು, ಹಲವರಿಗೆ ಮೊಟ್ಟೆ ಸಿಗದೇ ಇರುವುದು ಅಸಮಾಧಾನಕ್ಕೆ ಕಾರಣವಾಯಿತು.

ಕೃಷಿಗೆ ಔಷಧ ಸಿಂಪಡಿಸಲು ಬಳಸುವ ಡ್ರೋನ್

ಕೋಳಿಗಳ ಬಗ್ಗೆ ಜನರು ಮಾಹಿತಿ ಪಡೆದರು

ಕಲಾಕೃತಿಗಳು

ಫಲಪುಷ್ಪ ಪ್ರದರ್ಶನದಲ್ಲಿ ಹೂವು, ಎಲೆಗಳಿಂದಲೇ ಮಾಡಿದ್ದ ಕಲಾಕೃತಿಗಳು ಆಕರ್ಷಕವಾಗಿದ್ದವು. ಟ್ರ್ಯಾಕ್ಟರ್, ಮೀನು, ಬಾಳೆಹಣ್ಣು, ಅನಾನಸ್, ಆನೆ, ಕೋಳಿ, ಕುರಿ, ಮೇಕೆಗಳು ಹೂವುಗಳಿಂದಲೇ ಕಲಾಕೃತಿಗಳಾಗಿ ಅರಳಿದ್ದವು. ಕರ್ನಾಟಕದ ನಕ್ಷೆಯೂ ಕುಸುಮದಳಮಯವಾಗಿತ್ತು.

ತಾಕುಗಳು: ತಾಕುಗಳಲ್ಲಿ ಬೆಳೆದಿದ್ದ ಆಲಂಕಾರಿಕ ಸೂರ್ಯಕಾಂತಿ, ಚೆಂಡು ಹೂವುಗಳ ಮುಂದೆ ನಿಂತು ಫೋಟೊ ತೆಗೆಯುವವರ ದಂಡೇ ನೆರದಿತ್ತು. ಮಿಶ್ರತಳಿಯ ಕರಬೂಜಾ, ಯುರೋಪಿಯನ್ ಸೌತೆಕಾಯಿ, ಬೀನ್ಸ್ ಆಕರ್ಷಕವಾಗಿದ್ದವು. ಆಹಾರ ಮೇಳದಲ್ಲಿ ದಾವಣಗೆರೆ ಬೆಣ್ಣೆದೋಸೆ, ಪಡ್ಡು, ಮಂಡಕ್ಕಿ ಮಿರ್ಚಿ, ತುಮಕೂರು ತಟ್ಟೆ ಇಡ್ಲಿ, ಮಂಗಳೂರು ಮೀನು, ಉತ್ತರ ಕರ್ನಾಟಕದ ರೊಟ್ಟಿ, ಎಣಗಾಯಿ ಪಲ್ಯ, ಹುಬ್ಬಳ್ಳಿಯ ಗಿರ್ಮಿಟ್ ಮಿರ್ಚಿ, ಮೇಲುಕೋಟೆ ಪುಳಿಯೋಗರೆ, ಬೆಂಗಳೂರು ಬಾಡೂಟ, ದಮ್ ಬಿರಿಯಾನಿ, ಗೌಡ್ರಮನೆ ಹಳ್ಳಿಯೂಟ.. ಹೀಗೆ ತರಹೇವಾರಿ ತಿನಿಸುಗಳ ಮಳಿಗೆಗಳಲ್ಲಿ ಭಾರಿ ಪ್ರಮಾಣದಲ್ಲಿ ಗ್ರಾಹಕರು ಕಂಡು ಬಂದರು.

ಮಕ್ಕಳು ಸೂರ್ಯ ಕಾಂತಿ ಹೂವುಗಳನ್ನು ನೋಡಿ ಸಂಭ್ರಮಿಸಿದರು

ಸುದ್ದಿ 2 ನಿಮಿಷ

ಹೂವಿನ ಮಾರುಕಟ್ಟೆಗೆ ವಿರೋಧ

ಬೆಂಗಳೂರು: ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ತೋಟಗಾರಿಕಾ ವಿಜ್ಞಾನ ವಿಶ್ವವಿದ್ಯಾಲಯದ ಆವರಣದಲ್ಲಿ ಅಂತರರಾಷ್ಟ್ರೀಯ ಹೂವಿನ ಹರಾಜು ಮಾರುಕಟ್ಟೆ ಸ್ಥಾಪಿಸುವ ಪ್ರಸ್ತಾವಕ್ಕೆ ಪರಿಸರವಾದಿಗಳು, ವಿದ್ಯಾರ್ಥಿಗಳು, ರೈತರು ಹಾಗೂ ಸ್ಥಳೀಯ ನಿವಾಸಿಗಳಿಂದ ವಿರೋಧ ವ್ಯಕ್ತವಾಗಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರಾಜೆಕ್ಟ್ ವೃಕ್ಷ ಫೌಂಡೇಷನ್ ಅಧ್ಯಕ್ಷ ವಿಜಯ್ ನಿಶಾಂತ್, ‘ವಿಶ್ವವಿದ್ಯಾಲಯದ ಸಂಶೋಧನಾ ಪ್ರದೇಶದ ಸುಮಾರು ಐದು ಎಕರೆ ಹಸಿರು ಹೊದಿಕೆಯನ್ನು ತೆರವುಗೊಳಿಸುವ ಈ ಯೋಜನೆಯಡಿ, 900ಕ್ಕೂ ಅಧಿಕ ಮರಗಳನ್ನು ಕಡಿಯುವ ಸಾಧ್ಯತೆಯಿದೆ. ಈ ಕ್ರಮವು ತೋಟಗಾರಿಕಾ ಜೀವವೈವಿಧ್ಯತೆಯನ್ನು ನಾಶಮಾಡಲಿದೆ. ಜಿಕೆವಿಕೆ ಕ್ಯಾಂಪಸ್‌ನಲ್ಲಿ ವಾಣಿಜ್ಯ ಹೂವಿನ ಮಾರುಕಟ್ಟೆ ಸ್ಥಾಪಿಸುವುದು ಬೆಂಗಳೂರಿನ ಸುಸ್ಥಿರ ನಗರಾಭಿವೃದ್ಧಿಯ ದೃಷ್ಟಿಕೋನಕ್ಕೆ ವಿರುದ್ಧವಾಗಿದೆ’ ಎಂದು ಹೇಳಿದರು.

‘ಈ ಪ್ರದೇಶದಲ್ಲಿ ಗೋಡಂಬಿ, ಮಾವು, ಹಲಸು ಸೇರಿ ವಿವಿಧ ಜಾತಿಯ ಮರಗಳಿವೆ. ಅವುಗಳನ್ನು ಕಡಿಯುವುದರಿಂದ ದಶಕಗಳ ಸಂಶೋಧನಾ ದತ್ತಾಂಶ ನಾಶವಾಗುತ್ತದೆ. 2009ರಲ್ಲಿ ಜಿಕೆವಿಕೆಯನ್ನು ಅಧಿಕೃತವಾಗಿ ಜೈವಿಕ ಪಾರಂಪರಿಕ ತಾಣವೆಂದು ಘೋಷಿಸಲಾಗಿದೆ. ನೂರಾರು ಸ್ಥಳೀಯ, ಅಪರೂಪದ ಮತ್ತು ಅಳಿವಿನಂಚಿನಲ್ಲಿರುವ ಪ್ರಭೇದಗಳಿಗೆ ನೆಲೆಯಾಗಿದೆ. ಇಲ್ಲಿ ಮಾರುಕಟ್ಟೆ ಸ್ಥಾಪಿಸಿದರೆ ಬೃಹತ್ ಪರಿಸರ ಮತ್ತು ಜೀವವೈವಿಧ್ಯ ನಷ್ಟವಾಗುತ್ತದೆ’ ಎಂದರು.

‘ಮಾರುಕಟ್ಟೆ ಸ್ಥಾಪಿಸಿದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಾವಯವ ತ್ಯಾಜ್ಯ ಉತ್ಪಾದನೆಯಾಗುತ್ತದೆ. ಇದು ಕ್ಯಾಂಪಸ್ ಮತ್ತು ಹತ್ತಿರದ ವಸತಿ ಪ್ರದೇಶಗಳಲ್ಲಿ ವಾಸನೆ, ಕೀಟಬಾಧೆ ಮತ್ತು ನೈರ್ಮಲ್ಯ ಸಮಸ್ಯೆಗಳನ್ನು ಉಂಟುಮಾಡುತ್ತದೆ. ಆದ್ದರಿಂದ ಪರ್ಯಾಯ ಸ್ಥಳದಲ್ಲಿ ಈ ಮಾರುಕಟ್ಟೆ ಸ್ಥಾಪಿಸಿ, ಪರಿಸರ ಹಾನಿಯನ್ನು ತಪ್ಪಿಸಬೇಕು’ ಎಂದು ಒತ್ತಾಯಿಸಿದರು. ಪರಿಸರವಾದಿಗಳು, ವಿದ್ಯಾರ್ಥಿಗಳು, ರೈತರು ಹಾಗೂ ಸ್ಥಳೀಯ ನಿವಾಸಿಗಳು ಉಪಸ್ಥಿತರಿದ್ದರು.

ವಿಶ್ವ ರ‍್ಯಾಂಕಿಂಗ್: ಕ್ರೈಸ್ಟ್ ಸಾಧನೆ

ಬೆಂಗಳೂರು: ಕ್ವಾಕ್ವರೇಲ್ಲಿ ಸೈಮಂಡ್ಸ್ (ಕ್ಯೂಎಸ್) ಸಂಸ್ಥೆ ಕ್ಯೂಎಸ್ ಜಾಗತಿಕ ವಿಶ್ವವಿದ್ಯಾಲಯ ರ‍್ಯಾಂಕಿಂಗ್ ಪಟ್ಟಿ ಬಿಡುಗಡೆ ಮಾಡಿದೆ. ಕಳೆದ ಬಾರಿ 681-700ನೇ ಸ್ಥಾನದಲ್ಲಿದ್ದ ಕ್ರೈಸ್ಟ್ (ಡೀಮ್ಡ್ ಟು ಬಿ ಯುನಿವರ್ಸಿಟಿ) ವಿಶ್ವವಿದ್ಯಾಲಯವು ಈ ಬಾರಿ 537ನೇ ಶ್ರೇಯಾಂಕವನ್ನು ಪಡೆದಿದೆ. ದಕ್ಷಿಣ ಏಷ್ಯಾ ವಿಭಾಗದಲ್ಲಿಯೂ ವಿಶ್ವವಿದ್ಯಾಲಯವು ಉತ್ತಮ ಸ್ಥಾನ ಪಡೆದಿದ್ದು, 140ನೇ ಸ್ಥಾನ ಗಳಿಸಿದೆ.

ಈ ವರ್ಷ ಏಷ್ಯಾದ ಪಟ್ಟಿಯಲ್ಲಿ 1,526 ವಿಶ್ವವಿದ್ಯಾಲಯಗಳಲ್ಲಿ ಕ್ರೈಸ್ಟ್ ವಿಶ್ವವಿದ್ಯಾಲಯವೂ ಸೇರಿದೆ. ಭಾರತದ 294 ಸಂಸ್ಥೆಗಳಲ್ಲಿ ಕ್ರೈಸ್ಟ್ ಕೂಡ ಒಂದಾಗಿದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಜೋಸೆಫ್ ಸಿ.ಸಿ. ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ಸ್ವಚ್ಛತಾ ಅಭಿಯಾನ ಇಂದು

ಬೆಂಗಳೂರು: ಟಿ.ಸಿ.ಪಾಳ್ಯ ರಸ್ತೆ ಮತ್ತು ವರ್ತೂರು–ಕಾಡುಗೋಡಿ ರಸ್ತೆಯಲ್ಲಿ ನ.15ರಂದು ಸಾಮೂಹಿಕ ಸ್ವಚ್ಛತಾ ಅಭಿಯಾನ ಕೈಗೊಳ್ಳಲಾಗಿದೆ ಎಂದು ನಗರ ಪಾಲಿಕೆ ಹೆಚ್ಚುವರಿ ಆಯುಕ್ತ (ಅಭಿವೃದ್ಧಿ) ಲೋಖಂಡೆ ಸ್ನೇಹಲ್ ಸುಧಾಕರ್ ತಿಳಿಸಿದರು.

ಸ್ವಚ್ಛತೆ ಕಾಪಾಡುವುದು, ರಸ್ತೆಗಳ ಸೌಂದರ್ಯ ಹೆಚ್ಚಿಸುವುದು ಮತ್ತು ನಾಗರಿಕರಿಗೆ ಆರೋಗ್ಯಕರ ಪರಿಸರ ಒದಗಿಸುವುದು ಈ ಅಭಿಯಾನದ ಉದ್ದೇಶ. 20 ಕಿ.ಮೀ ಉದ್ದದ ರಸ್ತೆಯಲ್ಲಿ ಬೆಳಿಗ್ಗೆ 6ರಿಂದ 10ರವರೆಗೆ ಅಭಿಯಾನ ನಡೆಯಲಿದೆ ಎಂದು ಮಾಹಿತಿ ನೀಡಿದ್ದಾರೆ.

ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರದ ಟಿ.ಸಿ.ಪಾಳ್ಯ ಮುಖ್ಯರಸ್ತೆಯಲ್ಲಿ ರಾಮಮೂರ್ತಿ ನಗರ ಸೇತುವೆಯಿಂದ ಭಟ್ಟರಹಳ್ಳಿವರೆಗೆ, ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ರಾಜ್ಯ ಹೆದ್ದಾರಿ 35ರಲ್ಲಿ ವರ್ತೂರು ಕೋಡಿ ಜಂಕ್ಷನ್‌ನಿಂದ ಕಾಡುಗೋಡಿ ಸೇತುವೆವರೆಗೆ ಅಭಿಯಾನ ನಡೆಯಲಿದೆ ಎಂದು ಹೇಳಿದ್ದಾರೆ.

2ನೇ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು: ಕೆಎಸ್‌ಆರ್‌ಟಿಸಿ ಚಾಲಕ-ಕಂ-ನಿರ್ವಾಹಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ 2ನೇ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿದೆ.

ಮೊದಲ ಹೆಚ್ಚುವರಿ ಆಯ್ಕೆಪಟ್ಟಿಯಲ್ಲಿ ಸ್ಥಾನ ಪಡೆದು ಕೌನ್ಸೆಲಿಂಗ್ ಮೂಲಕ ವಿಭಾಗಗಳಿಗೆ ನಿಯೋಜಿತರಾಗಿದ್ದ ಅಭ್ಯರ್ಥಿಗಳಲ್ಲಿ ವರದಿ ಮಾಡಿಕೊಳ್ಳದ 22 ಅಭ್ಯರ್ಥಿಗಳ ಸ್ಥಾನದಲ್ಲಿ 2ನೇ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಸಿದ್ದಪಡಿಸಲಾಗಿದೆ. ಈ ಪಟ್ಟಿಯನ್ನು ಶಾಂತಿನಗರದಲ್ಲಿರುವ ನಿಗಮದ ಕೇಂದ್ರ ಕಚೇರಿಯ ಸೂಚನಾ ಫಲಕದಲ್ಲಿ ಮತ್ತು ನಿಗಮದ ವೆಬ್-ಸೈಟ್ ksrtcjobs.karnataka.gov.in ನಲ್ಲಿ ಪ್ರಕಟಿಸಲಾಗಿದೆ ಎಂದು ಆಯ್ಕೆ ಸಮಿತಿ ಅಧ್ಯಕ್ಷರು ತಿಳಿಸಿದ್ದಾರೆ.

ಎಂಟರ್‌ನೋವಾ ‘ದಕ್ಷಸಂತೆ’ ಇಂದು

ಬೆಂಗಳೂರು: ದಕ್ಷ ಅಕಾಡೆಮಿಯು ನ.15ರಂದು ಬೆಳಿಗ್ಗೆ 9.30ರಿಂದ ರಾತ್ರಿ 8ರವರೆಗೆ ‘ಎಂಟರ್ ನೋವಾ’ ಎಂಬ ಹೊಸ ಆವಿಷ್ಕಾರದೊಂದಿಗೆ ‘ಯುವ ಉದ್ದಿಮೆದಾರ ನಿಮ್ಮ ಮುಂದೆ’ ಎಂಬ ಶೀರ್ಷಿಕೆಯೊಂದಿಗೆ ದಕ್ಷಸಂತೆ ಹಮ್ಮಿಕೊಂಡಿದೆ. ಅಂದ್ರಹಳ್ಳಿ ಡಿ ಗ್ರೂಪ್ ಬಡಾವಣೆಯ 60 ಅಡಿ ರಸ್ತೆಯಲ್ಲಿರುವ ಸಂಸ್ಥೆಯ ಆವರಣದಲ್ಲಿ ಈ ಬೃಹತ್ ವಾಣಿಜ್ಯ ಮೇಳ ನಡೆಯಲಿದೆ. ವಿದ್ಯಾರ್ಥಿಗಳು ನೂರಾರು ವಿವಿಧ ಬಗೆಯ ಮಳಿಗೆಗಳನ್ನು ತೆರೆಯಲಿದ್ದಾರೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಚಿತ್ರಾವಳಿ

ಬಿಹಾರದ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಜಯಗಳಿಸಿದ ಹಿನ್ನೆಲೆಯಲ್ಲಿ ರಾಜ್ಯ ಬಿಜೆಪಿ ಕಚೇರಿ ಬಳಿ ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್‌ನ ವಿರೋಧ ಪಕ್ಷದ ಸಚೇತಕ ಎನ್.ರವಿಕುಮಾರ್ ಮತ್ತಿತರರು ವಿಜಯೋತ್ಸವ ಆಚರಿಸಿ ಸಿಹಿ ತಿನಿಸಿದರು

ಬ್ಯಾಟರಾಯನಪುರ ಕ್ಷೇತ್ರದ ಸಂಪಿಗೆಹಳ್ಳಿ ವಾರ್ಡ್ ವ್ಯಾಪ್ತಿಯ ಚೊಕ್ಕನಹಳ್ಳಿಯಲ್ಲಿ ಗುರುವಾರ ಸಂಜೆ 'ವಿಜಯ ಸಂಕಲ್ಪ' ಶೀರ್ಷಿಕೆಯ ಅಡಿಯಲ್ಲಿ ಆಯೋಜಿಸಿದ್ದ ಪಕ್ಷದ ಪ್ರಮುಖರ ಸಭೆಯಲ್ಲಿ ಬಿಜೆಪಿ ರಾಜ್ಯ ಘಟಕದ ಕಾರ್ಯದರ್ಶಿ ಎಚ್.ಸಿ. ತಮ್ಮೇಶ್ ಗೌಡ, ಮುಖಂಡರಾದ ನರಸಿಂಹಮೂರ್ತಿ, ಕೃಷ್ಣಮೂರ್ತಿ, ಹನುಮಂತಗೌಡ, ಶ್ರೀನಿವಾಸ ರೆಡ್ಡಿ, ಪುಟ್ಟರಾಜು, ಮುನಿಸ್ವಾಮಿಗೌಡ ಭಾಗವಹಿಸಿದ್ದರು

ನಾಡೋಜ ಡಾ. ಬರಗೂರು ಪ್ರತಿಷ್ಠಾನ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಚಲನಚಿತ್ರ ನಿರ್ದೇಶಕ ಶಿವರುದ್ರಯ್ಯ ಮತ್ತು ಲೇಖಕಿ ಬಿ.ಟಿ. ಲಲಿತಾ ನಾಯಕ್ ಅವರಿಗೆ ‘ನಾಡೋಜ ಬರಗೂರು ಪ್ರಶಸ್ತಿ’ ಪ್ರದಾನ ಮಾಡಲಾಯಿತು. (ಎಡದಿಂದ) ಪ್ರತಿಷ್ಠಾನದ ಕಾರ್ಯದರ್ಶಿ ಎ.ವಿ. ಲಕ್ಷ್ಮೀನಾರಾಯಣ, ಪ್ರಧಾನ ಕಾರ್ಯದರ್ಶಿ ಸುಂದರರಾಜ್ ಅರಸು, ಉಪಾಧ್ಯಕ್ಷ ಮೈತ್ರಿ ಬರಗೂರು, ನಿವೃತ್ತ ಐಎಎಸ್ ಅಧಿಕಾರಿ ಐ.ಎಂ. ವಿಠಲಮೂರ್ತಿ, ವಿಧಾನ ಪರಿಷತ್ತಿನ ಮುಖ್ಯ ಸಚೇತಕ ಸಲೀಂ ಅಹಮ್ಮದ್, ಸಾಹಿತಿ ಬರಗೂರು ರಾಮಚಂದ್ರಪ್ಪ, ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲ ನಾಗೇಂದ್ರ ಕುಮಾರ್ ಹಾಗೂ ಪ್ರತಿಷ್ಠಾನದ ಅಧ್ಯಕ್ಷ ರಾಜಪ್ಪ ದಳವಾಯಿ ಉಪಸ್ಥಿತರಿದ್ದರು

ಅಥಣಿಯ ಗಚ್ಚಿನ ಮಠ ಹಾಗೂ ರಾಷ್ಟ್ರೀಯ ಬಸವ ತತ್ವ ಪರಿಷತ್ ಜಂಟಿಯಾಗಿ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಮುರುಘೇಂದ್ರ ಶಿವಯೋಗಿಗಳ ಜಯಂತಿ, ಬಸವೋತ್ಸವ ಸಮಾರಂಭದಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರನ್ನು ಗೌರವಿಸಲಾಯಿತು. ಕಾರ್ಮಿಕ ಸಚಿವ ಸಂತೋಷ ಲಾಡ್, ಶಾಸಕ ಎಂ.ಕೃಷ್ಣಪ್ಪ, ಮಾಜಿ ಶಾಸಕ ಇ.ಕೃಷ್ಣಪ್ಪ, ಮಾಜಿ ಉಪ ಮೇಯರ್ ಪುಟ್ಟರಾಜು ಉಪಸ್ಥಿತರಿದ್ದರು

‘ಪ್ರತಿಭಾವಂತರ ಚರಿತ್ರೆ ದಾಖಲಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಪ್ರದೇಶದಲ್ಲಿ ಹಲವು ಪ್ರತಿಭಾವಂತ ಮಹಿಳೆಯರು ಮತ್ತು ವಿವಿಧ ಕ್ಷೇತ್ರದ ಸಾಧಕರಿದ್ದಾರೆ. ಆದರೆ, ಹಲವರ ಜೀವನ ಚರಿತ್ರೆಗಳು ಪುಸ್ತಕಗಳಲ್ಲಿ ದಾಖಲಾಗುತ್ತಿಲ್ಲ ಎಂದು ವಕೀಲೆ ಹೇಮಲತಾ ಮಹಿಷಿ ಬೇಸರ ವ್ಯಕ್ತಪಡಿಸಿದರು.

ನಗರದ ಚಿತ್ರಕಲಾ ಪರಿಷತ್‌ನಲ್ಲಿ ಹಿತೈಷಿಣಿ ಮಹಿಳಾ ಅಧ್ಯಯನ ಕೇಂದ್ರ, ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಸಮತಾ ಅಧ್ಯಯನ ಕೇಂದ್ರದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರೊ.ಆರ್. ಸುನಂದಮ್ಮ ಅವರ ‘ಎದೆಯ ಪದ’ (ಎಸ್.ಜಿ. ಲಕ್ಷ್ಮೀ ದೇವಮ್ಮ ಅವರ ಆತ್ಮಕಥನ) ಕೃತಿ ಜನಾರ್ಪಣೆ ಮಾಡಿ ಮಾತನಾಡಿದರು.

ಗ್ರಾಮೀಣ ಭಾಗದಲ್ಲಿ ಎಲೆಮರೆ ಕಾಯಿಯಂತಿರುವ ಮಹಿಳಾ ಸಾಧಕರ ಚರಿತ್ರೆ ಪುಸ್ತಕ ರೂಪದಲ್ಲಿ ದಾಖಲಾದಾಗ ನಗರವಾಸಿಗಳು ಸೇರಿದಂತೆ ಇಡೀ ಸಮಾಜಕ್ಕೆ ಪರಿಚಯವಾಗುತ್ತದೆ. ಆಗ ಅದು ಮಹಿಳಾ ಸಾಹಿತ್ಯ, ಚರಿತ್ರೆಗೆ ಸೇರಿಕೊಳ್ಳುತ್ತದೆ ಎಂದು ಹೇಳಿದರು.

ಜಾನಪದ ಕಲಾವಿದೆಯ ಜೀವನ ಸಾಧನೆಯ ಕುರಿತು ಪುಸ್ತಕ ತಂದಿರುವುದು ಸಂತೋಷದ ಸಂಗತಿ. ಗ್ರಾಮೀಣ ಪ್ರದೇಶದ ಮಹಿಳೆ ತನ್ನ ಪ್ರತಿಭೆಯಿಂದ ಸಾಧನೆ ಮಾಡಿದ್ದಾರೆ ಎಂಬುದು ಈ ಪುಸ್ತಕ ಓದಿದಾಗ ಅರ್ಥವಾಗುತ್ತದೆ. ಲಕ್ಷ್ಮೀ ದೇವಮ್ಮ ಜಾನಪದ ಕಲಾವಿದೆಯಾಗಿಯೇ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. ಅವರಿಗೆ ರಾಜ್ಯೋತ್ಸವ ಪ್ರಶಸ್ತಿಯು ದೊರಕಿದೆ. ಅವರ ಸಾಧನೆ ಇತರರಿಗೆ ಮಾದರಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಓದು, ಬರಹ ತಿಳಿಯದ ಹಲವರಿಗೆ ತಮ್ಮ ಆತ್ಮಚರಿತ್ರೆ ಬರೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಬರೆಯಲು ಗೊತ್ತಿದ್ದರೂ ಕೃತಿ ಬರೆಯುವಷ್ಟು ಬರವಣಿಗೆ ಅವರಲ್ಲಿ ಇರುವುದಿಲ್ಲ. ಅಂತಹ ಸಂದರ್ಭದಲ್ಲಿ ಸಾಧಕರ ಬಾಯಿಯಿಂದಲೇ ಅವರ ಜೀವನ ಚರಿತ್ರೆ ಕೇಳಿಸಿಕೊಂಡು ಮತ್ತೊಬ್ಬರು ಬರೆಯುವುದು ಅದೃಷ್ಟದ ಕೆಲಸ ಎಂದರು.

ಸಾಹಿತಿ ಸಬೀಹಾ ಭೂಮಿಗೌಡ ಮಾತನಾಡಿ, ‘ಸಾಹಿತ್ಯ, ಮಹಿಳಾ ಅಧ್ಯಯನ ಮತ್ತು ವಿವಿಧ ಚಳವಳಿಗಳಲ್ಲಿ ತೊಡಗಿಸಿಕೊಂಡಿರುವ ಹಲವರು ಕಾರ್ಯಕ್ರಮದಲ್ಲಿ ಸೇರಿರುವುದು ಬಹಳ ಅರ್ಥಪೂರ್ಣವಾದದ್ದು. ಈ ಮೂರು ಕ್ಷೇತ್ರದಲ್ಲಿ ಇರುವವರನ್ನು ವೇದಿಕೆಗೆ ತಂದಿದ್ದು ‘ಎದೆಯ ಪದ’ ಪುಸ್ತಕ. ಇದು ಎಲ್ಲರನ್ನೂ ಒಳಗೊಳ್ಳುವ ಕೃತಿಯಾಗಿದೆ’ ಎಂದು ನುಡಿದರು. ಕೃತಿ ಕುರಿತು ಸಾಹಿತಿ ಎನ್.ಗಾಯತ್ರಿ ಮಾತನಾಡಿದರು.

ನಗರದಲ್ಲಿ ಗುರುವಾರ ಆರ್. ಸುನಂದಮ್ಮ (ಬಲದಿಂದ ಮೊದಲನೆಯವರು) ಅವರ ‘ಎದೆಯ ಪದ’ ಕೃತಿ ಜನಾರ್ಪಣೆ ಕಾರ್ಯಕ್ರಮದಲ್ಲಿ ಹೇಮಲತಾ ಮಹಿಷಿ ಮತ್ತು ಸಬೀಹಾ ಭೂಮಿಗೌಡ ಸಮಾಲೋಚನೆಯಲ್ಲಿ ತೊಡಗಿದರು ಎನ್. ಗಾಯತ್ರಿ, ಆರ್. ಪೂರ್ಣಿಮಾ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಸ್ಫೋಟ: ಎಂಟು ಪೊಲೀಸರಿಗೆ ಗಾಯ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ನೌಗಾಮ್ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ರಾತ್ರಿ ಸ್ಫೋಟ ಸಂಭವಿಸಿ ಎಂಟು ಮಂದಿ ಪೊಲೀಸರು ಗಾಯಗೊಂಡಿದ್ದಾರೆ.

ಫರೀದಾಬಾದ್‌ನಲ್ಲಿ ಈಚೆಗೆ ವಶಪಡಿಸಿಕೊಂಡ ಸ್ಫೋಟಕಗಳ ಮಾದರಿಯನ್ನು ಸಾಗಿಸುತ್ತಿದ್ದಾಗ ಸ್ಫೋಟ ಸಂಭವಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಂಕಿತ ಉಗ್ರ ಡಾ. ಮುಜಮ್ಮಿಲ್ ಗನಿಯ ನಿವಾಸದಿಂದ ವಶಪಡಿಸಿಕೊಂಡಿದ್ದ 360 ಕೆ.ಜಿ. ಸ್ಫೋಟಕಗಳನ್ನು ಜಮ್ಮು ಮತ್ತು ಕಾಶ್ಮೀರದ ಪೊಲೀಸರು ಫರೀದಾಬಾದ್‌ನಿಂದ ಇಲ್ಲಿಗೆ ತಂದಿದ್ದರು. ವಶಪಡಿಸಿಕೊಂಡ ಅಷ್ಟೂ ಸ್ಫೋಟಕಗಳನ್ನು ಪೊಲೀಸ್ ಠಾಣೆಯಲ್ಲಿ ಸಂಗ್ರಹಿಸಿಡಲಾಗಿತ್ತೇ ಎಂಬುದು ತಕ್ಷಣಕ್ಕೆ ಸ್ಪಷ್ಟವಾಗಿಲ್ಲ.

ಐವರಿಗೆ ‘ಬ್ರಹ್ಮಶ್ರೀ ನಾರಾಯಣ ಗುರು ಪ್ರಶಸ್ತಿ’

ಬೆಂಗಳೂರು: ಹಿಂದುಳಿದ ವರ್ಗಗಳ ಮಾನ್ಯತೆ ಪಡೆದಿರುವ ಸಂಪಾದಕರ ಮತ್ತು ವರದಿಗಾರರ ಸಂಘ ನೀಡುವ ‘ಬ್ರಹ್ಮಶ್ರೀ ನಾರಾಯಣ ಗುರು’ ಪ್ರಶಸ್ತಿಗೆ ಐವರು ಆಯ್ಕೆಯಾಗಿದ್ದಾರೆ. ಸಹಕಾರ ಕ್ಷೇತ್ರದಿಂದ ಸರೋಜಾ ಬನ್ನಪ್ಪ, ಸಮಾಜಸೇವೆ ಕ್ಷೇತ್ರದಿಂದ ಎಚ್.ಆರ್. ಜಯರಾಮ್, ವೈದ್ಯಕೀಯ ಕ್ಷೇತ್ರದಿಂದ ಡಾ.ನಾಗೇಶ್ ಬಸವರಾಜ, ಸಂಕೀರ್ಣ ಕ್ಷೇತ್ರದಿಂದ ಪುಂಡಲೀಕ ಕಲ್ಲಿಗನೂರ, ಸಮಾಜಸೇವಾ ಕ್ಷೇತ್ರದಿಂದ ಅಮಿತಾ ಆನಂದ್ ಆಯ್ಕೆಯಾಗಿದ್ದಾರೆ.

23ರಂದು ಬೆಳಿಗ್ಗೆ 11ಕ್ಕೆ ಶೇಷಾದ್ರಿಪುರದ ಗ್ರೀನ್ ಪಾಥ್ ಹೋಟೆಲ್‌ನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಗಂದರ್ವ ಶ್ರೀನಿವಾಸ್ ತಿಳಿಸಿದ್ದಾರೆ.

ಹಿಂದುಸ್ತಾನ್ ಫೈಲ್ಸ್ ಚಿತ್ರಕಲಾ ಪ್ರದರ್ಶನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಬಂಗಾಳದ ವಿರಾಸತ್ ಆರ್ಟ್, ಕರ್ನಾಟಕ ಚಿತ್ರಕಲಾ ಪರಿಷತ್ತಿನ ಸಹಯೋಗದೊಂದಿಗೆ ಹಮ್ಮಿಕೊಂಡಿರುವ ‘ಹಿಂದುಸ್ತಾನ್ ಫೈಲ್ಸ್: 1757-1950’ ಕಲಾಕೃತಿಗಳ ಪ್ರದರ್ಶನಕ್ಕೆ ಶುಕ್ರವಾರ ಚಿತ್ರಕಲಾ ಪರಿಷತ್ತಿನಲ್ಲಿ ಚಾಲನೆ ನೀಡಲಾಗಿದೆ.

ಭಾರತದ ಶ್ರೀಮಂತ ಇತಿಹಾಸ ಮತ್ತು ಪರಂಪರೆಯನ್ನು ತಿಳಿಸುವ ಉದ್ದೇಶದಿಂದ ಹಮ್ಮಿಕೊಂಡಿರುವ ಈ ಕಲಾಪ್ರದರ್ಶನವು ನ.23ರವರೆಗೆ ಪ್ರತಿದಿನ ಬೆಳಿಗ್ಗೆ 11ರಿಂದ ಸಂಜೆ 6ರವರೆಗೆ ಸಾರ್ವಜನಿಕ ವೀಕ್ಷಣೆಗೆ ಲಭ್ಯವಿದೆ.

1757ರಲ್ಲಿ ಭಾರತದಲ್ಲಿ ಬ್ರಿಟಿಷರ ಆಡಳಿತ ಆರಂಭವಾದ ವರ್ಷ. ಅಲ್ಲಿಂದ 1950ರವರೆಗಿನ ಚಿತ್ರಣವನ್ನು ಕಟ್ಟಿಕೊಡುವ ಅಪರೂಪದ ಚಿತ್ರ, ಛಾಯಾಚಿತ್ರ, ಪತ್ರ, ಆಡಳಿತದ ದಾಖಲೆಗಳು, ಇತಿಹಾಸದ ವಸ್ತುಗಳ ಸಂಗ್ರಹವನ್ನು ಇಲ್ಲಿ ಪ್ರದರ್ಶಿಸಲಾಗುತ್ತಿದೆ. 250ಕ್ಕೂ ಅಧಿಕ ಕಲಾಕೃತಿಗಳು ಪರಿಷತ್ತಿನ ನಾಲ್ಕು ಗ್ಯಾಲರಿಗಳಲ್ಲಿ ಪ್ರದರ್ಶನಗೊಳ್ಳುತ್ತಿವೆ.

ನ.17ರಂದು ಬೆಳಿಗ್ಗೆ 9.30ಕ್ಕೆ ವಿಚಾರ ಸಂಕಿರಣ ನಡೆಯಲಿದೆ. ಕಲಾವಿದರಾದ ಮೀರಾ ಚಕ್ರವರ್ತಿ, ಮನೋಹರ್ ಯಡವಟ್ಟಿ, ನಾನಕ್ ಗಂಗೋಪಾಧ್ಯಾಯ್ ಭಾಗವಹಿಸಲಿದ್ದಾರೆ.

ಕರ್ನಾಟಕ ಚಿತ್ರಕಲಾ ಪರಿಷತ್‌ನ ಉಪಾಧ್ಯಕ್ಷ ಟಿ. ಪ್ರಭಾಕರ್ ಚಾಲನೆ ನೀಡಿದರು. ವಿರಾಸತ್ ಆರ್ಟ್ ನಿರ್ದೇಶಕ ಗಣೇಶ್ ಪ್ರತಾಪ್ ಸಿಂಗ್, ಪ್ರದರ್ಶನದ ಕ್ಯುರೇಟರ್ ಬಸು ಆಚಾರ್ಯ, ಕಾರ್ಯಕ್ರಮ ನಿರ್ದೇಶಕ ಎಲೋರಾ ಸಿಂಗ್ ಭಾಗವಹಿಸಿದ್ದರು.

‘ಹಿಂದುಸ್ತಾನ್ ಫೈಲ್ಸ್: 1757–1950’ ಕಲಾಕೃತಿಗಳನ್ನು ಟಿ. ಪ್ರಭಾಕರ್, ಗಣೇಶ್ ಪ್ರತಾಪ್ ಸಿಂಗ್, ಬಸು ಆಚಾರ್ಯ, ಎಲೋರಾ ಸಿಂಗ್ ವೀಕ್ಷಿಸಿದರು

ಒಂಬತ್ತನೇ ರಾಷ್ಟ್ರೀಯ ಜಂಟಿ ಐಇಡಿ ಸ್ಪರ್ಧೆ • 28 ತಂಡಗಳು ಭಾಗಿ

ರಾಜ್ಯದ ಐಎಸ್‌ಡಿಗೆ ಹ್ಯಾಟ್ರಿಕ್ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂಬತ್ತನೇ ರಾಷ್ಟ್ರೀಯ ಜಂಟಿ ಐಇಡಿ ಸ್ಪರ್ಧೆಯಲ್ಲಿ ಕರ್ನಾಟಕದ ಆಂತರಿಕ ಭದ್ರತಾ ವಿಭಾಗ (ಐಎಸ್‌ಡಿ) ಕೌಂಟರ್–ಐಇಡಿ ತಂಡವು ಹ್ಯಾಟ್ರಿಕ್ ಗೆಲುವು ಸಾಧಿಸಿದೆ. ನವದೆಹಲಿಯ ಎನ್‌ಎಸ್‌ಜಿಯಲ್ಲಿ ನಡೆದ ಸ್ಪರ್ಧೆಯಲ್ಲಿ ರಾಜ್ಯ ಪೊಲೀಸರ ತಂಡ ಗೆಲುವು ದಾಖಲಿಸಿದೆ.

ವಿವಿಧ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳೂ ಸೇರಿದಂತೆ 28 ತಂಡಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಕರ್ನಾಟಕ ತಂಡವನ್ನು ಕರ್ನಲ್ ಎಸ್.ಎಂ. ಅಕುಲ್ ಬಾಲಕೃಷ್ಣ ಅವರು ಮುನ್ನಡೆಸಿದ್ದರು.

ರಾಷ್ಟ್ರೀಯ ಜಂಟಿ ಕೌಂಟರ್ – ಐಇಡಿ ಸ್ಪರ್ಧೆಯಲ್ಲಿ ಬಾಂಬ್ ವಿಲೇವಾರಿ (ಬಿ.ಡಿ) ತಂತ್ರಗಳು, ಐಇಡಿ ಗುರುತಿಸುವಿಕೆ ಮತ್ತು ತಟಸ್ಥೀಕರಣ, ಸಂಕೀರ್ಣ ಸನ್ನಿವೇಶ ಆಧಾರಿತ ಕಾರ್ಯಾಚರಣೆಗಳ ಕುರಿತು ತಂಡಗಳನ್ನು ಕಟ್ಟುನಿಟ್ಟಾಗಿ ಪರೀಕ್ಷಿಸಲಾಗುತ್ತದೆ. ರಾಜ್ಯ ತಂಡವು ಎಲ್ಲಾ ವಿಭಾಗಗಳಲ್ಲಿಯೂ ಅತ್ಯುತ್ತಮ ಪ್ರದರ್ಶನ ನೀಡುವ ಮೂಲಕ ಪ್ರಥಮ ಸ್ಥಾನ ಪಡೆಯಿತು. ಹ್ಯಾಟ್ರಿಕ್ ಗೆಲುವು ಸಾಧಿಸಿದ ದೇಶದ ಏಕೈಕ ಪೊಲೀಸ್ ಪಡೆ ಎಂಬ ಖ್ಯಾತಿಗೆ ರಾಜ್ಯ ತಂಡವು ಭಾಜನವಾಯಿತು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಸತತ ಮೂರು ವರ್ಷವೂ ರಾಜ್ಯದ ತಂಡವು ಜಯ ಗಳಿಸುವ ಮೂಲಕ ಉತ್ತಮ ಸಾಧನೆ ತೋರಿದೆ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರು ಶ್ಲಾಘಿಸಿದ್ದಾರೆ.

ಸ್ಪರ್ಧೆಯಲ್ಲಿ ಜಯಗಳಿಸಿದ ಕರ್ನಾಟಕದ ಆಂತರಿಕ ಭದ್ರತಾ ವಿಭಾಗದ ತಂಡ

ವಿವಿಧ ಸ್ಪರ್ಧೆಗಳು (ಎಲ್ಲ ವಿಭಾಗದಲ್ಲೂ ಪ್ರಥಮ)

- ಬಿ.ಡಿ ಕೋರ್ಸ್‌ಗಳು ಮತ್ತು ಬಿ.ಡಿ ಅನುಭವ
- ಸ್ಫೋಟಕಗಳು, ಬಿ.ಡಿ ಉಪಕರಣಗಳು, ಐಇಡಿ ಪತ್ತೆ ಹಚ್ಚುವಿಕೆ
- ಐಇಡಿಗಳ ತಯಾರಿಕೆ
- ಮೌಖಿಕ ಪರೀಕ್ಷೆ
- ರಸಪ್ರಶ್ನೆ ಪರೀಕ್ಷೆ
- ಬಿ.ಡಿ ಸಲಕರಣೆ ನಿರ್ವಹಣೆ
- ಕೌಂಟರ್–ಐಇಡಿ ವ್ಯಾಯಾಮಗಳು (ವಿವಿಧ ಸನ್ನಿವೇಶಗಳು)
- ಕೇಸ್ ಸ್ಟಡಿ ಪ್ರಸ್ತುತಿಪಡಿಸುವಿಕೆ
- ಕೆ-9 (ಸ್ಫೋಟಕ ಪತ್ತೆ ಶ್ವಾನ ಸ್ಪರ್ಧೆ)
- ಹೊಸ ಆವಿಷ್ಕಾರಗಳು

ರೋಹೆನ್ ಹ್ಯಾಟ್ರಿಕ್: ಬಿಎಫ್‌ಸಿಗೆ ಸುಲಭ ಜಯ

ಬೆಂಗಳೂರು: ಸಿ. ರೋಹೆನ್ ಸಿಂಗ್ (34ನೇ ನಿ.,75ನೇ ನಿ. ಹಾಗೂ 82ನೇ ನಿ.) ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಶುಕ್ರವಾರ 8–1ರಿಂದ ಎಂಎಫ್‌ಎಆರ್ ಯೂನಿಯನ್ ಎಫ್‌ಸಿ ವಿರುದ್ಧ ಸುಲಭ ಜಯ ದಾಖಲಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆರಂಭದಿಂದಲೂ ಪ್ರಾಬಲ್ಯ ಸಾಧಿಸಿದ ಬಿಎಫ್‌ಸಿ ತಂಡವು ನಿರಾಯಾಸವಾಗಿ ಪಂದ್ಯವನ್ನು ತನ್ನದಾಗಿಸಿಕೊಂಡಿತು.

ದಿನದ ಇನ್ನೊಂದು ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು 2–1ರಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡದ ವಿರುದ್ಧ ರೋಚಕ ಗೆಲುವು ಸಾಧಿಸಿತು.

ಮತ್ತೊಂದು ಪಂದ್ಯದಲ್ಲಿ ಸಂಘಟಿತ ಆಟವಾಡಿದ ಎಂಇಜಿ ಆ್ಯಂಡ್ ಸೆಂಟರ್ ಎಫ್‌ಸಿ ತಂಡವು 4–0ಯಿಂದ ಭಾರತ್ ಬೆಂಗಳೂರು ಎಫ್‌ಸಿ ತಂಡವನ್ನು ನಿರಾಯಾಸವಾಗಿ ಮಣಿಸಿತು.

ಬೂಮ್ರಾಗೆ ಪಂಚಗೊಂಚಲು
ಕೋಲ್ಕತ್ತದಲ್ಲಿ ಶುಕ್ರವಾರ ದಕ್ಷಿಣ ಆಫ್ರಿಕಾ ಎದುರು ಆರಂಭವಾದ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಭಾರತದ ಜಸ್‌ಪ್ರೀತ್ ಬೂಮ್ರಾ (27ಕ್ಕೆ5) ವಿಕೆಟ್ ಪಂಚಗೊಂಚಲು ಸಾಧನೆ ಮಾಡಿದರು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಭೂಮಿಕಾ: ಅರಮನೆ 'ಅಮ್ಮ'ನ ಅಂತರಂಗ
ತಮ್ಮ ಮಕ್ಕಳೊಂದಿಗಿನ ಒಡನಾಟದ ಕುರಿತು ಮೈಸೂರು ರಾಜಮನೆತನದ ತ್ರಿಷಿಕಾ ಕುಮಾರಿ ಅವರ ಸಂದರ್ಶನ
ಪುಟ: 4

ಸೆನ್ಸೆಕ್ಸ್ 84,562 | ನಿಫ್ಟಿ 25,910 | $/₹ 88.66 | ಚಿನ್ನ (Std. 10g) ₹1,32,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,77,100 (ಬೆಂಗಳೂರು)

INSIGHTSIAS SIMPLIFYING IAS EXAM PREPARATION
ಕನ್ನಡ ರಾಜ್ಯೋತ್ಸವ ಪ್ರಯುಕ್ತ
INSTAKAS
ಇನ್‌ಸೈಟ್ಸ್ ಐಎಎಸ್ & INSTA ಕೆಎಎಸ್ ವತಿಯಿಂದ
ಬೆಂಗಳೂರಿನಲ್ಲಿ ಐಸಿರಿ 2025- ಕರುನಾಡ ಸಾಂಸ್ಕೃತಿಕ ಉತ್ಸವ, ಸರ್ವರಿಗೂ ಆದರದ ಸುಸ್ವಾಗತ
ದಿನಾಂಕ: 16/11/2025
ಸಮಯ: 3 PM, ಭಾನುವಾರ
ಸ್ಥಳ: ಇನ್‌ಸೈಟ್ಸ್ ಐಎಎಸ್ ಮುಖ್ಯ ಕಛೇರಿ ಮುಂಭಾಗ, ಚಂದ್ರ ಲೇಔಟ್, ಬೆಂಗಳೂರು

VINAY KUMAR G B
Founder & Director, Insights IAS
OGP 2026
A FOUNDATION COURSE FOR UPSC CSE 2026
BATCH-10
STARTS ON
24TH NOVEMBER 2025
Fee: Bengaluru (Offline) ~~₹ 1,38,000/-~~ ₹ 1,24,200/- | Bengaluru (Online) ~~₹ 1,00,000/-~~ ₹ 90,000/- | Early Bird Offer: 10% Till 20th Nov 2025
KPSC PRE-CUM-MAINS PROGRAM 2025 BENGALURU
BATCH-7
STARTS ON
17TH NOVEMBER 2025
Fee: ~~RS. 60,000/-~~ ₹ 54,000/- | ~~RS. 50,000/-~~ ₹ 45,000/- | Early Bird Offer: 10% till 15th Nov. 2025

ಕೇಶ ಸಂರಕ್ಷಣೆ
ಮಂಜುಶ್ರೀ ಹೇರ್ ಆಯಿಲ್
ಆಯುರ್ವೇದ ರೀತ್ಯಾ ತೈಲಪಾಕ ವಿಧಿಯಿಂದ ತಯಾರಿಸಲಾಗಿದೆ.
SDM
ತಯಾರಕರು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ–574 118, ಉಡುಪಿ ಜಿಲ್ಲೆ, ಕರ್ನಾಟಕ.
sdmaph@sdmayurvedacollegeudupi.in

ಬೆಳ್ಳಿ ಧಾರಣೆ ₹4,200 ಇಳಿಕೆ

ವಿವರ 10

ಚಿನಕುರುಳಿ ಪ್ರಕಾಶ್ ಶೆಟ್ಟಿ

ಬಿಹಾರವಿಡೀ 'ನಿಮೋ' ಸುನಾಮಿ

ಎನ್‌ಡಿಎಗೆ ಪ್ರಚಂಡ ಗೆಲುವು
• ಮ್ಯಾಜಿಕ್ ಮಾಡದ ಪ್ರಶಾಂತ್ ಕಿಶೋರ್



ಎನ್‌ಡಿಎ ಮೈತ್ರಿಕೂಟ	
ಬಿಜೆಪಿ	89
ಜೆಡಿಯು	85
ಎಲ್‌ಜೆಪಿ (ಪಾಸ್ವಾನ್ ಬಣ)	19
ಎಚ್‌ಎಎಂಎಸ್	5
ಆರ್‌ಎಲ್‌ಎಂ	4
ಎನ್‌ಡಿಎ	202

ಮಹಾಮೈತ್ರಿ	34
ಆರ್‌ಜೆಡಿ	25
ಕಾಂಗ್ರೆಸ್	6
ಸಿಪಿಐಎಂಎಲ್	2
ಸಿಪಿಐ	1

ಇತರೆ	2
ಎಐಎಂಐಎಂ	5
ಒಟ್ಟು ಸ್ಥಾನ	243

• ಮಂಜುನಾಥ ಹೆಬ್ಬಾರ್

ನವದೆಹಲಿ: ಬಿಹಾರದ ರಾಜಕೀಯ ಕಣದಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್– ಪ್ರಧಾನಿ ನರೇಂದ್ರ ಮೋದಿ (ನಿ–ಮೋ) ಜೋಡಿಯ ಸುನಾಮಿಯ ಅಲೆಗೆ ಎನ್‌ಡಿಎ ಮೈತ್ರಿಕೂಟವು ಪ್ರಚಂಡ ದಿಗ್ವಿಜಯ ಸಾಧಿಸಿದೆ. ವಿಪಕ್ಷ ನಾಯಕ ರಾಹುಲ್ ಗಾಂಧಿ– ತೇಜಸ್ವಿ ಯಾದವ್ ಜೋಡಿ ನೇತೃತ್ವದ ಮಹಾಮೈತ್ರಿಕೂಟ ತರಗೆಲೆಯಂತೆ ದೂಳೀಪಟಗೊಂಡಿದೆ.

ಮೋದಿ–ನಿತೀಶ್ ಜೋಡಿಯ ಪ್ರಭಾವಳಿಯ ನೆರವಿನಿಂದ ಮೈತ್ರಿಕೂಟವು 203 ಸ್ಥಾನಗಳನ್ನು ಗೆದ್ದು ಬೀಗಿದೆ. 2010ರಲ್ಲಿ ನಿತೀಶ್– ಬಿಜೆಪಿಯ ಸುಶೀಲ್ ಕುಮಾರ್ ಜೋಡಿ ಮಾಡಿದ ಸಾಧನೆಯನ್ನು ಪುನರಾವರ್ತಿಸಿದೆ. ಕಳೆದ ಚುನಾವಣೆಯಲ್ಲಿ 12 ಸಾವಿರ ಮತಗಳ ಕಿರು ಅಂತರದಿಂದ ಸೋತ ಬಿಹಾರವನ್ನು ಈ ಸಲ ಗೆಲ್ಲಲೇಬೇಕೆಂಬ ಛಲದಿಂದ ಹೋರಾಡಿದ ಮಹಾಮೈತ್ರಿಯ ಮಹದಾಸೆ ಭಗ್ನಗೊಂಡಿದೆ.

ಎನ್‌ಡಿಎ–ಮಹಾಮೈತ್ರಿಯ ನೇರ ಸ್ಪರ್ಧೆಯ ಕಣದಲ್ಲಿ ತ್ರಿಕೋನ ಸ್ಪರ್ಧೆಯ ಭರವಸೆ ಮೂಡಿಸಿದ್ದ ಚುನಾವಣಾ ತಂತ್ರಜ್ಞ ಪ್ರಶಾಂತ್ ಕಿಶೋರ್ ಅವರ ಜನ ಸುರಾಜ್ ಪಕ್ಷವು ನೀರಗುಳ್ಳೆಯಂತೆ ಒಡೆದು ಹೋಗಿದೆ. 10ನೇ ಬಾರಿಗೆ ಮುಖ್ಯಮಂತ್ರಿ ಗಾದಿಗೆ ಏರಲು ನಿತೀಶ್ ಅಣಿಯಾಗಿದ್ದಾರೆ.

10

ಪಟ್ನಾದಲ್ಲಿ ಬಿಜೆಪಿ ಕಾರ್ಯಕರ್ತರು ಸಂಭ್ರಮಿಸಿದರು – ಪಿಟಿಐ ಚಿತ್ರ

ಬಿಹಾರದಲ್ಲಿ ಎನ್‌ಡಿಎ ಗೆಲುವು ಜನಪರ ಆಡಳಿತಕ್ಕೆ ಸಿಕ್ಕ ಮನ್ನಣೆ. ಬಿಜೆಪಿಯ ಈ ಗೆಲುವಿನ ಯಾತ್ರೆಯು ಬಿಹಾರದ ಗಂಗಾನದಿ ದಾಟಿ ಪಶ್ಚಿಮ ಬಂಗಾಳ ಪ್ರವೇಶಿಸಲಿದ್ದು, ಅಲ್ಲಿನ ಜಂಗಲ್‌ರಾಜ್ ಆಡಳಿತವನ್ನು ಕಿತ್ತೊಗೆಯಲಾಗುವುದು
ನರೇಂದ್ರ ಮೋದಿ, ಪ್ರಧಾನಿ

ಬಿಹಾರ ಚುನಾವಣೆ ಫಲಿತಾಂಶ ನಿಜಕ್ಕೂ ಅಚ್ಚರಿ ಮೂಡಿಸಿದೆ. ಆರಂಭದಿಂದಲೂ, ನ್ಯಾಯಸಮ್ಮತವಾಗಿರದ ಈ ಚುನಾವಣೆಯಲ್ಲಿ ನಾವು ಗೆಲುವು ಸಾಧಿಸಲು ಆಗಲಿಲ್ಲ
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ರಾಜ್ಯದ ಜನರು ನಮ್ಮ ಸರ್ಕಾರದ ಮೇಲೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ ನಾನು ರಾಜ್ಯದ ಎಲ್ಲ ಗೌರವಾನ್ವಿತ ಮತದಾರರಿಗೂ ನಮಸ್ಕರಿಸುತ್ತೇನೆ ಹಾಗೂ ಹೃದಯಪೂರ್ವಕವಾಗಿ ಧನ್ಯವಾದ ಸಲ್ಲಿಸುತ್ತೇನೆ
ನಿತೀಶ್ ಕುಮಾರ್, ಬಿಹಾರ ಮುಖ್ಯಮಂತ್ರಿ

ಚುನಾವಣಾ ಆಯೋಗ ಹಾಗೂ ಬಿಜೆಪಿಯು ತನ್ನ ರಾಷ್ಟ್ರೀಯ ಕಾರ್ಯಸೂಚಿಯನ್ನು ಜಾರಿಗೊಳಿಸಲು ಕೈ ಜೋಡಿಸಿ ಕೆಲಸ ಮಾಡಿದ್ದರಿಂದ ಬಿಹಾರ ವಿಧಾನಸಭಾ ಚುನಾವಣಾ ಫಲಿತಾಂಶವು ಆಘಾತ ಉಂಟು ಮಾಡಿಲ್ಲ
ಸಂಜಯ್ ರಾವುತ್, ಶಿವಸೇನಾ (ಯುಬಿಟಿ) ನಾಯಕ

ಸಾಲುಮರದ ತಿಮ್ಮಕ್ಕ ನಿಧನ

ಪ್ರಜಾವಾಣಿ ವಾರ್ತೆ

ರಾಮನಗರ: 'ವೃಕ್ಷಮಾತೆ' ಶತಾಯುಷಿ ಸಾಲುಮರದ ತಿಮ್ಮಕ್ಕ (114) ವಯೋಸಹಜ ಅನಾರೋಗ್ಯದಿಂದಾಗಿ ಶುಕ್ರವಾರ ಬೆಂಗಳೂರಿನ ಜಯನಗರದಲ್ಲಿರುವ ಅಪೋಲೊ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.



1911 -2025

ಬೆಂಗಳೂರು ದಕ್ಷಿಣ ಜಿಲ್ಲೆ ಮಾಗಡಿ ತಾಲ್ಲೂಕಿನ ಹುಲಿಕಲ್ ಗ್ರಾಮದ ತಿಮ್ಮಕ್ಕ ಅವರಿಗೆ ಪುತ್ರ ಪರಿಸರವಾದಿ ಉಮೇಶ್ ಬಳ್ಳೂರು (ಸಾಕುಮಗ) ಇದ್ದಾರೆ.

ಸದ್ಯ ಬೆಂಗಳೂರಿನಲ್ಲಿ ಪುತ್ರನೊಂದಿಗೆ ನೆಲಸಿದ್ದ ಅವರ ಆರೋಗ್ಯದಲ್ಲಿ ಆಗಾಗ ಏರುಪೇರಾಗುತ್ತಿತ್ತು. ಎರಡು ದಿನಗಳ ಹಿಂದೆ ಉಸಿರಾಟದ ತೀವ್ರ ಸಮಸ್ಯೆಯಿಂದಾಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಕೊನೆಯುಸಿರೆಳೆದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

9

ಪಿಯುಸಿಗೂ ಉಚಿತ ಪಠ್ಯಪುಸ್ತಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ನೀಡುವಂತೆ ಇನ್ನು ಮುಂದೆ ಸರ್ಕಾರಿ ಹಾಗೂ ಅನುದಾನಿತ ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೂ ಪಠ್ಯಪುಸ್ತಕಗಳು ಉಚಿತವಾಗಿ ಸಿಗಲಿವೆ.

ಮುಂದಿನ ಶೈಕ್ಷಣಿಕ ವರ್ಷದಿಂದ (2026–27) ಈ ಯೋಜನೆ ಅನುಷ್ಠಾನಗೊಳಿಸಲು ಶಾಲಾ ಶಿಕ್ಷಣ ಇಲಾಖೆ ಸಿದ್ಧತೆ ಮಾಡಿಕೊಂಡಿದೆ. ಪ್ರಥಮ ಹಾಗೂ ದ್ವಿತೀಯ ಪಿಯುನಲ್ಲಿ ಕಲಿಯುತ್ತಿರುವ ಸುಮಾರು 15 ಲಕ್ಷ ವಿದ್ಯಾರ್ಥಿಗಳಿಗೆ ಇದರಿಂದ ಪ್ರಯೋಜನವಾಗಲಿದೆ.

ಸರ್ಕಾರಿ ಕಾಲೇಜುಗಳಲ್ಲಿ ದಾಖಲಾತಿ ಹೆಚ್ಚಿಸಲು ಹಾಗೂ ಗುಣಮಟ್ಟದ ಶಿಕ್ಷಣ ನೀಡಲು ಶಾಲಾ ಶಿಕ್ಷಣ ಇಲಾಖೆ ಹಲವು ಕ್ರಮಗಳನ್ನು ಕೈಗೊಂಡಿದೆ. ಇದುವರೆಗೂ 1ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದ ಉಚಿತ ಪಠ್ಯಪುಸ್ತಕ ಯೋಜನೆಯನ್ನು ದ್ವಿತೀಯ ಪಿಯುಸಿವರೆಗೂ ವಿಸ್ತರಿಸಲಾಗುತ್ತಿದೆ. ಪದವಿಪೂರ್ವ ಕಾಲೇಜುಗಳಿಗೆ 2026–27ನೇ ಸಾಲಿನಿಂದ ಉಚಿತ ಪಠ್ಯಪುಸ್ತಕ ವಿತರಿಸುವ ಯೋಜನೆ ಅನುಷ್ಠಾನಕ್ಕೆ ತರುವುದಾಗಿ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಖಚಿತಪಡಿಸಿದ್ದಾರೆ.

ರಸ್ಟ್ ಅ?
ಸಾಧ್ಯವೇ ಇಲ್ಲ ಮಗಾ.
ಪುಲ್ಕಿತ್
TMT BARS
ಶಾಶ್ವತ ಸಂಬಂಧ
ಮನೆಯ ಬಲಕ್ಕೆ ಗ್ಯಾರಂಟಿ
NABL | Swachh Bharat Award | MADE OF PRIMARY STEEL
163/1, K.Sons Complex, 1st Floor, Prakasam Salai, Broadway, Chennai 600 108. P +91 44 4401 2345 | www.pulkittmt.in
Follow us

ನೀವು ಹೇಗೆ ನಡೆಯುತ್ತೀರೋ ಆ ಹಾದಿಯು ವಿಜಯಗಳ ಸರಣಿಯಾದಾಗ,
ಇದು ಅಪರೂಪ ಪ್ಲಾಟಿನಂ.
ಪ್ರತಿಯೊಂದು ಹೆಜ್ಜೆಯನ್ನೂ ವಿಜಯವನ್ನಾಗಿ ಮಾಡುವ ಸಾಮರ್ಥ್ಯದಿಂದ ಶ್ರೇಷ್ಠತೆ ಹುಟ್ಟುತ್ತದೆ, ಪ್ರತಿಯೊಂದು ಸವಾಲಿನಲ್ಲೂ ನಿಮ್ಮ ಕಲೆಯನ್ನು ಕರಗತ ಮಾಡಿಕೊಳ್ಳುತ್ತದೆ. ಈ ಪ್ರಯಾಣವು ಪ್ಲಾಟಿನಂನ ಶಾಶ್ವತ ಗುಣಮಟ್ಟವನ್ನು ಪ್ರತಿಬಿಂಬಿಸುತ್ತದೆ, ಇದು ಅದರ ಸ್ಥಿತಿಸ್ಥಾಪಕತ್ವಕ್ಕೆ ಮೌಲ್ಯಯುತವಾದ ಲೋಹವಾಗಿದೆ, ಇದು ನಿಜವಾಗಿಯೂ ಅಪರೂಪ. ಎಂಎಸ್ ಧೋನಿ ಅವರ ಸಾಂಪ್ರದಾಯಿಕ ಸಹಿಯನ್ನು ಹೊಂದಿರುವ ಈ ಪ್ಲಾಟಿನಂ ಸಂಗ್ರಹದ ತುಣುಕುಗಳು ನಿಜವಾದ ಯಶಸ್ಸು ಹೆಚ್ಚಾಗಿ ಪ್ರಯಾಣದಲ್ಲಿಯೇ ಇರುತ್ತದೆ ಎಂಬುದನ್ನು ನೆನಪಿಸುತ್ತದೆ.
ಎಮ್‌ಎಸ್ ಧೋನಿ ಸಿಗ್ನೇಚರ್ ಎಡಿಶನ್
Pt — MEN OF — PLATINUM
EXCLUSIVELY AVAILABLE AT GRT JEWELLERS Since 1964
PT950 ಅನ್ನು ನೋಡಿ - 95% ಶುದ್ಧ ಪ್ಲಾಟಿನಂನ ಭರವಸೆ, ಇದು ಅಧಿಕೃತತೆ ಮತ್ತು ಶುದ್ಧತೆಯ ಸಂಕೇತವಾಗಿದೆ. ಖಚಿತವಾದ ಮರುಖರೀದಿಗಾಗಿ, ನಿಮ್ಮ ಪ್ಲಾಟಿನಂ ಶುದ್ಧತೆ ಭರವಸೆ ಕಾರ್ಡ್ ಅನ್ನು ಕೇಳಿ.
DISCOVER THE NEW COLLECTION AT A STORE NEAREST TO YOU. EXPLORE WWW.GRTJEWELS.COM
Karnataka | Andhra Pradesh | Tamil Nadu | Puducherry || Singapore
Store Locator
Shop online at: www.grtjewels.com | GRT LIVE VIDEO SHOPPING Shop from the comfort of your home.
: 1800 203 1000 / 1800 599 1515 | Follow us:

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ತುಂತುರು ಮಳೆಯಾಗುವ ಸಾಧ್ಯತೆ ಇದೆ.

ಹೇಳಿಕೆಗೆ ‘ಅಸಹಕಾರ’: ತನಿಖೆ ವಿಳಂಬ

ಪರಪ್ಪನ ಅಗ್ರಹಾರ ಜೈಲು: ಕೈದಿಗಳಿಗೆ ಮೊಬೈಲ್, ಡ್ರಗ್ಸ್ ಪೂರೈಕೆ, ವರ್ಷದಲ್ಲಿ 29 ಪ್ರಕರಣ

● ಆದಿತ್ಯ ಕೆ.ಎ.

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಸಜಾಬಂದಿಗಳು ಹಾಗೂ ವಿಚಾರಣಾಧೀನ ಕೈದಿಗಳಿಗೆ ಐಷಾರಾಮಿ ಸೌಲಭ್ಯ ಕಲ್ಪಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಂದು ವರ್ಷದಲ್ಲಿ 29 ಎಫ್‌ಐಆರ್‌ಗಳು ದಾಖಲಾಗಿವೆ.

ಈ ಪೈಕಿ 25 ಪ್ರಕರಣಗಳು ದಾಖಲಾಗಿ ಆರು ತಿಂಗಳು ಕಳೆದಿದ್ದರೂ ಪೊಲೀಸ್ ತನಿಖೆಯ ಅಂತಿಮ ವರದಿ ನ್ಯಾಯಾಲಯಕ್ಕೆ ಇನ್ನೂ ಸಲ್ಲಿಕೆಯಾಗಿಲ್ಲ.

ಕೇಂದ್ರ ಕಾರಾಗೃಹದ ಅಧಿಕಾರಿಗಳು ಹಾಗೂ ಸಿಬ್ಬಂದಿ ಹಲವು ಪ್ರಕರಣಗಳಲ್ಲಿ ಹೇಳಿಕೆ ದಾಖಲಿಸಲು ಹಿಂದೇಟು ಹಾಕುತ್ತಿರುವುದು ಪೊಲೀಸ್ ತನಿಖೆ ಹಾಗೂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸುವುದಕ್ಕೆ ಹಿನ್ನಡೆಯಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ. ಜೈಲಿನಲ್ಲಿರುವ ಅತ್ಯಾಚಾರ, ಸರಣಿ ಕೊಲೆಯ ಪಾತಕಿ ಉಮೇಶ್ ರೆಡ್ಡಿ, ‘ಇಸ್ಲಾಮಿಕ್ ಸ್ಟೇಟ್ (ಐಎಸ್) ಭಯೋತ್ಪಾದಕ ಸಂಘಟನೆಯ ಉಗ್ರ, ದುಬೈನಿಂದ ಚಿನ್ನ ಕಳ್ಳಸಾಗಣೆ ಮಾಡಿದ್ದ ಪ್ರಕರಣದ ಆರೋಪಿಗೆ ಮೊಬೈಲ್ ನೀಡಿದ್ದ ವಿಚಾರದಲ್ಲಿ ಕೇಂದ್ರ ಕಾರಾಗೃಹವು ಮತ್ತೆ ಸದ್ದು ಮಾಡುತ್ತಿದೆ.

ಈ ಪ್ರಕರಣದಲ್ಲಿ ಜೈಲಿನ ಇಬ್ಬರು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಬ್ಯಾರಕ್‌ಗೆ ಮದ್ಯ ತರಿಸಿಕೊಂಡು ಪಾರ್ಟಿ ನಡೆಸಿ ನೃತ್ಯ ಮಾಡಿದ್ದಕ್ಕೆ ಸಂಬಂಧಿಸಿದಂತೆ ನಾಲ್ವರು ಕೈದಿಗಳ ವಿರುದ್ಧ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಮತ್ತೊಂದು ಎಫ್‌ಐಆರ್ ದಾಖಲಾಗಿದೆ. ಮೊಬೈಲ್ ಪೂರೈಕೆ ಪ್ರಕರಣಗಳು ದಾಖಲಾಗುತ್ತಿದ್ದು ಉನ್ನತ ಮಟ್ಟದ ಸಮಿತಿ ತನಿಖೆ ಆರಂಭಿಸಿದೆ.

‘ಕಳೆದ ಜೂನ್‌ನಲ್ಲಿ ಸಿಸಿಬಿ ಅಧಿಕಾರಿಗಳು ಜೈಲಿನ ಮೇಲೆ ದಾಳಿ ಮಾಡಿ, ಬ್ಯಾರಕ್‌ಗಳ ಪರಿಶೀಲನೆ ನಡೆಸಿದ್ದರು. ತಂಬಾಕು ಉತ್ಪನ್ನಗಳಾದ ಚೈನಿ, ಸ್ವಾಗತ್ ಗೋಲ್ಡ್, ಗಾಂಜಾ ಸೇದಲು ಕೈದಿಗಳು ಬಳಸುತ್ತಿದ್ದ ಕೊಳವೆಗಳು, ಚಾಕು, ಟ್ರಿಮ್ಮರ್, ಕತ್ತರಿ, ಮೊಬೈಲ್ ಚಾರ್ಜರ್, ಬೆಂಕಿ ಪೊಟ್ಟಣ, ಲೈಟರ್, ಪ್ಲೇ ಕಾರ್ಡ್ಸ್, ಆಯುಧಗಳು, ಕಬ್ಬಿಣದ ರಾಡುಗಳು ಪತ್ತೆ ಆಗಿದ್ದವು. ಹಣ ಸಹ ಸಿಕ್ಕಿತ್ತು. ಆಗಲೂ ಜೈಲಿನ ಮುಖ್ಯ ಸೂಪರಿಂಟೆಂಡೆಂಟ್ ದೂರಿನ ಅನ್ವಯ ಪ್ರಕರಣ ದಾಖಲು ಮಾಡಿಕೊಳ್ಳಲಾಗಿತ್ತು. ಈ ಪ್ರಕರಣವೂ ಸೇರಿದಂತೆ 25 ಪ್ರಕರಣಗಳ ತನಿಖೆ ಆರಂಭಿಸಿ ಆರು ತಿಂಗಳು ಕಳೆದಿದೆ. ಪ್ರಾಥಮಿಕ ತನಿಖಾ ವರದಿಯನ್ನಷ್ಟೇ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಆದರೆ, ಜೈಲು ಸಿಬ್ಬಂದಿ, ಅಧಿಕಾರಿಗಳ ಅಸಹಕಾರದಿಂದ ತನಿಖೆ ಪ್ರಗತಿ ಕಂಡಿಲ್ಲ. ಅಂತಿಮ ವರದಿ ಸಲ್ಲಿಕೆ ಸಾಧ್ಯವಾಗಿಲ್ಲ’ ಎಂದು ತನಿಖಾ ಮೂಲಗಳು ಹೇಳಿವೆ.

ಆಗ್ನೇಯ ವಿಭಾಗದ ಹುಳಿಮಾವು, ಪರಪ್ಪನ ಅಗ್ರಹಾರ, ಬೇಗೂರು, ಹುಳಿಮಾವು, ಎಲೆಕ್ಟ್ರಾನಿಕ್ ಸಿಟಿ ಠಾಣೆಗಳ ಹಾಗೂ ಸಿಸಿಬಿ ಪೊಲೀಸರು ವಿವಿಧ ಪ್ರಕರಣಗಳ ತನಿಖೆಯನ್ನು ನಡೆಸುತ್ತಿದ್ದಾರೆ.

‘ಕಾರಾಗೃಹದಲ್ಲಿ 285 ಸಿ.ಸಿ.ಟಿ.ವಿ ಕ್ಯಾಮೆರಾಗಳಿವೆ. ಎಂಟು ಕ್ಯಾಮೆರಾಗಳು ಕೆಟ್ಟು ಹೋಗಿದ್ದು, ದುರಸ್ತಿಗೆ ಸೂಚನೆ ನೀಡಲಾಗಿದೆ. ಇನ್ಮುಂದೆ ಮೊಬೈಲ್ ಪತ್ತೆಯಾದರೆ ಯಾವ ಬಂದಿಗಳ ಬ್ಯಾರಕ್‌ನಲ್ಲಿ ಮೊಬೈಲ್ ಸಿಕ್ಕಿದೆ? ಆ ಬ್ಯಾರಕ್‌ನಲ್ಲಿ ಕರ್ತವ್ಯದಲ್ಲಿದ್ದ ಸಿಬ್ಬಂದಿ ಯಾರು ಎಂಬುದನ್ನು ಸ್ಪಷ್ಟವಾಗಿ ನಮೂದಿಸಿ ದೂರು ನೀಡಬೇಕು ಎಂಬುದಾಗಿ ಕಾರಾಗೃಹದ ಮುಖ್ಯ ಸೂಪರಿಂಟೆಂಡೆಂಟ್‌ಗೆ ಸೂಚಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

‘ಹಣದ ಮೂಲ, ಸಿಮ್ ಮಾಲೀಕರ ಪತ್ತೆ, ಮೊಬೈಲ್‌ಗಳನ್ನು ಕಾರಾಗೃಹಕ್ಕೆ ಪೂರೈಸಿದ್ದವರ ವಿವರ ಕಲೆ ಹಾಕುವುದು ತಡವಾಗುತ್ತಿದೆ. ಅಲ್ಲದೇ, ದೂರವಾಣಿ ಕರೆಗಳ ಮಾಹಿತಿ (ಸಿಡಿಆರ್) ಬರುವುದು ತಡವಾಗಿರುವ ಕಾರಣ ತನಿಖೆಗೂ ಅಡ್ಡಿ ಆಗುತ್ತಿದೆ’ ಎಂದು ಮೂಲಗಳು ಹೇಳಿವೆ.

ದರ್ಶನ್‌ಗೆ ಆತಿಥ್ಯ: ಅಧಿಕಾರಿಗಳ ಕೈವಾಡ ಸಾಬೀತು

ಕಾರಾಗೃಹದ ಬ್ಯಾರಕ್‌ನ ಹೊರಗೆ ಕುರ್ಚಿಯಲ್ಲಿ ಕುಳಿತು ಟೀ ಕುಡಿಯುತ್ತಾ, ಸಿಗರೇಟ್ ಸೇದುತ್ತಾ ಹರಟೆ ಹೊಡೆಯುತ್ತಿದ್ದ ದರ್ಶನ್, ರೌಡಿ ವಿಲ್ಸನ್ ಗಾರ್ಡನ್ ನಾಗ, ಕುಳ್ಳ ಸೀನ, ದರ್ಶನ್ ವ್ಯವಸ್ಥಾಪಕ ನಾಗರಾಜ್, ಕರ್ತವ್ಯ ಲೋಪ ಎಸಗಿದ್ದ ಜೈಲು ಅಧಿಕಾರಿಗಳು ಹಾಗೂ ಸಿಬ್ಬಂದಿ, ಹೊರಗಿನಿಂದ ವಿಡಿಯೊ ಕರೆ ಮಾಡಿದ್ದ ವ್ಯಕ್ತಿ ವಿರುದ್ಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ 2024ರ ಆಗಸ್ಟ್ 26ರಂದು ಮೂರು ಎಫ್‌ಐಆರ್‌ಗಳು ದಾಖಲಾಗಿದ್ದವು. ಆ ಮೂರು ಪ್ರಕರಣಕ್ಕೆ ಸಂಬಂಧಿಸಿದ ದೋಷಾರೋಪ ಪಟ್ಟಿಯ ನ್ಯಾಯಾಲಯಕ್ಕೆ ಸಲ್ಲಿಕೆ ಆಗಿಲ್ಲ.

‘ದರ್ಶನ್‌ಗೆ ಸಿಗರೇಟ್ ಪೂರೈಸಿದ್ದವರು, ಜೈಲಿನಲ್ಲಿ ಮೊಬೈಲ್ ಬಳಕೆ ಹಾಗೂ ರಾತ್ರಿ ವೇಳೆ ಜೈಲಿಗೆ ನಿಷೇಧಿತ ವಸ್ತುಗಳನ್ನು ಸಾಗಣೆ ಮಾಡಿದ್ದವರ ವಿರುದ್ಧ ಪ್ರಕರಣ ದಾಖಲಾಗಿದ್ದವು. ತನಿಖೆ ಆರಂಭಿಸಿ ಆರು ತಿಂಗಳ ಬಳಿಕ ಜೈಲಿನ ಕೆಲವು ಅಧಿಕಾರಿಗಳು ಹಾಗೂ ಸಿಬ್ಬಂದಿಯ ವಿರುದ್ಧ ತನಿಖೆ ನಡೆಸಲು ಅನುಮತಿ ಸಿಕ್ಕಿತ್ತು. ಅವರ ವಿಚಾರಣೆ ನಡೆಸಿ, ಹೇಳಿಕೆ ದಾಖಲಿಸಿಕೊಳ್ಳಲಾಗಿತ್ತು. ಮೂರು ಪ್ರಕರಣಗಳಲ್ಲೂ ಅಧಿಕಾರಿಗಳು, ಸಿಬ್ಬಂದಿ ಶಾಮೀಲಾಗಿರುವುದು ಸಾಬೀತಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಪೂರಕ ಸಾಕ್ಷ್ಯಗಳು ಲಭಿಸಿದ್ದವು. ತನಿಖಾ ವರದಿಯು ಪರಿಶೀಲನಾ ಹಂತದಲ್ಲಿದ್ದು ಕೋರ್ಟ್‌ಗೆ ಸಲ್ಲಿಕೆ ಆಗಿಲ್ಲ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಿಸಿಬಿ ಪೊಲೀಸರು ದಾಳಿ ನಡೆಸಿದಾಗ ಪತ್ತೆಯಾಗಿದ್ದ ನಿಷೇಧಿತ ವಸ್ತುಗಳು

ಯಕ್ಲಾಸಪುರದ ಪ್ರೌಢಶಾಲೆಗೆ ‘ಉತ್ತಮ ಶಾಲೆ ಬಹುಮಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತಿ ಪ್ರೊ.ಎಲ್.ಎಸ್. ಶೇಷಗಿರಿರಾವ್ ಅವರ ಶತಮಾನೋತ್ಸವ ಸ್ಮರಣಾರ್ಥ ಕನ್ನಡ ಗೆಳೆಯರ ಬಳಗ ನೀಡುವ ‘ಉತ್ತಮ ಶಾಲೆ ಬಹುಮಾನ’ಕ್ಕೆ ಗದಗ ಜಿಲ್ಲೆಯ ಮುಂಡರಗಿಯ ಯಕ್ಲಾಸಪುರದ ‘ಶ್ರೀಮತಿ ಪಾರ್ವತೆವ್ವ ಕೋಂ ಹಿರೇಬಸಪ್ಪ ಹಳೇಮನಿ ಸರ್ಕಾರಿ ಪ್ರೌಢಶಾಲೆ’ ಆಯ್ಕೆಯಾಗಿದೆ.

ಬಹುಮಾನವು ₹10 ಸಾವಿರ ನಗದು ಒಳಗೊಂಡಿದೆ. ಪ್ರತಿ ವರ್ಷ ಉತ್ತಮ ನಿರ್ವಹಣೆ ತೋರುವ ಕನ್ನಡ ಮಾಧ್ಯಮ ಶಾಲೆಗೆ ಈ ಬಹುಮಾನ ನೀಡಲಾಗುತ್ತಿದೆ. ಈ ಪ್ರೌಢಶಾಲೆಯಲ್ಲಿ 121 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಇಲ್ಲಿ ವಿಜ್ಞಾನ ಹಾಗೂ ಕಂಪ್ಯೂಟರ್ ಪ್ರಯೋಗಾಲಯ, ಸಭಾಂಗಣ ಎಲ್ಲವೂ ವ್ಯವಸ್ಥಿತವಾಗಿದೆ. ಶಾಲೆಯ ಕಟ್ಟಡವನ್ನು ಸ್ವಚ್ಛವಾಗಿ ಇರಿಸಲಾಗಿದೆ ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ತಿಳಿಸಿದ್ದಾರೆ.

ಡಿ. 9ರಂದು ಬೆಂಗಳೂರಿನ ನಯನ ಸಭಾಂಗಣದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಲಾಗುವುದು ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ವಂಚನೆ: ದಂಪತಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ನೀಡುವುದಾಗಿ ಹೇಳಿ ಉದ್ಯಮಿಗೆ ₹81 ಲಕ್ಷ ವಂಚಿಸಿದ ಆರೋಪದಡಿ ದಂಪತಿ ವಿರುದ್ಧ ಅಮೃತಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಬೆಂಗಳೂರು ಉತ್ತರ ವಿಭಾಗದ ನಿವಾಸಿ ಶ್ವೇತಾ ಜೈನ್ ಅವರು ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಖಾಸಗಿ ದೂರು ಆಧರಿಸಿ ರಮ್ಯಾ ಮತ್ತು ಡಾ.ಪ್ರಮೋದ್ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿ, ತನಿಖೆ ಕೈಗೊಂಡಿದ್ದಾರೆ.

‘ಸಹಕಾರ ನಗರದಲ್ಲಿ ಚಿಕಿತ್ಸೆಗೆ ತೆರಳಿದ್ದ ವೇಳೆ ಶಸ್ತ್ರಚಿಕಿತ್ಸಕ ಪ್ರಮೋದ್ ದಂಪತಿಯ ಪರಿಚಯವಾಯಿತು. ಈ ನಡುವೆ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುತ್ತಿರುವುದಾಗಿ ಪ್ರಮೋದ್ ಅವರ ಪತ್ನಿ ಹೇಳಿದರು. ಆಗ ಅವರ ಖಾತೆಗೆ ₹25 ಲಕ್ಷ ವರ್ಗಾವಣೆ ಮಾಡಲಾಯಿತು. ಹಂತ ಹಂತವಾಗಿ ₹81 ಲಕ್ಷ ವರ್ಗಾವಣೆ ಮಾಡಲಾಗಿತ್ತು. ₹20 ಲಕ್ಷ ಲಾಭ ಬಂದಿರುವುದಾಗಿ ಹೇಳಿದರು. ಬಳಿಕ 2024ರ ನವೆಂಬರ್ ವರೆಗೂ ಹಣ ತೆಗೆಯದಂತೆ ಸಲಹೆ ನೀಡಿದರು’ ಎಂದು ಶ್ವೇತಾ ಅವರ ಪತಿ ಆನಂದ್ ಜೈನ್ ತಿಳಿಸಿದರು.

ಕೆಲ ದಿನದ ಬಳಿಕ ಹಣ ಮತ್ತು ಲಾಭಾಂಶ ನೀಡುವಂತೆ ಕೇಳಿದಾಗ ವಾಪಸ್ ನೀಡಲಿಲ್ಲ. ಹೀಗಾಗಿ ದೂರು ನೀಡಲಾಯಿತು ಎಂದು ಹೇಳಿದರು.

₹5 ಲಕ್ಷ ಮೌಲ್ಯದ 9 ದ್ವಿಚಕ್ರ ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯ ಎದುರು ಹಾಗೂ ರಸ್ತೆಯ ಬದಿಯಲ್ಲಿ ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪಿ, ಚಿಕ್ಕಬಸ್ತಿಯ ನಿವಾಸಿ ಅರ್ಬಾಜ್ ಅಲಿಯಾಸ್ ದುಬೈ (21) ಎಂಬಾತನನ್ನು ಜ್ಞಾನಭಾರತಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಂಧಿತನಿಂದ ₹5 ಲಕ್ಷ ಮೌಲ್ಯದ ಒಂಬತ್ತು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ.

ದೂರುದಾರ ಶ್ರೀಕಾಂತ ಅವರು ಅ.19ರಂದು ಮನೆಯ ಗೇಟ್ ಎದುರು ದ್ವಿಚಕ್ರ ವಾಹನ ನಿಲುಗಡೆ ಮಾಡಿದ್ದರು. ಮರುದಿನ ನೋಡಿದಾಗ ಆ ಸ್ಥಳದಲ್ಲಿ ದ್ವಿಚಕ್ರ ವಾಹನ ಇರಲಿಲ್ಲ. ಅವರ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ.

ಅರ್ಬಾಜ್

ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಆಧರಿಸಿ ಪರಿಶೀಲನೆ ನಡೆಸಿ, ಚಿಕ್ಕಬಸ್ತಿಯ ಶಿವಾಜಿ ಹೋಟೆಲ್ ಬಳಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

‘ತನ್ನ ಸಹಚರರಾದ ಬಾಬ್ವಾ, ಸಾನು ಹಾಗೂ ಅಡ್ಡಿ ಜತೆಗೆ ಆರೋಪಿ ಅರ್ಬಾಜ್, ಜ್ಞಾನಭಾರತಿ, ಹಲಸೂರು ಗೇಟ್, ಚಾಮರಾಜಪೇಟೆ, ಯಶವಂತಪುರ ಪೊಲೀಸ್ ಠಾಣಾ ವ್ಯಾಪ್ತಿಯ ವಿವಿಧ ಬಡಾವಣೆಗಳ ಮನೆಯ ಎದುರು ನಿಲುಗಡೆ ಮಾಡಿದ್ದ ವಾಹನಗಳನ್ನು ಕಳ್ಳತನ ಮಾಡಿಕೊಂಡು ಪರಾರಿ ಆಗುತ್ತಿದ್ದ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಆರೋಪಿಯ ಬಂಧನದಿಂದ ನಾಲ್ಕು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಒಂಬತ್ತು ಕಳ್ಳತನ ಪ್ರಕರಣಗಳು ಪತ್ತೆ ಆಗಿವೆ ಎಂದು ಮೂಲಗಳು ಹೇಳಿವೆ.

ನಾವು ನೈಸರ್ಗಿಕ ಬಣ್ಣಗಳಿಂದ ಆಹಾರವನ್ನು ತಯಾರಿಸುತ್ತೇವೆ.

ನಂದನ® ಪ್ಯಾಲೇಸ್

CUSTOMER CARE:
BANGALORE: 080 46 13 11 11
CHENNAI: +91 89255 27979
www.nandhanarestaurants.com
@nandhanapalace

No.93/2, 1st Floor, NH 7, Hosur Main Road, Singasandra, Bengaluru - 560 068 | Mb: +91 95134 44820

ರೆಸ್ಟೋರೆಂಟ್ | ಬ್ಯಾಂಕ್ವೆಟ್ಸ್ | ಟೇಕ್‌ಅವೇ | ಹೋಮ್ ಡೆಲಿವರಿ | ಕ್ಲೌಡ್ ಕಿಚನ್ಸ್

PUBLIC NOTICE

This is to inform the general public that my client intends to enter into certain transactions with respect to below described two items of '**Schedule Property**', with its Owner "**The Standard Brick and Tile Company (Yelahanka) Private Limited**" (popularly known as Standard Brick and Tile Factory), having its registered office in RMZ Galleria, Office Block, Ground Floor, B.B. Road, Yelahanka, Bengaluru-560064 ("**Owner**"). The Owner represents that it is the absolute owner of the Schedule Property and the same are free from all encumbrances, mortgage, charge, lien or litigation and it has not entered into any sort of agreement/MOU/Deeds etc., for transfer of the Schedule Property. Any person/s having any objection, claim, right, title and/or interest, pending litigation with respect to the Schedule Property or any part or portion thereof by way of sale, conveyance, acquisition, partition, transfer, mou, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever against the Schedule Property or the documents thereof or against the Owner shall lodge their claim(s)/ objection(s)/demand(s) with the undersigned supported by documentary evidence within **Seven (07) days** from the date of publication of this Notice failing which, my client shall proceed with the transaction on the basis that there are no claim(s) / objection(s) / demand(s) of whatsoever nature with regard to the Schedule Property.

SCHEDULE PROPERTY

Item No. 1: All that piece and parcel of immoveable property bearing Survey No. **150/4**, situated at **Yelahanka Village**, Yelahanka Hobli, Yelahanka Taluk, Bengaluru Urban District measuring **11,979 square feet (or 11 guntas)** and bounded on the: **East by:** Road; **West by:** Land bearing Sy. No. 152/9 (Item No. 2 property); **North by:** Land bearing Sy. Nos. 150/2 & 151; **South by:** Remaining portion of Sy. No. 150/4.

Item No. 2: All that piece and parcel of immoveable property bearing Survey No. **152/9**, situated at **Yelahanka Village**, Yelahanka Hobli, Yelahanka Taluk, Bengaluru Urban District measuring **60,407 square feet (or 1 acre 15 guntas approximately)** and bounded on the: **East by:** Land bearing Sy. Nos. 150/4 (Item No. 1 property) & 150/2; **West by:** Land bearing Sy. Nos. 152/10 & 152/6; **North by:** Land bearing Sy. Nos. 152/11 & 150/1; **South by:** Remaining portion of Sy. No. 152/9.

Vinay K.S. Advocate,
Vinay Kademane & Associates,
307, 3rd Floor, Prestige Centre Point,
No. 7/49, Edward Road, Bengaluru – 560 001.
Ph: 080-22863885 / 49763233/ vinay@vinaykademane.in

Place: Bengaluru
Date: 15/11/2025

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಸಂಖ್ಯೆ: ಅಇಂ(ವಿ)/ಪ್ರ(ಕಾ)ವೃ-ಉ/ಕಾ.ನಿ.ಇಂ(ವಿ)/ಸ.ಇಂ(ವಿ)/ಕ-T6/25-26/1998 ದಿನಾಂಕ: 14.11.2025

ಕವಿಪ್ರನಿನಿಯ ಟೆಂಡರ್ ಸಂಖ್ಯೆ: **KPTCL/2025-26/IND0239**ರ ಅನ್ವಯ ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ(ಕಾರ್ಯಾಚರಣೆ) ವೃತ್ತ-ಉತ್ತರ, ಬೆಂಗಳೂರುರವರ ವ್ಯಾಪ್ತಿಗೆ ಬರುವ ಹೆಬ್ಬಾಳ ವಿಭಾಗದ ಉಪ-ಕೇಂದ್ರಗಳಿಗೆ ತಾಂತ್ರಿಕ ವಿಶೇಷಣಗಳ ಪ್ರಕಾರ ಸ್ಪ್ರಿಂಗ್/ಸೆಮಿ-ನ್ಯೂಮ್ಯಾಟಿಕ್/ನ್ಯೂಮ್ಯಾಟಿಕ್ ಪ್ರಕಾರದ ಆಪರೇಟಿಂಗ್ ಮೆಕ್ಯಾನಿಸಂ ಮತ್ತು ಮೌಂಟಿಂಗ್ ಸ್ಟ್ರಕ್ಚರ್ ಇತ್ಯಾದಿಗಳೊಂದಿಗೆ ಅಲ್ಯೂಮಿನಿಯಂ ಟ್ಯೂಬ್/ಕಂಡಕ್ಟರ್‌ಗೆ ಸೂಕ್ತವಾದ ಟರ್ಮಿನಲ್ ಕನೆಕ್ಟರ್‌ನೊಂದಿಗೆ 66ಕೆವಿ 40kA ವರ್ಗದ 6 ಸಂಖ್ಯೆಯ, SF-6 ಸರ್ಕ್ಯೂಟ್ ಬ್ರೇಕರ್‌ಗಳ ವಿನ್ಯಾಸ, ಉತ್ಪಾದನೆ, ಪರೀಕ್ಷೆ, ಪೂರೈಕೆಗಾಗಿ ಟೆಂಡರನ್ನು ಆಹ್ವಾನಿಸಿದೆ.

ಸೂಚನೆ: ಬಿಡ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಮಾತ್ರವೇ ಸ್ವೀಕರಿಸಲಾಗುತ್ತದೆ, ಮೇಲ್ಕಂಡ ಟೆಂಡರ್‌ನ ವಿವರವಾದ ಪ್ರಕಟಣೆಯನ್ನು ಹಾಗೂ ಬಿಡ್ ದಾಖಲೆಗಳನ್ನು ವೆಬ್‌ಸೈಟ್: **https://kppp.karnataka.gov.in** ನಲ್ಲಿ ಲಾಗಿನ್ ಮಾಡುವ ಮೂಲಕ ದಿನಾಂಕ: **18.11.2025** ಅಥವಾ ನಂತರ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/- ಅಧೀಕ್ಷಕ ಇಂಜಿನಿಯರ್(ವಿದ್ಯುತ್),
ಪ್ರಸರಣ(ಕಾರ್ಯಾಚರಣೆ) ವೃತ್ತ-ಉತ್ತರ, ಕ.ವಿ.ಪ್ರ.ನಿ.ನಿ., ಯು.ಎ.ಎಸ್. ಕ್ಯಾಂಪಸ್,
ಹೆಬ್ಬಾಳ, ಬೆಂಗಳೂರು-560024.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು, (ಈ ಕೆಳಕಂಡ **‘ಷೆಡ್ಯೂಲ್’** ನಲ್ಲಿ ವಿವರವಾಗಿ ವಿವರಿಸಿರುವ ಮತ್ತು ಇದನ್ನು ಇನ್ನು ಮುಂದೆ **“ಷೆಡ್ಯೂಲ್ ಸ್ವತ್ತು”** ಎಂದು ಕರೆಯಲ್ಪಡುವ), ಕೈಗಾರಿಕೆ ಉದ್ದೇಶಕ್ಕಾಗಿ ಪರಿವರ್ತನೆಯಾಗಿರುವ ಈ ಷೆಡ್ಯೂಲ್ ಸ್ವತ್ತನ್ನು ಮಾರಾಟದ ಮೂಲಕ ಸ್ವಾಧೀನಪಡಿಸಿಕೊಳ್ಳಲು ಇಚ್ಛಿಸಿದ್ದು, ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಸದರಿ ಸ್ವತ್ತಿನ ಮಾಲೀಕರ ಮಾಲೀಕತ್ವದ ಹಕ್ಕು ಮತ್ತು ಶೀರ್ಷಿಕೆಯನ್ನು ಪರಿಶೀಲನೆ ನಡೆಸಲು ಇಚ್ಛಿಸಿರುತ್ತಾರೆ. ಈ ಸ್ಥಿರಾಸ್ತಿ ಸ್ವತ್ತಿಗೆ ಸಂಬಂಧಿಸಿದಂತೆ ಸದರಿ ಸ್ವತ್ತಿನ ಮಾಲೀಕರಾದ **ಶ್ರೀ. ಎನ್. ರವಿಕಿರಣ್ ಮತ್ತು ಶ್ರೀ. ಎನ್. ಕುಮಾರ್** (ಇಬ್ಬರೂ ಶ್ರೀ. ಎಮ್. ನಾಗರಾಜ್ ರವರ ಮಕ್ಕಳು) **(“ಮಾಲೀಕರು”)** ಇವರು ಈ ಕೆಳಗಿನ ಷೆಡ್ಯೂಲ್ ಸ್ವತ್ತಿಗೆ ತಾವುಗಳೇ ಮಾಲೀಕರೆಂದು ಹಾಗೂ ಷೆಡ್ಯೂಲ್ ಸ್ವತ್ತುಗಳನ್ನು ಮಾರಾಟ ಮಾಡುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲ್ಕಂಡ ಪ್ರಸ್ತುತ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಋಣಬಾಧ್ಯತೆ, ಹೊಣೆಗಾರಿಕೆ, ಕ್ಲೇಮ್‌ಗಳು ಅಥವಾ ಷೆಡ್ಯೂಲ್ ಸ್ವತ್ತಿನ ಬಗ್ಗೆ ಆಸಕ್ತಿಯನ್ನು ಹೊಂದಿದ್ದಲ್ಲಿ, ಅಥವಾ ಯಾವುದೇ ಸ್ವರೂಪದ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಕ್ಲೇಮುಗಳನ್ನು ಅಥವಾ ವ್ಯವಹಾರಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಹೊಂದಿದ್ದರೆ, ಅಂತಹ ಕ್ಲೇಮುಗಳನ್ನು ಅಥವಾ ಆಕ್ಷೇಪಣೆಗಳನ್ನು ಸೂಕ್ತ ಸಾಕ್ಷ್ಯಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ **7 (ಏಳು)** ದಿನಗಳ ಕಾಲಾವಧಿಯ ಒಳಗೆ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಈ ಮೂಲಕ ಕರೆ ನೀಡಲಾಗಿದೆ. ತಿಳಿಸಿದ ಕಾಲಾವಧಿಯ ಒಳಗೆ ಯಾವುದೇ ಕ್ಲೇಮುಗಳು ಅಥವಾ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ, ಮೇಲೆ ತಿಳಿಸಿರುವ ಪ್ರಸ್ತುತ ಮಾಲೀಕರನ್ನು ಹೊರತುಪಡಿಸಿ ಮತ್ತಾರೂ ಕೂಡ ಷೆಡ್ಯೂಲ್ ಸ್ವತ್ತಿನ ಮೇಲೆ ಹಕ್ಕು, ಋಣಬಾಧ್ಯತೆ, ಹಿತಾಸಕ್ತಿ ಅಥವಾ ಕ್ಲೇಮುಗಳನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮೇಲೆ ವ್ಯವಹಾರ ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು.

ಷೆಡ್ಯೂಲ್

(ಷೆಡ್ಯೂಲ್ ಸ್ವತ್ತಿನ ವಿವರ)

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಹಗದೂರು ವಾರ್ಡ್ ನಂ.84, ರಾಮಗೊಂಡನಹಳ್ಳಿ ಗ್ರಾಮದಲ್ಲಿರುವ ಕೈಗಾರಿಗೆ ಉದ್ದೇಶಕ್ಕಾಗಿ ಪರಿವರ್ತನೆಯಾಗಿರುವ ಬಿಬಿಎಂಪಿ ಇಪಿಐಡಿ ನಂ.2572837761, (ರಾಮಗೊಂಡನಹಳ್ಳಿ ಹಳೇ ಸರ್ವೆ ನಂ.115 ಮತ್ತು 116)ರ ಒಟ್ಟಾರೆ ವಿಸ್ತೀರ್ಣ 1,81,863 ಚದರ ಅಡಿಗಳು (16,895.6 ಚದರ ಮೀಟರ್‌ಗಳು) ಹೊಂದಿರುವ ಸ್ಥಿರಾಸ್ತಿ ಸ್ವತ್ತಿನ ಚಕ್ಕುಬಂದಿ ಕೆಳಕಂಡಂತಿರುವುದು:

ಪೂರ್ವಕ್ಕೆ : ಸರ್ವೆ ನಂ. 117ರ ಜಮೀನು;
ಪಶ್ಚಿಮಕ್ಕೆ : ಸರ್ವೆ ನಂ. 114ರ ಜಮೀನು;
ಉತ್ತರಕ್ಕೆ : ರಸ್ತೆ ಮತ್ತು ನಲ್ಲೂರಹಳ್ಳಿ ಗ್ರಾಮದ ಗಡಿ; ಮತ್ತು
ದಕ್ಷಿಣಕ್ಕೆ : ಸರ್ವೆ ನಂ. 104ರ ಜಮೀನು.

ಸಹಿ/-
ಶ್ರೀ. ಶ್ರೀನಿವಾಸ್ ಬಿ.ಆರ್., ಪಾಲುದಾರರು
ಡಿಎಸ್‌ಕೆ ಲೀಗಲ್,
ಪ್ರೆಸ್ಟೀಜ್ ಲೋಕ, ನಂ.201, 2ನೇ ಮಹಡಿ, ನಂ.7/1 & 7/7,
ಬ್ರಂಟನ್ ರಸ್ತೆ, ಬೆಂಗಳೂರು – 560025, ದೂ. ಸಂ. 080-69548770.

ಸ್ಥಳ: ಬೆಂಗಳೂರು
ದಿನಾಂಕ: 15.11.2025

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಬೆಂ.ಮ.ಪ್ರ.ಪ್ರಾ.
ಎಲ್.ಆರ್.ಡಿ.ಇ ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052
ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/92/2025-26 **ಪ್ರಕಟಣೆ** ದಿನಾಂಕ: 11.11.2025.

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69ರ ತಿದ್ದುಪಡಿ ಕಾಯ್ದೆಯಂತೆ)

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 36 ಬಿಎಂಆರ್ 2016, ದಿನಾಂಕ: 24.06.2016 ರನ್ವಯ ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ರಾಯಸಂದ್ರ ಗ್ರಾಮವು “ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶ” ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/194/ಬಿಎಂಆರ್/2016ರ ದಿನಾಂಕ: 20.05.2017ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 4(ಎ)(4)ರನ್ವಯ ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶಕ್ಕೆ ಒಳಪಟ್ಟಿದ್ದು, ಅನುಮೋದನೆಯಾಗಿ ಜಾರಿಯಲ್ಲಿರುವ ಮಹಾಯೋಜನೆಯನ್ನು ಅಳವಡಿಸಿಕೊಳ್ಳಲಾಗಿರುತ್ತದೆ. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 157 ಬಿಎಂಆರ್ 2005 ದಿ:27.01.2009 ಮತ್ತು ತಿದ್ದುಪಡಿ ಆದೇಶ ದಿ:29.01.2009ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69 (2) ರನ್ವಯ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69 (4) ರನ್ವಯ ಈ ಕೆಳಕಂಡಂತೆ ವಸತಿ ಭೂಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(4)ರ ಅಡಿಯಲ್ಲಿ ಈ ಕೆಳಕಂಡಂತೆ ಹೊಸದಾಗಿ ಭೂಉಪಯೋಗ ನಿಗದಿಪಡಿಸುವ ಸಂಬಂಧ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ ನಂ.	ವಿಸ್ತೀರ್ಣ ಎ-ಗು	ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಹೊಸದಾಗಿ ನಿಗದಿಪಡಿಸಲು ಕೋರಿರುವ ಭೂ ಉಪಯೋಗ
(1)	(2)	(3)	(4)	(5)	(6)	(7)	(8)	(9)
1	ಶ್ರೀ ಪಿ. ದಾಮೋದರ ರಾಜು ಬಿನ್ ವೆಂಕಟರಾಜು ಪಿ.	ದೇವನಹಳ್ಳಿ	ಕಸಬಾ	ರಾಯಸಂದ್ರ	13/5	0–36	ಸಾರ್ವಜನಿಕ ಮತ್ತು ಅರೆಸಾರ್ವಜನಿಕ	ವಸತಿ
2	ಶ್ರೀ ಎ. ಮರಿಯಣ್ಣ ಬಿನ್ ಅಂದಾರಪ್ಪ	ದೇವನಹಳ್ಳಿ	ಕಸಬಾ	ರಾಯಸಂದ್ರ	15/4	0–17¼	ಸಾರ್ವಜನಿಕ ಮತ್ತು ಅರೆಸಾರ್ವಜನಿಕ	ವಸತಿ
3	ಶ್ರೀ ಎ. ಮುನಿರಾಜ ಬಿನ್ ಅಂದಾರಪ್ಪ	ದೇವನಹಳ್ಳಿ	ಕಸಬಾ	ರಾಯಸಂದ್ರ	15/5	0–17¼	ಸಾರ್ವಜನಿಕ ಮತ್ತು ಅರೆಸಾರ್ವಜನಿಕ	ವಸತಿ
4	ಶ್ರೀ ಎ. ಲಕ್ಷ್ಮಣ ಬಿನ್ ಅಂದಾರಪ್ಪ	ದೇವನಹಳ್ಳಿ	ಕಸಬಾ	ರಾಯಸಂದ್ರ	15/6	0–17¼	ಸಾರ್ವಜನಿಕ ಮತ್ತು ಅರೆಸಾರ್ವಜನಿಕ	ವಸತಿ
5	ಶ್ರೀ ಎ. ಶ್ರೀನಿವಾಸ ಬಿನ್ ಅಂದಾರಪ್ಪ	ದೇವನಹಳ್ಳಿ	ಕಸಬಾ	ರಾಯಸಂದ್ರ	15/7	0–17¼	ಸಾರ್ವಜನಿಕ ಮತ್ತು ಅರೆಸಾರ್ವಜನಿಕ	ವಸತಿ
6	ಶ್ರೀ ಎ. ಮುನಿಯಪ್ಪ ಬಿನ್ ಅಂದಾರಪ್ಪ	ದೇವನಹಳ್ಳಿ	ಕಸಬಾ	ರಾಯಸಂದ್ರ	15/8	0–6½	ಸಾರ್ವಜನಿಕ ಮತ್ತು ಅರೆಸಾರ್ವಜನಿಕ	ವಸತಿ

ಸಹಿ/-
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/3820/ಆಕಾರ್/2025-26

COFFEE DAY ENTERPRISES LTD.

Coffee Day — Brewing new possibilities.

Registered Office: 165, R.V. Road, Near Minerva Circle, Bengaluru - 560 004, Karnataka, India.
Tel: + 91 80 4001 2345; **Fax:** + 91 80 4001 2650;
Website: www.coffeeday.com
Corporate Identification Number: L55101KA2008PLC046866

Financial Results for the Quarter and Half-year ended 30th September, 2025

Un-audited financial results of Coffee Day Enterprises Limited (Consolidated Information)

(₹ in Crores except per share data)

Particulars	Quarter ended 30th September, 2025 (Unaudited)	Half year ended 30th September, 2025 (Unaudited)	Quarter ended 30th September, 2024 (Unaudited)
Total income from operations (net)	282.58	557.87	294.97
Net Profit from ordinary activities after tax	(15.70)	7.60	(4.30)
Net Profit for the period after tax (after Extraordinary items)	(15.70)	7.60	(4.30)
Equity Share Capital	211.25	211.25	211.25
Reserves (excluding Revaluation Reserve as shown in the Balance Sheet of previous year)			
Earnings Per Share (before extraordinary items) (of ₹ 10/- each) Basic :	(0.59)	0.74	(0.16)
Diluted :	(0.59)	0.74	(0.16)
Earnings Per Share (after extraordinary items) (of ₹ 10/- each) Basic :	(0.59)	0.74	(0.16)
Diluted :	(0.59)	0.74	(0.16)

Notes:

1. The above is an extract of the detailed format of Financial Results filed with the Stock Exchanges under Regulation 33 of the SEBI (Listing and other Disclosure Requirements) Regulations, 2015. The full format of the Financial Results are available on the website of BSE (www.bseindia.com) and NSE (www.nseindia.com) and on the Company's website www.coffeeday.com
2. The above results were reviewed by the Audit Committee and thereafter approved by the Board of Directors in their meeting held on 14th November, 2025 and have been subjected to the Limited review by the Statutory Auditors of the Company.
3. **Un-audited financial results of Coffee Day Enterprises Limited (Standalone Information)**

(₹ in Crores)

Particulars	Quarter ended 30th September, 2025 (Unaudited)	Half year ended 30th September, 2025 (Unaudited)	Quarter ended 30th September, 2024 (Unaudited)
Total income from operations (net)	4.88	10.56	4.43
Loss before tax and exceptional items	(6.01)	7.12	3.23
Loss profit after tax and exceptional items	(6.01)	7.12	3.23

For and Behalf of Board of Directors
Malavika Hegde
Chairman and CEO & Whole Time Director

Place : Bengaluru
Date : 14 November, 2025

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು-560 020

ಸಂ.: ಬೆಂಅಪ್ರಾ/ನಯೋಸ/CLU-186/3089/2025-26 ದಿನಾಂಕ: 14.11.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಕಿಶೋರ್ ಕುಮಾರ್ ವಿ ಮತ್ತು ಇತರರು. ನಂ. 225, 5ನೇ ಅಡ್ಡ, ರಸ್ತೆ 18ನೇ ಮುಖ್ಯ ರಸ್ತೆ, 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560095	ಯಲಹಂಕ	ಜಾಲ	ಬೆಟ್ಟ ಹಲಸೂರು	384	3ಎ-36ಗುಂ (04ಗುಂ ಖರಾಬು ಹೊರತುಪಡಿಸಿ)	ಭಾಗಶಃ: ವ್ಯವಸಾಯ, ಭಾಗಶಃ: ವ್ಯಾಲಿ	ವಸತಿ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಸದರಿ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗಿರುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ. ಸದರಿ ಪ್ರದೇಶವನ್ನು **‘ವ್ಯವಸಾಯ ವಲಯ’** ದಿಂದ **‘ವಸತಿ ಉಪಯೋಗಕ್ಕೆ’** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಬೆಂ.ಮ.ಪ್ರ.ಪ್ರಾ.
ಎಲ್.ಆರ್.ಡಿ.ಇ ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ,
ಬೆಂಗಳೂರು-560052, ದೂರವಾಣಿ ಸಂಖ್ಯೆ: 080-22263479.

ಸಂಖ್ಯೆ: STRRPA/TP/CLU/89/2025-26 ದಿನಾಂಕ: 14.11.2025.

“ಪ್ರಕಟಣೆ”

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **“ವ್ಯವಸಾಯ”** ವಲಯದಿಂದ **“ವಸತಿ”** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ-ಗು	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	2	3	4	5	6	7	8	9
1	ಶ್ರೀಮತಿ ನಾರಾಯಣಮ್ಮ ಕೋಂ. ಲೇಟ್‌ಸಂಪಂಗಿ ಶ್ರೀಮತಿ ರಾಜಮ್ಮ ಬಿನ್ ಲೇಟ್ ಕೊಂಡಪ್ಪ ಇವರ ಪರವಾಗಿ ಜಿಪಿಎದಾರರಾದ ಮೆ॥ ಎಂ. ಎಸ್.ಆರ್. ಡೆವಲಪರ್ಸ್ ಇದರ ಪಾರ್ಟನರ್ ಆದ ಶ್ರೀಮತಿ ಬಿ. ಲಕ್ಷ್ಮೀ ಪ್ರಸನ್ನ ಕೋಂ. ಶ್ರೀ ಬಿ. ಲಕ್ಷ್ಮಯ್ಯ ಹಾಗೂ ಶ್ರೀ ಇಂಡೆಲಾ ವಿಷ್ಣುವರ್ಧನ್ ರೆಡ್ಡಿ. ಬಿನ್ ಶ್ರೀ ಓಬುಲ್ ರೆಡ್ಡಿ ಇಂಡೆಲಾ	ದೇವನಹಳ್ಳಿ	ಚನ್ನರಾಯಪಟ್ಟಣ	ಗಂಗವಾರ ಚೌಡಪ್ಪನಹಳ್ಳಿ	262 (ಹಳೇ ನಂ.146)	1–38	**ವ್ಯವಸಾಯ**	**ವಸತಿ**
2	ಮೆ॥ ಎಂ. ಎಸ್.ಆರ್. ಡೆವಲಪರ್ಸ್ ಇದರ ಪಾರ್ಟನರ್ ಆದ ಶ್ರೀಮತಿ ಬಿ. ಲಕ್ಷ್ಮೀ ಪ್ರಸನ್ನ ಕೋಂ. ಶ್ರೀ ಬಿ. ಲಕ್ಷ್ಮಯ್ಯ ಹಾಗೂ ಶ್ರೀ ಇಂಡೆಲಾ ವಿಷ್ಣುವರ್ಧನ್ ರೆಡ್ಡಿ. ಬಿನ್ ಶ್ರೀ ಓಬುಲ್ ರೆಡ್ಡಿ ಇಂಡೆಲಾ	ದೇವನಹಳ್ಳಿ	ಚನ್ನರಾಯಪಟ್ಟಣ	ಗಂಗವಾರ ಚೌಡಪ್ಪನಹಳ್ಳಿ	300 301	0–18 0–18	**ವ್ಯವಸಾಯ**	**ವಸತಿ**
3	ಮೆ॥ ಎಂ. ಎಸ್.ಆರ್. ಡೆವಲಪರ್ಸ್ ಇದರ ಪಾರ್ಟನರ್ ಆದ ಶ್ರೀಮತಿ ಬಿ. ಲಕ್ಷ್ಮೀ ಪ್ರಸನ್ನ ಕೋಂ. ಶ್ರೀ ಬಿ. ಲಕ್ಷ್ಮಯ್ಯ ಹಾಗೂ ಶ್ರೀ ವುಂಡೇಲಾ ಸುರೇಂದ್ರ ರೆಡ್ಡಿ ಬಿನ್ ಶ್ರೀ ಓಬುಲ್ ರೆಡ್ಡಿ ಇಂಡೆಲಾ	ದೇವನಹಳ್ಳಿ	ಚನ್ನರಾಯಪಟ್ಟಣ	ಗಂಗವಾರ ಚೌಡಪ್ಪನಹಳ್ಳಿ	307	2–00	**ವ್ಯವಸಾಯ**	**ವಸತಿ**

ಷರಾ:- ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಸತಿ ಬಡಾವಣೆಗಳು ಬಂದಿದ್ದು/ ಬರುತ್ತಿದ್ದು, ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಕಡಿಮೆ ವೆಚ್ಚದಲ್ಲಿ ನಿವೇಶನಗಳನ್ನು ನೀಡುವ ಉದ್ದೇಶವನ್ನು ಹೊಂದಿರುತ್ತೇವೆ ಆದ್ದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **ವ್ಯವಸಾಯ’** ವಲಯದಿಂದ **‘ವಸತಿ’** ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/-
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/3818/ಎಸ್‌ಎಸ್‌ಸಿ/2025-26

‘ಬೈಕ್ ಟ್ಯಾಕ್ಸಿ ಸಾರಿಗೆ ವಾಹನವಲ್ಲ’

ಮೋಟಾರು ಸೈಕಲ್‌ಗೆ ಶಾಸನದಲ್ಲಿ ವ್ಯಾಖ್ಯಾನವಿಲ್ಲ: ಅಡ್ವೊಕೇಟ್ ಜನರಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಯಾಣಿಕರನ್ನು ಸಾಗಿಸಲು ಅಥವಾ ಬಾಡಿಗೆಗೆ ಅವುಗಳನ್ನು ಬಳಕೆ ಮಾಡಬಹುದು ಎಂದು ಶಾಸನದಲ್ಲಿ ಯಾವುದೇ ವ್ಯಾಖ್ಯಾನ ಇಲ್ಲದಿರುವ ಕಾರಣ ಮೋಟಾರು ಸೈಕಲ್‌ಗಳು ಸಾರಿಗೆ ವಾಹನ ಎನಿಸುವುದಿಲ್ಲ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದೆ.

ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿ, ಉಬರ್ ಇಂಡಿಯಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್, ವರೀಕೃತಿ ಮಹೇಂದ್ರ ರೆಡ್ಡಿ, ಮಧು ಕಿರಣ್, ರೊಪ್ಪೇನ್ ಟ್ರಾನ್ಸ್‌ಪೋರ್ಟೇಶನ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಮತ್ತು ಬೈಕ್ ಟ್ಯಾಕ್ಸಿ ವೆಲ್ಫೇರ್ ಅಸೋಸಿಯೇಷನ್ ಪ್ರತಿನಿಧಿಗಳು ಸಲ್ಲಿಸಿರುವ ರಿಟ್ ಮೇಲ್ಮನವಿಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ (ಎಜಿ) ಕೆ.ಶಶಿಕಿರಣ್ ಶೆಟ್ಟಿ ಅವರು, ‘ಮೋಟಾರ್ ಸೈಕಲ್, ಮೋಟಾರ್ ಕ್ಯಾಬ್ ವ್ಯಾಖ್ಯಾನದ ಅಡಿ ಬರುವುದಿಲ್ಲ’ ಎಂದು ನ್ಯಾಯಪೀಠಕ್ಕೆ ಅರುಹಿದರು.

‘ಯಾವುದೇ ಮೋಟಾರ್ ಸೈಕಲ್ ಅನ್ನು ಸಾರಿಗೆ ವಾಹನ ಎಂದು ಪರಿಗಣಿಸಬೇಕಾದರೆ ಅನುಮತಿ ಕಡ್ಡಾಯ. ಮೋಟಾರ್ ಸೈಕಲ್ ಎಂಬುದು ಪ್ರಯಾಣಿಕರನ್ನು ಹೊತ್ತೊಯ್ಯುವ ವಾಹನವಲ್ಲ. ಇದನ್ನು ಬಾಡಿಗೆ ಅಥವಾ ಹಣ ಸಂಪಾದಿಸಲು ಬಳಕೆ ಮಾಡಲಾಗದು. ಇವಿ ಮೋಟಾರ್ ಸೈಕಲ್‌ಗಳಿಗೆ ವಿಶೇಷ ವಿನಾಯಿತಿ ನೀಡಲಾಗಿತ್ತು. ಅನುಮತಿ ನೀಡುವುದು ರಾಜ್ಯ ಸರ್ಕಾರದ ವಿಶೇಷ ಅಧಿಕಾರವಾಗಿದೆ’ ಎಂದರು.

ನ.24ಕ್ಕೆ ವಿಚಾರಣೆ ಮುಂದೂಡಿಕೆ

ಎ.ಜಿ ಅವರ ಸುದೀರ್ಘ ವಾದ ಆಲಿಸಿದ ನ್ಯಾಯಪೀಠ ಪ್ರತಿವಾದಿಗಳ ಪ್ರತ್ಯುತ್ತರಕ್ಕೆ ನಿಗದಿಗೊಳಿಸಿ ವಿಚಾರಣೆಯನ್ನು ಇದೇ 24ಕ್ಕೆ ಮುಂದೂಡಿತು. ‘ಮೋಟಾರು ವಾಹನಗಳ ಕಾಯ್ದೆ–1988ರ ಅನ್ವಯ ಮಾರ್ಗಸೂಚಿ ರೂಪಿಸುವವರೆಗೆ ಬೈಕ್ ಟ್ಯಾಕ್ಸಿ ಸೇವೆಯನ್ನು ಮುಂದುವರಿಸುವಂತಿಲ್ಲ’ ಎಂಬ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಲಾಗಿದೆ.

ಕುತ್ತು ತಂದ ಗಾಂಧರ್ವ ವಿವಾಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಠಾಣೆಯಲ್ಲೇ ಕಾರ್ಯನಿರ್ವಹಿಸುತ್ತಿದ್ದ ಸಹೋದ್ಯೋಗಿ ಮಹಿಳಾ ಪೊಲೀಸ್ ಕಾನ್‌ಸ್ಟೆಬಲ್ ಜೊತೆ ಗಾಂಧರ್ವ ಪದ್ಧತಿಯಲ್ಲಿ ವಿವಾಹ ಮಾಡಿಕೊಂಡು ಅದನ್ನು ಬಹಿರಂಗಗೊಳಿಸದೆ ಮತ್ತೊಬ್ಬ ಹುಡುಗಿಯ ಜೊತೆ ನಿಶ್ಚಿತಾರ್ಥ ಮಾಡಿಕೊಂಡು ಮದುವೆಗೆ ತಯಾರಾಗಿದ್ದ ಪೊಲೀಸ್ ಕಾನ್‌ಸ್ಟೆಬಲ್‌ಗೆ ನಿರೀಕ್ಷಣಾ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿದೆ.

ಕುಣಿಗಲ್ ತಾಲ್ಲೂಕಿನ ಅಮೃತೂರು ಪೊಲೀಸ್ ಠಾಣೆಯಲ್ಲಿ ಕಾನ್‌ಸ್ಟೆಬಲ್ ಆಗಿ ಸೇವೆ ಸಲ್ಲಿಸುತ್ತಿದ್ದ ಭಗವಂತರಾಯ ಬಸಂತರಾಯ ಬಿರಾದಾರ (34) ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ರಾಚಯ್ಯ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಪರಿಶಿಷ್ಟ ಜಾತಿಗೆ ಸೇರಿದ ಸಂತ್ರಸ್ತೆಗೆ (28) ಭಗವಂತರಾಯ ಕೋಣೆಯೊಂದರಲ್ಲಿ ಸಾಯಿಬಾಬ ಫೋಟೊ ಮುಂದೆ ಗುಪ್ತವಾಗಿ ತಾಳಿ ಕಟ್ಟಿ ಪತಿಯಂತೆಯೇ ಒಟ್ಟಿಗೇ ಆಕೆಯೊಂದಿಗೆ ವಾಸ ಮಾಡಿದ್ದಾರೆ. ಮನಬಂದಾಗಲೆಲ್ಲಾ ಸಂಭೋಗ ನಡೆಸಿದ್ದಾರೆ. ಆಕೆ ತಾಳಿ ಕಟ್ಟಿಕೊಳ್ಳದಂತೆ ನಿರ್ಬಂಧಿಸಿದ್ದಾರೆ. ಸಾರ್ವಜನಿಕವಾಗಿ ಪತ್ನಿ ಎಂದು ಘೋಷಿಸದೆ ಮತ್ತೊಂದು ಹುಡುಗಿಯೊಂದಿಗೆ ನಿಶ್ಚಿತಾರ್ಥ ಮಾಡಿಕೊಂದು ಮದುವೆಗೆ ಸಿದ್ಧವಾಗಿ ವಂಚನೆ ಎಸಗಿರುವುದು ಕಂಡುಬಂದಿದೆ’ ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ನಿರೀಕ್ಷಣಾ ಜಾಮೀನು ನಿರಾಕರಿಸಿದೆ.

ಪ್ರಕರಣ: ಭಗವಂತರಾಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 318(2), 352, 115 (2), 351(2), 54, 74 ಮತ್ತು 3(5) ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ–1989ರ ಕಲಂ 3(1), (ಆರ್)(ಎಸ್), 3(1),(ಡಬ್ಲ್ಯು)(i) ಮತ್ತು 3(2)(ವಿಎ) ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿದೆ. ತಮ್ಮ ವಿರುದ್ಧದ ಎಫ್‌ಐಆರ್ ರದ್ದುಗೊಳಿಸುವಂತೆ ಕೋರಿ ಭಗವಂತರಾಯ ತುಮಕೂರು ಜಿಲ್ಲಾ ಸೆಷನ್ಸ್ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಇದನ್ನು ತಿರಸ್ಕರಿಸಲಾಗಿತ್ತು.

ಪೆರೋಲ್‌ಗೆ ವೈದ್ಯರ ಸುಳ್ಳು ದಾಖಲೆ: ಎಚ್ಚರಿಕೆ

ಬೆಂಗಳೂರು: ‘ಸಜಾ ಬಂದಿಗಳು ಪೆರೋಲ್ ಪಡೆಯಲು ಅನುಕೂಲವಾಗುವಂತೆ ಸುಳ್ಳು ವೈದ್ಯಕೀಯ ದಾಖಲೆ ನೀಡುತ್ತಿರುವ ವೈದ್ಯರ ವಿರುದ್ಧ ಸರ್ಕಾರ ಗಂಭೀರವಾಗಿ ಗಮನ ಹರಿಸಬೇಕಿದೆ’ ಎಂದು ಹೈಕೋರ್ಟ್ ಮೌಖಿಕವಾಗಿ ಎಚ್ಚರಿಸಿದೆ.

‘ತಾಯಿಯ ಚಿಕಿತ್ಸೆಗೆ ಆಸರೆಯಾಗಲು ಪೆರೋಲ್ ನೀಡಬೇಕು’ ಎಂದು ಅಪರಾಧ ಪ್ರಕರಣವೊಂದರಲ್ಲಿ ಜೈಲು ಶಿಕ್ಷೆ ಅನುಭವಿಸುತ್ತಿರುವ ಸಜಾಬಂದಿಯೊಬ್ಬರು ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ವೇಳೆ ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

St. PAUL'S CONVENT GIRLS' HIGH SCHOOL
P.J. Extension, Davangere- 577002, Karnataka.
WANTED LADY TEACHERS
2-English Teachers (B.A., B.Ed.), 1-Hindi Teacher (Hindi B.A.,B.Ed) and 1-Arts Teacher (B.A.,B.Ed) with prescribed qualification. Apply within Twenty One days with xerox marks card to the Correspondent, St. Paul's Convent Girls' High School, P.J. Extension, Davangere-577002, endorsing a copy to the DDPI, Davangere and to the B.E.O., South Range, Davangere.

ಪುಸ್ತಕ ಸಂತೆಗೆ ಭರ್ಜರಿ ಸ್ಪಂದನೆ

ಮೊದಲ ದಿನವೇ ಐದು ಸಾವಿರ ವಿದ್ಯಾರ್ಥಿಗಳ ಭೇಟಿ, ಪುಸ್ತಕ ಖರೀದಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಎರಡು ಲಕ್ಷಕ್ಕೂ ಹೆಚ್ಚು ಓದುಗರ ಭೇಟಿ ನಿರೀಕ್ಷೆ
- ಲೇಖಕರೊಂದಿಗೆ ಮುಖಾಮುಖಿ
- ರಿಯಾಯಿತಿ ದರದಲ್ಲಿ ಪುಸ್ತಕಗಳ ಮಾರಾಟ

ಬೆಂಗಳೂರು: ವೀರಲೋಕ ಪ್ರಕಾಶನವು ಜಯನಗರದ ಶಾಲಿನಿ ಮೈದಾನದಲ್ಲಿ ಹಮ್ಮಿಕೊಂಡಿರುವ ಮೂರನೇ ಆವೃತ್ತಿಯ 'ವೀರಲೋಕ ಪುಸ್ತಕ ಸಂತೆ'ಗೆ ಮೊದಲ ದಿನವಾದ ಶುಕ್ರವಾರ ಜನಸಾಗರವೇ ಹರಿದು ಬಂತು. ಓದುಗರು ತಮ್ಮ ಆಸಕ್ತಿಯ ವಿಷಯದ ಕೃತಿಗಳನ್ನು ಖರೀದಿಸಿದರು.

84 ಪುಸ್ತಕ ಮಳಿಗೆ ತೆರೆದಿದ್ದು, ಎಲ್ಲವೂ ಭರ್ತಿಯಾಗಿವೆ. ಕೆಲ ಪ್ರಕಾಶನದವರು ಶೇಕಡ 10ರಿಂದ 20ರಷ್ಟು ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ಮಾರಾಟ ಮಾಡುತ್ತಿದ್ದಾರೆ. ಕನ್ನಡ ಸಾಹಿತ್ಯದ ಜ್ಞಾನ ಭಂಡಾರವೇ ಅಲ್ಲಿದ್ದು, ಒಂದೇ ಸೂರಿನಲ್ಲಿ ವಿವಿಧ ಪ್ರಕಾರಗಳ, ಪ್ರಕಾರಗಳ ಸಾವಿರಾರು ಕೃತಿಗಳನ್ನು ವೀಕ್ಷಿಸಲು ಹಾಗೂ ಖರೀದಿಸಲು ಅವಕಾಶ ಕಲ್ಪಿಸಲಾಗಿದೆ. ಸಾಹಿತ್ಯ ಪ್ರಿಯರು, ಅವುಗಳನ್ನು ವೀಕ್ಷಿಸಲು ಕುಟುಂಬಸಮೇತ ಬಂದಿದ್ದರು.

ಆಹಾರ, ಆಟಿಕೆಗಳು, ಕರಕುಶಲ ಹಾಗೂ ಅಲಂಕಾರಿಕ ವಸ್ತುಗಳ ಮಳಿಗೆಗಳ ಬಳಿಯೂ ಜನರು ಜಮಾಯಿಸಿದ್ದರು. ನೈಸರ್ಗಿಕ ಸಾಬೂನು, ಅಗರಬತ್ತಿ, ಮಕ್ಕಳ ಹಾಗೂ ಸ್ತ್ರೀಯರ ಬಟ್ಟೆಗಳು, ಬ್ಯಾಗ್‌ಗಳು ಸೇರಿ ವಿವಿಧ ಗೃಹೋಪಯೋಗಿ ವಸ್ತುಗಳ ಮಳಿಗೆಗಳು ಗಮನ ಸೆಳೆದವು.

ಮೈದಾನದಲ್ಲಿ ಪುಸ್ತಕ ಲೋಕವೇ ಅರಳಿದೆ. ಸಾಹಿತಿಗಳಾದ ಕುವೆಂಪು, ಪೂರ್ಣಚಂದ್ರ ತೇಜಸ್ವಿ, ದ.ರಾ.ಬೇಂದ್ರೆ, ಚಂದ್ರಶೇಖರ ಕಂಬಾರ, ಯು.ಆರ್. ಅನಂತಮೂರ್ತಿ, ಎಚ್.ಎಸ್. ವೆಂಕಟೇಶಮೂರ್ತಿ ಸೇರಿದಂತೆ ಹಳೆ ಮತ್ತು ಹೊಸ ತಲೆಮಾರಿನ ಕನ್ನಡ ಸಾಹಿತ್ಯ ಲೋಕದ ಹೆಸರಾಂತ ಸಾಹಿತಿಗಳ ಪುಸ್ತಕಗಳು ಒಂದೇ ಸೂರಿನ ಓದುಗರಿಗೆ ದೊರಕಿದ್ದು, ಸಾಹಿತ್ಯ ಪ್ರಿಯರಲ್ಲಿ ಸಂಭ್ರಮ ಮನೆಮಾಡಿದೆ.

ಪುಸ್ತಕ ಸಂತೆ ಪ್ರವೇಶಿಸುತ್ತಿದ್ದಂತೆ ನಾಡಿನ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿಗಳ ಕಟೌಟ್‌ಗಳು ಗಮನ ಸೆಳೆಯುತ್ತಿವೆ. ಪುಸ್ತಕ ಸಂತೆ ಜತೆಗೆ ಮಕ್ಕಳ ಆಟಿಕೆಗಳು, ಅಲಂಕಾರಿಕ ವಸ್ತುಗಳು, ತಿಂಡಿ-ತಿನಿಸು, ಕರಕುಶಲ ವಸ್ತು, ಖಾದಿ ವಸ್ತ್ರಗಳ ಮಳಿಗೆಗಳನ್ನು ತೆರೆಯಲಾಗಿದೆ. ಗ್ರಾಮೀಣ ಸೊಗಡಿನ ಸಂಸ್ಕೃತಿ ಕೂಡ ಅನಾವರಣಗೊಂಡಿದೆ. ಐದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪುಸ್ತಕ ಸಂತೆಗೆ ಭೇಟಿ ನೀಡಿ, ಕತೆ ಪುಸ್ತಕ ಸೇರಿ ತಮಗಿಷ್ಟವಾದ ಲೇಖಕರ ಪುಸ್ತಕಗಳನ್ನು ಖರೀದಿಸಿದರು.

ಸಂತೆಯಲ್ಲಿರುವ ಪುಸ್ತಕ ಮಳಿಗೆಗಳಲ್ಲಿ ಜನರು ಗಿಜಿಗುಡುತ್ತಿದ್ದರು. ನಗರದ ವಿವಿಧೆಡೆಯಿಂದ ಬಂದಿದ್ದ ಜನರು, ಮಳಿಗೆಗಳಿಗೆ ಭೇಟಿ ನೀಡಿ, ನೆಚ್ಚಿನ ಲೇಖಕರ ಪುಸ್ತಕಗಳನ್ನು ಖರೀದಿಸಿದರು. ಕನ್ನಡ ಟೀ-ಶರ್ಟ್, ಕನ್ನಡ ಬಾವುಟಗಳು, ಬ್ಯಾಡ್ಜ್‌ಗಳು, ಶಲ್ಯಗಳು, ಕೈ ಗಡಿಯಾರಗಳು, ಗೋಡೆ ಗಡಿಯಾರಗಳು, ಚನ್ನಪಟ್ಟಣದ ಗೊಂಬೆಗಳು, 'ಇಳಕಲ್' ಸೀರೆಗಳು ಪ್ರಮುಖ ಆಕರ್ಷಣೆಯಾಗಿವೆ.

ಸಾಹಿತ್ಯಾಸಕ್ತರು ಪುಸ್ತಕ ಖರೀದಿ ಜತೆಗೆ ವಿವಿಧ ತಿನಿಸುಗಳನ್ನೂ ಸವಿದರು. ಪುಟಾಣಿಗಳು ಆಟಗಳಲ್ಲಿ ಕುಣಿದು ಸಂಭ್ರಮಿಸಿದರು.

ಕುಮಾರ ಆಯರಹಳ್ಳಿ, ದೀಪಾ ಫಡ್ಕೆ, ಬೇಲೂರು ರಘುನಂದನ್, ಭಾರತಿ ಹೆಗಡೆ, ಶಿವಕುಮಾರ್ ಮಾವಲಿ ಅವರ ಸಂವಾದ ಕಾರ್ಯಕ್ರಮದಲ್ಲಿ ಓದುಗರು ಭಾಗವಹಿಸಿದರು. ಬೆಳಿಗ್ಗೆ ಹಲವು ಮಲ್ಹಾರ್ ಅವರ 'ಅರ್ಧ ಹಿಂದೂ ಅರ್ಧ ಮುಸ್ಲಿಂ', ರೋಹಿತ್ ನಾಗೇಶ್ ಅವರ 'ಅವಿತಿದ್ದ ಕವಿತೆಗಳು', ರವೀಂದ್ರ ಕೊಟಕಿ ಅವರ 'ಲವ್ ಆದ ಮೇಲೆ' ಸೇರಿದಂತೆ ನಾಲ್ಕು ಪುಸ್ತಕಗಳು ಬಿಡುಗಡೆಯಾದವು.

ಮಧ್ಯಾಹ್ನ ನಡೆದ ಓಲೇ ವಿಭಾಗ ಕಾರ್ಯಕ್ರಮದಲ್ಲಿ ಲೇಖಕ ಬೇಲೂರು ರಾಮಮೂರ್ತಿ, ಮಹಬಲೈ ಪ್ರಸನ್ನ, ದಾದಾಪೀರ್ ಜೈಮನ್, ವಿದ್ಯಾರಶ್ಮಿ ಪೆಲತ್ತಡ್ಕ ಸೇರಿದಂತೆ ಹಲವು ಲೇಖಕ-ಲೇಖಕಿಯರು ಭಾಗವಹಿಸಿ ಸಂತೆಯ ಮೆರುಗು ಹೆಚ್ಚಿಸಿದರು. 13 ಲೇಖಕರ ಜತೆ ಮುಖಾಮುಖಿ ಮತ್ತು ಆರು ಲೇಖಕರ ಜತೆ ಸಂವಾದ ನಡೆಯಿತು. ವೀರಲೋಕದ ಹೆಮ್ಮೆಯ ಲೇಖಕರ ಭಾವಚಿತ್ರಗಳು ಆಕರ್ಷಿಸಿದವು.

ಪುಸ್ತಕ ಸಂತೆಗೆ ಭೇಟಿ ನೀಡಿದ ಓದುಗರಿಗೆ ಕೆಲ ಪ್ರಕಾಶನದವರು ಉಚಿತವಾಗಿ ಪುಸ್ತಕಗಳನ್ನು ವಿತರಿಸಿದರು. 'ಕನ್ನಡ ಕುಲಕ್ಕೆ ಉತ್ತಮ ಪುಸ್ತಕಗಳು', 'ನನ್ನ ಮಾತನ್ನು ಮುಗಿದಿಲ್ಲ', 'ಸ್ವಾಸ್ಥ ಮಹಾಬಲ', 'ಮಧುರ ಮೋಹನ', 'ಭೂಗಳ್ಳರು ಕಬಳಿಸಿದ ಜಮೀನನ್ನು ಉಳಿಸಿದ ಹೋರಾಟ', 'ಅಯ್ಯ ಭಾವನೆಗಳು', 'ಕ್ಷೇತ್ರ ದರ್ಶನ' ಸೇರಿ ಹಲವು ಲೇಖಕರ ಪುಸ್ತಕಗಳನ್ನು ಉಚಿತವಾಗಿ ನೀಡಲಾಯಿತು.

'ಪ್ರತಿ ಕನ್ನಡಿಗರಿಗೆ ಕನ್ನಡದ ಪುಸ್ತಕಗಳನ್ನು ತಲುಪಿಸಲು ಪ್ರಕಾಶಕರು-ಲೇಖಕರು-ಓದುಗರನ್ನು ಒಂದೆಡೆ ಸೇರಿಸುವ ಸೇತುವೆಯಾಗಿ 'ಪುಸ್ತಕ ಸಂತೆ' ಎನ್ನುವ ಸಾಹಿತ್ಯ ಸಂತೆಯನ್ನು ಆಯೋಜಿಸಲಾಗುತ್ತಿದೆ' ಎಂದು ವೀರಲೋಕ ಪ್ರಕಾಶನದ ವೀರಕಪುತ್ರ ಶ್ರೀನಿವಾಸ ತಿಳಿಸಿದರು.

'ವೀರಲೋಕ ಪುಸ್ತಕ ಸಂತೆ'ಯಲ್ಲಿ ಪುಸ್ತಕ ಖರೀದಿಯಲ್ಲಿ ಮಗ್ನರಾಗಿದ್ದ ಸಾಹಿತ್ಯಾಸಕ್ತರು ಪ್ರಜಾವಾಣಿ ಚಿತ್ರಗಳು:ರಂಜು ಪಿ

₹4 ಕೋಟಿ ವಹಿವಾಟು?

ಮೂರನೇ ಆವೃತ್ತಿಯ ಪುಸ್ತಕ ಸಂತೆಗೆ ನಿರೀಕ್ಷೆಗೂ ಮೀರಿ ಸ್ಪಂದನೆ ವ್ಯಕ್ತವಾಗಿದೆ. ವಿಶೇಷವಾಗಿ ಶಾಲಾ-ಕಾಲೇಜು ಮಕ್ಕಳು ಸಂತೆಗೆ ಭೇಟಿ ನೀಡಿ ಪುಸ್ತಕ ಖರೀದಿಸಿರುವುದು ಸಂತೋಷ ಉಂಟು ಮಾಡಿದೆ. ಕಳೆದ ವರ್ಷ ₹3 ಕೋಟಿ ವಹಿವಾಟು ಆಗಿತ್ತು. ಈ ವರ್ಷ ಅಂದಾಜು ₹4 ಕೋಟಿ ವಹಿವಾಟು ನಿರೀಕ್ಷೆ ಮಾಡಲಾಗಿದೆ. ಶನಿವಾರ ಮತ್ತು ಭಾನುವಾರ ಹೆಚ್ಚು ಜನರು ಭೇಟಿ ನೀಡಲಿದ್ದಾರೆ ಎಂದು ವೀರಕಪುತ್ರ ಶ್ರೀನಿವಾಸ ಹೇಳಿದರು.



ಪುಸ್ತಕ ಸಂತೆಯ ಮಳಿಗೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ್ ಹಾನಗಲ್, ವೀರಕಪುತ್ರ ಶ್ರೀನಿವಾಸ್, ಬೊಳುವಾರು ಮೊಹಮ್ಮದ್ ಕುಂಞ ಚರ್ಚೆ ನಡೆಸಿದರು. ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಇದ್ದರು

'ಸದನದಲ್ಲಿ ಡಾ.ವಿಷ್ಣುವರ್ಧನ್'

ಸಂಜೆ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮೂರು ಕೃತಿಗಳು ಜನಾರ್ಪಣೆಗೊಂಡವು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ ಅವರ 'ಸದನದಲ್ಲಿ ಡಾ.ವಿಷ್ಣುವರ್ಧನ್', ಸತೀಶ್ ಹುಲಿಯಾರ್ ಅವರ 'ಡಾ.ಎಚ್.ಎಸ್.ವಿ ಅವರ ಗೀತರೂಪಕಗಳು', ಬೊಳುವಾರು ಮೊಹಮ್ಮದ್ ಕುಂಞ ಅವರ 'ಮುತ್ತುಪ್ಪಾಡಿಯ ಮಾತುಗಾತಿ' ಕೃತಿಗಳನ್ನು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಬಿಡುಗಡೆ ಮಾಡಿದರು.

ಅಚ್ಚುಕಟ್ಟಾದ ವ್ಯವಸ್ಥೆ

ಶಾಲಿನಿ ಮೈದಾನದಲ್ಲಿ ಪುಸ್ತಕ ಸಂತೆಯನ್ನು ಅಚ್ಚುಕಟ್ಟಾಗಿ ಆಯೋಜಿಸಲಾಗಿದೆ. ಪುಸ್ತಕ, ಕರಕುಶಲ ವಸ್ತುಗಳು ಮತ್ತು ತಿಂಡಿ-ತಿನಿಸುಗಳಿಗೆ ಪ್ರತ್ಯೇಕ ಮಳಿಗೆಗಳನ್ನು ತೆರೆಯಲಾಗಿದೆ. ಮೈದಾನದಲ್ಲಿ ದೂಳು ಬಾರದಂತೆ ಹಸಿರು ಮ್ಯಾಟ್ ಹಾಕಲಾಗಿದ್ದು, ಪುಸ್ತಕ ಖರೀದಿಸುವವರಿಗೆ ದೂಳಿನ ಸಮಸ್ಯೆ ಉಂಟಾಗಿಲ್ಲ. ವಾಹನ ನಿಲುಗಡೆ ಜಾಗದಲ್ಲೂ ದೂಳು ಬಾರದಂತೆ ಕ್ರಮ ವಹಿಸಲಾಗಿದೆ.

'ಓದುಗ- ಲೇಖಕರ ಸಂವಾದ ಜತೆಗೆ 22 ಲೇಖಕರ ಪುಸ್ತಕಗಳು ಜನಾರ್ಪಣೆಗೊಳ್ಳಲಿವೆ. ಮೂರು ದಿನವೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಪೋಷಕರು ವಾರಾಂತ್ಯದಲ್ಲಿ ಮಾಲ್‌ಗಳಿಗೆ ಮಕ್ಕಳನ್ನು ಕರೆದುಕೊಂಡು ಹೋಗುವ ಬದಲು ಪುಸ್ತಕ ಸಂತೆಗೆ ಬಂದರೆ ಇಲ್ಲಿಯೇ ಖರೀದಿಗೆ ಅವಕಾಶವಿದೆ' ಎಂದು ಹೇಳಿದರು.

'ಮೈಸೂರು ರಾಜ್ಯ ರಚಿಸಿ'

ರಾಜ್ಯ ರಚನಾ ಒತ್ತಾಯ ಸಮಿತಿಯಿಂದ ಕೇಂದ್ರಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಡಳಿತಾತ್ಮಕ ದೃಷ್ಟಿಯಿಂದ ದಕ್ಷಿಣ ಕರ್ನಾಟಕ ಭಾಗದ ಜಿಲ್ಲೆಗಳನ್ನು ಒಳಗೊಂಡು ಪ್ರತ್ಯೇಕ ಮೈಸೂರು ರಾಜ್ಯ ರಚನೆ ಮಾಡಬೇಕು' ಎಂದು ಮೈಸೂರು ರಾಜ್ಯ ರಚನಾ ಒತ್ತಾಯ ಸಮಿತಿ ಕೇಂದ್ರ ಸರ್ಕಾರಕ್ಕೆ ಆಗ್ರಹಿಸಿದೆ.

'ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಗೂ ಮುನ್ನ, 2028ರೊಳಗೆ ಕ್ಷೇತ್ರಗಳ ಮರುವಿಂಗಡಣೆ ಮಾಡಬೇಕಿದೆ. ಈ ಪ್ರಕ್ರಿಯೆಗೂ ಮೊದಲೇ ಪ್ರತ್ಯೇಕ ರಾಜ್ಯ ರಚನೆ ಮಾಡಿದರೆ ರಾಜ್ಯದ ಅಭಿವೃದ್ಧಿಗೆ ಪೂರಕವಾಗಲಿದೆ. ಆ ದೃಷ್ಟಿಯಿಂದ ರಾಜ್ಯದ ಎಲ್ಲ ಪಕ್ಷಗಳ ನಾಯಕರು ಒಮ್ಮತದಿಂದ ನಿರ್ಣಯಕ್ಕೆ ಬರಬೇಕು' ಎಂದು ಸಮಿತಿಯ ರಾಜ್ಯಾಧ್ಯಕ್ಷ ಮರಿಮಲ್ಲಯ್ಯ ಹೇಳಿದ್ದಾರೆ.

'ಕರ್ನಾಟಕ ಅತಿದೊಡ್ಡ ರಾಜ್ಯವಾದ್ದರಿಂದ, ಎಲ್ಲ ಪ್ರಾಂತಗಳ ಸರ್ವಾಂಗೀಣ ಅಭಿವೃದ್ಧಿ ಹಾಗೂ ನಾಡಿನ ಸಮತೋಲನ ಆಡಳಿತ ದೃಷ್ಟಿಯಿಂದ ಪ್ರತ್ಯೇಕ ರಾಜ್ಯಗಳನ್ನು ರಚಿಸುವುದು ಸೂಕ್ತ. ಮೈಸೂರು, ಮಂಡ್ಯ, ಕೊಡಗು, ಉಡುಪಿ, ದಕ್ಷಿಣ ಕನ್ನಡ, ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಹಾಸನ, ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ, ಕೋಲಾರ, ಚಿಕ್ಕಬಳ್ಳಾಪುರ, ದಾವಣಗೆರೆ ಮತ್ತು ಉತ್ತರ ಕನ್ನಡವನ್ನು ಒಳಗೊಂಡು ಮೈಸೂರು ರಾಜ್ಯ ರಚಿಸಬೇಕಿದೆ. ಇದರಿಂದ ಉಳಿದ ಪ್ರದೇಶಗಳ ಅಭಿವೃದ್ಧಿಗೂ ಪ್ರತ್ಯೇಕ ಸಮಗ್ರ ಯೋಜನೆ ರೂಪಿಸಲು ಸಾಧ್ಯ' ಎಂದಿದ್ದಾರೆ.

'ಜನಸಂಖ್ಯೆ ಪ್ರಕಾರ ಆಡಳಿತದ ದೃಷ್ಟಿಯಿಂದ ತಲಾ 3.5 ಕೋಟಿ ಜನರಿಗೆ ಅನ್ವಯವಾಗುವಂತೆ ರಾಜ್ಯವನ್ನು ರಚಿಸುವುದು ಸೂಕ್ತ. ಜನಪ್ರತಿನಿಧಿಗಳು, ಪ್ರಜ್ಞಾವಂತರು, ಸಾಹಿತಿಗಳು ಈ ಬಗ್ಗೆ ಚಿಂತಿಸಲು ಇದು ಸಕಾಲ' ಎಂದು ಹೇಳಿದ್ದಾರೆ.

ಐ.ಟಿ ಕಂಪನಿಗಳ ಆವರಣದಲ್ಲಿ ವಾಹನ ನಿಲುಗಡೆ

'ಪಾವತಿ ವ್ಯವಸ್ಥೆ ಜಾರಿಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೊರವರ್ತುಲ ರಸ್ತೆಯಲ್ಲಿ ದಿನದಿಂದ ದಿನಕ್ಕೆ ವಾಹನ ದಟ್ಟಣೆ ತೀವ್ರಗೊಂಡು ಸಮಸ್ಯೆ ಉಲ್ಬಣಿಸುತ್ತಿದೆ. ಇದನ್ನು ಕಡಿಮೆ ಮಾಡಲು, ಸಾಫ್ಟ್‌ವೇರ್ ಕಂಪನಿಗಳ ಆವರಣದಲ್ಲಿ ಪಾವತಿ ಮಾಡಿ ವಾಹನಗಳ ನಿಲುಗಡೆ ಮಾಡುವ ವ್ಯವಸ್ಥೆಯನ್ನು ಜಾರಿಗೆ ತರುವಂತೆ ನಗರ ಸಂಚಾರ ಪೊಲೀಸರು ಸಾಫ್ಟ್‌ವೇರ್ ಕಂಪನಿಗಳಿಗೆ ಮನವಿ ಮಾಡಿದ್ದಾರೆ.

ಈ ವ್ಯವಸ್ಥೆ ಜಾರಿಗೆ ತಂದರೆ ಸ್ವಂತ ವಾಹನಗಳ ಬಳಕೆದಾರರ ಸಂಖ್ಯೆ ಸಹಜವಾಗಿ ಕಡಿಮೆಯಾಗಲಿದೆ. ಆಗ ಶೇ 30ರಷ್ಟು ದಟ್ಟಣೆ ಸಮಸ್ಯೆ ತಗ್ಗಲಿದೆ ಎಂದು ಸಂಚಾರ ಪೊಲೀಸರು ಅಂದಾಜಿಸಿದ್ದಾರೆ.

ನಗರದ ಐ.ಟಿ ಕಾರಿಡಾರ್‌ನಲ್ಲಿ ವಾಹನ ದಟ್ಟಣೆ ತಗ್ಗಿಸಲು ವಿವಿಧ ಪ್ರಯೋಗಗಳನ್ನು ಜಾರಿಗೆ ತರಲಾಗುತ್ತಿದೆ. ಪಾವತಿ ಮಾಡಿ ವಾಹನ ನಿಲುಗಡೆ ಮಾಡುವ ವ್ಯವಸ್ಥೆ ಜಾರಿಗೆ ತರುವಂತೆ ಇತ್ತೀಚೆಗೆ ನಡೆದಿದ್ದ ಸಭೆಯಲ್ಲಿ ಮನವಿ ಮಾಡಲಾಗಿತ್ತು. ಸಭೆಯಲ್ಲಿ ಕಿರಣ್ ಮಜುಂದಾರ್ ಶಾ, ಆರ್.ಕೆ.ಮಿಶ್ರಾ ಮತ್ತು ನರೇಶ್ ನರಸಿಂಹನ್ ಅವರು ಭಾಗಿಯಾಗಿದ್ದರು ಎಂದು ಪೊಲೀಸರು ಹೇಳಿದರು.

ಸಭೆಯಲ್ಲಿ ಹೊರವರ್ತುಲ ರಸ್ತೆಯಲ್ಲಿ ದಟ್ಟಣೆ ಸಮಸ್ಯೆ ಕುರಿತು ಚರ್ಚಿಸಲಾಯಿತು. ಬೆಂಗಳೂರಿನಲ್ಲಿ ನಿತ್ಯ 3 ಸಾವಿರ ಹೊಸ ವಾಹನಗಳು ನೋಂದಣಿಯಾಗಿ ರಸ್ತೆಗೆ ಇಳಿಯುತ್ತಿವೆ. ಸಾಫ್ಟ್‌ವೇರ್ ಕಂಪನಿಗಳು ತಮ್ಮ ಆವರಣದಲ್ಲಿ ವಾಹನ ನಿಲುಗಡೆಗೆ ಯಾವುದೇ ಶುಲ್ಕ ವಿಧಿಸುತ್ತಿಲ್ಲ. ಆ ಕಾರಣಕ್ಕೆ ಹೆಚ್ಚಿನ ಟೆಕಿಗಳು ದ್ವಿಚಕ್ರ ವಾಹನಗಳನ್ನು ಬಳಸುತ್ತಿದ್ದಾರೆ. ದ್ವಿಚಕ್ರ ವಾಹನದಲ್ಲಿ ಒಬ್ಬರೇ ಓಡಾಟ ನಡೆಸುತ್ತಿದ್ದಾರೆ. ಪಾವತಿ ವ್ಯವಸ್ಥೆ ಜಾರಿಗೆ ತಂದರೆ ಶೇ 10ರಷ್ಟು ಟೆಕಿಗಳು ಸಾರ್ವಜನಿಕ ಸಾರಿಗೆ ಬಳಸುತ್ತಾರೆ. ಆಗ ತಕ್ಕಮಟ್ಟಿಗೆ ದಟ್ಟಣೆ ಸಮಸ್ಯೆ ನಿವಾರಣೆ ಆಗಲಿದೆ ಎಂದು ಸಂಚಾರ ಪೊಲೀಸರು ಹೇಳಿದರು. ಆದರೆ ಈ ಸಲಹೆಯನ್ನು ಕೆಲವು ಐ.ಟಿ ಕಂಪನಿಗಳ ಮುಖ್ಯಸ್ಥರು ತಿರಸ್ಕರಿಸಿದ್ದಾರೆ.

ಹೊರ ವರ್ತುಲ ರಸ್ತೆಯಲ್ಲಿ ದ್ವಿಚಕ್ರ ವಾಹನಗಳಲ್ಲಿ ಒಬ್ಬರೇ ಸಂಚಾರ ನಡೆಸುತ್ತಿದ್ದಾರೆ. ಕಾರ್ ಪೂಲಿಂಗ್ ಪ್ರೋತ್ಸಾಹಿಸಬೇಕು. ಬಿಎಂಟಿಸಿ ಬಸ್‌ಗಳ ಸಂಖ್ಯೆ ಹೆಚ್ಚಿಸಬೇಕು ಎಂದೂ ಸಭೆಯಲ್ಲಿ ಸಲಹೆ ನೀಡಲಾಗಿದೆ.

ಗ್ರಾಹಕರ ಸಂವಾದ ಸಭೆ

ಬೆಂಗಳೂರು: ಬೆಸ್ಕಾಂನ ಎಲ್ಲ ಕಾರ್ಯ ಮತ್ತು ಪಾಲನಾ ವಿಭಾಗಗಳಲ್ಲಿ ನ.15ರಂದು ಗ್ರಾಹಕರ ಸಂವಾದ ಸಭೆ ನಡೆಯಲಿದೆ.

ಪ್ರತಿ ತಿಂಗಳ ಮೂರನೇ ಶನಿವಾರ ಮಧ್ಯಾಹ್ನ 3ರಿಂದ ಸಂಜೆ 5.30ರವರೆಗೆ ಗ್ರಾಹಕರ ಸಭೆ ನಡೆಸಲಾಗುತ್ತದೆ.

ಗ್ರಾಹಕರು ಪಾಲ್ಗೊಂಡು ವಿದ್ಯುತ್ ಸಂಬಂಧಿತ ಸಮಸ್ಯೆಗಳ ಬಗ್ಗೆ ಅಧಿಕಾರಿಗಳೊಂದಿಗೆ ಮುಖಾಮುಖಿ ಚರ್ಚೆ ನಡೆಸಿ ಪರಿಹಾರ ಕಂಡುಕೊಳ್ಳಬೇಕು ಎಂದು ಬೆಸ್ಕಾಂ ಅಧಿಕಾರಿಗಳು ಕೋರಿದ್ದಾರೆ.

ಬೆಂಗಳೂರು ರೇಸ್

ಸ್ಕೇಗನ್ ಗೆಲ್ಲುವ ನಿರೀಕ್ಷೆ

ರಾಯಲ್ ಕೋಲ್ಕತ್ತ ಟರ್ಫ್ ಕ್ಲಬ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸ್ಕೇಗನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1:30ಕ್ಕೆ ಆರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಇಲಿಯಾ 7, ಅಗೇಪ್ 1, ಮೆಗಾನ್ 8
2ನೇ ರೇಸ್: ಅಶ್ಯೂರೆನ್ಸ್ 1, ಕೌಂಟ್ ಬೇಸಿ 2, ಶಾಕ್ ಆ್ಯಂಡ್ ಆವ್ 5
3ನೇ ರೇಸ್: ಲಾರಿಸ್ಸ 3, ಅಡೋರ್ನ್‌ಮೆಂಟ್ 2, ಚೋಟಿಪಾರಿ 1
4ನೇ ರೇಸ್: ಗ್ಯಾಂಡೊಲ್ಫಿನಿ 4, ಎಲ್ವೆಡೆನ್ 6, ಮಾಸ್ಟರ್ ವೇ 5
5ನೇ ರೇಸ್: ಫ್ಲೈಟ್ ಆನ್ 2, ಬೆಸಿಲಿಕಾ 7, ಫೆಲಿಸಾ 5
6ನೇ ರೇಸ್: ಸ್ಕೇಗನ್ 4, ಪ್ರಿನ್ಸ್ ಆಫ್ ವೇಲ್ಸ್ 3, ಮ್ಯಾಂಡೇಟ್ 2
7ನೇ ರೇಸ್: ಟಚ್ ಆಫ್ ಗ್ರೇ 1, ಐರಿಶ್ ಕಾಫಿ 6, ರಿಕಾರ್ಡೊ 2
8ನೇ ರೇಸ್: ಗಾಡೆಸ್ ಆಫ್ ವಾರ್ 1, ಪ್ಯಾಂಡರ್ 8, ಆರ್ಟ್ ಆಫ್ ರೊಮ್ಯಾನ್ಸ್ 7

ಉತ್ತಮ ಬೆಟ್: ಅಶ್ಯೂರೆನ್ಸ್

ಜಾಕ್‌ಪಾಟ್‌ಗೆ	1ನೇ ಟ್ರಬಲ್	2ನೇ ಟ್ರಬಲ್
4,5,6,7,8	3,4,5	6,7,8

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್
ನೋಂದಾಯಿತ ಕಚೇರಿ: ನಂ.24, 2ನೇ ಮುಖ್ಯರಸ್ತೆ, 1ನೇ ಹಂತ, ದೊಡ್ಡನೆಕ್ಕುಂಡಿ ಕೈಗಾರಿಕಾ ಪ್ರದೇಶ, ಮಹದೇವಪುರ ಅಂಚೆ, ಬೆಂಗಳೂರು - 560 048. CIN : L23209KA1977PLC043357
E-mail : info@gpl.in, secretarial@gujaratpetrosynthese.com Website: www.gpl.in

ಸೆಪ್ಟೆಂಬರ್ 30, 2025ರ ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಅವಧಿಗೆ ಅಂತ್ಯಗೊಂಡ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಸಾವಿರಗಳಲ್ಲಿ)

ಕ್ರ. ಸಂ.	ವಿವರಗಳು	ಸೆಪ್ಟೆಂಬರ್ 2025 ತ್ರೈಮಾಸಿಕಕ್ಕೆ ಅಂತ್ಯಗೊಂಡ	ಸೆಪ್ಟೆಂಬರ್ 2025 ಅರ್ಧವರ್ಷಕ್ಕೆ ಅಂತ್ಯಗೊಂಡ	ಮಾರ್ಚ್ 2025 ವರ್ಷಕ್ಕೆ ಅಂತ್ಯಗೊಂಡ
1	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	49,956	1,08,760	2,01,372
2	ನಿವ್ವಳ ಲಾಭ/ (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ/ಮತ್ತು ವಿಶೇಷ ವಸ್ತುಗಳು)	4,014	11,226	22,100
3	ನಿವ್ವಳ ಲಾಭ/ (ನಷ್ಟ) ತೆರಿಗೆಯ ಅವಧಿಯ ಮುಂಚೆ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	4,014	11,226	22,100
4	ನಿವ್ವಳ ಲಾಭ / (ನಷ್ಟ) ತೆರಿಗೆಯ ಅವಧಿಯ ನಂತರ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	3,240	9,160	14,603
5	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ/(ನಷ್ಟ) ಅವಧಿಗೆ(ತೆರಿಗೆಯನಂತರ) ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯನಂತರ)	3,240	9,160	14,603
6	ಈಕ್ವಿಟಿ ಷೇರುಬಂಡವಾಳ (ಮುಖಬೆಲೆ ರೂ.10 ಪ್ರತಿಷೇರಿಗೆ)	5,969	5,969	5,969
7	ಮೀಸಲು (ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಲೆಕ್ಕ ಪರಿಶೋಧನೆಯ ಆಯವ್ಯಯ ಪಟ್ಟಿಯಲ್ಲಿ ತೋರಿಸಿರುವಂತೆ			4,39,528
8	ಪ್ರತಿ ಷೇರಿನಗಳಿಕೆ (ಪ್ರತಿ ರೂ.10ಕ್ಕೆ) (ಕಾರ್ಯಾಚರಣೆಗಳನ್ನು ಮುಂದುವರಿಸುವುದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ) 1. ಮೂಲಭೂತ: 2. ಡೈಲ್ಯೂಟೆಡ್:	0.54	1.53	2.45

ಸೂಚನೆಗಳು:
A) ಈ ಮೇಲಿನವು 30ನೇ ಸೆಪ್ಟೆಂಬರ್ 2025ರ ತ್ರೈಮಾಸಿಕ ಹಾಗೂ ಅರ್ಧವರ್ಷಕ್ಕೆ ಕೊನೆಗೊಂಡ ಆರ್ಥಿಕ ಫಲಿತಾಂಶಗಳ ಸಂಕ್ಷಿಪ್ತ ರೂಪವಾಗಿರುತ್ತದೆ ಹಾಗೂ ನವೆಂಬರ್ 14, 2025 ರಂದು ಲೆಕ್ಕ ಪರಿಶೋಧನಾ ಸಮಿತಿಯಿಂದ ಈ ಮೇಲ್ಕಂಡ ಫಲಿತಾಂಶಗಳು ಪುನಾರಾವಲೋಕನಗೊಂಡಿದ್ದು, ಕಂಪನಿಯ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಪರಿಗಣಿಸಿ, ದಾಖಲಿಸಿ, 2015ರ ಸೆಬಿಯ ನಿಯಂತ್ರಣಗಳ(ಲಿಸ್ಟಿಂಗ್ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇಯ ನಿಯಂತ್ರಣದಡಿ ಸ್ಟಾಕ್‌ಎಕ್ಸ್‌ಚೇಂಜ್‌ನಲ್ಲಿ ಸಲ್ಲಿಸಲಾಗಿದೆ. ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರು ಮೇಲಿನ ಫಲಿತಾಂಶಗಳ ಸೀಮಿತ ಪರಿಶೀಲನೆಯನ್ನು ನಡೆಸಿದ್ದಾರೆ. ಈ ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಬಿಎಸ್‌ಇ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಮತ್ತು ಕಂಪನಿಯ ವೆಬ್‌ಸೈಟ್ www.gpl.in ನಲ್ಲೂ ಲಭ್ಯವಿದೆ. ಕೆಳಗೆ ನೀಡಲಾದ ಕ್ಯೂಆರ್ (QR) ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ತ್ರೈಮಾಸಿಕ ಹಣಕಾಸು ಫಲಿತಾಂಶಗಳ ಸಂಪೂರ್ಣ ಸ್ವರೂಪವನ್ನು ಪಡೆಯಬಹುದು. B) ಕಂಪನಿಯು ಒಂದು ಸೆಗ್ಮೆಂಟ್‌ನಲ್ಲಿ ಮಾತ್ರ ಕಾರ್ಯ ನಿರ್ವಹಿಸುತ್ತದೆ. C) ಅಗತ್ಯವಿದ್ದಲ್ಲಿ ಹೋಲಿಕೆ ಮಾಡಲು, ಹಿಂದಿನ ತ್ರೈಮಾಸಿಕ / ಅವಧಿಯ ಅಂಕಿ ಅಂಶಗಳನ್ನು ಮರು ಸಂಗ್ರಹಿಸಲಾಗಿದೆ/ ಮರು ಜೋಡಿಸಲಾಗಿದೆ.

ಗುಜರಾತ್ ಪೆಟ್ರೋಸಿಥಿಂಸ್ ಲಿಮಿಟೆಡ್‌ನ ಪರವಾಗಿ
ಸಹಿ/– ಉರ್ಮಿ. ಎನ್. ಪ್ರಸಾದ್
ಜಂಟಿ ವ್ಯವಸ್ಥಾಪಕ ನಿರ್ದೇಶಕರು ಡಿ.ಐ.ಎನ್: 00319482
ಸ್ಥಳ : ಬೆಂಗಳೂರು
ದಿನಾಂಕ : 14/11/2025

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಕ್ರೀಡಾಕೂಟವನ್ನು ಸಚಿವ ರಾಮಲಿಂಗಾರೆಡ್ಡಿ ಟೇಬಲ್ ಟೆನಿಸ್ ಆಡುವ ಮೂಲಕ ಉದ್ಘಾಟಿಸಿದರು ಪ್ರಜಾವಾಣಿ ಚಿತ್ರ

'ಒತ್ತಡ ನಿರ್ವಹಣೆಗೆ ಕ್ರೀಡೆ ಸಹಕಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಯದೊತ್ತಡ ನಿರ್ವಹಣೆ ಮತ್ತು ಆರೋಗ್ಯ ಕಾಪಾಡಿಕೊಳ್ಳಲು ನೌಕರರು ಕ್ರೀಡೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಕೆಎಸ್‌ಆರ್‌ಟಿಸಿ ಅಧಿಕಾರಿಗಳು, ನೌಕರರ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಿಗೆ ಶಟಲ್ ಬ್ಯಾಡ್ಮಿಂಟನ್, ಕೇರಂ, ಚೆಸ್ ಮತ್ತು ಟೇಬಲ್ ಟೆನಿಸ್ ಆಡುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರತಿ ವರ್ಷವು ಕೆಎಸ್‌ಆರ್‌ಟಿಸಿ ಘಟಕ, ವಿಭಾಗ, ಪ್ರಾದೇಶಿಕ ಕಾರ್ಯಾಗಾರ ಮತ್ತು ಕೇಂದ್ರ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ, ನೌಕರರು ಹಾಗೂ ಅವರ ಮಕ್ಕಳಿಗೆ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆ ಏರ್ಪಡಿಸಲಾಗುತ್ತಿದೆ. ಈ ಸಂಬಂಧ ಕ್ರೀಡಾ ಮತ್ತು ಸಾಂಸ್ಕೃತಿಕ ನಿಧಿಯಿಂದ ತಲಾ ₹40 ಸಾವಿರದಂತೆ 17 ವಿಭಾಗಗಳಿಗೆ ಎರಡು ಕಾರ್ಯಾಗಾರಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ ಎಂದರು.

ಚೆಸ್, ಕೇರಂ, ಶಟಲ್ ಬ್ಯಾಡ್ಮಿಂಟನ್, ಟೇಬಲ್ ಟೆನಿಸ್, ಸಂಗೀತ ಸ್ಪರ್ಧೆಗಳು, ಗುಂಡು ಎಸೆತ, ವೇಗದ ನಡಿಗೆ, ಮಡಕೆ ಒಡೆಯುವ ಸ್ಪರ್ಧೆ ನಡೆದವು. ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ, ನಿರ್ದೇಶಕರಾದ ನಂದಿನಿ ದೇವಿ ಕೆ., ಇಬ್ರಾಹಿಂ ಮೈಗೂರ ಭಾಗವಹಿಸಿದ್ದರು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052. ದೂರವಾಣಿ ಸಂಖ್ಯೆ: 22263479
ಸಂಖ್ಯೆ: STRRPA/TP/CLU/83/2025-26 ದಿನಾಂಕ : 14.11.2025

"ಪ್ರಕಟಣೆ"

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು "ವ್ಯವಸಾಯ" ವಲಯದಿಂದ "ವಸತಿ" ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	2	3	4	5	6	7	8	9
1	ಶ್ರೀ ಕೆಂಪಣ್ಣ ಬಿನ್ ರಾಮಚಂದ್ರಪ್ಪ, . ನಂ. 1, 4ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಚಿಕ್ಕಬೊಮ್ಮಸಂದ್ರ, ಜಿ.ಕೆ.ವಿ.ಕೆ. ಅಂಚೆ, ಬೆಂಗಳೂರು–560 065.	ದೇವನಹಳ್ಳಿ	ಚನ್ನರಾಯಪಟ್ಟಣ	ಶ್ರೋತ್ರಿಯತೆಲ್ಲೋಹಳ್ಳಿ	7/3	1–00	ವ್ಯವಸಾಯ	ವಸತಿ

ಷರಾ:–ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಸತಿ ಬಡಾವಣೆಗಳು ಬಂದಿದ್ದು/ ಬರುತ್ತಿದ್ದು, ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಕಡಿಮೆ ವೆಚ್ಚದಲ್ಲಿ ನಿವೇಶನಗಳನ್ನು ನೀಡುವ ಉದ್ದೇಶವನ್ನು ಹೊಂದಿರುತ್ತೇವೆ ಆದ್ದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.
DIPR/CP/3817/Zenkar/2025-26

ನಗರದಲ್ಲಿ ಇಂದು

ಅಮೋಘ ಅನಂತ ವಂಶಿ ಪಯಣ–50: ಉದ್ಘಾಟನೆ: ಬಿ.ಕೆ. ಅನಂತರಾಮ್, ಕೆ.ಎಸ್.ಶ್ರೀಲಕ್ಷ್ಮಿ, ಅತಿಥಿಗಳು: ಕೆ.ಸಿ. ರಾಮಮೂರ್ತಿ, ನಂದಕುಮಾರ್ ಆರ್. ಎಸ್., ವಂಶಿ ರಾಷ್ಟ್ರ ಮಟ್ಟದ ಪ್ರಶಸ್ತಿ ಪುರಸ್ಕೃತರು: ಜಿ. ನಾಗಮಣಿ ಶ್ರೀನಾಥ್, ವಂಶಿ ಪುರಸ್ಕಾರ: ಎನ್. ವಾಸುದೇವ್, ಆಯೋಜನೆ: ವಂಶಿ ಅಕಾಡೆಮಿ ಆಫ್ ಮ್ಯೂಸಿಕ್ ಟ್ರಸ್ಟ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 9

ನಾಗಮಣಿ ಶ್ರೀನಾಥ್

ಕನ್ನಡ ಜನಮನೋತ್ಸವ: ಅತಿಥಿಗಳು: ಸಿ. ರಾಜಶೇಖರಯ್ಯ, ಕೃಷ್ಣ ನಾಯ್ಕ್, ಅಧ್ಯಕ್ಷತೆ: ಸ್ವಾಮಿ ಎಂ.ಎಂ., ಆಯೋಜನೆ ಹಾಗೂ ಸ್ಥಳ: ರಾಜಧಾನಿ ಸಮೂಹ ಶಿಕ್ಷಣ ಸಂಸ್ಥೆಗಳು, ಮಹದೇವಪುರ, ಬೆಳಿಗ್ಗೆ 9.30

ಕೆ.ವಿ.ನಾರಾಯಣಸ್ವಾಮಿ ಅವರ 102ನೇ ಜನ್ಮದಿನೋತ್ಸವದ ಪ್ರಯುಕ್ತ ಶಾಸ್ತ್ರೀಯ ಸಂಗೀತೋತ್ಸವ: ಐದು ಸಂಗೀತ ಕಛೇರಿಗಳು, ಆಯೋಜನೆ: ರಾಮನಾರಾಯಣ ಗುರುಕುಲಂ, ಸ್ಥಳ: ಯದುಗಿರಿ ಯತಿರಾಜ ಮಠ, ಮಲ್ಲೇಶ್ವರ, ಬೆಳಿಗ್ಗೆ 9ರಿಂದ ರಾತ್ರಿ 8.45ರವರೆಗೆ

'ಸಂತವಾಣಿ'ಗೆ ಚಾಲನೆ: ಎಂ. ವೀರಪ್ಪ ಮೊಯಿಲಿ, ಆಶಯ ನುಡಿ: ಆರ್. ಗಣೇಶ್, ಮುಖ್ಯ ಅತಿಥಿ: ಚಿರಂಜೀವಿ ಸಿಂಘ್, ಅಧ್ಯಕ್ಷತೆ: ಕೆ.ಜಿ. ರಾಘವನ್, ಗೋಷ್ಠಿಗಳು: 'ಆಳ್ವಾರ್ ಪರಂಪರೆ (ವಿಷ್ಣು ಭಕ್ತರು)' ವಿಷಯದ ಬಗ್ಗೆ ಪ್ರಸ್ತುತಿ: ಎಂ.ಎ. ಆಳ್ವಾರ್, 'ನಯನ್ಮಾರ್ ಪರಂಪರೆ– ತೇವಾರಂ ತ್ರಿಮೂರ್ತಿಗಳು: ಶಿವ ಭಕ್ತಿ ಸಂತರು' ವಿಷಯದ ಬಗ್ಗೆ ಪ್ರಸ್ತುತಿ: ಜಟಾಯು, 'ಆಳ್ವಾರ್‌ಗಳು: ವೈಷ್ಣವ ಸಂತರ ಜೀವನ ಮತ್ತು ಕೃತಿಗಳು' ವಿಚಾರ ಮಂಡನೆ: ದುಷ್ಯಂತ್ ಶ್ರೀಧರ್, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10

ವೀರಪ್ಪ ಮೊಯಿಲಿ

ಡಾ.ಕೆ.ಎಸ್. ನಾರಾಯಣಾಚಾರ್ಯ ಸಮ್ಮಾನ ಸಭೆ: 'ಇತಿಹಾಸದ ಅರ್ಥ, ದೃಷ್ಟಿಕೋನ ಮತ್ತು ಉದ್ದೇಶ' ವಿಷಯದ ಬಗ್ಗೆ: ವೀರನಾರಾಯಣ ಪಾಂಡುರಂಗಿ, ಎಂ.ಎಸ್. ಚೈತ್ರಾ, ಪ್ರಣವ ವಶಿಷ್ಠ, ಪವನ್ ಗುಪ್ತಾ, 'ಪ್ರತಿಯೊಬ್ಬ ಭಾರತೀಯನೂ ತಿಳಿದಿರಬೇಕಾದ ಐತಿಹಾಸಿಕ ನಿರೂಪಣೆಗಳು' ವಿಷಯದ ಬಗ್ಗೆ: ಆಭಾಸ್ ಮಾಲ್ದಾಹಿಯಾರ್, ಮಹಾಲಿಂಗಂ ಬಾಲಾಜಿ, ಶಿವಶಾಸ್ತ್ರಿ, ವೆಂಕಟೇಶ್ ರಂಗನ್, ನಿಲೇಶ್ ಓಕ್, ಆಯೋಜನೆ: ಉದ್ಭವಃ, ಸಾಹಿತ್ಯ ಪ್ರಕಾಶನ, ಸುಬ್ಬು ಪಬ್ಲಿಕೇಷನ್ಸ್, ಪರಮ್ ಫೌಂಡೇಷನ್, ಸ್ಥಳ: ಎಸ್‌ಜೆಆರ್‌ಸಿ ಕಾನೂನು ಕಾಲೇಜು, ಬೆಳಿಗ್ಗೆ 10

ಐಕ್ಯಾ ವನ ಮತ್ತು ಐಕ್ಯಾ 'ಫ್ರೆಂಡ್' ಉತ್ಸವ ಉದ್ಘಾಟನೆ: ಈಶ್ವರ ಖಂಡ್ರೆ, ಎ.ಎನ್. ಯಲ್ಲಪ್ಪ ರೆಡ್ಡಿ, ಕೆ. ಉಲ್ಲಾಸ್ ಕಾರಂತ್, ಕೆ.ಸಿ. ರಾಮಮೂರ್ತಿ, ಸಬಿತಾ ರಾಮಮೂರ್ತಿ, ಆಯೋಜನೆ: ದಿ ಸಿಎಂಆರ್ ಜ್ಞಾನಧಾರಾ ಟ್ರಸ್ಟ್, ಐಕ್ಯಾ ಆಡಳಿತ ಮಂಡಳಿ, ಸ್ಥಳ: ಐಕ್ಯಾ ಸ್ಕೂಲ್, ಎನ್‌ಐಸಿಇ ರಸ್ತೆ, ಬೆಳಿಗ್ಗೆ 10

ಮಕ್ಕಳ ಕನ್ನಡ ಕವಿಗೋಷ್ಠಿ: ಅತಿಥಿಗಳು: ಜಿ. ಕಿರಣ್ ಸಾಗರ್, ಶ್ವೇತಾ ಎಸ್. ರಾವ್, ಬಿ.ವಿ. ಸುನೀಲ್, ಆಯೋಜನೆ: ಯುವ ಬೆಂಗಳೂರು ಟ್ರಸ್ಟ್, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ಲಲಿತ ಸಾಹಿತ್ಯ ವೇದಿಕೆಯ ಐದನೇ ವರ್ಷದ ಕಾರ್ಯಕ್ರಮ: ಅಧ್ಯಕ್ಷತೆ: ಎಲ್. ಎನ್. ಮುಕುಂದರಾಜ್, ಉದ್ಘಾಟನೆ: ವಿಜಯ ಸುಬ್ಬರಾಜ್, ಅತಿಥಿ: ಎಂ. ಪ್ರಕಾಶಮೂರ್ತಿ, ಲಲಿತ ಪುರಸ್ಕಾರ: ಆಶಾ ಸೂರ್ಯನಾರಾಯಣ್, ಚಂದ್ರಕಲಾ ಎಂ., ರೇಣುಕ ಆರ್., ಆಯೋಜನೆ: ಲಲಿತ ಸಾಹಿತ್ಯ ವೇದಿಕೆ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

101ನೇ ಆರ್ಗ್ಯಾನಿಕ್ ಸಂತೆ: ಬೆಳಿಗ್ಗೆ 10.30ರಿಂದ ಹಸಿರು ಸಂವಾದ ಮತ್ತು ಸಂಗೀತ ಸಂಭ್ರಮ, ಅತಿಥಿಗಳು: ಕೆ.ಟಿ. ತಿಪ್ಪೇಸ್ವಾಮಿ, ರಾಜ್‌ಕುಮಾರ್ ಕತ್ರಿ, ಭಾವನಾ ನಾಗಯ್ಯ, ಸಂಜೆ 5ರಿಂದ ಸಾವಯವ ಸಂವಾದ ಮತ್ತು ಸಂಗೀತ ಸಂಭ್ರಮ, ಅತಿಥಿಗಳು: ಡಾ. ವಸುಂಧರಾ ಭೂಪತಿ, ಎಂ.ಎಸ್. ಆಶಾದೇವಿ, ಪದ್ಮಾಕ್ಷಿ, ಬಿಜ್ಜಾವರ ಲೋಕೇಶ್, ಆಯೋಜನೆ ಹಾಗೂ ಸ್ಥಳ: ದಿ ಗ್ರೀನ್ ಪಾಥ್, ಮಲ್ಲೇಶ್ವರ

ರವಿಕಾಂತ ನಂದುಲಾ ಅವರ ವ್ಯಂಗ್ಯಚಿತ್ರಗಳ ಪ್ರದರ್ಶನ ಉದ್ಘಾಟನೆ: ಕೆ. ವೇಣುಗೋಪಾಲ್, ಅಧ್ಯಕ್ಷತೆ: ಡಿ. ಸಂಪತ್ ಕುಮಾರ್, ಆಯೋಜನೆ ಹಾಗೂ ಸ್ಥಳ: ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆ, ಮಿಡ್ ಫೋರ್ಡ್ ಹೌಸ್, ಎಂ.ಜಿ ರಸ್ತೆ, ಬೆಳಿಗ್ಗೆ 11

ತ್ಯಾಜ್ಯ ಆಯುವ ಕುಟುಂಬಗಳ ಮಕ್ಕಳ ಸಮಗ್ರ ಅಭಿವೃದ್ಧಿ ಬಗ್ಗೆ ಸಭೆ: ಉದ್ಘಾಟನೆ: ಶಶಿಧರ್ ಕೊಸಂಬೆ, ಅತಿಥಿಗಳು: ಸೂರ್ಯಕಲಾ ಕೆ.ಇ.ಎಸ್., ಸುಮಂಗಳಾ ಮಾಳಾಪುರ, ಎಸ್.ಬಿ. ರವಿಕುಮಾರ್, ನಂದಿನಿ ಚಂದ್ರಶೇಖರ್, ಆಯೋಜನೆ: ಸ್ಪರ್ಶ ಟ್ರಸ್ಟ್, ಸ್ಥಳ: ಹೋಟೆಲ್ ಸಿಎನ್‌ಆರ್ ಕ್ಯಾನರಿ, ಗಾಂಧಿನಗರ, ಮಧ್ಯಾಹ್ನ 1

'ಗಾಂಧಾರಿ ಶಾಪ' ಮತ್ತು 'ವಾಲಿ ವಧೆ' ತಾಳಮದ್ದಳೆ: ಹಿಮ್ಮೇಳ: ಶುರೇಶ ಶೆಟ್ಟಿ ಶಂಕರನಾರಾಯಣ, ಸುಬ್ರಾಯ ಹೆಬ್ಬಾರ್, ಶ್ರೀನಿವಾಸ ಪ್ರಭು, ಅಕ್ಷಯ್ ಆಚಾರ್ಯ, ಅಜಿತ್ ಆಚಾರ್ಯ, ನಾಗರಾಜ ಯಡಮೊಗೆ, ಅರ್ಥಧಾರಿಗಳು: ವಾಸುದೇವ ರಂಗಾಭಟ್, ಗಣಪತಿ ಭಟ್ ಸಂಕದಗುಂಡಿ, ಜಬ್ಬಾರ್ ಸಮೊ, ಜಯಪ್ರಕಾಶ್ ಶೆಟ್ಟಿ ಪೆರ್ಮುದೆ, ಸುನಿಲ್ ಕುಮಾರ್ ಹೊಲಾಡು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 2

ಕೃಷಿ ಮೇಳ: ಪ್ರಶಸ್ತಿ ಪ್ರದಾನ: ಎಚ್. ಡಿ. ಕುಮಾರಸ್ವಾಮಿ, ಉಪಸ್ಥಿತಿ: ಎನ್. ಚಲುವರಾಯಸ್ವಾಮಿ, ಅತಿಥಿಗಳು: ಎಸ್. ಎಸ್. ಮಲ್ಲಿಕಾರ್ಜುನ್, ಈಶ್ವರ ಖಂಡ್ರೆ, ದಿನೇಶ್ ಗುಂಡೂರಾವ್, ಶಿವಾನಂದ ಪಾಟೀಲ, ಎನ್.ಎಸ್. ಬೋಸರಾಜು, ಕೆ. ಸುಧಾಕರ್, ಮಲ್ಲೇಶ್ ಎಂ. ಬಾಬು, ಅಧ್ಯಕ್ಷತೆ: ಎಸ್.ವಿ. ಸುರೇಶ್, ಆಯೋಜನೆ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಥಳ: ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ), ಮಧ್ಯಾಹ್ನ 2

ಕರ್ನಾಟಕ ರಾಜ್ಯೋತ್ಸವ ಆಚರಣೆ ಹಾಗೂ ಪುನೀತ್ ರಾಜ್‌ಕುಮಾರ್ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಎಂ. ಮಹೇಶ್ವರ ರಾವ್, ಅತಿಥಿ: ರೂಪಾ ಮೌದ್ಗಿಲ್, ಸಿ. ಸೋಮಶೇಖರ್, ಎಂ. ಪ್ರಕಾಶ್ ಮೂರ್ತಿ, ಅಧ್ಯಕ್ಷತೆ: ಜೆ. ಹುಚ್ಚಪ್ಪ, ಆಯೋಜನೆ: ಗ್ರೇಟರ್ ಬೆಂಗಳೂರು ಪ್ರಾಧಿಕಾರ ಪಾಲಿಕೆಗಳ ನೌಕರರ ಕನ್ನಡ ಸಂಘ, ಸ್ಥಳ: ಗ್ರೇಟರ್ ಬೆಂಗಳೂರು ಪ್ರಾಧಿಕಾರ ಕೇಂದ್ರ ಕಚೇರಿ ಆವರಣ, ಮಧ್ಯಾಹ್ನ 3

ಜೈನ ಸಾಹಿತ್ಯ ಸಿರಿ: ಪಂಪನ 'ಆದಿಪುರಾಣ'ದ ಅನನ್ಯತೆ ವಿಷಯದ ಬಗ್ಗೆ ಉಪನ್ಯಾಸ: ಆರ್. ಲಕ್ಷ್ಮಿನಾರಾಯಣ, ಅಧ್ಯಕ್ಷತೆ: ಭರತೇಶ ಜಗಶೆಟ್ಟಿ, ಅತಿಥಿ: ವಿಲಾಸ್ ಪಾಸಣ್ಣವರ್, ಆಯೋಜನೆ: ಜೈನ್ ಮಿಲನ್ ಬೆಂಗಳೂರು ಸೆಂಟ್ರಲ್, ಸ್ಥಳ: ಚಕ್ರೇಶ್ವರಿ ಮಹಿಳಾ ಸಮಾಜ, ಆನೆಬಂಡೆ ರಸ್ತೆ, ಜಯನಗರ 3ನೇ ಬಡಾವಣೆ, ಸಂಜೆ 4

ನಾಕುತಂತಿ ಷಷ್ಠಿಪೂರ್ತಿ ನಾದ–10: ಅತಿಥಿ: ಜಿ.ಬಿ. ಹರೀಶ್, ಆಯೋಜನೆ: ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಸ್ಥಳ: ಎಂ.ಇ.ಎಸ್. ಕಾಲೇಜು ಸಭಾಂಗಣ, 3ನೇ ಮುಖ್ಯರಸ್ತೆ, ಬಿ.ಇ.ಎಲ್. ಬಡಾವಣೆ, 1ನೇ ಬ್ಲಾಕ್, ವಿದ್ಯಾರಣ್ಯಪುರ, ಸಂಜೆ 4

ಮನೆಯಂಗಳದಲ್ಲಿ ಮಾತುಕತೆ: ತಿಂಗಳ ಅತಿಥಿ: ಕೆ. ಮರುಳಸಿದ್ದಪ್ಪ, ಉಪಸ್ಥಿತಿ: ಕೆ.ಎಂ. ಗಾಯಿತ್ರಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಜೆ.ಸಿ.ರಸ್ತೆ, ಮಧ್ಯಾಹ್ನ 3

ಮರುಳಸಿದ್ದಪ್ಪ

'ಕಾಡಸುರಗಿ' ಪುಸ್ತಕ ಬಿಡುಗಡೆ: ಗಿರೀಶ್ ಕಾಸರವಳ್ಳಿ, ಅತಿಥಿಗಳು: ಬಿ.ಎಲ್. ಶಂಕರ್, ಬಿ.ಕೆ. ಸುಮಿತ್ರ, ಬಿ.ಆರ್. ಗುರುಪ್ರಸಾದ್, ಅಧ್ಯಕ್ಷತೆ: ಎನ್. ಎಸ್. ಶ್ರೀಧರ ಮೂರ್ತಿ, ಆಯೋಜನೆ: ಮಲೆನಾಡ ಬರಹಗಾರರ ವೇದಿಕೆ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5.30

ತಿಂಗಳ ನಾಟಕ ಸಂಭ್ರಮ: 'ಪಂಚವಟಿ' ಯಕ್ಷಗಾನ ಪ್ರಸಂಗ ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ರಾಷ್ಟ್ರೀಯ ನಾಟಕ ಶಾಲೆ, ಸ್ಥಳ: ಸಮುಚ್ಚಯ ಭವನ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6

'ಮಹಾಭಾರತ (ವಿರಾಟಪರ್ವ)' ಧಾರ್ಮಿಕ ಪ್ರವಚನ: ಅಶೋಕ್ ಆಚಾರ್ಯ, ಆಯೋಜನೆ ಹಾಗೂ ಸ್ಥಳ: ವ್ಯಾಸರಾಜ ಮಠ (ಸೋಸಲೆ) 5ನೇ ಮುಖ್ಯರಸ್ತೆ, ಸುಬ್ರಹ್ಮಣ್ಯನಗರ, ರಾಜಾಜಿನಗರ 2ನೇ ಹಂತ, ಸಂಜೆ 6

'ಆಫ್ ಬೀಟ್' ಸಂಗೀತ ಮೇಳ: ಕಲಾವಿದರು: ಶ್ರುತಿ ಭಿಡೆ, ಅಭಿಷೇಕ್ ರಾವ್, ಸಮನ್ವಿತಾ ಶರ್ಮಾ, ಗೋವಿಂದ ಕುರನೂಲ್, ಮಾಳವಿಕಾ ನಿರಂಜನ್, ನರಸಿಂಹನ್ ಕಣ್ಣನ್, ದಿವ್ಯಾ ರಾಘವನ್, ಸೌಮ್ಯ, ಸುಬ್ರತ್ ಸಾಹೂ, ಜ್ಯೋತಿ ಕಂಜೂರು, ಆಯೋಜನೆ: ವಿ. ಟಿ.ಎಂಟರ್‌ಟೈನರ್ಸ್ ಚಾರಿಟೇಬಲ್ ಟ್ರಸ್ಟ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ವೈಯಾಲಿಕಾವಲ್, ಸಂಜೆ 6

ಕಾರ್ತಿಕ ದೀಪೋತ್ಸವ: ಉದ್ಘಾಟನೆ; ಅನಿರುದ್ಧ, ಮಹೇಂದ್ರ ಮುನ್ನೋತ್, ಅತಿಥಿಗಳು: ಸಿ.ಕೆ. ರಾಮಮೂರ್ತಿ, ಬಿ. ಸೋಮಶೇಖರ್, ಎಸ್.ಕೆ. ಗೋಪಾಲಕೃಷ್ಣ, ಶ್ರೀವತ್ಸ, ಆಯೋಜನೆ: ವಿನಾಯಕ ಮಿತ್ರ ಮಂಡಳಿ, ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ 8ನೇ ಬ್ಲಾಕ್, ಸಂಜೆ 6.30

ವೀರಲೋಕ ಪುಸ್ತಕ ಸಂತೆ: ಬೆಳಿಗ್ಗೆ 10ರಿಂದ ಐದು ಪುಸ್ತಕಗಳ ಬಿಡುಗಡೆ ಸಮಾರಂಭ, ಅತಿಥಿಗಳು: ಬಿ.ಕೆ. ಶಿವರಾಂ, ವಸುಧೇಂದ್ರ, ಸಂವಾದ, ಮಕ್ಕಳ ಆಟಗಳು, ಗಜಲ್ ಗಾಯನ, ಸಂಜೆ 5ಕ್ಕೆ ಐದು ಪುಸ್ತಕಗಳ ಬಿಡುಗಡೆ, ಅತಿಥಿಗಳು: ಗುರುಬಸವ ಪಟ್ಟದ್ದೇವರು, ಶೋಭಾ ಕರಂದ್ಲಾಜೆ, ಪಿ. ಶೇಷಾದ್ರಿ, ಸಂಜೆ 6ರಿಂದ ಗೀತ ಗಾಯನ: ಎಂ.ಡಿ. ಪಲ್ಲವಿ ಮತ್ತು ತಂಡ, ಆಯೋಜನೆ: ವೀರಲೋಕ ಪುಸ್ತಕ, ಸ್ಥಳ: ಚಂದ್ರಗುಪ್ತ ಮೌರ್ಯ ಮೈದಾನ (ಶಾಲಿನಿ ಗ್ರೌಂಡ್) ಜಯನಗರ

ಎಂ.ಡಿ.ಪಲ್ಲವಿ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

सत्यमेव जयते
जनजातीय कार्य मंत्रालय
Ministry of Tribal Affairs
Government of India

150th
Birth Anniversary Year of Bhagwan Birsa Munda
JANJATIYA GAURAV VARSH

ಚಿರಕಾಲದ ಚೈತನ್ಯ ಧರತಿ ಆಬಾ ರವರಿಗೆ ಹೃದಯಪೂರ್ವಕ ನಮನಗಳು

ಭಗವಾನ್ ಬಿರ್ಸಾ ಮುಂಡಾರವರ 150ನೇ ಜನ್ಮ ವಾರ್ಷಿಕೋತ್ಸವದಂದು ಅವರ ಶೌರ್ಯ ಮತ್ತು ದೂರದೃಷ್ಟಿಗೆ, ರಾಷ್ಟ್ರವು ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತದೆ.

ಈ ಘಳಿಗೆಯಲ್ಲಿ

ಜನಜಾತೀಯ ಗೌರವ ದಿವಸ್

ಅಂಗವಾಗಿ, ಹಲವಾರು ಬುಡಕಟ್ಟು ಅಭಿವೃದ್ಧಿ ಉಪಕ್ರಮಗಳಿಗೆ ₹7700 ಕೋಟಿ ಮೌಲ್ಯದ ರಾಷ್ಟ್ರ ಸಮರ್ಪಣೆ ಮತ್ತು ಶಂಕುಸ್ಥಾಪನೆ ಇವರಿಂದ

ಪ್ರಧಾನಿ ನರೇಂದ್ರ ಮೋದಿ

15ನೇ ನವೆಂಬರ್, 2025 ಮಧ್ಯಾಹ್ನ 02:00 ಗಂಟೆ | ದೇದಿಯಪಾದ, ನರ್ಮದ, ಗುಜರಾತ್

ಅಭಿವೃದ್ಧಿ ಯೋಜನೆಗಳ ಉದ್ಘಾಟನೆ

- **1** ಲಕ್ಷ ಪಕ್ಕಾ ಮನೆಗಳ ಗೃಹ ಪ್ರವೇಶ ಸಮಾರಂಭ – ಬುಡಕಟ್ಟು ಕುಟುಂಬಗಳಿಗೆ ಗೌರವಾನ್ವಿತ ವಸತಿ ಖಾತ್ರಿ
- **10,000** ಕ್ರಿಯಾತ್ಮಕ ಮನೆಮನೆಯ ನಲ್ಲಿ ನೀರಿನ ಸಂಪರ್ಕ – ಬುಡಕಟ್ಟು ಮನೆಗಳಿಗೆ ಶುದ್ಧ ಕುಡಿಯುವ ನೀರಿನ ಸರಬರಾಜು.
- **228** ಬಹುಪಯೋಗಿ ಕೇಂದ್ರಗಳು (ಎಂಪಿಸಿ) – ಜೀವನೋಪಾಯ ಉತ್ಪಾದನೆ, ತರಬೇತಿ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುವುದು.
- **42** ಏಕಲವ್ಯ ಮಾದರಿ ವಸತಿ ಶಾಲೆಗಳು (ಎಎಂಆರ್‌ಎಸ್) – ಬುಡಕಟ್ಟು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದ ಸೌಲಭ್ಯ.
- ದಿಬ್ರುಗಢ್ ಅಸ್ಸಾಂ ವೈದ್ಯಕೀಯ ಕಾಲೇಜಿನಲ್ಲಿ **01** ಸಾಮರ್ಥ್ಯ ಕೇಂದ್ರ – ಬುಡಕಟ್ಟು ಪ್ರದೇಶಗಳಲ್ಲಿ ಗುಣಮಟ್ಟದ ಆರೋಗ್ಯ ಸೇವೆಗಾಗಿ.

ಹೊಸ ಉಪಕ್ರಮಗಳಿಗೆ ಅಡಿಗಲ್ಲು ಹಾಕುವುದು

- 6ಕಿ.ಮೀ. ಸೇತುವೆಗಳು ಸೇರಿದಂತೆ, **748** ಕಿ.ಮೀ. ರಸ್ತೆ ಸಂಪರ್ಕ – ದೂರದ ಬುಡಕಟ್ಟು ಪ್ರದೇಶಗಳಲ್ಲಿ ಸಂಪರ್ಕವನ್ನು ಬಲಪಡಿಸುವುದು.
- **190** ಆಶ್ರಮ ಶಾಲೆ ವಸತಿ ನಿಲಯಗಳು–ದೂರದ ಬುಡಕಟ್ಟು ಪ್ರದೇಶಗಳಲ್ಲಿ ಶಿಕ್ಷಣ ಮತ್ತು ಪೌಷ್ಟಿಕತೆಯ ಸಂಯೋಜನೆ.
- **50** ಏಕಲವ್ಯ ಮಾದರಿ ವಸತಿ ಶಾಲೆಗಳು (ಇಎಂಆರ್‌ಎಸ್)–ಶಿಕ್ಷಣದ ಮೂಲಕ ಬುಡಕಟ್ಟು ವಿದ್ಯಾರ್ಥಿಗಳ ಸಬಲೀಕರಣ.
- **14** ಬುಡಕಟ್ಟು ಬಹು ಮಾರುಕಟ್ಟೆ ಕೇಂದ್ರಗಳು (ಟಿಎಂಎಂಸಿ)–ಬುಡಕಟ್ಟು ಉತ್ಪನ್ನಗಳನ್ನು ವಿಶಾಲ ಮಾರುಕಟ್ಟೆಗಳಿಗೆ ಸಂಪರ್ಕಿಸುವುದು.

ಪ್ರಧಾನ ಮಂತ್ರಿಯವರ ನೇತೃತ್ವದಲ್ಲಿ 11 ವರ್ಷಗಳ ಬುಡಕಟ್ಟು ಪ್ರಗತಿ

ಬುಡಕಟ್ಟು ಕ್ಷೇಮಾಭಿವೃದ್ಧಿಗೆ ಬದ್ಧತೆ:
ಬುಡಕಟ್ಟು ವ್ಯವಹಾರಗಳ ಸಚಿವಾಲಯದ **13,000+ ಕೋಟಿ** ಬಜೆಟ್, **11.5+** ಕೋಟಿ ಬುಡಕಟ್ಟು ಜನರಿಗೆ ಪ್ರಯೋಜನ.

ಅರಣ್ಯ ಹಕ್ಕು ಕಾಯಿದೆ:
9.52+ ಲಕ್ಷ ವ್ಯಕ್ತಿಗಳು ಮತ್ತು **232** ಲಕ್ಷ ಎಕರೆ ಸೇರಿದಂತೆ, **97,000+** ಸಮುದಾಯ ಅರಣ್ಯ ಹಕ್ಕುಗಳನ್ನು ವಿತರಿಸಲಾಗಿದೆ.

ಜೀವನೋಪಾಯ ಮತ್ತು ಉದ್ಯಮ:
12+ ಲಕ್ಷ ಬುಡಕಟ್ಟು ಉದ್ಯಮಿಗಳು ಎಂಎಸ್‌ಪಿ ಅಡಿಯಲ್ಲಿ, **4030+** ವನ ಧನ ವಿಕಾಸ ಕೇಂದ್ರಗಳ ಮೂಲಕ, **87** ಲಘು ಅರಣ್ಯ ಉತ್ಪನ್ನಗಳ ಮೇಲೆ ಲಾಭ ಪಡೆಯುತ್ತಿದ್ದಾರೆ.

ಶಿಕ್ಷಣ:
497 ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ **1.5** ಲಕ್ಷಕ್ಕೂ ಹೆಚ್ಚು ಬುಡಕಟ್ಟು ವಿದ್ಯಾರ್ಥಿಗಳು ದಾಖಲಾಗಿದ್ದಾರೆ.

5 ವಿದ್ಯಾರ್ಥಿವೇತನ ಯೋಜನೆಗಳ ಮೂಲಕ **30** ಲಕ್ಷಕ್ಕೂ ಹೆಚ್ಚು ಬುಡಕಟ್ಟು ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಿದ್ದಾರೆ.

ಮೂಲಭೂತ ಆಡಳಿತದ ಪರಿವರ್ತನೆ:

58,000+ ಗ್ರಾಮ ಕ್ರಿಯಾ ಯೋಜನೆ, ಮತ್ತು **56,000+** ಆದಿ ಸೇವಾ ಕೇಂದ್ರಗಳ ಮುಖಾಂತರ,

20+ ಲಕ್ಷ ಆದಿ ಕರ್ಮಯೋಗಿಗಳ ಬುಡಕಟ್ಟು ಗ್ರಾಮಗಳ ಅಭಿವೃದ್ಧಿಯ ಬಲವರ್ಧನೆ.

ಉದ್ದೇಶಿತ ಪ್ರಮುಖ ಕಾರ್ಯಾಚರಣೆಗಳು:
ಪಿಎಂ–ಜನಮನ್ ಯೋಜನೆಯಡಿಯಲ್ಲಿ
47+ ಲಕ್ಷ ಪಿವಿಟಿಜಿ ಜನಸಂಖ್ಯೆಯು ಇದರ ಪ್ರಯೋಜನ ಪಡೆಯುತ್ತಿದೆ
2.24+ ಲಕ್ಷ ಪಕ್ಕಾ ಮನೆಗಳು
7600+ ಹಳ್ಳಿಗಳಿಗೆ ಕೊಳವೆ ನೀರು ಸರಬರಾಜು ಮಾಡಲಾಗಿದೆ
1.32+ ಲಕ್ಷ ಬುಡಕಟ್ಟು ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.
820+ ಕಿ.ಮೀ ರಸ್ತೆ ಸಂಪರ್ಕ

ಧರ್ತಿ ಆಬಾ ಬುಡಕಟ್ಟು ಗ್ರಾಮಗಳ ಉನ್ನತಿ ಅಭಿಯಾನದ ಅಡಿಯಲ್ಲಿ
63,000+ ಬುಡಕಟ್ಟು ಗ್ರಾಮಗಳು ಇದರ ಪ್ರಯೋಜನ ಪಡೆಯುತ್ತಿವೆ
6.22+ ಲಕ್ಷ ಪಕ್ಕಾ ಮನೆಗಳು
26,800+ ಹಳ್ಳಿಗಳಿಗೆ ಕೊಳವೆ ನೀರು ಸರಬರಾಜು ಮಾಡಲಾಗಿದೆ
17,000+ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.
3300+ ಗ್ರಾಮಗಳಿಗೆ ಮೊಬೈಲ್ ಸಂಪರ್ಕ ಒದಗಿಸಲಾಗಿದೆ.
6.5+ ಕೋಟಿ ಬುಡಕಟ್ಟು ಜನರು, ನ್ಯಾಷನಲ್ ಸಿಕಲ್ ಸೆಲ್ ಅನಿಮೀಯಾ ಎಲಿಮಿನೇಶನ್ ಮಿಷನ್ ಅಡಿಯಲ್ಲಿ ತಪಾಸಣೆಗೆ ಒಳಗಾಗಿದ್ದಾರೆ.

CBC 43101/13/0028/2526

ಡಿಡಿ ನ್ಯೂಸ್ ವಾಹಿನಿಯಲ್ಲಿ ನೇರಪ್ರಸಾರ

#JanjatiyaGauravVarsh #Biirs150

ಅತ್ತ ಇತ್ತ ಆನೆ ಕಾವಲು, ನಡುವೆ ಅಮ್ಮನ ಮಡಿಲು, ನಮಗಿನ್ಯಾರ ದಿಗಿಲು?

ಮಕ್ಕಳಾದ ಆದ್ಯವೀರ್ ಮತ್ತು ಯುಗಾಧ್ಯಕ್ಷ ಅವರೊಂದಿಗೆ ತ್ರಿಷಿಕಾ ಕುಮಾರಿ

ಅರಮನೆ ಅಮ್ಮನ ಅಂತರಂಗ

ಮನೆಯಲ್ಲಿ ಹೆಣ್ಣುಮಕ್ಕಳು ಸ್ವಲ್ಪ ಸೋಮಾರಿತನ ತೋರಿದರೂ 'ನೀನೇನು ಮಹಾರಾಣಿನಾ, ಏನೂ ಮಾಡದೆ ಸುಮ್ನೇ ಕೂತಿರಕ್ಕೆ' ಅನ್ನುವ ಮಾತಿನ ಚಾಟಿಯೇಟು ಹಿರಿಯರಿಂದ ಆಗಾಗ್ಗೆ ಬೀಳುತ್ತಲೇ ಇರುತ್ತದೆ. ಜನಮಾನಸದಲ್ಲಿ ಹಾಸುಹೊಕ್ಕಾಗಿರುವ ಇಂತಹ ಮಾತಿಗೆ ಸದ್ದು ಹೊಡೆಯುವ ರೀತಿಯಲ್ಲಿ ಕ್ರಿಯಾಶೀಲರಾಗಿದ್ದಾರೆ ಮೈಸೂರು ರಾಜವಂಶಸ್ಥ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಧರ್ಮಪತ್ನಿ ತ್ರಿಷಿಕಾ ಕುಮಾರಿ ಒಡೆಯರ್. ಕುಟುಂಬದ ಕೆಲವು ಉದ್ದಿಮೆಗಳಲ್ಲಿ ತೊಡಗಿಕೊಂಡಿರುವುದರ ನಡುವೆಯೂ ಒಬ್ಬ ತಾಯಿಯಾಗಿ ಇಬ್ಬರು ಪುಟ್ಟ ಮಕ್ಕಳ ಪಾಲನೆಯ ಹೊಣೆಯನ್ನು ನಿರ್ವಹಿಸುತ್ತಿದ್ದಾರೆ. ಮಕ್ಕಳ ದಿನಾಚರಣೆಯ ಈ ಹೊತ್ತಿನಲ್ಲಿ, ಆಳರಸರ ಹಂಗಿಲ್ಲದ 'ತಾಯ್ತನ'ದ ಅವರ ಅಭಿವ್ಯಕ್ತಿ 'ಭೂಮಿಕಾ' ಜೊತೆಗಿನ ವಿಶೇಷ ಸಂದರ್ಶನದಲ್ಲಿ.

- **ನೀವು ಒಬ್ಬ ತಾಯಿ, ಜೊತೆಗೆ ಕುಟುಂಬದ ಉದ್ದಿಮೆಯಲ್ಲೂ ತೊಡಗಿಕೊಂಡಿದ್ದೀರಿ. ಉದ್ದಿಮೆಗೆ ಸಂಬಂಧಿಸಿದ ಕೆಲಸ ಕಾರ್ಯಗಳ ನಡುವೆ ಮಕ್ಕಳನ್ನು ಬೆಳೆಸಲು ಹೇಗೆ ಸಮಯ ಹೊಂದಿಸಿಕೊಳ್ಳುವಿರಿ?**

ಯಾವುದೇ ಮಹಿಳೆಗೆ ತಾಯಿಯಾಗುವುದು ಬದುಕಿನ ಅತ್ಯಂತ ಪ್ರಮುಖ ಸವಾಲುಗಳಲ್ಲಿ ಒಂದಾಗಿರುತ್ತದೆ. ಜೊತೆಗೆ, ಇದು ಬಹಳ ಶ್ರೇಷ್ಠವಾದ ಆಶೀರ್ವಾದವೂ ಹೌದು. ತಾಯಿಯಾಗುವುದು ಊಹಿಸಿಕೊಳ್ಳಲೂ ಆಗದ ರೀತಿಯಲ್ಲಿ ಮಹಿಳೆಗೆ ಒಂದೇ ಸಮಯದಲ್ಲಿ ಬಹು ಕಾರ್ಯಗಳನ್ನು ನಿರ್ವಹಿಸಬಲ್ಲ ಪಾಠವನ್ನು ಕಲಿಸುತ್ತದೆ. ತಾಯ್ತನವು ನನ್ನನ್ನು ಮೊದಲಿಗಿಂತಲೂ ಹೆಚ್ಚು ಗಟ್ಟಿಯಾಗಿಸಿದೆ ಮತ್ತು ಉತ್ತಮ ವ್ಯಕ್ತಿಯನ್ನಾಗಿ ರೂಪಿಸಿದೆ.

ಪ್ರತಿದಿನ ಮುಂಜಾನೆ ಬೇಗನೇ ಏಳುತ್ತೇನೆ ಮತ್ತು ಮಾಡಬೇಕಾದ ಕೆಲಸಗಳ ಪಟ್ಟಿ ಸಿದ್ಧಪಡಿಸಿಕೊಳ್ಳುತ್ತೇನೆ. ಹೀಗೆ ಮಾಡುವುದರಿಂದ ವ್ಯವಸ್ಥಿತವಾಗಿ, ಶಿಸ್ತುಬದ್ಧವಾಗಿ ಹಾಗೂ ಇಡೀ ದಿನದ ಕೆಲಸಗಳ ಬಗ್ಗೆ ಗಮನ ಹರಿಸಿ ದೃಢಸಂಕಲ್ಪದಿಂದ ತೊಡಗಿಕೊಳ್ಳಲು ನನಗೆ ಸಾಧ್ಯವಾಗುತ್ತದೆ.

- **ನಿಮ್ಮ ಮಕ್ಕಳ ಪಾಲನೆ ಮತ್ತು ನಿಮ್ಮ ಉದ್ದಿಮೆ ಬಯಸುವ ಹೊಣೆಗಾರಿಕೆಯ ನಡುವೆ ಹೇಗೆ ಸಮತೋಲನ ಸಾಧಿಸುತ್ತೀರಿ?**

ಆ ಸಮತೋಲನದ ಪ್ರಜ್ಞೆಯು ನನ್ನಲ್ಲಿ ಒಡಮೂಡಿರುವುದರ ಹಿಂದೆ ನನ್ನ ಪತಿ ಇದ್ದಾರೆ. ಅದಕ್ಕಾಗಿ ಅವರಿಗೆ ನಾನು ಕೃತಜ್ಞಳಾಗಿದ್ದೇನೆ. ಮಕ್ಕಳ ಬೇಕು-ಬೇಡಗಳ ಬಗ್ಗೆ ಅವರು ನಿರೀಕ್ಷೆಗಿಂತಲೂ ಹೆಚ್ಚು ಗಮನ ನೀಡುತ್ತಾರೆ. ಈ ಕಾರಣದಿಂದ, ನಾನು ಮಕ್ಕಳೊಂದಿಗೆ ಅರ್ಥಪೂರ್ಣವಾಗಿ ಸಮಯವನ್ನು ಕಳೆಯಲು ಸಾಧ್ಯವಾಗುತ್ತದೆ. ಅಷ್ಟೇ ಅಲ್ಲದೆ, ನನಗೆ ತುಂಬಾ ಬೆಂಬಲವಾಗಿರುವ ನನ್ನ ಕುಟುಂಬ ಮತ್ತು ಪರಿವಾರದವರ ಬಗ್ಗೆಯೂ ಇದೇ ಭಾವನೆ ನನ್ನಲ್ಲಿದೆ.

ಇಷ್ಟೊಂದು ಬಲವಾಗಿ ನನ್ನನ್ನು ಬೆಂಬಲಿಸುವ ಬಳಗವನ್ನು ಹೊಂದಿರುವುದು ನನ್ನ ಅದೃಷ್ಟವೇ ಸರಿ. ಸ್ವಲ್ಪವೇ ಸಹಾಯ ಅಥವಾ ಯಾವ ಸಹಾಯವೂ ಇಲ್ಲದೆ ಬದುಕಿನ ಜವಾಬ್ದಾರಿಗಳನ್ನೆಲ್ಲಾ ನಿರ್ವಹಿಸುತ್ತಿರುವ ಎಲ್ಲ ತಾಯಂದಿರ ಬಗ್ಗೆ ನನಗೆ ಅಪಾರವಾದ ಮೆಚ್ಚುಗೆ ಇದೆ.

- **ಮನೆಯವರು ಮತ್ತು ಸಹಾಯಕರು ನೆರವಿಗೆ ಇದ್ದರೂ ಸ್ವತಃ ಮಕ್ಕಳನ್ನು ನೋಡಿಕೊಳ್ಳುವ ಸ್ವಾಭಾವಿಕ ತುಡಿತ ಎಲ್ಲ ತಾಯಂದಿರಿಗೂ ಇದ್ದೇ ಇರುತ್ತದೆ. ನಿಮ್ಮ ದಿನಚರಿಯಲ್ಲಿ ಈ ಕಾರ್ಯಕ್ಕಾಗಿ ಹೇಗೆ ಸಮಯ ಹೊಂದಿಸಿಕೊಳ್ಳುವಿರಿ?**

ನನ್ನ ಮಕ್ಕಳನ್ನು ಶ್ರೇಷ್ಠರಾದ ನಮ್ಮ ಪೂರ್ವಿಕರು ನಡೆದ ಹಾದಿಯಲ್ಲಿ ನಡೆಯುವಂತೆ ಮಾಡುವುದು ನನ್ನ ಬಹುದೊಡ್ಡ ಜವಾಬ್ದಾರಿಯಾಗಿದೆ. ಅಂದರೆ, ಅವರಲ್ಲಿ ಸೇವಾಪ್ರಜ್ಞೆ, ಪ್ರಾಮಾಣಿಕತೆ ಹಾಗೂ ನಮ್ಮ ಕುಟುಂಬದ ಉನ್ನತ ಮೌಲ್ಯಗಳನ್ನು ರೂಢಿಸಿಕೊಳ್ಳುವಂತೆ ಮಾಡಬೇಕು ಎಂಬುದು ನನ್ನ ಹಂಬಲ. ನನ್ನ ಮಟ್ಟಿಗೆ ಇದು ನನ್ನ ಬದುಕಿನ ಅತ್ಯಂತ ಮಹತ್ವದ ಉದ್ದೇಶ ಹಾಗೂ ಅತಿ ದೊಡ್ಡ ಕರ್ತವ್ಯ. ನನ್ನ ಮಕ್ಕಳು ನನ್ನ ಪ್ರಪ್ರಥಮ ಆದ್ಯತೆ ಎಂಬುದರಲ್ಲಿ ಎರಡನೇ ಮಾತೇ ಇಲ್ಲ.

ಮಕ್ಕಳ ಪಾಲನೆಯ ವಿಷಯಕ್ಕೆ ಬಂದಾಗ ಸ್ವತಃ ನಾನೇ ಅದನ್ನು ನಿರ್ವಹಿಸುವುದರಲ್ಲಿ ಸಂಪೂರ್ಣ ಭಾಗಿಯಾಗುತ್ತೇನೆ. ಮಕ್ಕಳು ಆಟವಾಡುವಾಗ ಅಥವಾ ಮನೆಯ ಹೊರಗಿನ ಅವರ ಚಟುವಟಿಕೆಗಳಲ್ಲಿ ಸಹಾಯ ಮಾಡಲು ನಮ್ಮಲ್ಲಿ ಸಿಬ್ಬಂದಿ ಇದ್ದಾರೆ. ಆದರೆ, ಅವರ ಸ್ನಾನ, ಓದು–ಬರಹದಿಂದ ಹಿಡಿದು ಪ್ರತಿದಿನದ ಆಗುಹೋಗು ಮತ್ತು ಪಠ್ಯೇತರ ಚಟುವಟಿಕೆಗಳ ಬಗ್ಗೆ ಖುದ್ದು ನಿಗಾ ವಹಿಸುತ್ತೇನೆ. ಅವು ನನಗೆ ನಿಜವಾಗಿಯೂ ಅತ್ಯಮೂಲ್ಯ ಕ್ಷಣಗಳು.

- **ವೃತ್ತಿಗೆ ಸಂಬಂಧಿಸಿದಂತೆ ಮನೆಯಿಂದ ದೂರ ಹೋದಾಗ ನಿಮ್ಮ ಮಕ್ಕಳನ್ನು ಯಾರು ನೋಡಿಕೊಳ್ಳುತ್ತಾರೆ? ಅಂತಹ ಸಮಯದಲ್ಲಿ ಯಾರನ್ನು ಹೆಚ್ಚಾಗಿ ಅವಲಂಬಿಸುತ್ತೀರಿ?**

ನನ್ನ ಅತ್ತೆಯವರಾದ ಮಹಾರಾಣಿ ಡಾ. ಪ್ರಮೋದಾ ದೇವಿ ಒಡೆಯರ್ ತಮ್ಮ ಒತ್ತಡದ ಕೆಲಸಗಳ ನಡುವೆಯೂ ಮಕ್ಕಳಿಗಾಗಿ ಬಹಳಷ್ಟು ಸಮಯವನ್ನು ಮೀಸಲಿಡುತ್ತಾರೆ. ಅವರು ಮೊಮ್ಮಕ್ಕಳ ಪ್ರೀತಿಪಾತ್ರ ಅಜ್ಜಿ. ನನ್ನ ಮಕ್ಕಳಿಗೂ ಅವರೆಂದರೆ ತುಂಬಾ ಇಷ್ಟ. ಹಿರಿಯ ಮಗ ಆದ್ಯವೀರ್‌ಗಂತೂ ಅವರೊಂದಿಗೆ ಊಟ ಮಾಡುವುದು, ಹರಟೆ ಹೊಡೆಯುವುದು, ವಿಜ್ಞಾನದ ಪ್ರಯೋಗಗಳನ್ನು ಮಾಡುವುದು ಮತ್ತು ಇತರ ಕ್ರಿಯಾಶೀಲ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದೆಂದರೆ ಬಲು ಇಷ್ಟ. ಅವರಿಬ್ಬರ ಅನುಬಂಧ ವಿಶೇಷ ಎನ್ನಿಸುತ್ತದೆ. ಅತ್ತೆಯು ತಮ್ಮ ಅತ್ಯಾಪ್ತ ಪ್ರೀತಿ, ತಾಳ್ಮೆ ಮತ್ತು ಹಾಸ್ಯಪ್ರಜ್ಞೆಯ ಮೂಲಕ ಮಕ್ಕಳಲ್ಲಿ ಗಟ್ಟಿಯಾದ ಮೌಲ್ಯಗಳನ್ನು ಬೇರೂರಿಸಲು ಗಮನ ನೀಡುತ್ತಾರೆ.

ನಾನು ಹೆಚ್ಚು ಸಮಯ ದೂರ ಇರಬೇಕಾಗಿ ಬಂದಾಗ, ನನ್ನ ಪ್ರೀತಿಯ ತಾಯಿ ಮಹಿಶ್ರೀ ಸಿಂಗ್ ಅವರೇ ನನ್ನ ಮಕ್ಕಳ ಪಾಲಿಗೆ ಅಮ್ಮನಾಗುತ್ತಾರೆ. ನನ್ನ ಮಕ್ಕಳು ಅವರೊಂದಿಗೆ ಇದ್ದಾಗ ನಾನು ಪೂರ್ತಿ ನೆಮ್ಮದಿಯಿಂದ ಇರುತ್ತೇನೆ. ಬೇರೆ ಯಾರೂ, ಅಷ್ಟೇ ಏಕೆ, ನಾನು ಕೂಡಾ ಅವರಂತೆ ನೋಡಿಕೊಳ್ಳಲು ಸಾಧ್ಯವೇ ಇಲ್ಲವೇನೋ ಅನ್ನುವಷ್ಟರ ಮಟ್ಟಿಗೆ ಅವರು ಮಕ್ಕಳ ಬಗ್ಗೆ ಕಾಳಜಿ ವಹಿಸುತ್ತಾರೆ. ನಿಜಕ್ಕೂ ಅಂತಹ ತಾಯಿಯನ್ನು ಪಡೆದಿರುವುದು ನನ್ನ ಸೌಭಾಗ್ಯವೇ ಸರಿ.

ನಾನು ಪ್ರೀತಿಯಿಂದ ಮಮ್ಮ ಎಂದೇ ಕರೆಯುವ, ಯದುವೀರ್ ಅವರ ಹೆತ್ತ ತಾಯಿಯವರಾದ ಲೀಲಾ ತ್ರಿಪುರಸುಂದರಿ ದೇವಿಯವರೂ ಅದ್ಭುತವಾದ ಅಜ್ಜಿಯೇ ಆಗಿದ್ದಾರೆ. ಆಟಿಕೆಗಳು ಮತ್ತು ಪುಸ್ತಕಗಳಿಂದ ಮಕ್ಕಳನ್ನು ರಂಜಿಸುವುದರಲ್ಲಿ ಅವರು ನಿಷ್ಣಾತರು. ನನ್ನ ಆಂಟಿ ದಿವ್ಯಾ ಅರಸ್ ಮಕ್ಕಳನ್ನು ಶಾಲೆಗೆ ಬಿಡುವುದು, ಶಾಲೆಯಿಂದ ಕರೆತರುವುದು ಹಾಗೂ ಹೋಮ್‌ವರ್ಕ್ ಮಾಡಿಸುವುದರಲ್ಲಿ ಸದಾ ನೆರವಿಗೆ ಇರುತ್ತಾರೆ. ಮಕ್ಕಳನ್ನು ಬೆಳೆಸುವುದು ಬರೀ ಒಬ್ಬ ವ್ಯಕ್ತಿಯ ಹೊಣೆಗಾರಿಕೆಯಲ್ಲ, ಅದು ಪರಿವಾರದ ಸಾಮೂಹಿಕ ಶ್ರಮವಾಗಿರುತ್ತದೆ.

- **ಮಕ್ಕಳೊಂದಿಗೆ ನೀವು ಬಯಸಿದಷ್ಟು ಸಮಯ ಕಳೆಯಲು ಸಾಧ್ಯವಾಗುತ್ತಿಲ್ಲ ಎಂಬುದೇನಾದರೂ ಆಗಾಗ್ಗೆ ಕಾಡುವುದುಂಟೇ?**

ಇತರ ಎಲ್ಲ ತಾಯಂದಿರಂತೆ ಪ್ರತಿದಿನವೂ ನನ್ನ ಮಕ್ಕಳಿಗೆ ಕೈಲಾದಮಟ್ಟಿಗೆ ಅತ್ಯುತ್ತಮವಾದುದನ್ನು ಮಾಡಬೇಕೆಂದು ನಾನು ಬಯಸುತ್ತೇನೆ. ಆದರೆ ಕೆಲವೊಮ್ಮೆ ಅದು ಸಾಧ್ಯವಾಗದೇ ಹೋಗಬಹುದು. ಹೌದು, ಅಂತಹ ಸಮಯದಲ್ಲಿ, ಇನ್ನಷ್ಟು ಉತ್ತಮವಾದುದನ್ನು ಮಾಡಬೇಕು ಎಂಬ ನಿರಂತರವಾದ ಬಯಕೆಯೇ ತಾಯ್ತನದ ಮಹತ್ವವನ್ನು ಹೆಚ್ಚಿಸುತ್ತದೆ ಎಂಬುದನ್ನು ಅನುಭವದಿಂದ ಮನವರಿಕೆ ಮಾಡಿಕೊಂಡಿದ್ದೇನೆ.

ಒಬ್ಬ ತಾಯಿಯು ತಾನು ಏನಾಗಿರುವಳೋ ಅದಕ್ಕೆ, ಪ್ರತಿಕ್ಷಣವೂ ತನ್ನ ಮಕ್ಕಳಿಗಾಗಿ ಶ್ರಮಿಸುವ, ಹೊಸತನ್ನು ಕಲಿಯುವ ಹಾಗೂ ಆ ಕಾರ್ಯಗಳಲ್ಲಿ ತನ್ನನ್ನು ನಿಸ್ವಾರ್ಥದಿಂದ ತೊಡಗಿಸಿಕೊಳ್ಳ ಬಯಸುವ ಅವಳೊಳಗಿನ ಆ ತುಡಿತವೇ ಕಾರಣ. ❖



ಅಪ್ಪ–ಅಮ್ಮನ ಜೊತೆ ಪುಟಾಣಿ ಆದ್ಯವೀರ್

ಸ್ವಲ್ಪ ಗಾಡಿ ನಿಲ್ಸಿ... ಪ್ಲೀಸ್

• ಶ್ರುತಿ ತಲನೇರಿ

ಭಾವಯಾನ

ಬೆಂಗಳೂರಿನಿಂದ ಮಂತ್ರಾಲಯಕ್ಕೆ ಇತ್ತೀಚೆಗೆ ಬಸ್ ಮೂಲಕ ಹೋಗಬೇಕಾಗಿ ಬಂತು. ಒಂದೆರಡು ಗಂಟೆಗಳಾದ ಬಳಿಕ ಯಾವುದೋ ಒಂದು ಹೋಟೆಲ್ ಬಳಿ ಬಸ್ ನಿಲ್ಲಿಸಿ, 'ಹತ್ತು ನಿಮಿಷ ಟೈಮ್ ಇದೆ, ಹೋಗುವವರು ಹೋಗಿ ಬೇಗ ಬಂದುಬಿಡಿ' ಎಂದು ಕಂಡಕ್ಟರ್ ಕೂಗುಹಾಕಿದ್ದೇ ತಡ, ಎಲ್ಲ ಹೆಂಗಸರು ಬಸ್ ಇಳಿದು ಶೌಚಾಲಯ ಹುಡುಕತೊಡಗಿದರು. ಅಲ್ಲಿ ಇದ್ದದ್ದು ಹೋಟೆಲಿಗೆ ಸೇರಿದ ಒಂದು ಪಾಳುಬಿದ್ದ ಮುರುಕಲು ಶೌಚಾಲಯ ಮಾತ್ರ. ಸುತ್ತಲೂ ಗಿಡಗಂಟಿ. ಒಳಗೆ ಇಣುಕಿದರೆ ಗಬ್ಬುನಾತ. ಅದನ್ನು ನೋಡಿ, ಒತ್ತರಿಸಿ ಬಂದಿದ್ದ ಮೂತ್ರ ಮರೆತೇಹೋಯಿತು. ಕೆಲವರಂತೂ ತಮ್ಮ ಆರೋಗ್ಯವನ್ನೂ ಲೆಕ್ಕಿಸದೆ ಅಲ್ಲೇ ದೇಹಬಾಧೆ ತೀರಿಸಿಕೊಂಡರು.

ಅದರ ಗುಂಗಿನಲ್ಲೇ ವಾಕರಿಸುತ್ತಾ ಬಂದು ಬಸ್ಸೇರಿದರೆ, ಅಲ್ಲಿದ್ದ ಗಂಡಸರ್‍ಯಾರೂ ಈ ಸಮಸ್ಯೆ ಅನುಭವಿಸಿದಂತೆ ಕಾಣಲಿಲ್ಲ. ಗಂಡಸರಿಗೆಂದು ಪ್ರತ್ಯೇಕ ಶೌಚಾಲಯ ಅಲ್ಲಿ ಇರಲಿಲ್ಲವಾದರೂ ಅವರು ಇಷ್ಟು ನಿರಾಳವಾಗಿ ಇರಲು ಹೇಗೆ ಸಾಧ್ಯವಾಯಿತು ಎಂಬುದಕ್ಕೆ ಕಾರಣ ಆಮೇಲೆ ತಿಳಿಯಿತು. ಅವರೆಲ್ಲ ಗಿಡಗಂಟಿಗಳ ಮರೆಯಲ್ಲೇ ಒತ್ತಡಮುಕ್ತರಾಗಿ ಬಂದಿದ್ದರು. ಕೆಲವರಂತೂ ಮರೆಯಲ್ಲೂ ಹೋಗಲಿಲ್ಲ ಅನ್ನುವುದು ಆ ಕೊಳಕು ಶೌಚಾಲಯ ನೋಡಿದ್ದಕ್ಕಿಂತ ಅಸಹ್ಯ ಎನ್ನಿಸಿತು. ಹಾಗಾಗಿ, ಇಲ್ಲೂ ನಿಜವಾದ ಸಂತ್ರಸ್ತರು ಹೆಂಗಸರೇ!

ಆರೋಗ್ಯದ ದೃಷ್ಟಿಯಿಂದ ಯಥೇಚ್ಛವಾಗಿ ನೀರು ಕುಡಿಯುವ ನನ್ನಂತಹವರಿಗೆ ರಸ್ತೆಯುದ್ದಕ್ಕೂ ಎಲ್ಲಿ ಟಾಯ್ಲೆಟ್ ಸಿಗಬಹುದು ಎಂದು ಹುಡುಕುವುದೇ ಕೆಲಸ. ಇನ್ನು ವಯಸ್ಸಾದವರಿದ್ದರೆ ಮುಗಿದೇ ಹೋಯಿತು. ಸ್ವಂತ ವಾಹನವಾದರೆ ಹೇಗೋ ನಿರ್ಜನ ಪ್ರದೇಶದ ಬಳಿ ವ್ಯವಸ್ಥೆ ಆಗುತ್ತದೆ. ಅದೂ ಅಪಾಯಕಾರಿಯೇ. ಕಂಡು ಕೇಳದ ಜಾಗದಲ್ಲಿ ಕಾಡುಪ್ರಾಣಿಯಾದಿಯಾಗಿ ಅಪಾಯವಿರಬಹುದು. ಹೀಗಾಗಿ, ಬಸ್ ಪ್ರಯಾಣದಲ್ಲಿ ಎಷ್ಟೋ ಬಾರಿ ಮಹಿಳೆಯರಿಗೆ ನರಕಯಾತನೆ ಖಚಿತ. ನನ್ನ ಬಹಳಷ್ಟು ವಿದ್ಯಾರ್ಥಿನಿಯರು ಆಗಾಗ್ಗೆ ರಜೆ ತೆಗೆದುಕೊಳ್ಳುವುದು ಯಾಕೆ ಎಂದು ಕೇಳಿದರೆ, ಕಿಡ್ನಿ ಸ್ಟೋನ್ ಎನ್ನುತ್ತಾರೆ. ಸರಿಯಾಗಿ ನೀರು ಕುಡಿಯುವುದಿಲ್ಲ, ನೀರು ಕುಡಿದರೆ ಮನೆಯಿಂದ ಹೊರಗೆ ಬಂದಾಗ ಮೂತ್ರ ವಿಸರ್ಜಿಸಲು ಗಬ್ಬುನಾರುವ ಶೌಚಾಲಯಗಳಿಗೆ ಹೋಗಬೇಕಾಗುತ್ತದೆ ಎನ್ನುವುದೇ ಇದರ ಹಿಂದಿನ ದೊಡ್ಡ ಕಾರಣವಾಗಿರುತ್ತದೆ.

ನನ್ನ ಕರ್ಮಭೂಮಿ ಬೆಂಗಳೂರಿನಿಂದ ಹುಟ್ಟೂರು ಶಿವಮೊಗ್ಗಕ್ಕೆ ಪ್ರಯಾಣಿಸುವ ಹೆದ್ದಾರಿಯಂತೂ ಹೇಳುವುದೇ ಬೇಡ. ದಾರಿಯುದ್ದಕ್ಕೂ ಎಲ್ಲಿ ಅತಿಹೆಚ್ಚು ಗಿಡಗಂಟಿಗಳಿವೆ, ಎಲ್ಲಿ ಟ್ರೆಂಚ್ ಹೊಡೆದು ಹಳ್ಳ ತೋಡಿದ್ದಾರೆ, ಎಲ್ಲಿ ಜನ ಇರುವುದಿಲ್ಲ ಎನ್ನುವುದನ್ನೆಲ್ಲ ಸರ್ವೆ ಮಾಡುವುದೇ ಹೆಂಗಸರ ಪ್ರಯಾಣದುದ್ದದ ಸಾಹಸ ಆಗಿರುತ್ತದೆ. ಅದರಲ್ಲೂ ಮುಟ್ಟಾದ ದಿನಗಳಲ್ಲಂತೂ ಪ್ಯಾಡ್ ಚೇಂಜ್ ಮಾಡುವುದು ಕನಸಿನ ಮಾತು. ಸ್ವಚ್ಛತೆ, ಸುರಕ್ಷತೆಯ ಬಗ್ಗೆ ಭಾಷಣ ಮಾಡುವ ನಮ್ಮ ರಾಜಕಾರಣಿಗಳು ಈ ಸಮಸ್ಯೆಯ ಬಗೆಗೆ ಅದೆಷ್ಟು ಕಾಳಜಿ ಹೊಂದಿದ್ದಾರೆ? ರಸ್ತೆಗಳ ಅಭಿವೃದ್ಧಿಗಾಗಿ ಅಷ್ಟೆಲ್ಲ ಟೋಲ್ ಸಂಗ್ರಹಿಸುವ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರವು ರಸ್ತೆಬದಿ ಅದೆಷ್ಟು ಶೌಚಾಲಯಗಳನ್ನು ನಿರ್ಮಿಸಿ ನಿರ್ವಹಿಸುತ್ತಿದೆ? ಈ ಯಾವ ಪ್ರಶ್ನೆಗಳಿಗೂ ಸ್ಪಷ್ಟ ಉತ್ತರ ಸಿಗುವುದಿಲ್ಲ.

ಎಷ್ಟೋ ಬಾರಿ ಮನೆಯ ಗಂಡಸರು ಕುಟುಂಬದವರೊಂದಿಗೆ ಖಾಸಗಿ ವಾಹನದಲ್ಲಿ ಪ್ರಯಾಣಿಸುವಾಗ, ಹೆಂಗಸರು ಪ್ರಯಾಣದ ಮಧ್ಯೆ 'ಸ್ವಲ್ಪ ಗಾಡಿ ನಿಲ್ಸಿ, ಸುಸ್ಸುಗೆ ಹೋಗಬೇಕಿತ್ತು' ಎಂದರೆ, 'ಕಡಿಮೆ ನೀರು ಕುಡಿಯಕ್ಕೆ ಆಗಲ್ವಾ? ದಾರಿಯುದ್ದಕ್ಕೂ ನಿಲ್ಸುತ್ತಾ ಹೋದರೆ ಲೇಟ್ ಆಗಲ್ವಾ' ಎಂದು ಗದರುವುದಿದೆ.

ವಿದೇಶ ಸುತ್ತಿ ಬರುವ ನಮ್ಮ ಜನ ಅಲ್ಲಿಯ ವಿಶಾಲವಾದ ರಸ್ತೆ, ಸ್ವಚ್ಛ ಶೌಚಾಲಯ ಎಲ್ಲವನ್ನೂ ಇನ್ನಿಲ್ಲದಂತೆ ವರ್ಣಿಸುತ್ತಾರೆ. ಅಲ್ಲಿನ ಹೊಸ ಆವಿಷ್ಕಾರಗಳನ್ನು ನೋಡಿ ಬರುವ ನಮ್ಮ ಆಡಳಿತಾರೂಢರು, ಅಲ್ಲಿರುವ ಶೌಚಾಲಯ ವ್ಯವಸ್ಥೆಯನ್ನು ಮಾತ್ರ ಇಲ್ಲೂ ಯಾಕೆ ಅಳವಡಿಸುವ ಪ್ರಯತ್ನ ಮಾಡುವುದಿಲ್ಲ?

ಹೆದ್ದಾರಿಗಳಲ್ಲಿ ಟೋಲ್ ನಂತರದ 500 ಮೀಟರ್ ದೂರಕ್ಕೆ ಸೂಕ್ತ ನಿರ್ವಹಣೆಯ ಒಂದೊಂದು ಶೌಚಾಲಯ, ಇತರ ಮುಖ್ಯ ರಸ್ತೆಗಳ ಅಲ್ಲಲ್ಲಿ ಪರಿಸರಸ್ನೇಹಿ ಶೌಚಾಲಯಗಳನ್ನು ಸ್ಥಾಪಿಸಿದರೆ, ಹೆಣ್ಣುಮಕ್ಕಳು ರಸ್ತೆ ಪ್ರಯಾಣವನ್ನು ಕಿರಿಕಿರಿ ಎಂದು ಭಾವಿಸದೆ ಮುಕ್ತವಾಗಿ ಆನಂದಿಸಲು ಸಾಧ್ಯವಾಗುತ್ತದೆ.

ಅಂದಹಾಗೆ, ನ.19 ವಿಶ್ವ ಶೌಚಾಲಯ ದಿನ. ಈ ನೆಪವಾದರೂ ಇಂಥದ್ದೊಂದು ಜಾಗೃತಿಗೆ ಕಾರಣವಾಗಲಿ. ❖

ಹೆಚ್ಚು ತಿನ್ನುವ ಬಯಕೆ ಹೇಗೆ ನಿಯಂತ್ರಿಸಲಿ?

ಅಂತರಂಗ

ಅಕ್ಷರ ದಾಮ್ಲೆ, ಮನಃಶಾಸ್ತ್ರಜ್ಞ

- **ನನಗೀಗ 40 ವರ್ಷ. ಅತಿಯಾಗಿ ತಿನ್ನುತ್ತೇನೆ. ಕಡಿಮೆ ತಿಂದರೆ ಹಸಿವನ್ನು ತಡೆದುಕೊಳ್ಳುವ ಶಕ್ತಿ ಇಲ್ಲ. ಬಿ.ಪಿ., ಶುಗರ್ ಬಂದರೆ ಎಂದು ಭಯವಾಗುತ್ತದೆ. ಹೆಚ್ಚು ತಿನ್ನುವ ಬಯಕೆಯನ್ನು ಕಡಿಮೆ ಮಾಡಿಕೊಳ್ಳುವುದು ಹೇಗೆ?**

ರಾಗಿಣಿ, ಮಲೇಬೆನ್ನೂರು

ಹಿರಿಯರು ಒಂದು ಮಾತು ಹೇಳಿದ್ದಾರೆ. 'ಒಂದು ಹೊತ್ತು ಉಂಡವ ಯೋಗಿ, ಎರಡು ಹೊತ್ತು ಉಂಡವ ಭೋಗಿ, ಮೂರು ಹೊತ್ತು ಉಂಡವ ರೋಗಿ ಮತ್ತು ನಾಲ್ಕು ಹೊತ್ತು ಉಂಡವನನ್ನು ಹೊತ್ತುಕೊಂಡು ಹೋಗಿ' ಅಂತ. ಆರಂಭದಲ್ಲಿ ನನಗೂ ಈ ಮಾತಿನ ಬಗ್ಗೆ ಪ್ರಶ್ನೆಗಳು ಮೂಡುತ್ತಿದ್ದವು. ಈ ಮಾತಿನ ಆಳ ನನಗೆ ಅರ್ಥವಾಗುತ್ತಿರಲಿಲ್ಲ. ಯಾಕೆಂದರೆ ಮಾಮೂಲಾಗಿ ನಾವು ಮೂರು ಹೊತ್ತು ತಿನ್ನುವುದು ರೂಢಿಯಲ್ಲಿ ಬಂದಿರುವ ಅಭ್ಯಾಸ. ಹಾಗಿರುವಾಗ 'ನಾವೆಲ್ಲರೂ ರೋಗಿಗಳಾ?! ನಾವು ಆರೋಗ್ಯವಾಗಿಯೇ ಇದ್ದೇವಲ್ಲಾ' ಅಂತ ಯೋಚನೆಗಳು ಬರುತ್ತಿದ್ದವು. ಆದರೆ ಬುದ್ಧಿ ಬೆಳೆಯುತ್ತಾ ಹೋದಂತೆ, ಈ ಮಾತಿನ ನಿಜಾರ್ಥವೇನು ಎಂಬುದು ಅರಿವಾಯಿತು. ನಾವು ಆಹಾರವನ್ನು ಸೇವಿಸುವ ಅಗತ್ಯವೇನು ಎಂಬ ಮೂಲಭೂತವಾದ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕು. ಇಲ್ಲೂ ಒಂದು ಜಿಜ್ಞಾಸೆಯ ಪ್ರಶ್ನೆಯನ್ನು ಹಲವರು ಎತ್ತುತ್ತಾರೆ. ಅದೇನೆಂದರೆ, 'ನಾವು ಬದುಕುವುದಕ್ಕೋಸ್ಕರ ತಿನ್ನುವುದೋ ಅಥವಾ ತಿನ್ನುವುದಕ್ಕೋಸ್ಕರ ಬದುಕುವುದೋ?!'

ಮೊದಲು ನಾವು ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಬೇಕು. ಯಾಕೆಂದರೆ, ನೀವು ಬದುಕುವುದಕ್ಕೋಸ್ಕರ ತಿನ್ನುವುದಾದರೆ, ಶರೀರಕ್ಕೆ ಎಷ್ಟು ಬೇಕೋ ಅಷ್ಟು ತಿಂದರೆ ಸಾಕು. ಯಾವತ್ತಾದರೂ ಸಾಯುವುದಂತೂ ಇದ್ದದ್ದೇ. ಹಾಗಾಗಿ, ನಮಗೆ ಬೇಕಾದದ್ದನ್ನೆಲ್ಲಾ ತಿನ್ನುವುದೇ ಸರಿ ಅನ್ನುವಂತಹ ದೃಷ್ಟಿಕೋನವನ್ನು ಇಟ್ಟುಕೊಂಡು, ತಿನ್ನುವುದಕ್ಕಾಗಿಯೇ ಬದುಕುವವರಾದರೆ, ಅಂತಹವರಿಗೆ ನನ್ನ ಮಾತುಗಳು ಪಥ್ಯವಾಗಲಿಕ್ಕಿಲ್ಲ. ಅವರಿಗೆ ಈ ರೀತಿಯ ಪ್ರಶ್ನೆಗಳೂ ಮೂಡುವುದಿಲ್ಲವೇನ್ನಿ!

ಹಸಿವಿನ ವಿಚಾರ ಬಂದಾಗ, ನಾವು ಅರ್ಥ ಮಾಡಿಕೊಳ್ಳಬೇಕಾದ ಒಂದು ವಿಚಾರ ಏನೆಂದರೆ, ನಾವು ನಿರಂತರವಾಗಿ ಕೆಲಸ ಮಾಡುವಾಗ ನಮ್ಮೊಳಗಿರುವ ಇಂಧನ ಮುಗಿಯುವುದು ಸಹಜ. ಆದರೆ ನಮ್ಮ ಶರೀರದಲ್ಲಿ ನಾವು ತಿಂದ ಆಹಾರದ ಪ್ರಮಾಣವಷ್ಟೇ ಅಲ್ಲದೆ, ಕೊಬ್ಬಿನಂಶದ ರೂಪದಲ್ಲಿ ಶೇಖರಿಸಲ್ಪಟ್ಟ ಇಂಧನವೂ ಇರುತ್ತದೆ. ಆದರೆ, ನಾವು ಆವಾಗಾವಾಗ ಆಹಾರವನ್ನು ತಿನ್ನುತ್ತಲೇ ಇರುವ ಕಾರಣ, ಶೇಖರಿಸಲ್ಪಟ್ಟ ಇಂಧನ ಬಳಕೆಯಾಗುವುದೇ ಇಲ್ಲ. ಬದಲಾಗಿ ಅದು ಮತ್ತೂ ಮತ್ತೂ ಶೇಖರಣೆ ಆಗುತ್ತಲೇ ಇರುತ್ತದೆ. ಹಾಗಾಗಿಯೇ ಅನೇಕರಿಗೆ ಕೊಬ್ಬಿನಂಶ ಜಾಸ್ತಿ ಆಗುತ್ತದೆ. ಆಹಾರವನ್ನು ಸರಿಯಾದ ಸಮಯಕ್ಕೆ ತಿನ್ನದ ಕಾರಣದಿಂದಲೂ ನಮ್ಮ ಶರೀರವು ಕೊಬ್ಬಿನಂಶವನ್ನು ಆಪತ್ಕಾಲಕ್ಕೆ ಬೇಕಾದರೆ ಎಂದು ಶೇಖರಿಸಿ ಇಡುತ್ತದೆ. ಈ ಎರಡೂ ಸಮಸ್ಯೆಗಳಿಗೆ ಪರಿಹಾರವೇನು? ಸರಿಯಾದ ಸಮಯಕ್ಕೆ ನಿಯಮಿತ ಆಹಾರವನ್ನು ತೆಗೆದುಕೊಳ್ಳುವುದು ಮತ್ತು ಸಾಕಷ್ಟು ನೀರು ಕುಡಿಯುವುದು. ಯಾವಾಗ ನಮ್ಮ ದೇಹಕ್ಕೆ ನೀರಿನ ಪೂರೈಕೆ ಸಾಕಷ್ಟು ಪ್ರಮಾಣದಲ್ಲಿ ಆಗುತ್ತದೋ ಆಗ ಅದು ನಮ್ಮ ಹಸಿವಿನ ಪ್ರಮಾಣವನ್ನು ಕಡಮೆ ಮಾಡುತ್ತದೆ. ಮಾತ್ರವಲ್ಲ, ಕೊಬ್ಬಿನಂಶದ ಕರಗುವಿಕೆಗೂ ಸಹಾಯ ಮಾಡುತ್ತದೆ. ಸಮುದ್ರದ ದಡದಲ್ಲಿರುವ ಬಂಡೆ ಹೇಗೆ ನೀರಿನ ಸವರುವಿಕೆಯಿಂದ ಸವೆಯುತ್ತದೆಯೋ ಅದೇ ರೀತಿ, ನಮ್ಮ ಶರೀರದಲ್ಲಿರುವ ಕೊಬ್ಬು ನಾವು ಕುಡಿಯುವ ನೀರಿನ ಸಹಾಯದಿಂದ ಕರಗುತ್ತದೆ. ಹಾಗಾಗಿ, ಈ ಎರಡೂ ನಿಯಮಗಳನ್ನು ಸರಿಯಾಗಿ ಪಾಲಿಸಬೇಕು. ಊಟಕ್ಕೆ ಸ್ವಲ್ಪ ಮೊದಲು ನೀರು ಕುಡಿಯುವುದರಿಂದಲೂ ಆಹಾರದ ಪ್ರಮಾಣವನ್ನು ಕಡಿಮೆ ಮಾಡಬಹುದು.

ಇದರ ಹೊರತಾಗಿ, ನಾವು ಇತರ ಹಬ್ಬ ಹರಿದಿನಗಳ ಸಂದರ್ಭಗಳಲ್ಲಿ ಯಾವುದೇ ಸಿಹಿ ತಿಂಡಿ ಇರಬಹುದು ಅಥವಾ ಎಣ್ಣೆಯಲ್ಲಿ ಕರಿದ ತಿಂಡಿಗಳಿರಬಹುದು, ಅವುಗಳನ್ನು ತಿನ್ನುವಾಗ ಸ್ವಲ್ಪ ನಿಯಂತ್ರಣವನ್ನು ಸಾಧಿಸಬೇಕು. ಯಾಕೆಂದರೆ, ಸಕ್ಕರೆಯ ಪದಾರ್ಥಗಳಾಗಲೀ ಎಣ್ಣೆಯ ಪದಾರ್ಥಗಳಾಗಲೀ ನಮ್ಮ ಶರೀರಕ್ಕೆ ದೊಡ್ಡ ಮಟ್ಟಿಗೆ ಅಗತ್ಯವಿರುವುದಿಲ್ಲ. **ಇನ್ನು ಇಷ್ಟೆಲ್ಲಾ ತಿಳಿವಳಿಕೆ ಇದ್ದರೂ, ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸಲಾಗುತ್ತಿಲ್ಲ ಅನ್ನುವವರಿಗೆ ಒಂದಷ್ಟು ಸುಲಭ ಉಪಾಯಗಳು:**

1. ಆಹಾರದ ಪ್ರಮಾಣವನ್ನು ಏಕಾಏಕಿ ಕಡಿಮೆ ಮಾಡಬೇಡಿ.
2. ತಿನ್ನಬೇಕು ಅನ್ನಿಸಿದ ಯಾವುದೇ ಆಹಾರವನ್ನಾದರೂ ತಿನ್ನಿ. ಆದರೆ, ಕಡಿಮೆ ಪ್ರಮಾಣದಲ್ಲಿ ತಿನ್ನಿ. ಆಗ ಅದರ ಕುರಿತು ತೀವ್ರವಾದ ಸೆಳೆತ ಇರುವುದಿಲ್ಲ.
3. ಕನ್ನಡಿಯ ಮುಂದೆ ನಿಂತು, ನಿತ್ಯವೂ ನೀವು ಹೇಗಿರಬೇಕು ಎಂಬುದನ್ನು ಸ್ಪಷ್ಟವಾಗಿ ಚಿತ್ರಿಸಿಕೊಳ್ಳಿ.
4. ಯಾವುದಾದರೂ ದಿನ ಮನಸ್ಸಿನ ನಿಯಂತ್ರಣ ತಪ್ಪಿ ಹೆಚ್ಚಿಗೆ ತಿಂದರೆ, ಅದಕ್ಕೆ ಕಾರಣಗಳನ್ನು ಹುಡುಕಿಕೊಳ್ಳಿ.
5. 'ಚೀಟ್ ಡೇ' ಅನ್ನುವುದು ಒಂದು ಕಾರಣವಷ್ಟೇ. ಒಂದು ದಿನ ಚೀಟ್ ಡೇ ಮಾಡಲು ಹೋಗಿ ಅದರ ಪಾಶದಲ್ಲಿ ಬೀಳಬೇಡಿ.

ಇಷ್ಟೆಲ್ಲ ಮಾಡಿದ ಮೇಲೂ ನಿಮ್ಮ ತಿನ್ನುವಿಕೆಯ ಮೇಲೆ ನಿಯಂತ್ರಣ ಸಾಧಿಸಲು ಸಾಧ್ಯವಾಗುತ್ತಿಲ್ಲ ಅಂತಾದರೆ, ನುರಿತ ಆಹಾರತಜ್ಞರನ್ನು ಅಥವಾ ಮನಃಶಾಸ್ತ್ರಜ್ಞರನ್ನು ಭೇಟಿ ಮಾಡಿ. ❖

ಅಟ್ಟ ಸೇರಿದೆ ಘಟ್ಟದ ರೊಟ್ಟಿ ಇಳಿಸೋಣ ಬನ್ನಿ

• ಎಂ.ಎಸ್.ಧರ್ಮೇಂದ್ರ

ಸೈನಿಕರಿಗಾಗಿ ದೀರ್ಘಕಾಲ ಕೆಡದಂತಹ ಪೌಷ್ಟಿಕಾಂಶ ಯುಕ್ತ ಆಹಾರವನ್ನು ತಯಾರಿಸಲು ಮೈಸೂರಿನ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ (ಸಿಎಫ್‌ಟಿಆರ್‌ಐ) ಹಾಗೂ ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯ (ಡಿಎಫ್‌ಆರ್‌ಎಲ್) ಹಗಲಿರುಳೂ ಸಂಶೋಧನೆ ನಡೆಸುತ್ತಿರುತ್ತವೆ. ಆದರೆ ನಮ್ಮ ಪೂರ್ವಜರು ಹೀಗೆ ದೀರ್ಘಕಾಲ ಕೆಡದಂತಹ 'ಘಟ್ಟದ ರೊಟ್ಟಿ'ಗಳನ್ನು ನೂರಾರು ವರ್ಷಗಳ ಹಿಂದೆಯೇ ತಯಾರಿಸುತ್ತಿದ್ದರು. ಘಟ್ಟಕ್ಕೆ ಹೋಗುವಾಗ ಈ ರೊಟ್ಟಿಗಳನ್ನು ತೆಗೆದುಕೊಂಡು ಹೋಗುತ್ತಿದ್ದರಿಂದಲೋ ಅವು ಗಟ್ಟಿಯಾಗಿ ಇರುತ್ತಿದ್ದರಿಂದಲೋ ಘಟ್ಟ ಪ್ರದೇಶದಲ್ಲಿ ಪ್ರಚಲಿತವಾಗಿ ಇದ್ದುದರಿಂದಲೋ ಈ ಹೆಸರು ಬಂದಿರಬಹುದು.

ಹಿಂದೆ ಜಾತ್ರೆಗೆ, ಘಟ್ಟ ಪ್ರದೇಶದಲ್ಲಿ ನಡೆಯುತ್ತಿದ್ದ ದನಗಳ ಜಾತ್ರೆಗೆ, ಕುಟುಂಬ ಸಮೇತ ಪ್ರವಾಸಕ್ಕೆ ಹೋಗುವಾಗಲೆಲ್ಲ ಈಗಿನಂತೆ ಹೋಟೆಲ್‌ಗಳಾಗಲಿ, ಎಲ್ಲಿ ಬೇಕೆಂದರಲ್ಲಿ ಅಡುಗೆ ಮಾಡಿಕೊಳ್ಳಲು ಗ್ಯಾಸ್ ಸ್ಟೌವ್‌ಗಳಾಗಲಿ ಇಲ್ಲದಿದ್ದರಿಂದ, ತಿಂಡಿ ಮತ್ತು ಊಟದ್ದು ಪ್ರಮುಖ ಸಮಸ್ಯೆಯಾಗಿ ಕಾಡುತ್ತಿತ್ತು. ಇದಕ್ಕೆ ಪರಿಹಾರವೆಂಬಂತೆ ಅವರು ಈ ರೊಟ್ಟಿಗಳನ್ನು ಸಂಶೋಧಿಸಿಕೊಂಡಿರಬಹುದು.

ಹಾಸನ ಜಿಲ್ಲೆಯ ಅರಕಲಗೂಡು, ಹೊಳೆನರಸೀಪುರ, ಚನ್ನರಾಯಪಟ್ಟಣ ಪ್ರದೇಶಗಳಲ್ಲಿ ಈ ರೊಟ್ಟಿಗಳನ್ನು ಹೆಚ್ಚಾಗಿ ಮಾಡಲಾಗುತ್ತಿತ್ತು. ಈಗಲೂ ಅಲ್ಲಲ್ಲಿ ಕೆಲವರು ಅಪರೂಪಕ್ಕೆ ಮಾಡುತ್ತಾರೆ. ನಾವು ಇಂತಹ ರೊಟ್ಟಿಗಳನ್ನು ಮಾಡಿಕೊಂಡರೆ, ತಿಂಗಳುಗಳ ಕಾಲ ಕೆಡದಂತೆ ಇಟ್ಟುಕೊಂಡು ಬೆಳಗಿನ ಉಪಾಹಾರ ಅಥವಾ ಸಂಜೆ ಕಾಫಿ-ಟೀ ಜೊತೆ ತಿನ್ನಬಹುದು.

ಹಿಂದಿನ ಕಾಲದಲ್ಲಿ ಈ ರೊಟ್ಟಿಗಳನ್ನು ಪ್ರವಾಸಕ್ಕೆ ಹೊರಡುವ ಮುನ್ನಾದಿನ ತಯಾರಿಸುತ್ತಿದ್ದರು. ಕಾವಲಿಯ ಮೇಲಿಟ್ಟ ಸೌದೆ ಒಲೆಯಲ್ಲಿ ರೊಟ್ಟಿಗಳನ್ನು ಬೇಯಿಸಿದ ನಂತರ ಕೆಂಡವನ್ನು ಒಲೆಯಿಂದ ಹೊರಗೆಳೆದು ರೊಟ್ಟಿಗಳನ್ನು ಒಂದರ ಪಕ್ಕ ಒಂದರಂತೆ ರಾತ್ರಿ ಪೂರ್ತಿ ಜೋಡಿಸಿಟ್ಟು ಮಲಗುತ್ತಿದ್ದರು. ಒಲೆಯ ಶಾಖಕ್ಕೆ ರೊಟ್ಟಿಗಳು ಬೆಳಗಾಗುವುದರೊಳಗೆ ಚೆನ್ನಾಗಿ ಒಣಗಿ ಪುಡಿಪುಡಿಯಾಗುವಂತೆ ಆಗಿರುತ್ತಿದ್ದವು. ಆದರೆ ಈಗ ಸೌದೆ ಒಲೆ ವಿರಳವಾದ್ದರಿಂದ ಗ್ಯಾಸ್ ಸ್ಟೌವ್‌ನಲ್ಲೇ ಹೇಗೆ ಈ ರೊಟ್ಟಿಗಳನ್ನು ಮಾಡುವುದು ಎಂದು ತಿಳಿಯೋಣ ಬನ್ನಿ.

ಏನೇನು ಬೇಕು?: ಅಕ್ಕಿಹಿಟ್ಟು– 1 ಕೆ.ಜಿ., ಹುರುಳಿಕಾಳು– 400 ಗ್ರಾಂ, ಹುಚ್ಚೆಳ್ಳು– 400 ಗ್ರಾಂ, ಮೆಣಸಿನಕಾಯಿ ಪುಡಿ– 1 ಸ್ಪೂನ್, ಜೀರಿಗೆ ಸ್ವಲ್ಪ, ಉಪ್ಪು.

ಮಾಡುವುದು ಹೇಗೆ?: ಹುರುಳಿಕಾಳನ್ನು ಸಣ್ಣ ಉರಿಯಲ್ಲಿ ಹುರಿದು, ಒಮ್ಮೆ ಮಿಕ್ಸಿಗೆ ಹಾಕಿ ತರಿತರಿಯಾಗಿ ಬೇಳೆ ಮಾಡಿಟ್ಟುಕೊಳ್ಳಿ. ಅಕ್ಕಿಹಿಟ್ಟು, ಮೆಣಸಿನಕಾಯಿಪುಡಿ, ಹುರುಳಿಕಾಳು, ಜೀರಿಗೆ, ಹುರಿದ ಹುಚ್ಚೆಳ್ಳು, ಉಪ್ಪನ್ನು ಹಾಕಿ ಚೆನ್ನಾಗಿ ಮಿಶ್ರ ಮಾಡಿ. ಅದಕ್ಕೆ ಕಾಯಿಸಿದ ನೀರನ್ನು ಹಾಕಿ ಹದವಾಗಿ ಕಲಸಿ ಉಂಡೆ ಮಾಡಿಟ್ಟುಕೊಳ್ಳಿ. ಕಾದ ಕಾವಲಿಯಲ್ಲಿ ಈ ಉಂಡೆಯಿಂದ ತೆಳ್ಳಗೆ ರೊಟ್ಟಿ ತಟ್ಟಿ ಹದವಾದ ಉರಿಯಲ್ಲಿ ಬೇಯಿಸಿ. ಬಳಿಕ ಸ್ಟೌವ್ ಅನ್ನು ಸಿಮ್ಮರ್ ಮೋಡ್‌ನಲ್ಲಿ ಇಟ್ಟು, ಬೇಯಿಸಿಟ್ಟ ರೊಟ್ಟಿಗಳನ್ನು ಮತ್ತೆ ಒಂದೊಂದಾಗಿ ಬೇಯಿಸಿ. ಆಗ ರೊಟ್ಟಿಗಳು ಚೆನ್ನಾಗಿ ಒಣಗಿ ಪುಡಿಪುಡಿ ಆಗುವ ಹದಕ್ಕೆ ಬರುತ್ತವೆ. ❖

ಏನಿದರ ವಿಶೇಷ?

- ಪೌಷ್ಟಿಕಾಂಶಗಳ ಆಗರ, ಅಕ್ಕಿಯ ಬದಲು ರಾಗಿಯನ್ನು ಬಳಸಿದರೆ ಆರೋಗ್ಯಕ್ಕೆ ಇನ್ನೂ ಒಳ್ಳೆಯದು.
- ಗದ್ದೆ ಕೊಯ್ಲಿನ ಸಮಯದಲ್ಲಿ ಮಲೆನಾಡಿನಲ್ಲಿ ಬೇಡಿಕೆ ಹೆಚ್ಚು.
- ಚೆನ್ನಾಗಿ ಒಣಗಿದ ರೊಟ್ಟಿಯನ್ನು ತೆರೆದ ಡಬ್ಬದಲ್ಲಿ ಶೇಖರಿಸಿಟ್ಟರೆ ತಿಂಗಳುಗಳ ಕಾಲ ಹಾಳಾಗದು.

ಅಮ್ಮ ಹೇಳ್ತಾಳೆ

ಪೂರಿಗೆ ಲಟ್ಟಿಸುವಾಗ ಉಂಡೆಯ ಮೇಲೆ ಗೋಧಿಹಿಟ್ಟಿನ ಪುಡಿ ಉದುರಿಸಿಕೊಳ್ಳುವುದು ಸಾಮಾನ್ಯ. ಹೀಗೆ ಮಾಡಿದರೆ, ಬೇಯಿಸುವಾಗ ಆ ಪುಡಿಯು ಎಣ್ಣೆಯಲ್ಲಿ ಸೇರಿ ಕ್ರಮೇಣ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಉಳಿದ ಪೂರಿಗಳನ್ನು ಬೇಯಿಸುವಾಗ ಪುಡಿಯ ಈ ಕಣಗಳು ಅವಕ್ಕೆ ಮೆತ್ತಿಕೊಳ್ಳುತ್ತವೆ. ಇದು ಆರೋಗ್ಯಕ್ಕೆ ಹಾನಿಕರ. ಹೀಗಾಗಿ, ಉಂಡೆಯ ಮೇಲೆ ಪುಡಿಯ ಬದಲು ಒಂದೆರಡು ಹನಿ ಎಣ್ಣೆಯನ್ನು ಹಾಕಿಕೊಂಡು ಲಟ್ಟಿಸಬೇಕು. ಆಗ, ಕಾದ ಎಣ್ಣೆಯಲ್ಲಿ ಗೋಧಿ ಪುಡಿಯ ಕಲ್ಮಶ ಸಂಗ್ರಹವಾಗುವುದು ತಪ್ಪುತ್ತದೆ. ❖

ವರ್ಷದ ದುಡಿಮೆ ಬೆಂಕಿಗೆ ಆಹುತಿ

ಕಿಡಿಗೇಡಿಗಳ ವಿರುದ್ಧ ಕ್ರಮಕ್ಕೆ ಪ್ರತಿಭಟನಕಾರರು ಆಗ್ರಹಿಸಲಿ

● ಬಸವರಾಜ ಹವಾಲ್ದಾರ

ಬಾಗಲಕೋಟೆ: ‘ಬೆಳಗಾವಿ ಜಿಲ್ಲೆಯವರಾಗಿದ್ದರೂ ಹತ್ತಾರು ವರ್ಷಗಳಿಂದ ಈ ಕಾರ್ಖಾನೆಗೆ ಕಬ್ಬು ಪೂರೈಸುತ್ತಿದ್ದೇವೆ. ಕಬ್ಬಿಗೆ ಬೆಂಕಿ ಹಚ್ಚಿರುವುದರಿಂದ ಶೇ 30ರಷ್ಟು ಇಳುವರಿ ಕಡಿಮೆಯಾಗಿದೆ. ಕೈಸೇರಬೇಕಿದ್ದ ಲಾಭ ಬೆಂಕಿಗೆ ಆಹುತಿಯಾಯಿತು. ಕುಟುಂಬ ನಿರ್ವಹಿಸುವುದು ಹೇಗೆ’ ಎಂದು ಕೌಜಲಗಿಯ ಸಿದ್ದಪ್ಪ ಬಿಸಗುಪ್ಪಿ ಆತಂಕ ವ್ಯಕ್ತಪಡಿಸಿದರು.

ಮಹಾಲಿಂಗಪುರ ಸಮೀಪದ ಸಮೀರವಾಡಿ ಗೋದಾವರಿ ಸಕ್ಕರೆ ಕಾರ್ಖಾನೆ ಆವರಣದಲ್ಲಿ ನಿಲ್ಲಿಸಲಾಗಿದ್ದ ಟ್ರ್ಯಾಕ್ಟರ್ ಮತ್ತು ಕಬ್ಬಿಗೆ ಕಿಡಿಗೇಡಿಗಳು ಬೆಂಕಿ ಹಚ್ಚಿದ ಪರಿಣಾಮ ನಷ್ಟಕ್ಕೆ ಒಳಗಾಗಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ ರೈತರು ನೋವು ತೋಡಿಕೊಂಡರು.

‘ಏಕಾಏಕಿ ಒಳ ನುಗ್ಗಿದವರೇ ಟ್ರ್ಯಾಕ್ಟರ್‌ಗಳಿಗೆ ಬೆಂಕಿ ಹಚ್ಚಿ ಓಡಿ ಹೋದರು. ಏನಾಗುತ್ತದೆ ಎಂದು ತಿಳಿಯುವಷ್ಟರಲ್ಲಿ ಬೆಂಕಿ ವ್ಯಾಪಿಸಿತು. ಏನು ಮಾಡಬೇಕು ಎಂಬುದೇ ಗೊತ್ತಾಗಲಿಲ್ಲ. ಕಾರ್ಖಾನೆ ಸಿಬ್ಬಂದಿ ನೀರು ಹಾಕಿ ನಂದಿಸಿದ್ದರಿಂದ, ಒಂದಷ್ಟು ಕಬ್ಬು ಉಳಿದಿದೆ’ ಎಂದರು.

‘ಸಾಲ ಮಾಡಿ ಕಬ್ಬು ಬೆಳೆದಿದ್ದೇವೆ. ನಿನ್ನೆ ನಡೆದ ಬೆಂಕಿ ಘಟನೆಯಲ್ಲಿ ನಮ್ಮಣ್ಣನಿಗೆ ಗಾಯವಾಗಿದೆ. ಜೀವಕ್ಕೆ ಹಾನಿಯಾಗಿದ್ದರೆ ಯಾರು ಹೊಣೆ? ಕಾರ್ಖಾನೆಯವರು ಹೇಳಿದ ದರ ಒಪ್ಪಿಕೊಂಡೇ ಕಬ್ಬು ತಂದಿದ್ದೆವು. ಟ್ರ್ಯಾಕ್ಟರ್‌ಗಳನ್ನು ಸುಡುವುದರಿಂದ ಯಾರಿಗೆ ಲಾಭ ಎನ್ನುವುದನ್ನು ಸುಟ್ಟವರು ಯೋಚಿಸಬೇಕು’ ಎಂದು ಮುನಿಹಾಳದ ಸಿದ್ದಾರೂಢ ಹೇಳಿದರು.

‘ಕಲ್ಲು ತೂರಾಟ ಆರಂಭವಾಗಿದ್ದರಿಂದ ಜೀವ ಉಳಿಸಿಕೊಳ್ಳಲು ಕಬ್ಬು ಹೇರಿದ್ದ ಟ್ರ್ಯಾಕ್ಟರ್‌ಗಳನ್ನು ಬಿಟ್ಟು ಓಡಿ ಹೋದೆವು. ಕಬ್ಬು ಕಟಾವು ಗ್ಯಾಂಗ್‌ನವರಿಗೆ ₹70 ಲಕ್ಷ ಮುಂಗಡ ನೀಡಲಾಗಿದೆ. ವಿಳಂಬವಾಗಿ ಅವರು ಹೊರಟು ಹೋದರೆ ಏನು ಮಾಡುವುದು. ಸುಟ್ಟಿರುವ ಟ್ರ್ಯಾಕ್ಟರ್ ದುರಸ್ತಿ ಹೇಗೆ ಮಾಡಿಸುವುದು ತಿಳಿಯುತ್ತಿಲ್ಲ’ ಎಂದು ಹಂದಿಗುಂದದ ಶ್ರೀಶೈಲ ಚೌಗಲಾ ತಿಳಿಸಿದರು.

‘₹8.50 ಲಕ್ಷ ಸಾಲ ಮಾಡಿ ಟ್ರ್ಯಾಕ್ಟರ್ ತಂದಿದ್ದೇನೆ. ಕಣ್ಮುಂದೆಯೇ ಆ ವಾಹನಕ್ಕೆ ಬೆಂಕಿ ಹಚ್ಚಿದ್ದಾರೆ. ಟೈರ್ ಸುಟ್ಟಿದೆ. ಕಬ್ಬಿಗೂ ಬೆಂಕಿ ತಗುಲಿದೆ’ ಎಂದು ಮಾಹಿತಿ ನೀಡಿದರು.

ಮುಖ್ಯಾಂಶಗಳು

- ಶೇ30ರಷ್ಟು ಇಳುವರಿ ಕುಸಿತ
- ಸಾಲ ಮಾಡಿ ಟ್ರ್ಯಾಕ್ಟರ್ ಖರೀದಿ
- ಜೀವಹಾನಿಯಾಗಿದ್ದರೆ ಯಾರು ಹೊಣೆ?

ಮಾನವೀಯತೆ ಆಧಾರದ ಮೇಲೆ ಗೋದಾವರಿ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಯೇ ರೈತರ ನಷ್ಟ ಭರಿಸಲು ಮುಂದಾಗಿದೆ

ಶ್ವೇತಾ ಬೀಡಿಕರ, ಉಪವಿಭಾಗಾಧಿಕಾರಿ, ಜಮಖಂಡಿ

ಬಾಗಲಕೋಟೆ ಜಿಲ್ಲೆಯ ಸಮೀರವಾಡಿ ಗೋದಾವರಿ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಬೆಂಕಿಗೆ ಆಹುತಿಯಾಗಿರುವ ಟ್ರ್ಯಾಕ್ಟರ್

ಹಾನಿ ಭರಿಸಲು ಮುಂದಾದ ಸಕ್ಕರೆ ಕಾರ್ಖಾನೆ

ಜಿಲ್ಲೆಯ ಸಮೀರವಾಡಿ ಗೋದಾವರಿ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಬೆಂಕಿಯಿಂದ ಹಾನಿಯಾಗಿದ್ದ ವಾಹನಗಳು ಹಾಗೂ ಕಬ್ಬಿನ ಹಾನಿಯನ್ನು ಭರಿಸಲು ಗೋದಾವರಿ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿ ಮುಂದಾಗಿದೆ.

ಸಾರಿಗೆ ಇಲಾಖೆ ಪ್ರಕಾರ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಸೇರಿ 42 ವಾಹನಗಳಿಗೆ ಬೆಂಕಿ ತಗಲಿದ್ದು, ₹25.68 ಲಕ್ಷ ಹಾನಿಯಾಗಿದೆ.

ಕೃಷಿ ಇಲಾಖೆ ಪ್ರಕಾರ 96 ಟ್ರೇಲರ್‌ಗಳಲ್ಲಿದ್ದ 1,003 ಟನ್ ಕಬ್ಬು ಸುಟ್ಟಿದೆ. ಇದರಿಂದ ₹34.08 ಲಕ್ಷ ಹಾನಿಯಾಗಿದೆ ಎಂದು ವರದಿ ಸಲ್ಲಿಕೆಯಾಗಿದೆ

ತಹಶೀಲ್ದಾರ್ ಆದ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಮಕ್ಕಳ ದಿನಾಚರಣೆ ಅಂಗವಾಗಿ ಬಳ್ಳಾರಿ ಜಿಲ್ಲೆಯ ಕುರುಗೋಡಿನಲ್ಲಿ ಶುಕ್ರವಾರ ಇಬ್ಬರು ವಿದ್ಯಾರ್ಥಿಗಳು ದಿನದ ಮಟ್ಟಿಗೆ ತಹಶೀಲ್ದಾರ್‌ರಾಗಿ ಕಾರ್ಯನಿರ್ವಹಿಸಿದರು.

ಕುರುಗೋಡು ತಾಲ್ಲೂಕಿನ ಗುತ್ತಿಗನೂರು ಸರ್ಕಾರಿ ಪ್ರೌಢಶಾಲೆಯ 9ನೇ ತರಗತಿಯ ವಿದ್ಯಾರ್ಥಿ ಸಾಜೀದ್, ಗೆಣಿಕೆಹಾಳು ಸರ್ಕಾರಿ ಪೌಢಶಾಲೆಯ ವಿದ್ಯಾರ್ಥಿನಿ ಗೌಸಿಯಾ ಬೇಗಂ ತಹಶೀಲ್ದಾರ್ ರಾಗಿ ಕಾರ್ಯ ನಿರ್ವಹಿಸಿದರು. ಪರೀಕ್ಷೆಗಳಲ್ಲಿ ಇಬ್ಬರೂ ಹೆಚ್ಚಿನ ಅಂಕಗಳನ್ನು ಗಳಿಸಿದ್ದರಿಂದ ಅವರಿಗೆ ಈ ಅವಕಾಶ ಕಲ್ಪಿಸಲಾಗಿತ್ತು.

ಇಬ್ಬರೂ ವಿದ್ಯಾರ್ಥಿಗಳು, ಅಧಿಕಾರಿಗಳ ಸಭೆ ನಡೆಸಿದರು. ಕಡತ ಪರಿಶೀಲನೆ ಜೊತೆಗೆ 371 ಜೆ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ಬಗ್ಗೆ ಮಾಹಿತಿ ಪಡೆದರು. ನಂತರ ಗ್ರಾಮಗಳಿಗೂ ಭೇಟಿ ನೀಡಿದರು.

‘ತಹಶೀಲ್ದಾರ್‌ರಾಗಿದ್ದು ತುಂಬಾ ಖುಷಿ ಕೊಟ್ಟಿತು. ತಹಶೀಲ್ದಾರ್ ಹುದ್ದೆಗೇರಿದರೆ, ಬಡವರಿಗೆ ಸಹಾಯ ಮಾಡಬಹುದು ಎಂಬುದು ಗೊತ್ತಾಯಿತು’ ಎಂದು ಸಾಜಿದ್ ಮತ್ತು ಗೌಸಿಯಾ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮನೋಬಲ ವೃದ್ಧಿಸಲು, ನಾಯಕತ್ವಗುಣ ಬೆಳೆಸಲು ಮತ್ತು ಪ್ರತಿಭೆ ಪ್ರೋತ್ಸಾಹಿಸಲು ಮಕ್ಕಳಿಗೆ ಒಂದು ದಿನದ ಮಟ್ಟಿಗೆ ತಹಶೀಲ್ದಾರ್ ಆಗಲು ಅವಕಾಶ ನೀಡಲಾಯಿತು’ ಎಂದು ತಹಶೀಲ್ದಾರ್ ನರಸಪ್ಪ ತಿಳಿಸಿದರು.



ದಿನದ ಮಟ್ಟಿಗೆ ತಹಶೀಲ್ದಾರ್ ಆಗಿದ್ದ ಕುರುಗೋಡು ತಾಲ್ಲೂಕಿನ ಗುತ್ತಿಗನೂರು ಸರ್ಕಾರಿ ಪೌಢಶಾಲೆಯ ವಿದ್ಯಾರ್ಥಿ ಸಾಜೀದ್ ಮತ್ತು ಗೆಣಿಕೆಹಾಳು ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಗೌಸಿಯಾ ಬೇಗಂ ಶುಕ್ರವಾರ ತಾಲ್ಲೂಕು ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಿದರು. ತಹಶೀಲ್ದಾರ್ ನರಸಪ್ಪ ಇದ್ದರು

ಚುಟುಕು ಸುದ್ದಿ

ಪಿಜಿ ವೈದ್ಯಕೀಯ: ಅರ್ಜಿ ಸಲ್ಲಿಕೆಗೆ ನಾಳೆ ಕೊನೆಯ ದಿನ

ಬೆಂಗಳೂರು: ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳಿಗೆ (ಎಂ.ಡಿ, ಎಂ.ಎಸ್) ನೋಂದಣಿ ಮಾಡಲು ಅರ್ಹ ಸೇವಾ ನಿರತ ಅಭ್ಯರ್ಥಿಗಳಿಗೆ ಪೋರ್ಟಲ್ ತೆರೆಯಲಾಗಿದ್ದು, ಆನ್‌ಲೈನ್ ಮೂಲಕ ನೋಂದಾಯಿಸಿಕೊಂಡು ನ.16ರ ಒಳಗೆ ಅರ್ಜಿ ಸಲ್ಲಿಸಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಹೇಳಿದೆ. ಪಿಜಿನೀಟ್-2025ರಲ್ಲಿ ನಿಗದಿ ಪಡಿಸಿರುವ ಕನಿಷ್ಠ ಪರ್ಸೆಂಟೈಲ್ ಅಂಕ ಅಥವಾ ಅದಕ್ಕಿಂತ ಹೆಚ್ಚು ಅಂಕ ಪಡೆದಿರುವ ಅಭ್ಯರ್ಥಿಗಳು ನೋಂದಣಿಗೆ ಅರ್ಹರು. ದಾಖಲೆಗಳ ಪರಿಶೀಲನೆಗೆ ನ.17ರಂದು (ಬೆ.11ರಿಂದ ಮ.2) ಕೆಇಎ ಕಚೇರಿಗೆ ಮೂಲ ದಾಖಲೆಗಳೊಂದಿಗೆ ಹಾಜರಾಗಬೇಕು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಮಾಹಿತಿ ನೀಡಿದ್ದಾರೆ.

ಪಿಜಿಸಿಇಟಿ:ಎಂ.ಬಿ.ಎ, ಎಂ.ಸಿ.ಎ, ಎಂ.ಇ, ಎಂ.ಟೆಕ್ ಮತ್ತು ಎಂ.ಆರ್ಕ್ ಕೋರ್ಸ್‌ಗಳ ಪ್ರವೇಶಕ್ಕೆ ಮೂರನೇ ಹಾಗೂ ಅಂತಿಮ ಸುತ್ತಿನಲ್ಲಿ ಸೀಟು ಹಂಚಿಕೆಯಾದ ಅಭ್ಯರ್ಥಿಗಳಿಗೆ ಶುಲ್ಕ ಪಾವತಿ ಹಾಗೂ ಸೀಟು ಖಾತರಿ ಚೀಟಿ ಡೌನ್‌ಲೋಡ್ ಮಾಡಿಕೊಳ್ಳಲು ನ.15ರಂದು ಮಧ್ಯಾಹ್ನ 3 ಗಂಟೆವರೆಗೆ ವಿಸ್ತರಿಸಲಾಗಿದೆ. ಅದೇ ದಿನ ಸಂಜೆ 5.30ರೊಳಗೆ ಕಾಲೇಜಿಗೆ ಪ್ರವೇಶ ಪಡೆಯಬೇಕು ಎಂದಿದ್ದಾರೆ.

ಚಿಕಿತ್ಸೆಗೆ ಸ್ಪಂದಿಸದೆ ಎಸ್‌ಡಿಎ ಸಾವು

ಯಾದಗಿರಿ: ಹಳೆಯ ವೈಷಮ್ಯಕ್ಕೆ ದುಷ್ಕರ್ಮಿಗಳ ದಾಳಿಯಿಂದ ಗಂಭೀರವಾಗಿ ಗಾಯಗೊಂಡಿದ್ದ ಸಮಾಜ ಕಲ್ಯಾಣ ಇಲಾಖೆಯ ದ್ವಿತೀಯ ದರ್ಜೆ ಸಹಾಯಕಿ (ಎಸ್‌ಡಿಎ) ಅಂಜಲಿ ಗಿರೀಶ ಕಂಬಾನೂರ ಅವರು ಹೈದರಾಬಾದ್‌ನ ಆಸ್ಪತ್ರೆಯಲ್ಲಿ ಶುಕ್ರವಾರ ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಕಲಬುರಗಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಹೈದರಾಬಾದ್‌ನ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರೂ ಚಿಕಿತ್ಸೆಗೆ ಸ್ಪಂದಿಸದೆ ಮೃತರಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ. ಅಂಜಲಿ ಅವರ ಮೇಲೆ ಹಲ್ಲೆ ಮಾಡಿದ್ದ ಆರೋಪದಡಿ ದತ್ತಾತ್ರೇಯ, ಯಲ್ಲಪ್ಪ, ಜಗದೀಶ ಮತ್ತು ಕಾಶಿನಾಥ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ನಿಧನ ವಾರ್ತೆ

ಭಾವುರಾಯ ಪತ್ತಾರ್



ಬೆಂಗಳೂರು: ‘ಪ್ರಜಾವಾಣಿ’ಯ ಹಿರಿಯ ಕಲಾವಿದ ಭಾವುರಾಯ ಪತ್ತಾರ್ (57) ಅವರು ಶುಕ್ರವಾರ ನಿಧನರಾಗಿದ್ದಾರೆ.

ಶೇಷಾದ್ರಿಪುರದಲ್ಲಿ ವಾಸವಾಗಿದ್ದ ಅವರು, ಕೆಲ ದಿನಗಳಿಂದ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ನಗರದ ಸೇಂಟ್ ಮಾರ್ಥಾಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು, ಶುಕ್ರವಾರ ಬೆಳಿಗ್ಗೆ 6.30ಕ್ಕೆ ಮೃತಪಟ್ಟಿದ್ದಾರೆ. ಅವರಿಗೆ ಪತ್ನಿ ಮತ್ತು ಪುತ್ರಿ ಇದ್ದಾರೆ.

ಶನಿವಾರ ಮಧ್ಯಾಹ್ನ 1 ಗಂಟೆಗೆ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

25 ವರ್ಷಗಳಿಂದ ಮೂರು ಪ್ರಮುಖ ಪತ್ರಿಕೆಗಳಲ್ಲಿ ಕಲಾವಿದರಾಗಿ ಕಾರ್ಯ ನಿರ್ವಹಿಸಿದ್ದರು.

‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ನಲ್ಲಿ 21 ವರ್ಷ ಕಾರ್ಯ ನಿರ್ವಹಿಸಿದ್ದಾರೆ. ಇದಕ್ಕೂ ಮೊದಲು ‘ವಿಜಯ ಕರ್ನಾಟಕ’ ಪತ್ರಿಕೆಯಲ್ಲಿ ಕಾರ್ಯನಿರ್ವಹಿಸಿದ್ದರು. ಭಾವು ಪತ್ತಾರ ಅವರು ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಬರಡೋಲ್ ಗ್ರಾಮದವರು.

ಪುರಸಭಾ ಕಾರ್ಯಾಲಯ, ಹೂವಿನಹಡಗಲಿ, ವಿಜಯನಗರಜಿಲ್ಲೆ. ದೂರವಾಣಿ ಸಂ:08399-240237 ಇ-ಮೇಲ್: ka.hoovinahadagalli.tmc@gmail.com

Office of the Town Municipal Council, Hoovinahadagali , Dist, Vijayanagar Phone : 08399-240237 ವೆಬ್ ಸೈಟ್: hoovinahadagalitown.mrc.gov.in

ಕ್ರ.ಸಂ:ಪುಸ:ಹೂಹ:/ಆರೋಗ್ಯ/ಸಿಆರ್/1/2025-26 ದಿನಾಂಕ: 14/11/2025

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಹೂವಿನಹಡಗಲಿ ಪುರಸಭೆವತಿಯಿಂದ ಈ ಕೆಳಗಿನ ಇಂಡೆಂಟ್‌ಗಳ ಟೆಂಡರನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ತಿದ್ದುಪಡಿ ನಿಯಮಗಳು 2001ರ ಅನ್ವಯ ಹಾಗೂ ಸ್ಟ್ಯಾಂಡರ್ಡ್ ಬಿಡ್ ಟೆಂಡರ್ ಡಾಕ್ಯುಮೆಂಟ್ ನಿಯಾಮವಳಿಯಂತೆ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದ್ದು ಆಸಕ್ತಿಯುಳ್ಳ ಅರ್ಹ ನೋಂದಾಯಿತ ಗುತ್ತಿಗೆದಾರರು, ಸರಬರಾಜುದಾರರು ನಿಬಂಧನೆಗಳನ್ನೊಳಗೊಂಡ ದಸ್ತಾವೇಜುಗಳನ್ನು ಮತ್ತು ವಿವರಗಳನ್ನು https://kppp.karnataka.gov.in/ನಿಂದ ಡೌನ್‌ಲೋಡ ಮಾಡಿಕೊಳ್ಳಬಹುದಾಗಿದೆ. ಮತ್ತು

ಕ್ರ.ಸಂ	ಕಾಮಗಾರಿ ವಿವರ (ರೂ.ಗಳಲ್ಲಿ)	ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ ಮೊತ್ತ	ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ
1.	DMA/2025-26/SE6662	69.61	1,39,220.00	ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28/11/2025 ಸಾಯಂಕಾಲ 5.30 ಗಂಟೆಯವರಗೆ ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01/12/2025 ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 02/12/2025

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡಿಯಬಹುದಾಗಿದೆ.

ಸಹಿ/- ಶ್ರೀ ಹೆಚ್. ಇಮಾಮ್ ಸಾಹೇಬ್, ಮುಖ್ಯಾಧಿಕಾರಿಗಳು, ಪುರಸಭೆ, ಹೂವಿನಹಡಗಲಿ
ಸಹಿ/- ಶ್ರೀ ಚಿದಾನಂದ ಗುರುಸ್ವಾಮಿ, ಆಡಳಿತಾಧಿಕಾರಿಗಳು, ಪುರಸಭೆ, ಹೂವಿನಹಡಗಲಿ.

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ, (ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001.

ಸಂಖ್ಯೆ. SPLOCA/AUC(2)/CR/28/2025-26 ದಿನಾಂಕ: 13-11-2025

ಪ್ರಕಟಣೆ

ಈ ಪ್ರಾಧಿಕಾರದ ವತಿಯಿಂದ ಕೆ.ಪಿ.ಐ.ಡಿ ಕಾಯ್ದೆ ಅನ್ವಯ ವಶಪಡಿಸಿಕೊಂಡಿರುವ ಸ್ಥಿರಾಸ್ತಿ ಸ್ವತ್ತುಗಳನ್ನು ಇ-ಹರಾಜು ಸಂಬಂಧ ಈ ಕಛೇರಿಯ ಪ್ರಕಟಣೆ ಸಂ: SPLOCA/AUC(2)/CR/28/2025-26 ದಿನಾಂಕ:29-10-2025 ರಂತೆ ಹೊರಡಿಸಲಾಗಿತ್ತು ಹಾಗೂ ದಿನಾಂಕ: 07-11-2025ರ ಹೊಸ ದಿಗಂತ ಮತ್ತು Times Of India ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗಿರುತ್ತದೆ. ಸದರಿ ಇ-ಹರಾಜು ಪ್ರಕಟಣೆಯನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಿದೆ.

ಸಹಿ/- ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು.
DIPR/CP/3800/Zen/2025-26

ಕರ್ನಾಟಕ ಸರ್ಕಾರ
ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ -585401.

ಸಂಖ್ಯೆ:ಆ.ಅ/ಕ.ಪ.ಪ.ಮೀ.ವಿ.ವಿ/ಟೆ.ನಂ.127-ಕಾಲ-3/ಕಾಮಗಾರಿ/2025-26 ದಿನಾಂಕ:12.11.2025

ಟೆಂಡರ ಪ್ರಕಟಣೆ (ಇ-ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

1) ಕಾಮಗಾರಿ ವಿವರ Construction of Various essential buildings for LFC / LPT / VPP/ VCC Departments at Veterinary College Puttur, 2) ಕಾಮಗಾರಿ ಅಂದಾಜು ಮೊತ್ತ Rs. 4,33,75,186.00 3) ಗುತ್ತಿಗೆದಾರರ ಅರ್ಹತೆ ವಿವರ e-portal ನಲ್ಲಿ ನಮೂದಿಸಿದಂತೆ, 4) ಕಾಮಗಾರಿ ಟೆಂಡರ ಮೊತ್ತದ ವಿವರ Rs.4,33,75,186.00, 5) ಟೆಂಡರ ಅರ್ಜಿಯ ಬೆಲೆ ಮತ್ತುಇ.ಎಂ.ಡಿ ಮೊತ್ತದ ವಿವರ e-portal ನಲ್ಲಿ ನಮೂದಿಸಿದಂತೆ, 6) ಪೂರ್ವ ಬಿಡ್ ಸಭೆಯ ದಿನಾಂಕ 24.11.2025 at 11.00 AM, 7) ಟೆಂಡರ ಫಾರಂ ಸಲ್ಲಿಸಲು ಅಂತಿಮ ದಿನಾಂಕ 12.12.2025 up to 5.00 PM, 8) ತಾಂತ್ರಿಕ ಬಿಡ (ದ್ವಿ ಲಕೋಟೆ ಟೆಂಡರ) ತೆರೆಯುವ ದಿನಾಂಕ 15.12.2025 at 11.30 AM, 9) ಫೈನಾನ್ಷಿಯಲ ಬಿಡ ಟೆಂಡರ ತೆರೆಯುವ ದಿನಾಂಕ 18.12.2025 at 11.30. AM, 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ, ವಿಳಾಸ, ದೂರವಾಣಿ ಸಂಖ್ಯೆ.ಆಸ್ತಿ ಅಧಿಕಾರಿಗಳ ಕಛೇರಿ, ಕಪಪಮೀವಿವಿ, ನಂದಿನಗರ, ಬೀದರ. 08482-245446, 11) ಅಂತರ್ಜಾಲ ತಾಣದ ವಿಳಾಸ e-procurement portal- https://kppp.karnataka.gov.in

ಸಹಿ/- ಆಸ್ತಿ ಅಧಿಕಾರಿಗಳು ಕಪಪಮೀವಿವಿ, ಬೀದರ.
ವಾ.ಸಾ.ಸಂ.ಇ/ಬೀದರ/237/ಕೆಎಸ್ಎಂಸಿ&ಎ/2025-26

ಕರ್ನಾಟಕ ಸರಕಾರ
ಪುರಸಭೆ ಕಾರ್ಯಾಲಯ, ಕೆಂಭಾವಿ
ತಾ: ಸುರಪುರ ಜಿ: ಯಾದಗಿರಿ.
Website:www.kembavitown.gov.mcr.in
ವೆಬ್ ಸೈಟ್ ವಿಳಾಸ: www.kembavi@yahoo.gov.mcr.in

ಕ್ರ.ಸಂ.:ಪು.ಸ.ಕೆ/ಎಸ್‌ಡ್ಬ್ಲ್ಯೂಎಂ/ಹೊ.ಗು/ಸಿಬ್ಬಂದಿ/5/2025-26 ದಿನಾಂಕ:14.11.2025

ಟೆಂಡರ್ ಪ್ರಕಟಣೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟಾಂಡರ್ ಟೆಂಡರ್ ಡಾಕ್ಯೂಮೆಂಟ್ ನ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ, ಈ ಕೆಳಗಡೆ ಸಹಿ ಮಾಡಿರುವವರು ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಕರೆದಿರುವ ಈ ಕೆಳಕಂಡ ಕಾಮಗರಿಗೆ ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ (Technical qualification criteria) ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳನ್ನು ಈ ಕಛೇರಿಯ ಆರೋಗ್ಯ ಶಾಖೆಯಿಂದ ಮಾಹಿತಿಯನ್ನು ಪಡೆಯಬಹುದು.

2025-26 ನೇ ಸಾಲಿನ ಪುರಸಭಾ ನಿಧಿ: ಕಾಮಗಾರಿ ವಿವರ: Supplying of Drivers, Sanitary supervisor, Helper/Assistants/Watchmen. ಟೆಂಡರಿಗಿಟ್ಟ ಮೊತ್ತ (ಲಕ್ಷಗಳಲ್ಲಿ): 58.66. ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) 293300. ಟೆಂಡರ್ ಫಾರಂ ಬೆಲೆ (ರೂ. ಗಳಲ್ಲಿ): Refer e-procure mental portal. ಇಂಡೆಂಟ್ ಸಂಖ್ಯೆ:DMA/2025- 26/SE6644

ಇ-ಪ್ರೊಕ್ಯೂರ್ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ: 1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 28.11.2025 ಸಂಜೆ 5.30 ಘಂಟೆ. 2) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:01.12.2025 ಬೆಳಗ್ಗೆ 11.30 ಘಂಟೆ. 3) ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ:04.12.2025 ಬೆಳಗ್ಗೆ 11.30 ಘಂಟೆ.

ಸಹಿ/- ಮುಖ್ಯಾಧಿಕಾರಿ ಪುರಸಭೆ ಕೆಂಭಾವಿ
ವಾ.ಸಾ.ಸಂ.ಇ/ಯಾದಗಿರಿ/387/ಕೆ.ಎಸ್.ಎಂ.ಸಿ.&ಎ/2025-26

ಮಂಗಳೂರು ಮಹಾನಗರಪಾಲಿಕೆ
DMA/2025-26/WORK INDENT NO.47379, 47086 ದಿನಾಂಕ: 13.11.2025
ಟೆಂಡರ್ ಪ್ರಕಟಣೆ E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಸಾಮಾನ್ಯ ನಿಧಿಯಲ್ಲಿ ಈ ಕಛೇರಿ ಟೆಂಡರ್ ಸಂಖ್ಯೆ: DMA/2025-26/WORK INDENT NO.47379, 47086 ಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. 2 ಕಾಮಗಾರಿಗಳ ಒಟ್ಟು ಮೊತ್ತ ರೂಪಾಯಿ 196.22 ಲಕ್ಷಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 01-12-2025 ಅಪರಾಹ್ನ 4.00 ಗಂಟೆ. ಹೆಚ್ಚಿನ ವಿವರವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ kppp.karnataka.gov.in ಮುಖಾಂತರ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾನಗರಪಾಲಿಕೆ, ಮಂಗಳೂರು
DIPR/DK/KSMCA/1082/25-26 dt: 14.11.2025

ಕರ್ನಾಟಕ ಸರ್ಕಾರ । ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ಕಾಳಿ ಹುಲಿ ಸಂರಕ್ಷಿತ ಪ್ರದೇಶ, ದಾಂಡೇಲಿ-581325
Ph: 08284-231585 / FAX : 08284-232981 E-mail: directordatr@gmail.com
ಸಂಖ್ಯೆ: ಎ3/ಟೆಂಡರ್/ಸಿಆರ್-/2025-26 ದಿನಾಂಕ: 10-11-2025

ಪತ್ರಿಕಾ ಪ್ರಕಟಣೆ

ಕಾಳಿ ಹುಲಿ ಸಂರಕ್ಷಿತ ಪ್ರದೇಶ, ದಾಂಡೇಲಿ ವಿಭಾಗದ ವ್ಯಾಪ್ತಿಗೊಳಪಡುವ ವಲಯಗಳಲ್ಲಿ ವಿಶ್ವ ಬ್ಯಾಂಕ್ ನೆರವಿನ K-shore ಯೋಜನೆಯಡಿ ಅರಣ್ಯೇತರ ಕಾಮಗಾರಿ ಹಾಗೂ ಇತರೆ ಕಾಮಗಾರಿಗಳನ್ನು ಕೈಗೊಳ್ಳಲು ಪಾರದರ್ಶಕ ನಿಯಮಗಳನುಸಾರ ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ (http://kppp.karnataka.gov.in), ಟೆಂಡರನ್ನು ಆಹ್ವಾನಿಸಲಾಗಿದ್ದು ಟೆಂಡರಗಳನ್ನು ದಿನಾಂಕ: 10-12-2025 ಅಪರಾಹ್ನ 4.00 ಗಂಟೆ ಆಗಿದ್ದು, ಹೆಚ್ಚಿನ ಮಾಹಿತಿಗಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ಕಾಳಿ ಹುಲಿ ಸಂರಕ್ಷಿತ ಪ್ರದೇಶ, ದಾಂಡೇಲಿರವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 08284-231585).

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು ಕಾಳಿ ಹುಲಿ ಸಂರಕ್ಷಿತ ಪ್ರದೇಶ, ದಾಂಡೇಲಿ
DIPR/KWR/KSMCA/702/25-26 dt.13.11.25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲಮಂಡಳಿಯ ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.
ಮುಖ್ಯ ಅಭಿಯಂತರರ ಕಚೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560009

ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
(ಪೂರ್ವ)-1	ಬೆಂಜಮಂ/ಕಾನಿಅ(ಪೂರ್ವ)-1/ ಯೋ.ವಿ./3511/2025-26 ದಿನಾಂಕ: 12.11.2025	ರೂ.74,39,953/- / ರೂ.1,48,800/-	24.11.2025 ಸಂಜೆ 4:00 ಗಂಟೆಯವರೆಗೆ	26.11.2025ರ ಸಂಜೆ 5:00 ಗಂಟೆಯ ನಂತರ

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ)-1
ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/3808/SSC/2025-26

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
‘ಜಲಭವನ’, ನಂ. 6, 1ನೇ ಘಟ್ಟ, 1ನೇ ಹಂತ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯರಸ್ತೆ, ಬೆಂಗಳೂರು-560029.
ದೂ: 080-41106508 ಇಮೇಲ್: cekwbbng@gmail.com ವೆಬ್‌ಸೈಟ್: https://kppp.karnataka.gov.in

ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ (ಕೆಪಿಪಿಪಿ ಮುಖಾಂತರ ಮಾತ್ರ)

1) ಸಂಖ್ಯೆ: No.KWB/TEC/CE(B)/ Gowribidanur-Nagarothana-4/1187/ 2025-26, Dtd: 14.11.2025.
ಕಾಮಗಾರಿಯ ಹೆಸರು: ಗೌರಿಬಿದನೂರು ನಗರದಲ್ಲಿ ಜಿಲ್ಲಾಧಿಕಾರಿಗಳ ಠೇವಣಿ ಕೊಡುಗೆ ಕಾಮಗಾರಿಯಡಿಯಲ್ಲಿ ನಗರೋತ್ಥಾನ-4 ಅನುದಾನದಲ್ಲಿ ಹಳೆಯ ತಾಲ್ಲೂಕು ಕಚೇರಿ ಹತ್ತಿರವಿರುವ ಹಾಲಿ 5.00 ಲಕ್ಷ ಲೀಟರ್ ಸಾಮರ್ಥ್ಯದ 12 ಮೀಟರ್ ಎತ್ತರದ ಆರ್‌ಸಿಸಿ ಮೇಲ್ಮಟ್ಟದ ಜಲಸಂಗ್ರಹಗಾರ ಕೆಡಹುವುದು ಮತ್ತು ಕೋಟೆ ಪ್ರದೇಶ ಮತ್ತು ಹಳೆಯ ತಾಲ್ಲೂಕು ಕಚೇರಿ ಬಳಿ ಹೊಸದಾಗಿ 5 ಲಕ್ಷ ಲೀಟರ್ ಸಾಮರ್ಥ್ಯದ 15 ಮೀಟರ್ ಎತ್ತರದ ಮೇಲ್ಮಟ್ಟದ ಜಲಸಂಗ್ರಹಗಾರ ನಿರ್ಮಿಸುವ ಮತ್ತು ಲಿಂಕಿಂಗ್ ಕಾಮಗಾರಿಗಳು-ಲಮ್‌ಸಮ್ ಆಧಾರದ ಮೇಲೆ (No variation). ಇಂಡೆಂಟ್ ನಂ: KUWSDB/2025-26/ WS/WORK_INDENT427/CALL-2.
2) ಸಂಖ್ಯೆ: No.KWB/TEC/CE(B)/Chitradurga DC works/1188/2025-26, Dtd: 14.11.2025.
ಕಾಮಗಾರಿಯ ಹೆಸರು: ಚಿತ್ರದುರ್ಗ ನಗರದಲ್ಲಿ ಐಯುಡಿಪಿ ಬಡಾವಣೆಯಲ್ಲಿ ಜಿಲ್ಲಾಧಿಕಾರಿಗಳ ಠೇವಣಿ ಕೊಡುಗೆ ಕಾಮಗಾರಿಯಡಿಯಲ್ಲಿ 5.00 ಲಕ್ಷ ಲೀಟರ್ ಸಾಮರ್ಥ್ಯದ 12 ಮೀಟರ್ ಎತ್ತರದ ಮೇಲ್ಮಟ್ಟದ ಜಲಸಂಗ್ರಹಗಾರ ನಿರ್ಮಾಣ, ಏರುಕೊಳವೆ ಮಾರ್ಗ ಮತ್ತು ವಿತರಣಾ ಕೊಳವೆಗಳನ್ನು ಅಳವಡಿಸುವ ಕಾಮಗಾರಿ-ಲಮ್‌ಸಮ್ ಆಧಾರದ ಮೇಲೆ (No variation). ಇಂಡೆಂಟ್ ನಂ: KUWSDB/2025-26/WS/WORK_INDENT426/CALL-2.
ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ : https://kppp.karnataka.gov.in ನಲ್ಲಿ ಸಂಪರ್ಕಿಸಬಹುದು.

ಸಹಿ/- ಮುಖ್ಯ ಅಭಿಯಂತರರು(ಬೆಂ), ಕನನೀಸ & ಒಚ ಮಂಡಳಿ, ಬೆಂಗಳೂರು
DIPR/CP/YC/3801/2025-26

ನಗರಸಭಾ ಕಾರ್ಯಾಲಯ, ಸಾಗರ-577401.
Phone: 08183-226021 Web: www.sagaracity.mrc.gov.in
Email: itstaff_ulb_sagar@yahoo.com
ನಂ ನಸಸಾ:ಆವಿ.ಸಿ.ಆರ್.ನಂ:/13/2025-26 ದಿನಾಂಕ: 10-11-2025

ಟೆಂಡರ್ ಪ್ರಕಟಣೆ (Kppp ಮುಖಾಂತರ)

ಸಾಗರ ನಗರಸಭಾ ವ್ಯಾಪ್ತಿಯಲ್ಲಿನ ಪೌರಕಾರ್ಮಿಕರ ಆರೋಗ್ಯ ತಪಾಸಣೆ ಹಾಗೂ ಮಾನವ ಸಂಪನ್ಮೂಲ ಹಾಗೂ ಬಾಡಿಗೆ ವಾಹನ ಒದಗಿಸುವ ಬಗ್ಗೆ ಈ ಕೆಳಕಂಡಂತೆ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು ಸದರಿ ಟೆಂಡರ್ ನಲ್ಲಿ ಭಾಗವಹಿಸಲು ಕೋರಿದೆ. ದಿನಾಂಕ: 24/11/2025 ರ ಸಂಜೆ 5.30 ಘಂಟೆ ಬಿಡ್ ಸಲ್ಲಿಕೆಗೆ ಅಂತಿಮ ದಿನವಾಗಿದ್ದು, ದಿನಾಂಕ: 26/11/2025 ರ ಬೆಳಿಗ್ಗೆ 11:30 ಕ್ಕೆ ಬಿಡ್ ತೆರೆಯಲಾಗುವುದು. ಸಾಧ್ಯವಾಗದಿದ್ದಲ್ಲಿ ಮುಂದಿನ ದಿನಾಂಕದಂದು ತೆರೆಯಲಾಗುವುದು.ನಿಗದಿತ ಮತ್ತು ಅನ್ವಯಿಸುವ ಷರತ್ತುಗಳ ಬಗ್ಗೆ Kppp ವೆಬ್ ಸೈಟ್ ನಲ್ಲಿ ಪರಿಶೀಲಿಸಿಕೊಳ್ಳಬಹುದಾಗಿದೆ ಹಾಗೂ ಸಾಗರ ನಗರಸಭೆಯ ಆರೋಗ್ಯ ವಿಭಾಗದಲ್ಲಿ ಪಡೆಯಬಹುದಾಗಿದೆ.

ಕ್ರಮ ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. (ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1	DMA/2025-26/SE6602	6,60,000	16,500.00
2	DMA/2025-26/SE6605	40,10,000	1,00,250.00
3	DMA/2025-26/SE6609	36,45,000	91,125.00
4	DMA/2025-26/SE6610	36,45,000	91,125.00
5	DMA/2025-26/SE6619	4,80,000	12,000.00

ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳನ್ನು ವೆಬ್‌ಸೈಟ್ www.Kppp.Karnataka.gov.in ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಗೆ ಸಂಬಂಧಪಟ್ಟಂತೆ ಯಾವುದೇ ತಿದ್ದುಪಡಿ ಹಾಗೂ ಬದಲಾವಣೆಗಳು ಇದ್ದಲ್ಲಿ Kppp ಟೆಂಡರ್ ನಲ್ಲಿ ಪ್ರಚುರ ಪಡಿಸಲಾಗುವುದು.

ಸಹಿ/- ಆಡಳಿತಾಧಿಕಾರಿಗಳು ನಗರಸಭೆ ಸಾಗರ
ಸಹಿ/- ಪೌರಾಯುಕ್ತರು ನಗರಸಭೆ, ಸಾಗರ
ವಾ.ಸಾ.ಸಂ.ಇ/ಕೆಸ್ಎಂಸಿಎ/ಶಿ/25-26/53/11/1230

ಅಡ್ವೊಕೇಟ್ ಜನರಲ್‌ರವರ ಕಚೇರಿ
ಉಚ್ಚ ನ್ಯಾಯಾಲಯ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು-560001, ದೂ: 080-22865200, Email: advgenest@gmail.com
ಸಂಖ್ಯೆ:ADVGEN/2025-26/SE0002 ದಿನಾಂಕ: 14.11.2025

ತಿದ್ದುಪಡಿ ಅಧಿಸೂಚನೆ (ಇ-ಸಂಗ್ರಹಣೆ ಪೋರ್ಟಲ್ ಮೂಲಕ)

ಅಡ್ವೊಕೇಟ್ ಜನರಲ್‌ರವರ ಕಚೇರಿಯಿಂದ ದಿನಾಂಕ: 03.11.2025 ರಂದು ಹೊರಡಿಸಲಾದ ಟೆಂಡರ್ ಸಂಖ್ಯೆ: ADVGEN/2025-26/SE0002 ರಲ್ಲಿ ತಿದ್ದುಪಡಿ ಮಾಡಲಾಗಿದ್ದು, ತಿದ್ದುಪಡಿ ಮಾಹಿತಿಯನ್ನು ಇ-ಸಂಗ್ರಹಣಾ ಪೋರ್ಟಲ್‌ನ ಜಾಲತಾಣ https://kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಮೇಲ್ಕಂಡ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಆಡಳಿತಾಧಿಕಾರಿಗಳು, ಅಡ್ವೊಕೇಟ್ ಜನರಲ್‌ರವರ ಕಚೇರಿ, ಉಚ್ಚ ನ್ಯಾಯಾಲಯ ಕಟ್ಟಡ, ಬೆಂಗಳೂರು.
ವಾಸಾಸಂಇ/ಯುನಿ-ಸಿ.ಪಿ./3797/ಕೆಎಸ್ಎಂಸಿಎ/2025-26

ರಾಜ್ಯ ಚುನಾವಣಾ ಆಯೋಗ, ಕರ್ನಾಟಕ
2ನೇ ಮತ್ತು 3 ನೇ ಮಹಡಿ, ನಂ 16, ಬಳ್ಳಾರಿ ರಸ್ತೆ, ಸದಾಶಿವನಗರ, ಬೆಂಗಳೂರು-560080, ದೂರವಾಣಿ: 080-22205189/93
ಇ-ಮೇಲ್: sec.karnataka@ka.gov.in / karsec@gmail.com
ಸಂ:SECK/ADMN/ETND/3/2025-ADMN ದಿನಾಂಕ: 14.11.2025

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ಕಛೇರಿಯಿಂದ ಹೊರಗುತ್ತಿಗೆ ಮೂಲಕ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಕೆಪಿಪಿ ಪೋರ್ಟಲ್ ಮುಖಾಂತರ ಇ-ಟೆಂಡರ್‌ನ್ನು (ಟೆಂಡರ್ ಸಂಖ್ಯೆ: KSEC/2025-26/SE0003) ಕರೆಯಲಾಗಿದ್ದು, ಇ-ಪೋರ್ಟಲ್ ಮೂಲಕ ಟೆಂಡರನ್ನು ದಿನಾಂಕ 21.11.2025 ರಂದು ಸಂಜೆ 5.30 ರ ಒಳಗೆ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗೆ ಸಂಬಂಧಿಸಿದ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ (https://kppp.karnataka.gov.in) ಪಡೆಯಬಹುದಾಗಿರುತ್ತದೆ ಅಥವಾ ಕಛೇರಿ ವೇಳೆಯಲ್ಲಿ ಆಯೋಗದ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- ಶಾಖಾಧಿಕಾರಿ, ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.
ವಾಸಾಸಂಇ/ವಾಪ್ರ/ಜಿಎ/3807/2025-26

ಮಕ್ಕಳ ರಕ್ಷಣಾ ನಿರ್ದೇಶನಾಲಯ, ಸರ್ಕಾರಿ ಶಿಶುಮಂದಿರ, ಬೆಂಗಳೂರು ನಗರ,
ಡಾ.ಎಂ.ಹೆಚ್.ಮರಿಗೌಡ ರಸ್ತೆ, ಕಿದ್ವಾಯಿ ಆಸ್ಪತ್ರೆ ಪಕ್ಕ, ಬೆಂಗಳೂರು-29
ದೂ.: 8296072869/7349029350 ಇ-ಮೇಲ್: shishu.mandira@yahoo.in
ಸಂಖ್ಯೆ:ಸ.ಶಿ.ಮಂ(ಬೆಂ)/ಮರನಿ/ಸಿಸಿಸಿಐ/ಅಂಬ್ಯೂಲೆನ್ಸ್/ಖ/2025-26 ದಿನಾಂಕ:14.11.2025

ಟೆಂಡರ್ ಪ್ರಕಟಣೆ

Tender No.DCP/2025-26/IND0079
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಬೆಂಗಳೂರು ನಗರ ಜಿಲ್ಲೆಯ ಸರ್ಕಾರಿ ಶಿಶುಮಂದಿರ ಶಿಶುಗೃಹ ಘಟಕ-1, ಶಿಶುಗೃಹ ಘಟಕ-2, ಸರ್ಕಾರಿ ಶಿಶುಮಂದಿರ, ಬೆಂಗಳೂರು, ಸಂಸ್ಥೆಯ ಮಕ್ಕಳ ಉಪಯೋಗಕ್ಕಾಗಿ 07 ಸೀಟರ್ ವ್ಯಾನ್ ಹಾಗೂ ಅಂಬ್ಯೂಲೆನ್ಸ್‌ನ್ನು ಖರೀದಿಸಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿಯಂತೆ https://kppp.karnataka.gov.in ಆನ್‌ಲೈನ್ ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ವಿಳಾಸದಲ್ಲಿ ಸಂಪರ್ಕಿಸಬಹುದು.

ಸಹಿ/- ಅಧೀಕ್ಷಕರು, ಸರ್ಕಾರಿ ಶಿಶು ಮಂದಿರ, ಬೆಂಗಳೂರು
ವಾಸಾಸಂಇ/ಯುನಿ-ಸಿ.ಪಿ/3795/ಕೆಎಸ್ಎಂಸಿಎ/2025-26

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052. ಫೋನ್: 080-22268677/78/79, ಫ್ಯಾಕ್ಸ್: 080-22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in
ನಂ: N/109/2025/1161 ದಿನಾಂಕ: 12.11.2025

ಸಾರ್ವಜನಿಕ ಸೂಚನೆ

ವಿಷಯ: ಮುಕ್ತ ಗ್ರಾಹಕರ ಮೇಲೆ ಹೆಚ್ಚುವರಿ ಸರ್ಚಾರ್ಜ್ ವಿಧಿಸುವ ಪ್ರಸ್ತಾವನೆಯ ಕುರಿತು ಸಾರ್ವಜನಿಕ ವಿಚಾರಣೆಯನ್ನು ಮರು ನಿಗದಿಪಡಿಸಿ, ಆಕ್ಷೇಪಣೆಗಳನ್ನು ಸಲ್ಲಿಸಲು ಸಮಯವನ್ನು ವಿಸ್ತರಿಸಿರುವ ಬಗ್ಗೆ.
ದಿನಾಂಕ: 06.11.2025ರಂದು ಹೊರಡಿಸಲಾದ ಸಾರ್ವಜನಿಕ ಸೂಚನೆಯಲ್ಲಿ ತಿಳಿಸಿರುವಂತೆ ಆಯೋಗವು ಈ ವಿಷಯದ ಕುರಿತು ಸಾರ್ವಜನಿಕ ವಿಚಾರಣೆಯನ್ನು ದಿನಾಂಕ: 02.12.2025 ರಂದು ನಿಗದಿಪಡಿಸಿತ್ತು. ಸದರಿ ಸಾರ್ವಜನಿಕ ವಿಚಾರಣೆಯನ್ನು ದಿನಾಂಕ: 02.12.2025 ಬದಲು ದಿನಾಂಕ: 09.12.2025ರ ಮಧ್ಯಾಹ್ನ 03.00 ಗಂಟೆಗೆ ಮರು ನಿಗದಿಪಡಿಸಲಾಗಿದೆ.
ವರ್ಚುವಲ್ ವಿಚಾರಣೆ ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ವಿಷಯಕ್ಕೆ ಸಂಬಂಧಿಸಿದ ದಿನಾಂಕ: 30.10.2025 ಮತ್ತು ದಿನಾಂಕ: 06.11.2025 ರಂದು ಹೊರಡಿಸಲಾದ ಸಾರ್ವಜನಿಕ ಸೂಚನೆಗಳಲ್ಲಿ ಸೂಚಿಸಿರುವ ಇತರ ಎಲ್ಲಾ ನಿಯಮಗಳು ಮತ್ತು ಷರತ್ತುಗಳು ಅನ್ವಯವಾಗುತ್ತವೆ ಮತ್ತು ಮಾನ್ಯವಾಗಿರುತ್ತವೆ.

ಸಹಿ/- ಕಾರ್ಯದರ್ಶಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
DIPR/CP/3802/2025-26

ಕರ್ನಾಟಕ ಸರ್ಕಾರ (ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರವರ ಕಾರ್ಯಾಲಯ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,ವಿಜಯಪುರ
ದೂರವಾಣಿ ಸಂ:08352-277816, ಫ್ಯಾಕ್ಸ್:08352-277817
ಇ-ಮೇಲ್:zpebjp9@yahoo.co.in
ಸಂಖ್ಯೆ:ಕಾಇಂ/ಪಂ.ರಾ.ಇ.ವಿ/ವಿಜ/ಇಪ್ರಾ/ಟೆಂಡರ್/2025-26/2457 ದಿನಾಂಕ: 12.11.2025

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2023-24 ನೇ ಸಾಲಿನ, 2024-25 ನೇ ಸಾಲಿನ ಹಾಗೂ 2025-26 ನೇ ಸಾಲಿನ 5054 ಮುಖ್ಯ ಮಂತ್ರಿಗಳ ವಿಶೇಷ ಅನುದಾನ, 5054 ಎಸ್.ಸಿ.ಪಿ/ಟಿ.ಎಸ್.ಪಿ. ಅನುದಾನ ಹಾಗೂ ಇತರೇ ಇಲಾಖೆ ಅನುದಾನ ಯೋಜನೆಯಡಿಯಲ್ಲಿ ಸಾಮಾನ್ಯ ಗುತ್ತಿಗೆದಾರರ 8 ಕಾಮಗಾರಿ:(ಇಂಡೆಂಟ ನಂ. RDPR/2025-26/BD/WORK_INDENT 20267, 20263, 20265, 20318, 20320, 20305, 20240 & 16188/Call-3) ಪರಿಶಿಷ್ಟ ಜಾತಿ ಗುತ್ತಿಗೆದಾರರ 1 ಕಾಮಗಾರಿ :(ಇಂಡೆಂಟ ನಂ. RDPR/2025-26/BD/WORK_INDENT 20321) ಪ್ರವರ್ಗ-2(ಎ) ಗುತ್ತಿಗೆದಾರರ 1 ಕಾಮಗಾರಿ : (ಇಂಡೆಂಟ ನಂ. RDPR/2025-26/BD/WORK_INDENT20314) ಹೀಗೆ ಒಟ್ಟು 10 ಕಾಮಗಾರಿಗಳಿಗೆ ರೂ.6.00 ಲಕ್ಷದಿಂದ 60.00 ಲಕ್ಷದವರೆಗೆ ಕೆ.ಡಬ್ಲ್ಯೂ-1,2 ಮತ್ತು 3 ಪ್ರಕಾರ ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ 2457 ದಿನಾಂಕ: 12.11.2025 ರಂತೆ ಕಾಮಗಾರಿಗಳನ್ನು ಇ-ಟೆಂಡರ್‌ನ್ನು ಆಹ್ವಾನಿಸಿದ್ದು. ಕೆ.ಪಿ.ಪಿ ಪ್ರೊಟಲ್ ಮುಖಾಂತರ ಟೆಂಡರ್‌ನ್ನು ಸಲ್ಲಿಸುವ ಕೊನೆಯ ದಿನಾಂಕ: 27.11.2025 ಸಾಯಂಕಾಲ 5.30 ಗಂಟೆಯವರೆಗೆ ಮಾತ್ರ ನಿಗದಿಪಡಿಸಿರುತ್ತದೆ.

ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ www.kppp.karnataka.gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ.
ವಾಸಾಸಂಇ/ವಿಜಯಪುರ/458/ಕೆಎಸ್ಎಂಸಿಎ/2025-26

‘ಪಿಯು ಮಕ್ಕಳಿಗೂ ಬಿಸಿಯೂಟಕ್ಕೆ ಚಿಂತನೆ’

ಮುಂದಿನ ವರ್ಷದಿಂದ ಕರ್ನಾಟಕ ಪಬ್ಲಿಕ್ ಶಾಲೆಯ 11 ಮತ್ತು 12ನೇ ತರಗತಿಗೆ ಸೌಲಭ್ಯ: ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಕರ್ನಾಟಕ ಪಬ್ಲಿಕ್ ಶಾಲೆಯ 11 ಮತ್ತು 12ನೇ ತರಗತಿ ಮಕ್ಕಳಿಗೆ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು. ಪಿಯು ಕಾಲೇಜು ವಿದ್ಯಾರ್ಥಿಗಳಿಗೂ ಸೌಲಭ್ಯ ಒದಗಿಸುವ ಕುರಿತು ಮುಖ್ಯಮಂತ್ರಿ ಜತೆ ಚರ್ಚಿಸಲಾಗುವುದು’ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ವಿಧಾನಸೌಧದಲ್ಲಿ ಶುಕ್ರವಾರ ಆಯೋಜಿಸಿದ್ದ ರಾಜ್ಯಮಟ್ಟದ ಮಕ್ಕಳ ದಿನಾಚರಣೆ ಹಾಗೂ ಪೋಷಕ–ಶಿಕ್ಷಕರ ಸಭೆಯಲ್ಲಿ ನಡೆದ ಸಂವಾದದಲ್ಲಿ ಬೆಳಗಾವಿ ಜಿಲ್ಲೆ ಬೈಲಹೊಂಗಲದ ಸರ್ಕಾರಿ ಪಿಯು ಕಾಲೇಜಿನ ವಿದ್ಯಾರ್ಥಿ ರಾಕೇಶ್ ಪ್ರಶ್ನೆಗೆ ಉತ್ತರಿಸಿದ ಅವರು, ಪಿಯು ಕಾಲೇಜುಗಳಿಗೂ ಮಧ್ಯಾಹ್ನದ ಬಿಸಿಯೂಟ ಒದಗಿಸಬೇಕಿದ್ದರೆ ಬಜೆಟ್‌ನಲ್ಲೇ ಘೋಷಣೆ ಮಾಡಬೇಕು. ಈ ಕುರಿತು ಚರ್ಚಿಸಲಾಗುವುದು ಎಂದರು.

‘ರಾಕೇಶ್ ಹೇಳಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 4ರವರೆಗೆ ತರಗತಿಗಳು ನಡೆಯುತ್ತವೆ. ಮನೆಗಳಿಂದ ಬೆಳಗ್ಗೆ ಬೇಗನೆ ಹೊರಡುತ್ತಾರೆ. ಹಾಗಾಗಿ, ಪಿಯು ಕಾಲೇಜುಗಳಿಗೂ ಮಧ್ಯಾಹ್ನದ ಊಟವನ್ನು ವಿಸ್ತರಿಸಬೇಕು ಎಂಬ ಬೇಡಿಕೆ ಸೂಕ್ತವಾಗಿದೆ. ಮೊದಲು 8ನೇ ತರಗತಿಯವರೆಗೆ ಇದ್ದ ಮೊಟ್ಟೆ ವಿತರಣೆಯನ್ನು 9 ಮತ್ತು 10ನೇ ತರಗತಿಗೆ ವಿಸ್ತರಿಸಿದ್ದೇವೆ. ಮುಂದಿನ ಶೈಕ್ಷಣಿಕ ವರ್ಷದಿಂದ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳ ಎಲ್ಲ ವಿದ್ಯಾರ್ಥಿಗಳಿಗೂ ಮಧ್ಯಾಹ್ನದ ಬಿಸಿಯೂಟ ಜಾರಿಗೆ ಸಿದ್ಧತೆ ಮಾಡಿಕೊಂಡಿದ್ದೇವೆ’ ಎಂದು ಹೇಳಿದರು.

ಮೈಸೂರು ಜಿಲ್ಲೆಯ ಪುಟ್ಟೇಗೌಡನ ಹುಂಡಿಯ ವಿದ್ಯಾರ್ಥಿ ಪಿ.ಟಿ. ಲೋಕೇಶ್ ಹೇಳಿದಂತೆ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಹೆಣ್ಣು ಮಕ್ಕಳಿಗೆ ಉಚಿತ ಪ್ರಯಾಣದ ಸೌಲಭ್ಯವಿದೆ. ಹುಡುಗರಿಗೂ ವಿಸ್ತರಿಸುವ ಕುರಿತು ಮುಖ್ಯಮಂತ್ರಿ ಜತೆ ಚರ್ಚಿಸಲಾಗುವುದು. ಈಗ ಎಲ್ಲರಿಗೂ ರಿಯಾಯಿತಿ ಬಸ್‌ಪಾಸ್‌ಗಳನ್ನು ಕೊಡಲಾಗುತ್ತಿದೆ. ಮುಂದಿನ ಶೈಕ್ಷಣಿಕ ವರ್ಷದಿಂದ ಕೆಪಿಎಸ್ ವಿದ್ಯಾರ್ಥಿಗಳಿಗೆ ಉಚಿತ ಬಸ್ ವ್ಯವಸ್ಥೆ ಮಾಡಲಾಗುವುದು ಎಂದರು.

1ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಮೌಲ್ಯಗಳನ್ನು ಅಳವಡಿಸುವ ಮಹತ್ವಾಕಾಂಕ್ಷೆಯ ‘ಮೌಲ್ಯ ಶಿಕ್ಷಣ’ ವಿದ್ಯಾರ್ಥಿ ಚಟುವಟಿಕಾ ಪುಸ್ತಕಗಳ ಡಿಜಿಟಲ್ ಆವೃತ್ತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಿದರು. ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಜೆಇಇ ಪರೀಕ್ಷೆಯಲ್ಲಿ ಸಾಧನೆ ಮಾಡಿದ ಸಂಕೇತ್ ರಾಜ್‌ಗೆ ₹1 ಲಕ್ಷ, ಕೊಂಬೆಟ್ಟು ಸರ್ಕಾರಿ ಪಿಯು ಕಾಲೇಜಿನ ಪಿಯುಸಿ ವಿದ್ಯಾರ್ಥಿ ಅರುಣ್ ಕುಮಾರ್ ವಿ. ಅವರು ಮಾಡಿದ ವಿಶಿಷ್ಟ ಆವಿಷ್ಕಾರಕ್ಕಾಗಿ ₹15,000 ಹಾಗೂ ಎಸ್‌ಎಸ್‌ಎಲ್‌ಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತಲಾ ₹50,000 ನಗದು ಬಹುಮಾನ ನೀಡಿ, ಪ್ರೋತ್ಸಾಹಿಸಲಾಯಿತು.

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ವಿಧಾನಪರಿಷತ್ ಸದಸ್ಯೆ ಬಲ್ಕೀಸ್ ಬಾನು, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ, ಶಾಸಕರಾದ ವಿಜಯಾನಂದ ಕಾಶಪ್ಪನವರ್, ಬಿ.ಬಿ. ಚಿಮ್ಮನಕಟ್ಟಿ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿಯಾದ ನಸೀರ್ ಅಹಮದ್, ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಉಪಸ್ಥಿತರಿದ್ದರು.

‘ವೈಚಾರಿಕತೆಯಿಂದಲೇ ದೇಶಕ್ಕೆ ಭವಿಷ್ಯ’

ವೈಚಾರಿಕ-ವೈಜ್ಞಾನಿಕ ಮನೋಭಾವದ ಮಕ್ಕಳ ಮೇಲೆ ದೇಶದ ಭವಿಷ್ಯ ನಿಂತಿದೆ. ಹಾಗಾಗಿ, ಪ್ರಾಥಮಿಕ ಶಿಕ್ಷಣದಿಂದಲೇ ಮೌಢ್ಯ, ಕಂದಾಚಾರದಿಂದ ದೂರ ಉಳಿಯಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮಕ್ಕಳೇ ಭಾರತದ ಭವಿಷ್ಯ ಎನ್ನುವ ದೂರದೃಷ್ಟಿ ನೆಹರೂ ಅವರಿಗೆ ಇದ್ದ ಕಾರಣಕ್ಕೆ ಮಕ್ಕಳಲ್ಲಿ ವೈಜ್ಞಾನಿಕ ಮನೋಧರ್ಮ ರೂಪಿಸುವ ಶಿಕ್ಷಣಕ್ಕೆ ಒತ್ತು ನೀಡಿದ್ದರು. ನೆಹರೂ ಅವರ ಆಶಯದಂತೆ ರಾಜ್ಯ ಸರ್ಕಾರವೂ ಅಂತಹ ಶಿಕ್ಷಣಕ್ಕೆ ಒತ್ತು ನೀಡಿದೆ. ಪ್ರತಿ ವರ್ಷ ಶಿಕ್ಷಣ ಕ್ಷೇತ್ರಕ್ಕೆ ₹65,000 ಕೋಟಿ ನೀಡುತ್ತಿದೆ ಎಂದರು.

ಜಾತಿ, ಧರ್ಮ, ಭಾಷೆಯ ಮಿತಿ ಇಲ್ಲದೆ ಮನುಷ್ಯ ಕುಲವನ್ನು ಪ್ರೀತಿಸುವ ಮನೋಭಾವವನ್ನು ಮಕ್ಕಳಿಗೆ ಕಲಿಸಬೇಕು. ಜಾತಿ ವ್ಯವಸ್ಥೆಯ ಆಧಾರದ ಮೇಲೆ ತಾರತಮ್ಯ ಮಾಡುವವರನ್ನು ಹತ್ತಿರಕ್ಕೆ ಸೇರಿಸದೆ, ಪ್ರತಿಯೊಬ್ಬರೂ ಸಂವಿಧಾನದ ಆಶಯದಂತೆ ಸಹಿಷ್ಣುತೆ ಮತ್ತು ಸಹಬಾಳ್ವೆಯ ಪಾಠ ಕಲಿಸಬೇಕು. ವಿವಿಧತೆಯಲ್ಲಿ ಏಕತೆ ಉಳಿಸಬೇಕು ಎಂದು ಹೇಳಿದರು.

‘ಸರ್ಕಾರಿ ಶಾಲೆಗಳ ಮಕ್ಕಳು ಸ್ವಾಭಿಮಾನದಿಂದ ಸಮಾಜಮುಖಿಯಾಗಿ ಬೆಳೆಯಲು ಉತ್ತಮ ಶಿಕ್ಷಣ ಪಡೆಯಲು ಸರ್ಕಾರ ಎಲ್ಲ ಸವಲತ್ತುಗಳನ್ನೂ ನೀಡುತ್ತಿದೆ. ಇದರ ಅನುಕೂಲ ಪಡೆದು ವೈಜ್ಞಾನಿಕ ಮನಸ್ಥಿತಿ ಬೆಳೆಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

ವಿಧಾನಸೌಧದಲ್ಲಿ ಶುಕ್ರವಾರ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯೋಜಿಸಿದ್ದ ಮಕ್ಕಳ ದಿನಾಚರಣೆ: ಉದ್ಘಾಟನಾ ಸಮಾರಂಭದಲ್ಲಿ ಶಿಕ್ಷಣ ಸಚಿವ ಎಸ್. ಮಧು ಬಂಗಾರಪ್ಪ ಅವರು ವಿದ್ಯಾರ್ಥಿನಿ ಬಿ.ವಿ ತನುಷಾ ಅವರೊಂದಿಗೆ ಸಂವಾದ ನಡೆಸಿದರು. ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

> **ನೆಹರೂ ಅವರು 9 ವರ್ಷ ಕಾರಾಗೃಹದಲ್ಲಿದ್ದು, ದೇಶಕ್ಕಾಗಿ ಬಹಳಷ್ಟು ತ್ಯಾಗ ಮಾಡಿದ್ದಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸದೇ ಇದ್ದ ಬಿಜೆಪಿಗೆ ಗಾಂಧಿ, ನೆಹರೂ ಅವರನ್ನು ತೆಗಳುವುದೇ ಕೆಲಸ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಸುದ್ದಿ 2 ನಿಮಿಷ

‘ರಾಜ್ಯ ಒಡೆಯಲು ಸಾಧ್ಯವಿಲ್ಲ’

ಕಲಬುರಗಿ: ‘ಕರ್ನಾಟಕವೂ ಒಂದು, ಭಾರತ ದೇಶವೂ ಒಂದು. ಇವುಗಳನ್ನು ಒಡೆಯಲು ಸಾಧ್ಯವಿಲ್ಲ’ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಸ್ಪಷ್ಟಪಡಿಸಿದರು.

‘ಅಭಿವೃದ್ಧಿಯಲ್ಲಿ ಉತ್ತರ ಕರ್ನಾಟಕ ನಿರ್ಲಕ್ಷಿಸಲಾಗಿದೆ’ ಎಂದು ಆರೋಪಿಸಿ ಕೆಲ ಜನಪ್ರತಿನಿಧಿಗಳು, ಸಂಘಟನೆಗಳು ಎತ್ತಿರುವ ಉತ್ತರ ಕರ್ನಾಟಕ ಪ್ರತ್ಯೇಕ ರಚನೆ ಕುರಿತ ಪ್ರಶ್ನೆಗೆ ನಗರದ ಐವಾನ್–ಎ–ಶಾಹಿ ಅತಿಥಿಗೃಹದಲ್ಲಿ ಶುಕ್ರವಾರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ಅಭಿವೃದ್ಧಿಯಲ್ಲಿ ತಾರತಮ್ಯವಾಗಿದ್ದರೆ, ಅದರ ಕುರಿತು ಚರ್ಚಿಸಲು ಆಡಳಿತ ಹಾಗೂ ವಿರೋಧ ಪಕ್ಷಗಳ ಸದಸ್ಯರು ಅಧಿವೇಶನದಲ್ಲಿ ಚರ್ಚಿಸಿ ಪರಿಹಾರಕೊಂಡುಕೊಳ್ಳಬಹುದು. ಅದಕ್ಕಾಗಿಯೇ ಅಧಿವೇಶನ ನಡೆಸಲಾಗುತ್ತದೆ. ಕೆಲವರು ಪತ್ರ ಬರೆದಿದ್ದಾರೆ ಎಂದ ಮಾತ್ರಕ್ಕೆ ಅದಕ್ಕೆ ಆದ್ಯತೆ ನೀಡಬೇಕು ಎಂದೇನಿಲ್ಲ. ಇಡೀ ಕರ್ನಾಟಕ ಒಂದೇ, ಎಲ್ಲ ಕನ್ನಡಿಗರೂ ಒಗ್ಗಟ್ಟಾಗಿದ್ದೇವೆ’ ಎಂದರು.

‘ಡಿಸೆಂಬರ್ 8ರಿಂದ 19ರವರೆಗೆ ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ ನಡೆಯಲಿದೆ. ಸರ್ಕಾರ ಹಾಗೂ ಪ್ರತಿಪಕ್ಷಗಳು ಸಹಕರಿಸಿ, ಜನರ ಸಮಸ್ಯೆಗಳನ್ನು ಚರ್ಚಿಸುವ ವಿಶ್ವಾಸವಿದೆ. ಯಾವುದೇ ಅಧಿವೇಶನವು ಇಡೀ ರಾಜ್ಯದ ಅಭಿವೃದ್ಧಿ ಬಗೆಗೆ ಚರ್ಚಿಸುವ ವೇದಿಕೆಯಾಗಿರುತ್ತದೆ. ಆದರೆ, ಬೆಳಗಾವಿಯಲ್ಲಿ ನಡೆಯುವ ಅಧಿವೇಶನದಲ್ಲಿ ಈ ಭಾಗದ ಸಮಸ್ಯೆಗಳ ಚರ್ಚೆಗೆ ಹೆಚ್ಚಿನ ನೀಡುತ್ತಲೇ ಬಂದಿದ್ದು, ಈಗಲೂ ನೀಡಲಾಗುವುದು’ ಎಂದರು.



₹36 ಸಾವಿರ ವೇತನಕ್ಕೆ ಆಗ್ರಹ

ಹಾಸನ: ‘ಕನಿಷ್ಠ ವೇತನವನ್ನು ₹36,000ಕ್ಕೆ ಹೆಚ್ಚಿಸಿ ಪರಿಷ್ಕರಿಸಬೇಕು’ ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಸಿಐಟಿಯು 16ನೇ ರಾಜ್ಯ ಸಮ್ಮೇಳನ ಹಕ್ಕೊತ್ತಾಯ ಮಂಡಿಸಿದೆ.

ಇಲ್ಲಿ ಶುಕ್ರವಾರ ನಿರ್ಣಯಗಳನ್ನು ಅಂಗೀಕರಿಸಲಾಯಿತು.

‘ಗುತ್ತಿಗೆ, ಹೊರಗುತ್ತಿಗೆ ನೌಕರರ ಕೆಲಸವನ್ನು ಕಾಯಂಗೊಳಿಸಬೇಕು. ಸರ್ಕಾರವು ನಮ್ಮ ಬೇಡಿಕೆ ಈಡೇರಿಸದಿದ್ದಲ್ಲಿ ರಾಜ್ಯದಾದ್ಯಂತ ಹೋರಾಟ ನಡೆಸಲು ನಿರ್ಣಯಿಸಲಾಗಿದೆ’ ಎಂದು ಸಿಐಟಿಯು ರಾಜ್ಯ ಘಟಕದ ಅಧ್ಯಕ್ಷೆ ಎಸ್. ವರಲಕ್ಷ್ಮಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಇವು, ರಾಜ್ಯದ ಲಕ್ಷಾಂತರ ಕಾರ್ಮಿಕರ ಭವಿಷ್ಯದ ಮೇಲೆ ನೇರ ಪರಿಣಾಮ ಬೀರಬಲ್ಲ ನಿರ್ಣಾಯಕ ನಿರ್ಣಯಗಳಾಗಿವೆ’ ಎಂದರು.

‘ರಾಜ್ಯದ 1.5 ಕೋಟಿ ಕಾರ್ಮಿಕರು ಎದುರಿಸುತ್ತಿರುವ ದೀರ್ಘಕಾಲೀನ ಆರ್ಥಿಕ ಸಂಕಷ್ಟ ಮತ್ತು ಉದ್ಯೋಗ ಅಭದ್ರತೆಯ ಬಿಕ್ಕಟ್ಟುಗಳನ್ನು ಪರಿಹರಿಸುವ ಗುರಿ ಹೊಂದಿರುವ ಪರಿವರ್ತನಾಶೀಲ ನಿರ್ಣಯಗಳ ಮೇಲೆ ಸಮ್ಮೇಳನದ ಕಾರ್ಯಸೂಚಿ ಕೇಂದ್ರೀಕೃತವಾಗಿದೆ. ಈ ಬೇಡಿಕೆಗಳು ರಾಜ್ಯದ ಪ್ರಸ್ತುತ ಕಾರ್ಮಿಕ ನೀತಿಗಳಿಗೆ ಮೂಲಭೂತವಾದ ಸವಾಲನ್ನು ಒಡ್ಡಿವೆ’ ಎಂದರು.

‘ಏಳು ವರ್ಷಗಳಿಂದ ವೇತನ ಪರಿಷ್ಕರಣೆಯಾಗದೇ ಒಂದೂವರೆ ಕೋಟಿ ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ. ಬೆಲೆ ಏರಿಕೆ ಮತ್ತು ಕೆಲಸದ ಒತ್ತಡವನ್ನು ಆಧರಿಸಿ, ಕನಿಷ್ಠ ವೇತನವನ್ನು ₹36ಸಾವಿರಕ್ಕೆ ನಿಗದಿಪಡಿಸಬೇಕು. ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿನ ಶೇ 50-60ರಷ್ಟು ಗುತ್ತಿಗೆ ಮತ್ತು ಹೊರಗುತ್ತಿಗೆ ಕಾರ್ಮಿಕರನ್ನು ಶೋಷಣೆಯಿಂದ ಮುಕ್ತಗೊಳಿಸಿ, ವಿಶೇಷ ಕಾನೂನಿನ ಮೂಲಕ ಅವರನ್ನು ಕಾಯಂಗೊಳಿಸಬೇಕು’ ಎಂದು ಆಗ್ರಹಿಸಿದರು.

‘ನೀರಾವರಿ ಯೋಜನೆ: ಕೇಂದ್ರದ್ದೇ ಅಡ್ಡಗಾಲು’

ಬೆಂಗಳೂರು: ‘ಮಹಾದಾಯಿ, ಕೃಷ್ಣಾ ಮೇಲ್ದಂಡೆ, ಕಳಸಾ–ಬಂಡೂರಿ... ರಾಜ್ಯದ ಈ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ನಿಜಕ್ಕೂ ತೊಡಕಾಗಿರುವುದು ಕೇಂದ್ರ ಸರ್ಕಾರ. ಯೋಜನೆಗಳ ಅನುಷ್ಠಾನಕ್ಕೆ ಅಗತ್ಯವಿರುವ ಅಧಿಸೂಚನೆ, ಪರಿಸರ ಮತ್ತು ಅರಣ್ಯ ಅನುಮತಿಗಳನ್ನು ನೀಡದೆ, ಕೇಂದ್ರ ಸರ್ಕಾರವು ಅನ್ಯಾಯ ಮಾಡುತ್ತಿದೆ ಅದನ್ನು ಪ್ರಶ್ನಿಸದೆ ರಾಜ್ಯದ ಸಂಸದರು ಸುಮ್ಮನೆ ಕೂತಿದ್ದಾರೆ’ ಎಂಬ ಟೀಕೆಗೆ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ‘ನೀರಿನ ಹೆಜ್ಜೆ’ ಪುಸ್ತಕ ಜನಾರ್ಪಣೆ ಕಾರ್ಯಕ್ರಮವು ವೇದಿಕೆಯಾಯಿತು. ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಪುಸ್ತಕ ಕುರಿತು ಮಾತನಾಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ, ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಎಲ್ಲರೂ, ‘ಕೇಂದ್ರವು ರಾಜ್ಯಕ್ಕೆ ಅನ್ಯಾಯ ಮಾಡುತ್ತಿದೆ’ ಎಂದು ಒತ್ತಿ ಹೇಳಿದರು.



‘ನೀರಿನ ಹೆಜ್ಜೆ’ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪರಸ್ಪರ ಚರ್ಚೆಯಲ್ಲಿ ತೊಡಗಿದ್ದ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ —ಪ್ರಜಾವಾಣಿ ಚಿತ್ರ

ಹಂಚಿಕೆಯಾದ ನೀರೂ ಬಳಕೆಗೆ ಸಿಗುತ್ತಿಲ್ಲ: ಸಿದ್ದರಾಮಯ್ಯ

‘ರಾಜ್ಯದಲ್ಲಿ 3,400 ಟಿಎಂಸಿ ಅಡಿಗಳಷ್ಟು ನೀರು ದೊರಕುತ್ತದೆ. ಇದರಲ್ಲಿ ನಮಗೆ 1,250 ಟಿಎಂಸಿ ಅಡಿಯಷ್ಟು ಹಂಚಿಕೆಯಾಗಿದೆ. ಕೇಂದ್ರ ಸರ್ಕಾರದ ಅಡ್ಡಗಾಲಿನಿಂದಾಗಿ ನಮ್ಮ ಪಾಲಿಗೆ ಹಂಚಿಕೆಯಾಗಿರುವ ನೀರನ್ನೂ ಬಳಸಿಕೊಳ್ಳಲು ಆಗುತ್ತಿಲ್ಲ. ಇದರ ವಿರುದ್ಧ ಬಿಜೆಪಿ ಸಂಸದರು ಮಾತನಾಡುವುದಿಲ್ಲ. ತಾವು ಜಲ ಸಂರಕ್ಷಕರು ಎಂದು ಬಾಯಿಬಡಿದುಕೊಳ್ಳುವ ಜೆಡಿಎಸ್ ಸಂಸದರೂ ಈ ವಿಚಾರದಲ್ಲಿ ಬಾಯಿ ಬಿಡುವುದಿಲ್ಲ’ ಎಂದು ಸಿದ್ದರಾಮಯ್ಯ ಹೇಳಿದರು.

‘ಮೇಕೆದಾಟು ಯೋಜನೆಗೆ ಸುಪ್ರೀಂ ಕೋರ್ಟ್‌ನ ಮುದ್ರೆ ಬಿದ್ದಿದೆ. ಆದರೆ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ ಮತ್ತು ಕೇಂದ್ರ ಜಲ ಆಯೋಗಗಳು ಯೋಜನೆಗೆ ಒಪ್ಪಿಗೆ ನೀಡಬೇಕು. ಅರಣ್ಯ ಮತ್ತು ಪರಿಸರ ಅನುಮತಿ ನೀಡಬೇಕು. ಇದೆಲ್ಲವೂ ಕೇಂದ್ರ ಸರ್ಕಾರದ ಕೈಯಲ್ಲಿದೆ. ಅದಕ್ಕಿನ್ನೆಷ್ಟು ವಿಳಂಬ ಮಾಡುತ್ತದೆಯೋ’ ಎಂದು ಕಳವಳ ವ್ಯಕ್ತಪಡಿಸಿದರು.

‘ಶಿವಕುಮಾರ್ ಸಚಿವರಾಗಿದ್ದಾಗಲೇ ಅನುಷ್ಠಾನವಾಗಲಿ’: ‘ಈ ಯೋಜನೆಗೆ ಅಗತ್ಯ ಒಪ್ಪಿಗೆ ಮತ್ತು ಅನುಮತಿಗಳನ್ನು ಕೊಡಿಸುವ ಕೆಲಸವನ್ನು ಬಿಜೆಪಿ ಮತ್ತು ಜೆಡಿಎಸ್ ಸಂಸದರು ಮಾಡಲಿ. ಡಿ.ಕೆ.ಶಿವಕುಮಾರ್ ಅವರು ನೀರಾವರಿ ಸಚಿವರಾಗಿರುವಾಗಲೇ ಈ ಯೋಜನೆ ಅನುಷ್ಠಾನವಾಗಲಿ. ನಾವು ಒಳ್ಳೆಯ ಕೆಲಸ ಮಾಡಿದ್ದೇವೆ. 2028ರಲ್ಲಿ ನಾವೇ ಅಧಿಕಾರಕ್ಕೆ ಬರುತ್ತೇವೆ’ ಎಂದು ಹೇಳಿದರು.

ನಮ್ಮ ನೀರಿನ ಹಕ್ಕಿನ ನಿರಾಕರಣೆ: ಡಿಕೆಶಿ

‘ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದಲ್ಲಿ ನಮಗೆ ನೀರು ಹಂಚಿಕೆಯಾಗಿ ಹತ್ತು ವರ್ಷ ಕಳೆದಿದೆ. ಆದರೆ ಕೇಂದ್ರ ಸರ್ಕಾರವು ಈ ಸಂಬಂಧ ಅಧಿಸೂಚನೆ ಹೊರಡಿಸದೆ, ನಮ್ಮ ಪಾಲಿನ ನೀರನ್ನು ನಿರಾಕರಿಸುತ್ತಿದೆ. ಇದನ್ನು ಬಿಜೆಪಿ ಮತ್ತು ಜೆಡಿಎಸ್ ಸಂಸದರು, ರಾಜ್ಯದಿಂದ ಆಯ್ಕೆಯಾಗಿ ಕೇಂದ್ರ ಸಚಿವರಾಗಿರುವವರು ಏಕೆ ಪ್ರಶ್ನಿಸುತ್ತಿಲ್ಲ’ ಎಂದು ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

‘ಗೋವಾದ ಒಬ್ಬ ಸಂಸದ ಮಹದಾಯಿ ಯೋಜನೆಯನ್ನು ತಡೆದು ನಿಲ್ಲಿಸಿದ್ದಾರೆ. ನಮ್ಮ ರಾಜ್ಯದಲ್ಲಿ 28 ಸಂಸದರಿದ್ದೇವೆ. 19 ಮಂದಿ ಕೇಂದ್ರದ ಆಡಳಿತ ಪಕ್ಷದವರೇ ಇದ್ದಾರೆ. ಅಷ್ಟು ಜನ ಸಂಸದರಿದ್ದೂ ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಯಾರೊಬ್ಬರೂ ಸಂಸತ್ತಿನಲ್ಲಿ ಮಾತನಾಡಿಲ್ಲ’ ಎಂದರು.

‘ಬೊಮ್ಮಾಯಿ ಅವರನ್ನು ಈ ಕಾರ್ಯಕ್ರಮಕ್ಕೆ ಕರೆದಿದ್ದೆ. ಈ ಪುಸ್ತಕದಲ್ಲಿ ತಮ್ಮ ವಿರುದ್ಧ ಬರಹವಿದ್ದು, ಬಂದರೆ ಮುಜುಗರವಾಗುತ್ತದೆ ಎಂದು ತಿಳಿಸಿದರು. ಅದು ಅವರ ಅಸಹಾಯಕತೆ. ಅವರು ರಾಜ್ಯದ ನೀರಾವರಿಗಾಗಿ ಏನೂ ಮಾಡಿಲ್ಲ ಎಂಬ ಸತ್ಯವನ್ನು ನಾನು ಹೇಳಲೇಬೇಕಲ್ಲವೇ’ ಎಂದು ಪ್ರಶ್ನಿಸಿದರು.

ಮತ್ತೆ ವಿಳಂಬವಾಗದಿರಲಿ: ಎಚ್.ಕೆ.ಪಾಟೀಲ

‘ರಾಜ್ಯದ ಬಹುತೇಕ ನೀರಾವರಿ ಯೋಜನೆಗಳು ರಾಜಕೀಯ ಇಚ್ಛಾಶಕ್ತಿಯ ಕಾರಣಕ್ಕೆ ವಿಳಂಬವಾಗಿದ್ದವು. ಆದರೆ, ಹತ್ತು–ಹನ್ನೆರಡು ವರ್ಷಗಳಲ್ಲಿ ಕೇಂದ್ರ ಸರ್ಕಾರದ ಕಾರಣಕ್ಕೆ ವಿಳಂಬವಾಗುತ್ತಿದೆ. ಇದರಿಂದ ರಾಜ್ಯದ ಜನರಿಗೆ ಅನ್ಯಾಯವಾಗುತ್ತಿದೆ. ಈಗ ಮೇಕೆದಾಟು ಯೋಜನೆಗೆ ಸುಪ್ರೀಂ ಕೋರ್ಟ್ ಒಪ್ಪಿಗೆ ನೀಡಿದೆ. ಆದರೆ, ಅದೂ ವಿಳಂಬವಾಗದಿರಲಿ’ ಎಂದು ಎಚ್.ಕೆ.ಪಾಟೀಲ ಹೇಳಿದರು.

‘ವರದಿಗಾರಿಕೆಯಲ್ಲಿ ಎಚ್ಚರಿಕೆ ಅಗತ್ಯ’: ‘ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಎಚ್ಚರಿಕೆಯಿಂದ ವರದಿ ಮಾಡಬೇಕು. ಪಾಕಿಸ್ತಾನದ ವಿರುದ್ಧ ಜಲಾಶಯದ ನೀರನ್ನು ಬಳಸಿಕೊಳ್ಳುತ್ತೇವೆ ಎಂಬಂತಹ ವರದಿಗಳಿಂದ ಭಾರತಕ್ಕೇ ಹಾನಿಯಾಗುತ್ತದೆ. ಬ್ರಹ್ಮಪುತ್ರ ನದಿಗೆ ಚೀನಾವು ಜಗತ್ತಿನ ಅತ್ಯಂತ ದೊಡ್ಡ ಅಣೆಕಟ್ಟು ನಿರ್ಮಿಸುತ್ತಿದೆ. ಅದರಿಂದ ಭಾರತದ ಮೇಲಾಗುವ ಪರಿಣಾಮಗಳೇನು ಎಂಬುದರ ಬಗ್ಗೆಯೂ ಈ ಪುಸ್ತಕದಲ್ಲಿ ವಿವರಗಳಿವೆ’ ಎಂದು ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಮೋಹನ್ ಕಾತರಕಿ ಹೇಳಿದರು.

ಬೆಳೆ ಹಾನಿ: ಶಾ ಭೇಟಿಯಾಗಲಿರುವ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ನಿಯೋಗವು ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಶನಿವಾರ ಸಂಜೆ 5.30ಕ್ಕೆ ಭೇಟಿ ಮಾಡಿ ಬೆಳೆಹಾನಿಗೆ ಪರಿಹಾರ ನೀಡುವಂತೆ ಬೇಡಿಕೆ ಮುಂದಿಡಲಿದೆ.

ಈ ಬಾರಿಯ ನೈರುತ್ಯ ಮುಂಗಾರು ವೇಳೆ ಮಳೆ ಮತ್ತು ಪ್ರವಾಹದಿಂದಾಗಿ ಮೂಲಸೌಕರ್ಯಕ್ಕೆ ಭಾರಿ ಪ್ರಮಾಣದ ಹಾನಿಯಾಗಿದ್ದು, ಅವುಗಳ ಪುನರ್ ನಿರ್ಮಾಣಕ್ಕಾಗಿ ಕೇಂದ್ರದಿಂದ ₹1,545 ಕೋಟಿ ಆರ್ಥಿಕ ನೆರವು ಕೇಳಲು ರಾಜ್ಯ ಸರ್ಕಾರ ಈಗಾಗಲೇ ನಿರ್ಧರಿಸಿದೆ. ಮಹದಾಯಿ, ಮೇಕೆದಾಟು ಸೇರಿದಂತೆ ವಿವಿಧ ಜಲ ಯೋಜನೆಗಳಿಗೆ ಕೇಂದ್ರದಿಂದ ತ್ವರಿತ-ಗತಿಯಲ್ಲಿ ಅನುಮೋದನೆ ನೀಡುವಂತೆ ಸಿದ್ದರಾಮಯ್ಯ ಕೋರಲಿದ್ದಾರೆ.

ರಾಜ್ಯದ ಬೇಡಿಕೆಗಳ ಕುರಿತು ಚರ್ಚಿಸಲು ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿಗೆ ಸಿದ್ದರಾಮಯ್ಯ ಕಾಲಾವಕಾಶ ಕೋರಿದ್ದಾರೆ. ಪ್ರಧಾನಿ ಅವರನ್ನು ಸೋಮವಾರ ಭೇಟಿ ಮಾಡುವ ಸಾಧ್ಯತೆ ಇದೆ. ಕಪಿಲ್ ಸಿಬಲ್ ಅವರ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶನಿವಾರ ರಾತ್ರಿ ಬೆಂಗಳೂರಿಗೆ ಮರಳಲಿರುವ ಅವರು ಸೋಮವಾರ ಮತ್ತೆ ದೆಹಲಿಗೆ ಬರುವ ಸಂಭವ ಇದೆ. ಈ ಸಂದರ್ಭದಲ್ಲಿ ಸಚಿವ ಸಂಪುಟ ಪುನರ್ ರಚನೆ ಮತ್ತಿತರ ವಿಷಯಗಳ ಕುರಿತು ಹೈಕಮಾಂಡ್ ನಾಯಕರನ್ನು ಕಾಣುವ ಸಾಧ್ಯತೆ ಇದೆ.

‘ಸಹಕಾರ ಕ್ಷೇತ್ರದಿಂದಲೇ ಹಳ್ಳಿಗಳ ಪ್ರಗತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರಾಮೀಣ ಭಾರತವನ್ನು ಪ್ರಗತಿಯತ್ತ ಕೊಂಡೊಯ್ಯುವ ಉದ್ದೇಶದಿಂದ ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಸಹಕಾರ ಕ್ಷೇತ್ರಕ್ಕೆ ಚೈತನ್ಯ ನೀಡಿದರು. ದೇಶದ ಗ್ರಾಮೀಣ ಪ್ರದೇಶವು ಸಹಕಾರ ಕ್ಷೇತ್ರದಿಂದಲೇ ಗಟ್ಟಿಗೊಂಡಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಅರಮನೆ ಮೈದಾನದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ 72ನೇ ಅಖಿಲ ಭಾರತ ಸಹಕಾರ ಸಪ್ತಾಹಕ್ಕೆ ಅವರು ಚಾಲನೆ ನೀಡಿದರು. ಸಹಕಾರ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ‘ಸಹಕಾರ ರತ್ನ’ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

‘ಯಾವುದೇ ಗ್ರಾಮವು ಉದ್ಧಾರ ಆಗಬೇಕಾದರೆ ಆ ಗ್ರಾಮದಲ್ಲಿ ಒಂದು ಶಾಲೆ, ಒಂದು ಸಹಕಾರಿ ಸಂಘ, ಒಂದು ಆಸ್ಪತ್ರೆ ಇರಬೇಕು ಎನ್ನುವುದು ನೆಹರೂ ಅವರ ಕಲ್ಪನೆಯಾಗಿತ್ತು. ಆ ಕಲ್ಪನೆಯನ್ನು ಸಾಕಾರಗೊಳಿಸುವ ಉದ್ದೇಶದಿಂದಲೇ ಸಹಕಾರ ಚಳವಳಿಗೆ ನೆಹರೂ ಮತ್ತು ಮಹಾತ್ಮ ಗಾಂಧಿ ಅವರು ಶಕ್ತಿ ನೀಡಿದರು’ ಎಂದು ಹೇಳಿದರು.

‘ಏಷ್ಯಾದಲ್ಲಿಯೇ ಮೊದಲ ಬಾರಿಗೆ ಸಹಕಾರ ಬ್ಯಾಂಕ್ ಸ್ಥಾಪನೆಯಾಗಿದ್ದು ಕರ್ನಾಟಕದಲ್ಲಿ. ಹೀಗಾಗಿಯೇ ಕರ್ನಾಟಕವನ್ನು ಭಾರತದ ಸಹಕಾರ ಕ್ಷೇತ್ರದ ರಾಜಧಾನಿ, ತೊಟ್ಟಿಲು ಎಂದೆಲ್ಲಾ ಕರೆಯುತ್ತಾರೆ. ರಾಜ್ಯದ ಹಾಲು ಮಹಾಮಂಡಳಿಗಳ ಮೂಲಕ ಪ್ರತಿದಿನ ಒಂದು ಕೋಟಿ ಲೀಟರ್‌ಗೂ ಹೆಚ್ಚು ಹಾಲು ಉತ್ಪಾದನೆಯಾಗುತ್ತಿದ್ದು, ವಾರ್ಷಿಕ ₹25,000 ಕೋಟಿ ವಹಿವಾಟು ನಡೆಸುತ್ತಿವೆ’ ಎಂದರು.

ಮತ ಕಳವು ಪ್ರಕರಣ: ಪಶ್ಚಿಮ ಬಂಗಾಳದಲ್ಲಿ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕಲಬುರಗಿ ಜಿಲ್ಲೆಯ ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ನಡೆದಿದೆ ಎನ್ನಲಾದ ಮತ ಕಳವು ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ) ಪಶ್ಚಿಮ ಬಂಗಾಳದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದೆ.

ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯ ಬಾಪಿ ಆದ್ಯ(27) ಬಂಧಿತ.

ಆರೋಪಿಯನ್ನು ನಗರಕ್ಕೆ ಕರೆತಂದು ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಎಸ್‌ಐಟಿ ಕಸ್ಟಡಿಗೆ ಪಡೆದುಕೊಂಡಿದೆ ಎಂದು ಮೂಲಗಳು ಹೇಳಿವೆ.

ಆರೋಪಿಯಿಂದ ಎರಡು ಲ್ಯಾಪ್‌ಟಾಪ್ ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ. ಕೆಲವು ದಾಖಲೆಗಳನ್ನೂ ವಶಕ್ಕೆ ಪಡೆಯಲಾಗಿದೆ. ಈತ ಪಶ್ಚಿಮ ಬಂಗಾಳದ ಹಳ್ಳಿಯಲ್ಲಿ ವಾಸ್ತವ್ಯ ಮಾಡಿ ₹10ಕ್ಕೆ ಒಂದು ಒಟಿಪಿ ಮಾರುತ್ತಿದ್ದ ಎಂಬುದು ತಿಳಿದುಬಂದಿದೆ ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ಇದೇ ಪ್ರಕರಣದಲ್ಲಿ 15 ದಿನಗಳ ಹಿಂದೆ ಕಲಬುರಗಿಯಲ್ಲಿ ಕೆಲವು ಶಂಕಿತರನ್ನು ವಶಕ್ಕೆ ಪಡೆದು ಎಸ್‌ಐಟಿ ವಿಚಾರಣೆ ನಡೆಸಿತ್ತು. ಅವರು ನೀಡಿದ ಸುಳಿವು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ.

‘ಪೋರ್ಟಲ್ ಮೂಲಕವೇ ಆರೋಪಿಯು ಆನ್‌ಲೈನ್ ವಂಚಕರಿಗೆ ಒಟಿಪಿ ಮಾರಾಟ ಮಾಡುತ್ತಿದ್ದ. ಅದೇ ಮಾದರಿಯಲ್ಲಿ ಮತ ಕಳವು ತಂಡಕ್ಕೂ ಒಟಿಪಿ ಮಾರಾಟ ಮಾಡಿರುವುದು ಕಂಡುಬಂದಿದೆ. ಮೊಬೈಲ್ ಸಂಖ್ಯೆ ಬಳಸಿ ತನ್ನ ವೆಬ್‌ಸೈಟ್ ಮೂಲಕ ಒಟಿಪಿ ಮಾರಾಟ ಮಾಡಿದ್ದಾನೆ. ಆರೋಪಿಯ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಆಗಿರುವುದು ಪತ್ತೆಯಾಗಿದೆ’ ಎಂದು ಮೂಲಗಳು ಹೇಳಿವೆ.

‘ಆರೋಪಿ ಆದ್ಯ ಮತಕಳವು ಮಾತ್ರವಲ್ಲದೆ ಇತರೆ ಸೈಬರ್ ವಂಚನೆ ಕೃತ್ಯಗಳಿಗೂ ಒಟಿಪಿ ಮಾರಾಟ ಮಾಡಿರುವುದು ಕಂಡುಬಂದಿದೆ. ವೆಬ್‌ಸೈಟ್‌ನ ಮೂಲ ಸರ್ವರ್ ವಿದೇಶದಲ್ಲಿರುವ ಬಗ್ಗೆ ಅನುಮಾನವಿದೆ’ ಎಂದು ಎಸ್‌ಐಟಿ ಮೂಲಗಳು ಹೇಳಿವೆ.

‘ಕಳೆದ ವಿಧಾನಸಭಾ ಚುನಾವಣೆಗೂ ಮುನ್ನ ಆಳಂದ ಕ್ಷೇತ್ರದ 6,018 ಮತಗಳ ರದ್ದತಿಗೆ ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಕೆ ಆಗಿದ್ದವು. ಈ ಅರ್ಜಿಯನ್ನು ಸ್ಥಳೀಯರ ಹೆಸರಿನಲ್ಲಿ ಭರ್ತಿ ಮಾಡಿ ಕಾಲ್ ಸೆಂಟರ್‌ನ ಡೇಟಾ ಆಪರೇಟರ್‌ಗಳು ಸಲ್ಲಿಸಿದ್ದರು. ಕಾಲ್ ಸೆಂಟರ್ ನಡೆಸುತ್ತಿದ್ದ ಕಲಬುರಗಿಯ ತಂಡವೊಂದಕ್ಕೆ ಪ್ರತಿ ಅರ್ಜಿಗೆ ₹80 ಪ್ರಕಾರ ₹4.6 ಲಕ್ಷ ಪಾವತಿ ಆಗಿತ್ತು. ಇದರಲ್ಲಿ ಒಟಿಪಿ ಪಡೆಯಲು, ತಲಾ ಒಂದು ಒಟಿಪಿಗೆ ₹10 ಅನ್ನು ಆದ್ಯನ ಬ್ಯಾಂಕ್ ಖಾತೆಗೆ ಹಣ ಜಮೆ ಆಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಆಂಧ್ರ: ಶೀಘ್ರ ಡ್ರೋನ್ ಟ್ಯಾಕ್ಸಿ

ಪ್ರಜಾವಾಣಿ ವಾರ್ತೆ

ವಿಶಾಖಪಟ್ಟಣ: ಆಂಧ್ರಪ್ರದೇಶದಲ್ಲಿ ಡ್ರೋನ್ ಟ್ಯಾಕ್ಸಿ ಸೇವೆ ಆರಂಭಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಡ್ರೋನ್ ಮತ್ತು ಬಾಹ್ಯಾಕಾಶ ನಗರ ನಿರ್ಮಾಣಕ್ಕಾಗಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮತ್ತು ಕೇಂದ್ರ ಸಚಿವ ಪಿಯೂಷ್ ಗೋಯಲ್ ಅವರು ಶುಕ್ರವಾರ ವರ್ಚುವಲ್ ಮೂಲಕ ಶಂಕುಸ್ಥಾಪನೆ ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ನಾಯ್ಡು, ‘ರಾಜ್ಯವು ಡ್ರೋನ್ ವಲಯವನ್ನು ಅಭಿವೃದ್ಧಿಗೊಳಿಸುವ ಉದ್ದೇಶ ಹೊಂದಿದೆ. ಈ ನಿಟ್ಟಿನಲ್ಲಿ ಶೀಘ್ರವೇ ಡ್ರೋನ್ ಟ್ಯಾಕ್ಸಿ ಸೇವೆಯನ್ನು ಪರಿಚಯಿಸಲಾಗುವುದು’ ಎಂದು ತಿಳಿಸಿದರು.

ಎಲ್ಲಿ ಡ್ರೋನ್ ಮತ್ತು ಬಾಹ್ಯಾಕಾಶ ನಗರ?: ಡ್ರೋನ್ ನಗರವು ಕರ್ನೂಲ್ ಜಿಲ್ಲೆಯ ಓರ್ವಕಲ್‌ನ 300 ಎಕರೆ ಪ್ರದೇಶದಲ್ಲಿ ನಿರ್ಮಾಣವಾಗಲಿದೆ. ಶ್ರೀ ಸತ್ಯ ಸಾಯಿ ಮತ್ತು ತಿರುಪತಿ ಜಿಲ್ಲೆಗಳಲ್ಲಿ ದೇಶದಲ್ಲಿಯೇ ಮೊದಲ ಬಾರಿಗೆ ಅವಳಿ ಬಾಹ್ಯಾಕಾಶ ನಗರಗಳು ಸ್ಥಾಪನೆಯಾಗಲಿವೆ. ಇವು ಅಪಾರ ಉದ್ಯೋಗ ಸೃಷ್ಟಿ ಮಾಡಬಹುದೆಂದು ನಿರೀಕ್ಷಿಸಲಾಗಿದೆ.

ಅಂಗವಿಕಲರಿಗೆ ಅನ್ಯಾಯ: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಂಗವಿಕಲರ ಹಕ್ಕುಗಳ ಕಾಯ್ದೆ–2016ರ ಪರಿಣಾಮಕಾರಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೈಗೊಳ್ಳಲಾಗಿರುವ ಕ್ರಮಗಳ ಕುರಿತಂತೆ ಆರು ವಾರಗಳಲ್ಲಿ ಸಮಗ್ರ ವರದಿ ಸಲ್ಲಿಸಿ’ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

‘ಕಾಯ್ದೆಯ ನಿಬಂಧನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ಬೆಂಗಳೂರಿನ ವೈ.ಕಾರ್ತಿಕ್, ವೈ.ಕೌಶಿಕ್ ಹಾಗೂ ಬಳ್ಳಾರಿಯ ವೈ.ಸತೀಶ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಪ್ರದೀಪ್ ನಾಯಕ್ ವಾದ ಆಲಿಸಿದ ನ್ಯಾಯಪೀಠ, ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾರ್ಯದರ್ಶಿ ಮತ್ತು ಅಂಗವಿಕಲರ ಸಬಲೀಕರಣ ಇಲಾಖೆ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

‘ಕಾಯ್ದೆಯ ಕಲಂ 17, 24, 34, 35, 37 ಮತ್ತು 88ರ ಜಾರಿಗೆ ಸಂಬಂಧಿಸಿದಂತೆ ಕೈಗೊಳ್ಳಲಾಗಿರುವ ಕ್ರಮಗಳ ಕುರಿತಾದ ಸಮಗ್ರ ವರದಿಯನ್ನು ಆರು ವಾರಗಳಲ್ಲಿ ಸಲ್ಲಿಸಬೇಕು’ ಎಂದು ಸರ್ಕಾರಕ್ಕೆ ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು 2026ರ ಫೆಬ್ರುವರಿ 4ಕ್ಕೆ ಮುಂದೂಡಿತು.

ಆಕ್ಷೇಪ ಏನು?: ‘ಅಂಗವಿಕಲರಿಗೆ ಸರ್ಕಾರಿ ಉದ್ಯೋಗದಲ್ಲಿ ಶೇ 5ರಷ್ಟು ಮೀಸಲಾತಿ ಕಲ್ಪಿಸುತ್ತಿಲ್ಲ. ಖಾಸಗಿ ಕ್ಷೇತ್ರದಲ್ಲಿ ಅಂಗವಿಕಲರನ್ನು ನೇಮಕ ಮಾಡಿಕೊಳ್ಳುವ ಉದ್ಯೋಗದಾತರಿಗೆ ಪ್ರೋತ್ಸಾಹ ಧನ ನೀಡುತ್ತಿಲ್ಲ. ಕೃಷಿ ಭೂಮಿ, ಮನೆ ಹಂಚಿಕೆ ಮಾಡುತ್ತಿಲ್ಲ. ಅಂಗವಿಕಲರ ಕಲ್ಯಾಣಕ್ಕೆ ನಿಗದಿಪಡಿಸಬೇಕಾದ ನಿಧಿಯನ್ನು ಹಂಚಿಕೆ ಮಾಡಿಲ್ಲ. ಕೇಂದ್ರ ಸರ್ಕಾರಕ್ಕೆ ಹಣ ಹಂಚಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಪ್ರಸ್ತಾವ ಸಲ್ಲಿಸಿಲ್ಲ’ ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

‘ಅಂಗವಿಕಲರಿಗೆ ಹೆಚ್ಚುವರಿಯಾಗಿ ಶಾಲೆ ಮತ್ತು ಸಂಸ್ಥೆಗಳನ್ನು ತೆರೆಯಬೇಕು. ಸರ್ಕಾರಿ ಉದ್ಯೋಗದಲ್ಲಿ ಶೇ 4ರ ಮೀಸಲಾತಿ ನೀಡಬೇಕು. ಸರ್ಕಾರದ ಪ್ರತಿ ಇಲಾಖೆಯಲ್ಲೂ ಅಂಗವಿಕಲರ ಕಲ್ಯಾಣಕ್ಕೆ ಶೇ 5ರಷ್ಟು ಬಜೆಟ್ ಮೀಸಲಿಡಬೇಕು. ವಿಶೇಷ ಅಂಗವಿಕಲತೆ ಗುರುತಿನ ಚೀಟಿ (ಯುಡಿಐಡಿ) ನೀಡಬೇಕು. ಅನರ್ಹರಿಗೆ ನೀಡಿರುವ ಯುಡಿಐಡಿ ರದ್ದುಪಡಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ಎ.ಇ, ಜೆ.ಇ.ಗಳ ನೇಮಕಾತಿ

404 ಹುದ್ದೆಗಳ ಭರ್ತಿಗೆ 3ನೇ ಬಾರಿ ಪರೀಕ್ಷೆ

• ಎ.ಎಂ.ಸುರೇಶ

ಬೆಂಗಳೂರು: ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ (ಕೆಪಿಸಿಎಲ್) 404 ಸಹಾಯಕ ಎಂಜಿನಿಯರ್‌ಗಳು (ಎ.ಇ) ಮತ್ತು ಕಿರಿಯ ಎಂಜಿನಿಯರ್‌ಗಳ (ಜೆ.ಇ) ನೇಮಕಾತಿಗೆ ಮೂರನೇ ಬಾರಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದೆ. ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಪರೀಕ್ಷೆ ನಡೆಸುವಂತೆ ಕೋರಿ ಇಂಧನ ಇಲಾಖೆಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ಪತ್ರ ಬರೆದಿದೆ.

ಕೆಪಿಸಿಎಲ್‌ನಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಕೆಇಎ ಕಳೆದ ವರ್ಷ ಪರೀಕ್ಷೆ ನಡೆಸಿ ಆಯ್ಕೆ ಪಟ್ಟಿಯನ್ನು ಪ್ರಕಟಿಸಿತ್ತು. ಆದರೆ, ಇದನ್ನು ಪ್ರಶ್ನಿಸಿ ಕೆಲವರು ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು. ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಾಲಯವು ಆಯ್ಕೆ ಪಟ್ಟಿಯನ್ನು ರದ್ದುಗೊಳಿಸಿ ನಾಲ್ಕು ತಿಂಗಳಲ್ಲಿ ಹೊಸದಾಗಿ ಪರೀಕ್ಷೆ ನಡೆಸುವಂತೆ ಈ ವರ್ಷದ ಸೆಪ್ಟೆಂಬರ್‌ನಲ್ಲಿ ಆದೇಶಿಸಿತ್ತು. ಆ ಪ್ರಕಾರ ಮತ್ತೆ ಪರೀಕ್ಷೆ ನಡೆಸಲು ಕೆಇಎ ಸಿದ್ಧತೆ ಆರಂಭಿಸಿದೆ.

> **ಯಾವುದೇ ನೇಮಕಾತಿ ವಿಳಂಬವಾಗುವುದು ಸರಿಯಲ್ಲ. ಕೋರ್ಟ್ ಆದೇಶದ ಪ್ರಕಾರ ಮರುಪರೀಕ್ಷೆ ನಡೆಸುವಂತೆ ಈಗಾಗಲೇ ಕೆಇಎಗೆ ಪತ್ರ ಬರೆಯಲಾಗಿದೆ**
> **ಗೌರವ್ ಗುಪ್ತ,** ಹೆಚ್ಚುವರಿ ಮುಖ್ಯಕಾರ್ಯದರ್ಶಿ, ಇಂಧನ ಇಲಾಖೆ



ಹೊಸದಾಗಿ ಪರೀಕ್ಷೆ ನಡೆಸುವ ಸಂಬಂಧ ಕೆಪಿಸಿಎಲ್‌ನಿಂದ ಪತ್ರ ಬಂದಿದೆ. 2024ರಲ್ಲಿ ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳ ಮಾಹಿತಿ ಸಂಗ್ರಹಿಸುವ ಕೆಲಸ ಪ್ರಗತಿಯಲ್ಲಿದೆ. ಭಾನುವಾರವೇ ಪರೀಕ್ಷೆ ನಡೆಸಬೇಕಾಗುತ್ತದೆ. ಆದರೆ, ಈಗಾಗಲೇ ಹಲವು ಪರೀಕ್ಷೆಗಳ ದಿನಾಂಕ ನಿಗದಿಯಾಗಿದೆ. ಯಾವ ದಿನಾಂಕ ಲಭ್ಯವಾಗಲಿದೆ ಎಂಬುದನ್ನು ನೋಡಿಕೊಂಡು ವೇಳಾಪಟ್ಟಿ ಪ್ರಕಟಿಸಲಾಗುವುದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಹಳೆಯ ಪಠ್ಯಕ್ರಮ: ‘ಕೆಪಿಸಿಎಲ್ 2017ರಲ್ಲಿ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಿತ್ತು. ಆಗ 2010ರಲ್ಲಿ ಸಿದ್ಧಪಡಿಸಿದ್ದ ಪಠ್ಯಕ್ರಮದ ಪ್ರಕಾರವೇ ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿತ್ತು. ಈಗಲೂ ಆ ಪಠ್ಯಕ್ರಮದ ಪ್ರಕಾರವೇ ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ’ ಎಂದು ಅವರು ವಿವರಿಸಿದರು.

ವಿಳಂಬ ಏಕೆ: ಸಹಾಯಕ ಮತ್ತು ಕಿರಿಯ ಎಂಜಿನಿಯರ್‌ಗಳ ನೇಮಕಾತಿಗೆ 2018 ರಲ್ಲಿ ಕೆಪಿಸಿಎಲ್ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿತ್ತು. ಆದರೆ, ಪರೀಕ್ಷಾ ಅಕ್ರಮ ಮತ್ತು ಪ್ರಶ್ನೆ ಪತ್ರಿಕೆ ಸೋರಿಕೆ ಇತ್ಯಾದಿ ಆರೋಪಗಳು ಕೇಳಿ ಬಂದ ಕಾರಣ, ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಾಲಯ ಪರೀಕ್ಷೆಯನ್ನು ರದ್ದುಪಡಿಸಿತ್ತು. ಕೋರ್ಟ್ ಆದೇಶದ ಪ್ರಕಾರ ಮರುಪರೀಕ್ಷೆ ನಡೆಸುವುದಾಗಿ ಹೇಳಿದ್ದ ಕೆಪಿಸಿಎಲ್ 2024ರವರೆಗೂ ಸುಮ್ಮನಿತ್ತು. ಕಳೆದ ವರ್ಷ ನೇಮಕಾತಿ ಜವಾಬ್ದಾರಿಯನ್ನು ಕೆಇಎಗೆ ವಹಿಸಲಾಗಿತ್ತು. ಈ ಹುದ್ದೆಗಳ ಭರ್ತಿಗೆ ಕೆಇಎ ಪರೀಕ್ಷೆ ನಡೆಸಿದ ಬಳಿಕ ಮೌಲ್ಯಮಾಪನದ ವೇಳೆ ಋಣಾತ್ಮಕ ಅಂಕ ಪದ್ಧತಿಯನ್ನು ಅನುಸರಿಸಲಾಗಿತ್ತು. ಇದನ್ನು ಪ್ರಶ್ನಿಸಿ ಕೆಲವರು ಹೈಕೋರ್ಟ್ ಮೊರೆ ಹೋಗಿದ್ದರು. ಏಕ ಸದಸ್ಯ ಪೀಠ ಈ ಅರ್ಜಿಯನ್ನು ವಜಾಗೊಳಿಸಿತ್ತು. ಆದರೆ, ಇದನ್ನು ಪ್ರಶ್ನಿಸಿ ಕೆಲವರು ವಿಭಾಗೀಯ ಪೀಠದಲ್ಲಿ ಮೇಲ್ಮನವಿ ಸಲ್ಲಿಸಿದರು. ಇದರ ವಿಚಾರಣೆ ನಡೆಸಿದ ವಿಭಾಗೀಯ ಪೀಠ ನೇಮಕಾತಿ ಪಟ್ಟಿಯನ್ನು ರದ್ದುಪಡಿಸಿ, ಮರುಪರೀಕ್ಷೆ ನಡೆಸುವಂತೆ ಸರ್ಕಾರ ಮತ್ತು ಕೆಪಿಸಿಎಲ್‌ಗೆ ಸೂಚನೆ ನೀಡಿತ್ತು. ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಆದರೆ, ಅಲ್ಲಿ ಕೂಡ ರಾಜ್ಯ ಸರ್ಕಾರಕ್ಕೆ ಹಿನ್ನಡೆಯಾಗಿತ್ತು.

ಬದಲಾವಣೆ ಏಕೆ: ನೇಮಕಾತಿ ಅಧಿಸೂಚನೆಯಲ್ಲಿ ಋಣಾತ್ಮಕ ಮೌಲ್ಯಮಾಪನದ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಪರೀಕ್ಷೆ ನಡೆದ ಬಳಿಕ ಮೌಲ್ಯಮಾಪನ ಸಮಯದಲ್ಲಿ ಇದನ್ನು ಅಳವಡಿಸಿಕೊಳ್ಳಲಾಗಿದೆ. ಇದು ಸರಿಯಲ್ಲ. ಅಲ್ಲದೆ ನಮಗೆ ಮೊದಲೇ ತಿಳಿಸಿಲ್ಲ ಎಂಬುದು ಅಭ್ಯರ್ಥಿಗಳ ವಾದ. 2021ರ ನಂತರ ಎಲ್ಲ ಪರೀಕ್ಷೆಗಳಲ್ಲೂ ಋಣಾತ್ಮಕ ಮೌಲ್ಯಮಾಪನ ಪದ್ಧತಿ ಜಾರಿಗೆ ಬಂದಿದೆ. 2024 ರಲ್ಲಿ ಕೆಇಎ ಪರೀಕ್ಷೆ ನಡೆಸಿದ್ದು, ಸಹಜವಾಗಿಯೇ ಇದಕ್ಕೂ ಅನ್ವಯ ಮಾಡಲಾಗಿದೆ ಎಂಬುದು ಸರ್ಕಾರದ ವಾದವಾಗಿತ್ತು.

ಋಣಾತ್ಮಕ ಮೌಲ್ಯಮಾಪನ

ಈಗ ಹೊಸದಾಗಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲೂ ಋಣಾತ್ಮಕ ಮೌಲ್ಯಮಾಪನ ಪದ್ಧತಿ ಇರಲಿದೆ. ಈ ಬಗ್ಗೆ ಮೊದಲೇ ಅಭ್ಯರ್ಥಿಗಳಿಗೆ ಅರಿವು ಮೂಡಿಸಿ ಎಂದು ಸರ್ಕಾರ ಬರೆದಿರುವ ಪತ್ರದಲ್ಲೂ ತಿಳಿಸಲಾಗಿದೆ. ಆ ಕೆಲಸವನ್ನು ಪ್ರಾಧಿಕಾರ ಮಾಡಲಿದೆ. ವೇಳಾಪಟ್ಟಿ ಪ್ರಕಟಣೆ ಸಮಯದಲ್ಲೇ ಪರೀಕ್ಷೆಯ ಸ್ವರೂಪದ ಬಗ್ಗೆ ಸ್ಪಷ್ಟವಾಗಿ ತಿಳಿಸುವುದಾಗಿ ಪ್ರಸನ್ನ ಹೇಳಿದರು.

ಜಾಹ್ನವಿಕಾ ಕಲಕೇರಿ

ಸಿಂಪಲ್ ಸುನಿ ಕಟ್ಟಿದ ಸಂಕೀರ್ಣ ಕಥನ

ದುಷ್ಯಂತ್

ಆಶಿಕಾ ರಂಗನಾಥ್

2010ರಲ್ಲಿ ತೆರೆಕಂಡ ಹಾಲಿವುಡ್‌ನ 'ಶಟರ್ ಐಲ್ಯಾಂಡ್' ಮಿಥ್ಯಾದರ್ಶನವಿರುವ (ಭ್ರಾಂತಿ) 'ಚಕ್' ಎಂಬ ವ್ಯಕ್ತಿಯೊಬ್ಬನ ಕಥೆಯನ್ನು ಕಟ್ಟಿಕೊಟ್ಟ ಚಿತ್ರವಾಗಿತ್ತು. 'ಚಕ್' ತಾನೇ ಹೆಣೆದಿರುವ ಕಥಾಲೋಕದಲ್ಲಿ ಸಿಲುಕಿರುವಾತ. ಇದೇ ಮಾದರಿಯನ್ನನುಸರಿಸಿ ಪುನರ್ಜನ್ಮ, ಪ್ರೇಮಕಥೆಯ ವಿಷಯವಿಟ್ಟುಕೊಂಡು ಸಂಕೀರ್ಣವಾದ ಸಿನಿಮಾ ಹೆಣೆದು ತಮ್ಮ 'ಚಾಕಚಕ್ಯತೆ' ತೋರಿದ್ದಾರೆ 'ಸಿಂಪಲ್' ಖ್ಯಾತಿಯ ನಿರ್ದೇಶಕ ಸುನಿ. ಮೊದಲಾರ್ಧದಲ್ಲಿ ಕೊಂಚ ನಿಧಾನವಾಗಿ ಹರಿಯುವ ಈ ಸಿನಿಮಾ ದ್ವಿತೀಯಾರ್ಧದಲ್ಲಿ ಕುತೂಹಲ ಹೆಚ್ಚಿಸುತ್ತಾ ಸಾಗುತ್ತದೆ.

ಪುರಾತನ್(ದುಷ್ಯಂತ್) ವಿಎಫ್‌ಎಕ್ಸ್ (ಗ್ರಾಫಿಕ್ಸ್) ಕಲಾವಿದ. ತನ್ನನ್ನೇ ಹೋಲುವ ಚಿತ್ರವೊಂದನ್ನು ಸಾಮಾಜಿಕ ಮಾಧ್ಯಮದಲ್ಲಿ ಕಂಡಾಗ, ಆ ಚಿತ್ರ ಬಿಡಿಸಿದ ಯುವತಿ ಆಧುನಿಕಾಳ (ಆಶಿಕಾ ರಂಗನಾಥ್) ಜಾಡು ಹಿಡಿದು ಆಕೆಯ ಸಂಪರ್ಕಕ್ಕೆ ಬರುತ್ತಾನೆ. ಇಲ್ಲಿಂದ ಪುನರ್ಜನ್ಮದ ಕಥೆಗಳು ತೆರೆದು-ಕೊಳ್ಳುತ್ತವೆ.

ಕಥೆಗಳಲ್ಲಿ ತಿರುವು ಸುನಿ ಬರವಣಿಗೆಯ ಟ್ರೇಡ್ ಮಾರ್ಕ್. ನಾಲ್ಕು ಕಥೆಗಳನ್ನು ಇಲ್ಲಿ ತೆರೆಗೆ ತಂದಿರುವ ಅವರು ಅವುಗಳನ್ನು ಜೋಡಿಸಿರುವ ರೀತಿ ಚೆನ್ನಾಗಿದೆ. ಮೊದಲಾರ್ಧದಲ್ಲಿನ ದೇವಲೋಕ ಮತ್ತು ಪೋರ್ಚುಗಲ್ ಕಥನಕ್ಕೆ ಕೊಂಚ ಕತ್ತರಿ ಹಾಕಬಹುದಿತ್ತು. ತಮ್ಮ ಗುರುತಾದ ಪಂಚಿಂಗ್ ಸಂಭಾಷಣೆಗಳನ್ನು ಅಲ್ಲಲ್ಲಿ ಪ್ರಯೋಗಿಸುತ್ತಾ, ನಗುವಿನ ಕಚಗುಳಿ ಇಡುತ್ತಾ, ಪ್ರಸ್ತುತವಿರುವ ವೈರಲ್ ಮೀಮ್‌ಗಳನ್ನು ಬಳಸುತ್ತಾ ಸಾಗಿದ್ದಾರೆ ಸುನಿ. 'ಕಂಬಳವೀರ ಶ್ರೀನಿವಾಸ'ನ ಕಥೆಯ ಬರವಣಿಗೆ ಹಿಡಿದಿಟ್ಟುಕೊಳ್ಳುತ್ತದೆ. ಭಾವನಾತ್ಮಕವಾಗಿ ಕಟ್ಟಿಹಾಕುವಲ್ಲಿ ಈ ಭಾಗ ಹೆಚ್ಚು ಅಂಕ ಪಡೆಯುತ್ತದೆ. ಕೆಲವೆಡೆ ಹಿನ್ನೆಲೆ ಸಂಗೀತವೇ ಸಂಭಾಷಣೆಗಿಂತ ಮುಂದಿದೆ. ಕ್ಲೈಮ್ಯಾಕ್ಸ್‌ನಲ್ಲಿ ಕಥೆಗೆ ಬೇರೊಂದು ತಿರುವಿನ ಅಗತ್ಯವಿತ್ತು ಎಂದೆನಿಸುತ್ತದೆ.

ದುಷ್ಯಂತ್‌ಗೆ ಇದು ಮೊದಲ ಸಿನಿಮಾವಾದರೂ ಅಳುಕಿಲ್ಲದೆ ತಮ್ಮನ್ನು ನಿರೂಪಿಸಿದ್ದಾರೆ. ನಟನೆಯಲ್ಲಿ ಭರವಸೆ ಮೂಡಿಸಿದ್ದಾರೆ. 'ಕಂಬಳವೀರ ಶ್ರೀನಿವಾಸ'ನ ಪಾತ್ರದೊಳಗೆ ಜೀವಿಸಿದ್ದಾರೆ. ಇಡೀ ಸಿನಿಮಾದೊಳಗೆ ಆಶಿಕಾ ನಾಲ್ಕು ಪಾತ್ರಗಳಲ್ಲಿ ಕಾಣಿಸಿಕೊಂಡು ಕಥೆಯನ್ನು ಹೊತ್ತು ಸಾಗಿದ್ದಾರೆ. 'ಮಂಗಳ' ಎನ್ನುವ ಪಾತ್ರದಲ್ಲಿನ ನಟನೆ ಉತ್ಕೃಷ್ಟ-ವಾಗಿದೆ. 'ಅವನೊಂತರ ಈ ಹ್ರಸ್ವಸ್ವರ..' ಹಾಡು ಚೆನ್ನಾಗಿದೆ. ವಿಲಿಯಂ ಡೇವಿಡ್ ಛಾಯಾಚಿತ್ರಗ್ರ-ಹಣ ಪೋರ್ಚುಗಲ್, ಕರಾವಳಿಯ ದೃಶ್ಯಗಳನ್ನು ಕಣ್ಣಿಗೆ ಕಟ್ಟಿದಂತಿದೆ.

–ಅಭಿಲಾಷ್ ಪಿ.ಎಸ್.

ನೋಡಬಹುದಾದ ಚಿತ್ರ

ನಾವು ನೋಡಿದ ಸಿನಿಮಾ

ಗತವೈಭವ

- ನಿರ್ಮಾಣ: ದೀಪಕ್ ತಿಮ್ಮಪ್ಪ–ಸುನಿ
- ನಿರ್ದೇಶನ: ಸುನಿ
- ತಾರಾಗಣ: ದುಷ್ಯಂತ್, ಆಶಿಕಾ ರಂಗನಾಥ್, ಕಿಶನ್ ಬಿಳಗಲಿ, ಕಾರ್ತಿಕ್ ರಾವ್, ಚಿರು ಎಸ್., ಕೃಷ್ಣ ಹೆಬ್ಬಾಳೆ, ಸುಧಾ ಬೆಳವಾಡಿ ಮತ್ತಿತರರು.

ಲವ್ ಒಟಿಪಿ

- ನಿರ್ಮಾಣ: ವಿಜಯ್ ಎಂ.ರೆಡ್ಡಿ
- ನಿರ್ದೇಶನ: ಅನೀಶ್ ತೇಜೇಶ್ವರ್
- ತಾರಾಗಣ: ಅನೀಶ್ ತೇಜೇಶ್ವರ್, ಸ್ವರೂಪಿಣಿ, ಜಾಹ್ನವಿಕಾ ಕಲಕೇರಿ ಮತ್ತಿತರರು

ಎರಡು ದೋಣಿಯಲ್ಲಿ ಕಾಲಿಟ್ಟವನ ಕಥೆ

ಹುಡುಗ–ಹುಡುಗಿಯ ಪ್ರೀತಿ, ಪ್ರೇಮ ಪ್ರಾರಂಭದ ದಿನಗಳಲ್ಲಿ ಚೆನ್ನಾ-ಗಿರುತ್ತದೆ. ಪ್ರೇಮ ಪಯಣ ಪ್ರಾರಂಭವಾಗಿ ಮೂರು–ನಾಲ್ಕು ವರ್ಷಗಳ ಬಳಿಕ ಅವರ ಸಂಬಂಧ ಹೇಗಿರುತ್ತದೆ ಎಂಬುದೇ ಲವ್ ಒಟಿಪಿ ಚಿತ್ರದ ಒಟ್ಟಾರೆ ಕಥೆ. ಅದನ್ನು ಇವತ್ತಿನ ಕಾಲಘಟ್ಟಕ್ಕೆ ತಕ್ಕಂತೆ ಸರಳವಾಗಿ, ಹಾಸ್ಯಮಯವಾಗಿ ಹೇಳಿಕೊಂಡು ಹೋಗಿದ್ದಾರೆ ನಟ, ನಿರ್ದೇಶಕ ಅನೀಶ್ ತೇಜೇಶ್ವರ್. ಅಂದಹಾಗೆ ಇಲ್ಲಿ ಒಟಿಪಿ ಎಂದರೆ ಓವರ್ ಟಾರ್ಚರ್ ಪ್ರೆಷರ್. ಪ್ರೀತಿಯ ಇನ್ನೊಂದು ಮುಖವನ್ನು ಕಟ್ಟಿಕೊಡುವ ಯತ್ನವನ್ನು ನಿರ್ದೇಶಕ ಮಾಡಿದ್ದಾರೆ.

ಕ್ರಿಕೆಟರ್ ಆಗಬೇಕೆಂದು ಕನಸು ಕಾಣುವ ನಾಯಕ ನಟ ಅಕ್ಷಯ್. ಕಾಲೇಜಿನಲ್ಲಿ ಆತನಿಗೆ ಸನಾ ಪರಿಚಯವಾಗುತ್ತಾಳೆ. ಆತನ ತಂದೆ ಇನ್‌ಸ್ಪೆಕ್ಟರ್ ಶಂಕರ್‌ಗೆ ಮಗ ಪ್ರೀತಿಯ ಬಲೆಯಲ್ಲಿ ಬೀಳುವುದು ಸ್ವಲ್ಪವೂ ಇಷ್ಟವಿಲ್ಲ. ಹೀಗಾಗಿ ಆಗಾಗ ಮಗನ ಮೊಬೈಲ್ ಪರೀಕ್ಷಿಸುತ್ತ ಇರುತ್ತಾರೆ. ಮಗನಿಗೆ ಅಪ್ಪನ ಮೇಲೆ ವಿಪರೀತ ಭಯ. ಇಷ್ಟಾಗಿಯೂ ಸನಾ ಜತೆಗಿನ ಸ್ನೇಹ ಪ್ರೀತಿಯಾಗಿ ಬದಲಾಗುತ್ತದೆ. ಅವರಿಬ್ಬರ ಪ್ರೇಮಕಥೆಯೊಂದಿಗೆ ಚಿತ್ರ ಪ್ರಾರಂಭವಾಗುತ್ತದೆ. ಎಲ್ಲೆಲ್ಲೋ ಸುತ್ತಿ ಎಲ್ಲಿಗೋ ಬರುವ, ಲಾಜಿ-ಕ್‌ಗಳಿಲ್ಲದ ಕಥೆ ಪ್ರಾರಂಭದಲ್ಲಿ ತಾಳ್ಮೆ ಪರೀಕ್ಷಿಸುತ್ತದೆ.

ಅಕ್ಷಯ್ ಮತ್ತು ಸನಾಳ ಪ್ರೀತಿ ಗಾಢವಾದಂತೆ ಸನಾ ಟಾರ್ಚರ್, ಅನಗತ್ಯ ಅನುಮಾನ ಕೂಡ ಹೆಚ್ಚಾಗುತ್ತದೆ. ಕೇವಲ ಸ್ನೇಹ ಎನ್ನುತ್ತಲೇ ಸನಾಳ ಪ್ರೀತಿಯನ್ನು ಒಪ್ಪಿಕೊಂಡ ಅಕ್ಷಯ್‌ಗೆ ಸನಾ ತಲೆನೋವಾಗಿ ಕಾಡಲು ಪ್ರಾರಂಭಿಸುತ್ತಾಳೆ. ಆಗ ಇಬ್ಬರ ನಡುವೆ ಪ್ರವೇಶಿಸುವುದು ಮತ್ತೋರ್ವ ನಾಯಕಿ. ಇಬ್ಬರ ಮುದ್ದಿನ ಹುಡುಗ ಅಕ್ಷಯ್ ಯಾರಿಗೆ ಒಲಿಯುತ್ತಾನೆ? ನಕ್ಷತ್ರ ಕಥೆ ಏನು ಎಂಬುದೇ ದ್ವಿತೀಯಾರ್ಧ.

ನಕ್ಷತ್ರ ಪಾತ್ರ ಆಗಮನದ ಬಳಿಕ ಕಥೆಯ ವೇಗ ಹೆಚ್ಚುತ್ತದೆ. ಅಕ್ಷಯ್ ಆಗಿ ಅನೀಶ್ ತೇಜೇಶ್ವರ್ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ರೊಮ್ಯಾಂಟಿಕ್ ದೃಶ್ಯಗಳಲ್ಲಿ ಇನ್ನೂ ಸಹಜವೆನಿಸುವಂತೆ ಅಭಿನಯಿಸುವ ಅವಕಾಶವಿತ್ತು. ಸನಾ ಆಗಿ ಸ್ವರೂಪಿಣಿ ನಟನೆಯಲ್ಲಿ ಇನ್ನೊಂಚೂರು ಪಳಗಬೇಕಿತ್ತು. ನಕ್ಷತ್ರಳಾಗಿ ಜಾಹ್ನವಿಕಾ ಕಲಕೇರಿ ಕಣ್ಣುಗಳಲ್ಲಿಯೇ ನಟಿಸಿದ್ದಾರೆ. ಅಕ್ಷಯ್ ಗೆಳೆಯ ವರುಣ್ ಆಗಿ ನಾಟ್ಯ ರಂಗ ಗಮನ ಸೆಳೆಯುತ್ತಾರೆ. ಶಂಕರ್ ಆಗಿ ರಾಜೀವ ಕನಕಾಲ ಇಷ್ಟವಾಗುತ್ತಾರೆ.

ಇಷ್ಟಾಗಿಯೂ ಸಿನಿಮಾ ಕಾಡುವುದಿಲ್ಲ. ಕಥೆಯಲ್ಲಿ ಪ್ರೀತಿಯ ಗಾಢತೆ, ಪಕ್ವತೆ ಕಾಣಿಸುವುದಿಲ್ಲ. ಗಟ್ಟಿಯಾದ ಪ್ರೀತಿಗೆ ಅಂಟಿಕೊಳ್ಳಲು ಒಪ್ಪದ ನಾಯಕ ಹುಡುಗಿಯರ ಬದುಕಿನೊಂದಿಗೆ ಚೆಲ್ಲಾಟವಾಡುವ ಖಳನಾಯಕನಂತೆ ಭಾಸವಾಗುತ್ತಾನೆ. ಕಥೆಯಲ್ಲಿ ಬರುವ ಬಹಳಷ್ಟು ಹಾಸ್ಯಮಯ ಸನ್ನಿವೇಶಗಳು ಹಳತು ಅನ್ನಿಸುತ್ತವೆ. ಒಂದೆರಡು ಹಾಡುಗಳು ಸೊಗಸಾಗಿವೆ. ಹಿನ್ನೆಲೆ ಸಂಗೀತ ಇಡೀ ಚಿತ್ರದ ದೊಡ್ಡ ಶಕ್ತಿ. ಛಾಯಾಚಿತ್ರಗ್ರಹಣದಲ್ಲಿಯೂ ಹೊಸತನವೇನಿಲ್ಲ.

–ವಿನಾಯಕ ಕೆ.ಎಸ್.

ಮಹಿಳೆಯರ ಬೆಂಬಲ: ನಿತೀಶ್‌ಗೆ ಬಿ'ಹಾರ'

ಪುರುಷರಿಗಿಂತ ಮಹಿಳೆಯರ ಮತಪ್ರಮಾಣ ಶೇ 8.8ರಷ್ಟು ಅಧಿಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಜೆಡಿಯು ನಾಯಕ ನಿತೀಶ್ ಕುಮಾರ್ ಅವರು ಮತ್ತೊಮ್ಮೆ ಮುಖ್ಯಮಂತ್ರಿ ಪಟ್ಟ ಏರುವಂತಾಗಲು ಬಿಹಾರದ ಮಹಿಳಾ ಮತದಾರರು ನಿರ್ಣಾಯಕ ಪಾತ್ರವಹಿಸಿದ್ದಾರೆ. ಎನ್‌ಡಿಎ ಮೈತ್ರಿಕೂಟವು ಐತಿಹಾಸಿಕ ಗೆಲುವು ಸಾಧಿಸಿ, ಸರ್ಕಾರ ರಚಿಸಲು ಹಕ್ಕು ಸ್ಥಾಪಿಸುವಂತಾಗಲು ಕೂಡ ಮಹಿಳಾ ಮತದಾರರ ಬೆಂಬಲದ ಮುದ್ರೆ ಇರುವುದನ್ನು ಕೂಡ ನಿರಾಕರಿಸಲಾಗದು.

ಬಿಹಾರದಲ್ಲಿ ನಡೆದ ಕಳೆದ ಐದು ವಿಧಾನಸಭೆ ಚುನಾವಣೆಗಳಲ್ಲಿನ ಮತದಾನ ಪ್ರಮಾಣವನ್ನು ಅವಲೋಕಿಸಿದರೆ, ಪುರುಷರಿಗಿಂತ ಮಹಿಳೆಯರೇ ಹಕ್ಕು ಚಲಾವಣೆಯಲ್ಲಿ ಮುಂದೆ ಇರುವುದು ಚುನಾವಣಾ ಆಯೋಗದ ದತ್ತಾಂಶದಿಂದ ತಿಳಿದುಬರುತ್ತದೆ.

ಈ ಬಾರಿ ಮಾತ್ರ, ಪುರುಷ ಮತ್ತು ಮಹಿಳಾ ಮತದಾರರಿಂದ ಚಲಾವಣೆಯಾದ ಮತಗಳ ನಡುವಿನ ಅಂತರ ದಾಖಲೆ ಪ್ರಮಾಣದಲ್ಲಿದೆ. ಶೇ 71.6ರಷ್ಟು ಮಹಿಳೆಯರು ಮತ ಚಲಾಯಿಸಿದ್ದರೆ, ಪುರುಷರ ಪ್ರಮಾಣ ಶೇ 66.91. ಅಂದರೆ, ಪುರುಷರಿಗಿಂತ ಮಹಿಳೆಯರ ಮತಪ್ರಮಾಣವು ಶೇ 8.8ರಷ್ಟು ಹೆಚ್ಚು ಇರುವುದು ದತ್ತಾಂಶದಿಂದ ತಿಳಿದುಬರುತ್ತದೆ.

ನವದೆಹಲಿಯ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಶುಕ್ರವಾರ ನಡೆದ ಸಂಭ್ರಮಾಚರಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಧುಬನಿ ಕಲೆಯನ್ನು ಹೊಂದಿದ 'ಗಮಚಾ' (ಹೆಗಲ ಮೇಲೆ ಹಾಕುವ ಶಾಲು) ಬೀಸಿ ಸಂಭ್ರಮಾಚರಿಸಿದರು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಜೊತೆಗಿದ್ದರು –ಪಿಟಿಐ ಚಿತ್ರ

ಪ್ರಮುಖ ಅಂಶಗಳು

- ಪ್ರಧಾನಿ ನರೇಂದ್ರ ಮೋದಿ ಅವರು 'ಮುಖ್ಯಮಂತ್ರಿ ಮಹಿಳಾ ರೋಜಗಾರ ಯೋಜನೆ'ಯಡಿ ಸ್ವ ಉದ್ಯೋಗ ಕೈಗೊಳ್ಳುವುದಕ್ಕೆ ಪ್ರತಿ ಅರ್ಹ ಮಹಿಳೆಗೆ ₹10 ಸಾವಿರ ನೀಡುವುದಾಗಿ ಘೋಷಿಸಿದರು. ಯೋಜನೆಯಡಿ 75 ಲಕ್ಷ ಮಹಿಳೆಯರ ಬ್ಯಾಂಕ್ ಖಾತೆಗಳಿಗೆ ಸೆಪ್ಟೆಂಬರ್‌ನಲ್ಲಿ ಈ ಹಣವನ್ನು ವರ್ಗಾವಣೆ ಮಾಡಲಾಯಿತು. ಇದು ಮಹಿಳೆಯರ ಮತಪ್ರಮಾಣ ಹೆಚ್ಚಾಗಲು ಪ್ರಮುಖ ಕಾರಣಗಳಲ್ಲೊಂದು.
- ಏಳು ಜಿಲ್ಲೆಗಳಲ್ಲಿ ಪುರುಷರಿಗಿಂತ ಮಹಿಳೆಯರ ಮತಪ್ರಮಾಣ ಶೇ14ಕ್ಕಿಂತ ಹೆಚ್ಚು ಇದೆ. 10 ಜಿಲ್ಲೆಗಳಲ್ಲಿ ಈ ಅಂತರವು ಶೇ10ಕ್ಕೂ ಅಧಿಕ
- ಪಟ್ನಾ ವಿಧಾನಸಭಾ ಕ್ಷೇತ್ರದಲ್ಲಿ ಮಾತ್ರ ಮಹಿಳೆಯರಿಗಿಂತ ಪುರುಷರೇ ಹೆಚ್ಚಿನ ಸಂಖ್ಯೆಯಲ್ಲಿ ಮತ ಚಲಾಯಿಸಿದ್ದಾರೆ
- 2005ರಲ್ಲಿ ನಿತೀಶ್ ಕುಮಾರ್ ಗೆದ್ದು ಮೊದಲ ಬಾರಿಗೆ ಮುಖ್ಯಮಂತ್ರಿಯಾ-ದರು. ಈ ಚುನಾವಣೆಯನ್ನು ಹೊರತುಪಡಿಸಿ ಉಳಿದೆಲ್ಲಾ ಚುನಾವಣೆಗಳಲ್ಲಿ ಮಹಿಳೆಯರೇ ಹೆಚ್ಚು ಪ್ರಮಾಣದಲ್ಲಿ ಮತ ಚಲಾಯಿಸಿದ್ದಾರೆ
- ನಿತೀಶ್ ಕುಮಾರ್ ಮದ್ಯ ಮಾರಾಟ ನಿಷೇಧಿಸಿದರು. ಜೀವಿಕಾ ದೀದಿ ಯೋಜನಾ ಜಾರಿಗೊಳಿಸಿದರು. ಇಂತಹ ಅನೇಕ ಕಾರ್ಯಕ್ರಮಗಳು ಮಹಿಳೆಯರ ಬೆಂಬಲ ಗಿಟ್ಟಿಸುವಲ್ಲಿ ಯಶಸ್ಸು ತಂದುಕೊಟ್ಟಿವೆ

ಮದ್ಯ ಮಾರಾಟ ನಿಷೇಧ, ಮಹಿಳೆಯರ ಮೀಸಲಾತಿಯಲ್ಲಿ ಹೆಚ್ಚಳ, ವಿದ್ಯಾರ್ಥಿನಿಯರಿಗೆ ಸೈಕಲ್ ವಿತರಣೆಯಂತಹ ಕ್ರಮಗಳು ಮಹಿಳೆಯರು ನಿತೀಶ್ ಕುಮಾರ್ ಪರ ನಿಲ್ಲಲು ಕಾರಣವಾದವು. ಮದ್ಯ ನಿಷೇಧದ ನಂತರ ಕೌಟುಂಬಿಕ ದೌರ್ಜನ್ಯ ಗಣನೀಯವಾಗಿ ತಗ್ಗಿದೆ ಎಂದು ಮಹಿಳೆಯರೇ ಹೇಳುತ್ತಿದ್ದಾರೆ
ರಾಧಿಕಾ ರಾಮಶೇಷನ್, ಪತ್ರಕರ್ತೆ ಹಾಗೂ ರಾಜಕೀಯ ವಿಶ್ಲೇಷಕಿ

ಮಹಿಳೆಯರು ಹಾಗೂ ವಿದ್ಯಾರ್ಥಿನಿಯರನ್ನು ಗುರಿಯಾಗಿಸಿ ಜಾರಿಗೊಳಿಸಿದ ಯೋಜನೆಗಳು ಎನ್‌ಡಿಎ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿವೆ. ವಿವಿಧ ಆಮಿಷಗಳನ್ನು ಒಡ್ಡಿ ಮಹಿಳಾ ಮತದಾರರ ಮನ ಗೆಲ್ಲಲು ಮಹಾಘಟಬಂಧನ ಪ್ರಯತ್ನಿಸಿತು. ಆದರೆ, ಅದರ ಆಶ್ವಾಸನೆಗಳನ್ನು ಮಹಿಳೆಯರು ನಂಬಲೇ ಇಲ್ಲ
ನಿಖಿಲ್ ಆನಂದ, ಬಿಜೆಪಿ ಒಬಿಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ

ಚುನಾವಣೆ ಸಂದರ್ಭದಲ್ಲಿ ಘೋಷಿಸುವ ಮಹಿಳಾ ಕೇಂದ್ರಿತ ಕಾರ್ಯಕ್ರಮಗಳು ಆಡಳಿತಾರೂಢ ಪಕ್ಷ ಅಥವಾ ಮೈತ್ರಿಕೂಟಕ್ಕೆ ನ್ಯಾಯಸಮ್ಮತವಲ್ಲದ ಅನುಕೂಲ ಒದಗಿಸುತ್ತವೆ. ಇಂತಹ ನಡೆ ಮುಕ್ತ ಹಾಗೂ ನ್ಯಾಯಯುತ ಚುನಾವಣೆಗೆ ವಿರುದ್ಧವಾದುದು
ರಶೀದ್ ಕಿದ್ವಾಯಿ, ರಾಜಕೀಯ ವಿಶ್ಲೇಷಕ ಹಾಗೂ ಲೇಖಕ

ಜೈಲಿನಲ್ಲಿರುವ ಅನಂತಕುಮಾರ್ ಸಿಂಗ್‌ಗೆ ಜಯ

ಪಟ್ನಾ (ಪಿಟಿಐ): ಜನ ಸುರಾಜ್ ಪಕ್ಷದ ಬೆಂಬಲಿಗ ದುಲಾರ್ ಚಾಂದ್ ಯಾದವ್ ಹತ್ಯೆ ಪ್ರಕರಣದಲ್ಲಿ ಬಂಧಿತರಾಗಿ ಜೈಲಿನಲ್ಲಿರುವ, ಬಿಹಾರದ ಗ್ಯಾಂಗ್‌ಸ್ಟರ್ ಅನಂತ ಕುಮಾರ್ ಸಿಂಗ್, ಮೊಕಾಮ್ ಕ್ಷೇತ್ರದ ಜೆಡಿಯು ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ್ದಾರೆ. ಅವರು ಸಮೀಪದ ಪ್ರತಿಸ್ಪರ್ಧಿ, ಆರ್‌ಜೆಡಿ ಪಕ್ಷದ ಅಭ್ಯರ್ಥಿ ವೀಣಾ ಸಿಂಗ್ ಅವರಿಗಿಂತ 28,206 ಹೆಚ್ಚುವರಿ ಮತಗಳನ್ನು ಪಡೆದು ಜಯಗಳಿಸಿದ್ದಾರೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಅನಂತ ಕುಮಾರ್ ಅವರು ಒಟ್ಟಾರೆ 91,416 ಮತಗಳನ್ನು ಪಡೆದಿದ್ದರೆ, ವೀಣಾ ಅವರು 63,210 ಮತಗಳನ್ನು ಪಡೆದಿದ್ದಾರೆ. ಮೊಕಾಮ್ ಕ್ಷೇತ್ರವು 1990ರಿಂದ ಬಹುತೇಕ ಸಿಂಗ್ ಕುಟುಂಬದ ಹಿಡಿತದಲ್ಲಿಯೇ ಇದೆ. 2022ರಲ್ಲಿ ಅನಂತ ಅವರಿಗೆ ಯುಎಪಿಎ ಕಾಯ್ದೆಯಡಿ ಶಿಕ್ಷೆ ಪ್ರಕಟವಾಯಿತು. ಇದರಿಂದಾಗಿ ಅವರ ಶಾಸಕ ಸ್ಥಾನ ಅನರ್ಹಗೊಂಡಿತ್ತು. ಪಟ್ನಾ ಹೈಕೋರ್ಟ್ ಇತ್ತೀಚೆಗೆ ಅವರನ್ನು ಈ ಪ್ರಕರಣದಿಂದ ಖುಲಾಸೆಗೊಳಿಸಿತ್ತು.

'ಸುಶಾಸನ ಬಾಬು'ಗೆ ಮಣೆ

ಪಟ್ನಾ: ಜೆಡಿಯು ವರಿಷ್ಠ, ಮುಖ್ಯಮಂತ್ರಿ ನಿತೀಶ್ ಕುಮಾರ್ ಪ್ರಸಕ್ತ ಚುನಾವಣೆಯಲ್ಲಿ ಪಕ್ಷಕ್ಕೆ ಭರ್ಜರಿ ಜಯತಂದುಕೊಡುವ ಮೂಲಕ ಗಮನ ಸೆಳೆದಿದ್ದಾರೆ.

ಬಿಹಾರದ ರಾಜಕಾರಣದಲ್ಲಿ ವಿರೋಧಿಗಳು ಹಾಗೂ ಮಾಧ್ಯಮದವರು ಅವರನ್ನು 'ಪಲ್ಟು ರಾಮ್' ಎಂದೇ ಲೇವಡಿ ಮಾಡುತ್ತಾರೆ. ತಾನು, ಬೂದಿಯಿಂದ ಎದ್ದುಬರುವ 'ಫೀನಿಕ್ಸ್' ಪಕ್ಷಿಯಂತೆ ಎಂಬ ಸಂದೇಶವನ್ನು ನಿತೀಶ್ ರವಾನಿಸಿದ್ದಾರೆ.

ಅವರಿಗೆ ಮುಂದಿನ ವರ್ಷ ಮಾರ್ಚ್ 1ಕ್ಕೆ 75 ವರ್ಷ ತುಂಬಲಿದೆ. ಈ ಚುನಾವಣೆಯಲ್ಲಿ ಅವರ ಪಕ್ಷ ಜೆಡಿಯು ಅಧಿಕ ಸ್ಥಾನ ಗೆದ್ದಿರುವುದು ಗಮನಾರ್ಹ.

ದೀರ್ಘ ಅವಧಿಗೆ ಮುಖ್ಯಮಂತ್ರಿಯಾಗಿರುವ ಹೆಗ್ಗಳಿಕೆ ಹೊಂದಿರುವ ಅವರನ್ನು ಬೆಂಬಲಿಗರು 'ಸುಶಾಸನ ಬಾಬು'(ಉತ್ತಮ ಆಡಳಿತಗಾರ) ಎಂದು ಕರೆಯುತ್ತಾರೆ. ಕಾನೂನು ಮತ್ತು ಸುವ್ಯವಸ್ಥೆ ಇಲ್ಲದ ಬಿಹಾರವನ್ನು ಅಭಿವೃದ್ಧಿಯ ಹಳಿಗೆ ತಂದ ಶ್ರೇಯಸ್ಸು ನಿತೀಶ್ ಕುಮಾರ್ ಅವರಿಗೆ ಸಲ್ಲುತ್ತದೆ.

ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪದವೀಧರರಾಗಿರುವ ನಿತೀಶ್ ಕುಮಾರ್ ಸವೆಸಿದ ರಾಜಕೀಯ ದಾರಿ ಸುಗಮವಾಗೇನೂ ಇಲ್ಲ. ತುರ್ತು ಪರಿಸ್ಥಿತಿ ಬಳಿಕ 1977ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿ ವಿರೋಧಿ ಅಲೆ ಇತ್ತು. ತಮ್ಮ ಸಮಾಜವಾದಿ ಗೆಳೆಯರಾದ ಲಾಲು ಪ್ರಸಾದ್, ರಾಮವಿಲಾಸ್ ಪಾಸ್ವಾನ್ ಗೆದ್ದು ಬಂದರೂ, ನಿತೀಶ್ ಪರಾಭವಗೊಂಡಿದ್ದರು.

ಇಂದಿರಾ ಗಾಂಧಿ ಹತ್ಯೆ ನಂತರ 1985ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ, ನಿತೀಶ್ ಅವರು ಮೊದಲ ಬಾರಿಗೆ ಗೆದ್ದು ಬಿಹಾರ ವಿಧಾನಸಭೆ ಪ್ರವೇಶಿಸಿದರು. ಅಂದಿನಿಂದಲೂ, ರಾಜಕೀಯವಾಗಿ ತುಳಿಯಲು ಅವರ ವಿರೋಧಿಗಳು ಯತ್ನಿಸಿದಾಗಲೆಲ್ಲಾ ನಿತೀಶ್ ಪುಟಿದೆದ್ದು ಬಂದಿದ್ದಾರೆ.



'ದಣಿದಿಲ್ಲ..ನಿವೃತ್ತಿಯ ಮನಸ್ಸೂ ಇಲ್ಲ..'

ಮತ ಎಣಿಕೆ ಮುನ್ನಾ ದಿನವಾದ ಗುರುವಾರ, ಪಟ್ನಾದಲ್ಲಿರುವ ಜೆಡಿಯು ಕಚೇರಿ ಮುಂದೆ 'ಟೈಗರ್ ಅಭಿ ಜಿಂದಾ ಹೈ'(ಹುಲಿ ಇನ್ನೂ ಜೀವಂತ ಇದೆ) ಎಂಬ ಪೋಸ್ಟರ್‌ಗಳನ್ನು ಜೆಡಿಯು ಕಾರ್ಯಕರ್ತರು ಅಳವಡಿಸಿದ್ದರು. ಆ ಮೂಲಕ, ನಿತೀಶ್ ಕುಮಾರ್ ಮತ್ತೊಮ್ಮೆ ಮುಖ್ಯಮಂತ್ರಿ ಗಾದಿ ಏರಲಿದ್ದಾರೆ ಎಂಬ ಸಂದೇಶ ರವಾನಿಸಿದ್ದರು.

ಫಲಿತಾಂಶ ಹೊರಬಿದ್ದಿದ್ದು, ಜೆಡಿಯು ಒಳಗೊಂಡು ಎನ್‌ಡಿಎ ಅಭೂತಪೂರ್ವ ಜಯಗಳಿಸಿದೆ. ಹೀಗಾಗಿ, 'ಟೈಗರ್ ಅಭಿ ಜಿಂದಾ ಹೈ' ಎಂಬ ಬಾಲಿವುಡ್ ಚಿತ್ರದ ಹೆಸರು, 'ತಾನು ದಣಿದಿಲ್ಲ ಹಾಗೂ ನಿವೃತ್ತಿ ಹೊಂದುವ ಮನಸ್ಸೂ ಮಾಡಿಲ್ಲ' ಎಂಬ ನಿತೀಶ್ ಕುಮಾರ್ ನಿಲುವನ್ನು ಹೇಳುತ್ತದೆ ಎಂದು ವಿಶ್ಲೇಷಿಲಾಗುತ್ತಿದೆ.

ಚುನಾವಣೆಗೂ ಮುನ್ನ ನಿತೀಶ್ ಕುಮಾರ್ ಘೋಷಿಸಿದ್ದ ಹಲವು ಕೊಡುಗೆಗಳ ಬಗ್ಗೆ ವಿಪಕ್ಷಗಳು ಟೀಕೆ ಮಾಡಿದ್ದವು. ತಮ್ಮದೇ ಕಾರ್ಯಕ್ರಮಗಳನ್ನು ನಿತೀಶ್ ನಕಲು ಮಾಡುತ್ತಿದ್ದಾರೆ ಎಂದು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ವಾಗ್ದಾಳಿ ನಡೆಸಿದ್ದರೆ, 'ನಿತೀಶ್ ಕುಮಾರ್ ಮತದಾರರಿಗೆ ಲಂಚ ನೀಡುತ್ತಿದ್ದು, ಈ ಬಗ್ಗೆ ಚುನಾವಣಾ ಆಯೋಗ ಕ್ರಮ ಕೈಗೊಳ್ಳಬೇಕು' ಎಂದು ಜನ ಸುರಾಜ್ ಪಕ್ಷದ ನಾಯಕ ಪವನ್ ವರ್ಮಾ ಆಗ್ರಹಿಸಿದ್ದರು.

ಈ ಟೀಕೆಗಳಿಂದ ಧೃತಿಗೆಡದ ನಿತೀಶ್ ಕುಮಾರ್ ಬಿರುಸಿನ ಪ್ರಚಾರ ನಡೆಸಿ, ಪಕ್ಷವನ್ನು ಗೆಲುವಿನ ದಡಕ್ಕೆ ಸೇರಿದ್ದಾರೆ.

ಜನರ ತೀರ್ಪು ಒಪ್ಪಿಕೊಳ್ಳಬೇಕು: ಸಿದ್ದರಾಮಯ್ಯ

ಬೆಂಗಳೂರು: 'ಬಿಹಾರದ ಜನರ ತೀರ್ಪನ್ನು ಒಪ್ಪಿಕೊಳ್ಳಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಮಹಾ ಘಟಬಂಧನ್‌ಗೆ ಯಾಕೆ ಮತ ಹಾಕಿಲ್ಲ. ಇಂಡಿಯಾ ಮೈತ್ರಿಕೂಟಕ್ಕೆ ಏಕೆ ಹಿನ್ನಡೆಯಾಯಿತು ಗೊತ್ತಿಲ್ಲ. ಏನೇ ಆದರೂ ಜನರ ತೀರ್ಪನ್ನು ಒಪ್ಪಿಕೊಳ್ಳ-ಬೇಕು. ನಾನು ಬಿಹಾರಕ್ಕೆ ಈ ಬಾರಿ ಚುನಾವಣಾ ಪ್ರಚಾರಕ್ಕೆ ಹೋಗಿರಲಿಲ್ಲ. ಎನ್‌ಡಿಎ ಏಕೆ ದೊಡ್ಡ ಬಹುಮತದಿಂದ ಗೆಲುವು ಸಾಧಿಸಿದೆ ಎನ್ನುವ ಕುರಿತು ಮಾಹಿತಿ ತಿಳಿದುಕೊಳ್ಳಲು ಪ್ರಯತ್ನಿಸುತ್ತೇನೆ' ಎಂದು ಹೇಳಿದರು.

'ಅಷ್ಟು ದೊಡ್ಡ ಸಂಖ್ಯೆಯಲ್ಲಿ ಗೆಲುವು ಸಾಧಿಸಿದ್ದು ನೋಡಿದರೆ ಮತ ಕಳವು ಶಂಕೆ ಇದೆ. ಅಲ್ಲಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆದ ಬಳಿಕವಷ್ಟೇ ಪ್ರತಿಕ್ರಿಯೆ ನೀಡುವೆ' ಎಂದಷ್ಟೇ ಹೇಳಿದರು.

ಅಹಿಂದ ಸಮುದಾಯದವರು ಕೈ ಹಿಡಿಯಲಿಲ್ಲವಲ್ಲ ಎಂಬ ಪ್ರಶ್ನೆಗೆ, 'ಅಲ್ಲಿನ ಮುಖ್ಯಮಂತ್ರಿ ನಿತೀಶ್ ಕುಮಾರ್ ಯಾರು? ಅವರು ಹಿಂದುಳಿದವರು ಅಲ್ಲವೇ' ಎಂದರು.

ಬಿಹಾರದ ರಾಜಕೀಯ ಭೂಪಟದಲ್ಲಿ ಕಾಂಗ್ರೆಸ್ ಪಕ್ಷವು ಅಸ್ತಿತ್ವಕ್ಕಾಗಿ ತಿಣುಕಾಡಬೇಕಾದ ಸ್ಥಿತಿಗೆ ಅಲ್ಲಿನ ಮತದಾರರು ತಳ್ಳಿದ್ದಾರೆ. ಎನ್‌ಡಿಎ ಜಯ ಪ್ರಜಾಪ್ರಭುತ್ವದ ದಿಗ್ವಿಜಯ. ಮೋದಿ ನೇತೃತ್ವದ ಸರ್ಕಾರ ದೇಶಕ್ಕೆ ಅನಿವಾರ್ಯ
ಬಿ.ವೈ.ವಿಜಯೇಂದ್ರ
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಬಿಹಾರದ ಮತದಾರರು ಕಾಂಗ್ರೆಸ್‌ನ 'ಮತ ಕಳವು' ಪ್ರಹಸನವನ್ನು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಬಿಹಾರ ಫಲಿತಾಂಶ ಸಿದ್ದರಾಮಯ್ಯ ಅವರ ಪಾಲಿಗೆ ಹಬ್ಬವಾಗಿದೆ. ಇನ್ನು ಮುಂದೆ ಸಿದ್ದರಾಮಯ್ಯ ಅವರು ರಾಹುಲ್ ಗಾಂಧಿಯನ್ನೇ ಆಟವಾಡಿಸುತ್ತಾರೆ
ಆರ್.ಅಶೋಕ
ವಿರೋಧ ಪಕ್ಷದ ನಾಯಕ

ರಾಹುಲ್ ಗಾಂಧಿ ಅವರ ನಕಾರಾತ್ಮಕ ಧೋರಣೆ ಹಾಗೂ ಆರ್‌ಜೆಡಿಯ ತೇಜಸ್ವಿ ಯಾದವ್ ಅವರ ಜಂಗಲ್ ರಾಜ್ಯವನ್ನು ಬಿಹಾರದ ಜನತೆ ತಿರಸ್ಕರಿಸಿದ್ದಾರೆ. ಎನ್‌ಡಿಎ ಮೈತ್ರಿಕೂಟಕ್ಕೆ ಬಹುಮತ ನೀಡಿ, 'ಮಂಗಲ್' ರಾಜ್ಯಕ್ಕೆ ಮನ್ನಣೆ ನೀಡಿದ್ದಾರೆ
ಪ್ರಲ್ಹಾದ ಜೋಶಿ
ಕೇಂದ್ರ ಸಚಿವ

'ಯಾತ್ರೆ' ಕೈಗೊಂಡಲ್ಲಿಯೂ ಕಾಂಗ್ರೆಸ್‌ಗೆ ಸೋಲು

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರ ವಿಧಾನಸಭೆ ಚುನಾವಣೆಗೆ ಭರ್ಜರಿ ತಯಾರಿ ನಡೆಸಿದ್ದ ಕಾಂಗ್ರೆಸ್ ಪಕ್ಷ, ತನ್ನ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಆಗಸ್ಟ್‌ನಲ್ಲಿ 'ಮತ ಅಧಿಕಾರ ಯಾತ್ರೆ' ಕೈಗೊಂಡಿತ್ತು. ಈ ಯಾತ್ರೆ ಸಾಗಿದ ಮಾರ್ಗದ ಪ್ರದೇಶಗಳಲ್ಲಿನ ಕ್ಷೇತ್ರಗಳಲ್ಲೇ ಕಾಂಗ್ರೆಸ್ ಅಭ್ಯರ್ಥಿಗಳು ಹೀನಾಯವಾಗಿ ಸೋತಿದ್ದಾರೆ.

ಮತಗಳ ಕ್ರೋಡೀಕರಣ ಉದ್ದೇಶದಿಂದ ಕೈಗೊಂಡಿದ್ದ ಈ ಯಾತ್ರೆಯು ಸಾಸಾರಾಮ್‌ದಿಂದ ಶುರುವಾಗಿ ಪಟ್ನಾದಲ್ಲಿ ಕೊನೆಯಾಗಿತ್ತು. 1,300 ಕಿ.ಮೀ. ಕ್ರಮಿಸಿದ್ದ ಈ ಯಾತ್ರೆಯು 25 ಜಿಲ್ಲೆಗಳ ಮೂಲಕ ಸಾಗಿತ್ತು. ಈ ಮಾರ್ಗದಲ್ಲಿ 120 ವಿಧಾನಸಭಾ ಕ್ಷೇತ್ರಗಳಿವೆ. ಅರರಿಯಾ ಕ್ಷೇತ್ರದಲ್ಲಿ ಮಾತ್ರ ಪಕ್ಷದ ಅಭ್ಯರ್ಥಿ ಗೆದ್ದಿದ್ದಾರೆ. ಈ ಮಾರ್ಗದಲ್ಲಿನ ಕ್ಷೇತ್ರಗಳಲ್ಲಿ ಎನ್‌ಡಿಎದ ಶೇ90ರಷ್ಟು ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ.

ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ 61 ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ಈ ಪೈಕಿ ಆರು ಕ್ಷೇತ್ರಗಳಲ್ಲಿ ಗೆದ್ದಿದೆ.

ಬಿಜೆಪಿಯು ಭರ್ಜರಿ ಜಯ ಸಾಧಿಸಿದ ಬೆನ್ನಲ್ಲೇ, ಕಾಂಗ್ರೆಸ್ ಹಾಗೂ ರಾಹುಲ್ ಗಾಂಧಿ ಅವರನ್ನು ಕಿಚಾಯಿಸಿ ಹಾಗೂ ಟೀಕಿಸುವಂತಹ ಪೋಸ್ಟ್‌ಗಳನ್ನು ತನ್ನ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಹಾಕಿದೆ.

'ಮಕ್ಕಳ ದಿನಾಚರಣೆ ವೇಳೆ 'ರಾಷ್ಟ್ರೀಯ ಮಗು' ಅಸಮಾಧಾನಗೊ-ಳ್ಳುವಂತೆ ಮಾಡಿದ್ದಕ್ಕಾಗಿ ಕ್ಷಮೆ ಇರಲಿ. ನಿಜಕ್ಕೂ ಇದು ದುರದೃಷ್ಟಕರ' ಎಂಬ ಪೋಸ್ಟ್ ಹಾಕುವ ಮೂಲಕ ಬಿಜೆಪಿಯ ಅಸ್ಸಾಂ ಘಟಕವು ರಾಹುಲ್ ಗಾಂಧಿ ಅವರನ್ನು ಕುಟುಕಿದೆ.

'ಮುಂದಿನ ಸರದಿ ಪಶ್ಚಿಮ ಬಂಗಾಳ' ಎಂಬುದಾಗಿ ಬಿಜೆಪಿಯ ಪಶ್ಚಿಮ ಬಂಗಾಳ ಘಟಕವು 'ಎಕ್ಸ್'ನಲ್ಲಿ ಬರೆದುಕೊಂಡಿದೆ. ಟಿಎಂಸಿ ಇದಕ್ಕೆ ತಿರುಗೇಟು ನೀಡಿ, ಪೋಸ್ಟ್ ಮಾಡಿದೆ.

95 ಚುನಾವಣೆಗಳನ್ನು ಸೋತಿರುವ ರಾಹುಲ್ ಗಾಂಧಿ ಅವರು ಸೋತಾಗಲೆಲ್ಲಾ ಹೊಸ ಆರೋಪ ಮಾಡುತ್ತಾರೆ. ಅವರ ಆರೋಪ ಸುಳ್ಳು ಎಂಬುದು ದೇಶಕ್ಕೆ ಅರಿವಾಗಿದೆ
ಬಿಜೆಪಿ ಸಾಮಾಜಿಕ ಮಾಧ್ಯಮ ವಿಭಾಗ

ಗೆದ್ದ– ಸೋತ ಪ್ರಮುಖರು

ಅಭ್ಯರ್ಥಿ	ಪಕ್ಷ	ಕ್ಷೇತ್ರ	ಫಲಿತಾಂಶ
ತೇಜಸ್ವಿ ಯಾದವ್	ಆರ್‌ಜೆಡಿ	ರಾಘೋಪುರ್	ಗೆಲುವು
ಮೈಥಿಲಿ ಠಾಕೂರ್	ಬಿಜೆಪಿ	ಅಲಿನಗರ	ಗೆಲುವು
ಶ್ರವಣ್‌ಕುಮಾರ್	ಜೆಡಿಯು	ನಲಂದಾ	ಗೆಲುವು
ಪ್ರೇಮ್‌ಕುಮಾರ್	ಬಿಜೆಪಿ	ಗಯಾ ನಗರ	ಗೆಲುವು
ಬಿಜೇಂದ್ರ ಪ್ರಸಾದ್ ಯಾದವ್	ಜೆಡಿಯು	ಸುಪೌಲ್	ಗೆಲುವು
ದೀಪಾಕುಮಾರಿ	ಎಚ್‌ಎಎಂ	ಇಮಾಮ್‌ಗಂಜ್	ಗೆಲುವು
ಶತ್ರುಘನ್ ಯಾದವ್	ಆರ್‌ಜೆಡಿ	ಛಪ್ರಾ	ಸೋಲು
ರಾಜೇಶ್‌ಕುಮಾರ್	ಕಾಂಗ್ರೆಸ್	ಕುಟುಂಬ	ಸೋಲು
ತೇಜ್‌ಪ್ರತಾಪ್ ಯಾದವ್	ಜೆಜೆಡಿ	ಮಹುವಾ	ಸೋಲು

ರಾಜಸ್ಥಾನ, ತೆಲಂಗಾಣದಲ್ಲಿ 'ಕೈ'ಗೆ ಜಯ

ದೇವ್‌ಯಾನಿ ರಾಣಾ

ನವದೆಹಲಿ (ಪಿಟಿಐ): ಇದೇ ನವೆಂಬರ್ 11ರಂದು ವಿವಿಧ ರಾಜ್ಯಗಳ 8 ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯ ಫಲಿತಾಂಶವು ಶುಕ್ರವಾರ ಪ್ರಕಟವಾಗಿದೆ. ಆಡಳಿತರೂಢ ಪಕ್ಷವು ನಾಲ್ಕು ಕ್ಷೇತ್ರಗಳಲ್ಲಿ ಸೋಲುಂಡಿದೆ. ಬಿಜೆಪಿ ಆಡಳಿತವಿರುವ ರಾಜಸ್ಥಾನದಲ್ಲಿ ಕಾಂಗ್ರೆಸ್ 1 ಸ್ಥಾನ ಪಡೆದಿದ್ದು, ಒಮರ್ ಅಬ್ದುಲ್ಲಾ ಕುಟುಂಬ ಪ್ರಾಬಲ್ಯ ಹೊಂದಿದ್ದ ಬಡಗಾಮ್‌ನಲ್ಲಿ ವಿರೋಧ ಪಕ್ಷ ಪಿಡಿಪಿ ಐತಿಹಾಸಿಕ ಗೆಲುವು ಪಡೆದಿದೆ.

ಕಾಂಗ್ರೆಸ್, ಬಿಜೆಪಿ ಹೆಚ್ಚುವರಿಯಾಗಿ ಒಂದು ಸೀಟು ಪಡೆದಿದ್ದರೆ, ಆಮ್‌ಆದ್ಮಿ, ಜೆಎಂಎಂ ಪಕ್ಷವು ತನ್ನ ಕ್ಷೇತ್ರಗಳನ್ನು ಉಳಿಸಿಕೊಂಡಿದೆ.

ಜಮ್ಮುವಿನ 'ನಗ್ರೋಟಾ' ಕ್ಷೇತ್ರದಲ್ಲಿ ಬಿಜೆಪಿಯ ದೇವ್‌ಯಾನಿ ರಾಣಾ ಗೆಲುವು ಪಡೆದಿದ್ದಾರೆ. ಮಿಜೋರಾಂನ 'ಡಂಪಾ' ಕ್ಷೇತ್ರದಲ್ಲಿ ಮಿಜೋ ನ್ಯಾಷನಲ್ ಫ್ರಂಟ್, ರಾಜಸ್ಥಾನದ 'ಅಂತಾ' ಹಾಗೂ ತೆಲಂಗಾಣದ 'ಜುಬಿಲಿ ಹಿಲ್ಸ್'ನಲ್ಲಿ ಕಾಂಗ್ರೆಸ್ ಗೆಲುವು ಪಡೆದಿದೆ.

ಒಡಿಶಾದ 'ನುಆಪಾಡಾ' ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಗೆದ್ದರೆ, ಪಂಜಾಬ್‌ನ 'ತರನ್ ತಾರನ್' ಕ್ಷೇತ್ರದಲ್ಲಿ ಆಮ್‌ಆದ್ಮಿ ಪಕ್ಷ, ಜಾರ್ಖಂಡ್‌ನ 'ಗಾಟ್‌ಶೀಲಾ' ಕ್ಷೇತ್ರದಲ್ಲಿ ಜೆಎಂಎಂ ಅಭ್ಯರ್ಥಿ ಜಯಭೇರಿ ಬಾರಿಸಿದ್ದಾರೆ.

ತನ್ನದೇ ಪಕ್ಷಕ್ಕೆ ತಂತ್ರ ರೂಪಿಸುವಲ್ಲಿ ವಿಫಲಗೊಂಡ ಚುನಾವಣಾ ತಂತ್ರ ನಿಪುಣ

ಚುನಾವಣೆ: ಪಿ.ಕೆ ಸೋತಿದ್ದು ಹೇಗೆ?

• ಅಭಯ ಕುಮಾರ್


ಪ್ರಶಾಂತ ಕಿಶೋರ್

ಪಟ್ನಾ: ಚುನಾವಣಾ ತಂತ್ರಗಾರ ಪ್ರಶಾಂತ ಕಿಶೋರ್ (ಪಿ.ಕೆ) ನೇತೃತ್ವದ ಜನ ಸುರಾಜ್ ಪಕ್ಷ ಬಿಹಾರ ವಿಧಾನಸಾಭಾ ಚುನಾವಣೆಯಲ್ಲಿ ಸಂಪೂರ್ಣ ನೆಲಕಚ್ಚಿದೆ. ಅದಕ್ಕೆ ಪ್ರಶಾಂತ್ ಅವರ ಹಲವು ನಡೆ, ನುಡಿಗಳೇ ಪ್ರಮುಖ ಕಾರಣ.

ಚುನಾವಣಾ ಅಧಿಸೂಚನೆ ಪ್ರಕಟಣೆಗೂ ಒಂದು ತಿಂಗಳು ಮುನ್ನ ವಿವಿಧ ಮಾಧ್ಯಮಗಳಿಗೆ ಹಲವು ಸಂದರ್ಶನಗಳನ್ನು ನೀಡಿದ್ದ ಪಿ.ಕೆ, 'ಇದು ಬಿಹಾರದ ಮುಖ್ಯಮಂತ್ರಿಯಾಗಿ ನಿತೀಶ್ ಕುಮಾರ್ ಅವರ ಕೊನೆಯ ಅವಧಿ. ಒಂದು ವೇಳೆ ನಿತೀಶ್ ಅವರ ಜೆಡಿಯು ಪಕ್ಷ 25ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆದ್ದರೆ, ನಾನು ರಾಜಕೀಯವನ್ನೇ ತ್ಯಜಿಸುತ್ತೇನೆ' ಎಂದು ಘೋಷಿಸಿದ್ದರು.

ಅತಿಯಾದ ಉತ್ಸಾಹ, ಕೆಲವೊಮ್ಮೆ ಅತಿಯಾದ ಆತ್ಮವಿಶ್ವಾಸ ಮತ್ತು ಅಹಂಕಾರ ಅವರ ಮಾತುಗಳಲ್ಲಿ ವ್ಯಕ್ತವಾಗುತ್ತಿತ್ತು.

'ಹಿಂದುಳಿದ ವರ್ಗಗಳ ಮುಖ್ಯಮಂತ್ರಿಗಳಿಂದ (ನಿತೀಶ್, ಲಾಲೂ) ಬೇಸತ್ತಿರುವ ಬಿಹಾರದ ಜನರಿಗೆ ಪಿ.ಕೆಯಂತಹ ಬ್ರಾಹ್ಮಣ ಮುಖ ಪರ್ಯಾಯವಾಗಲಿದೆ. ಆ ಮೂಲಕ ಮೇಲ್ಜಾತಿ ವೈಭವ ಮರಳಿ ತರಬಹುದು' ಎಂದು ಹೇಳಿದ್ದರು.

ಸ್ವಚ್ಛ ಸರ್ಕಾರ ನೀಡುವ ಭರವಸೆಯೊಂದಿಗೆ 2024ರ ಅಕ್ಟೋಬರ್‌ನಲ್ಲಿ ಪ್ರಶಾಂತ್, ಜನ ಸುರಾಜ್ ಪಕ್ಷವನ್ನು ಸ್ಥಾಪಿಸಿದರು. ಎಲ್ಲ 243 ಕ್ಷೇತ್ರಗಳಲ್ಲಿ ಸ್ಪರ್ಧಿಸುವುದಾಗಿ ಘೋಷಿಸಿದ್ದ ಅವರು, ಯಾವುದೇ ರಾಜಕೀಯ ಪಕ್ಷದ ಜತೆಗೆ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದಿದ್ದರು.

ಬಿಜೆಪಿಯ ಮಾಜಿ ಸಂಸದ ಉದಯ್ ಸಿಂಗ್ ಅವರನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ನೇಮಿಸಿದರು. ಆದರೆ, ಅವರು ಅಷ್ಟು ಜನಪ್ರಿಯ ವ್ಯಕ್ತಿಯಾಗಿರಲಿಲ್ಲ. ಬಿಹಾರದ ಹೊರಗಿನವರಿಗಂತೂ ಅವರ ಬಗ್ಗೆ ಏನೂ ತಿಳಿದಿರಲಿಲ್ಲ. ಅಲ್ಲದೆ ಶಿವಸೇನಾ ಮುಖ್ಯಸ್ಥ ಬಾಳ ಸಾಹೇಬ್ ಠಾಕ್ರೆ ಮಹಾರಾಷ್ಟ್ರದಲ್ಲಿ ತಮ್ಮ ಪಕ್ಷವನ್ನು ಮುನ್ನಡೆಸಿದಂತೆ, ತಾನೂ ಜನ ಸುರಾಜ್ ಪಕ್ಷವನ್ನು 'ರಿಮೋಟ್ ಕಂಟ್ರೋಲ್' ಮೂಲಕ ನಿಯಂತ್ರಿಸುವ ಭ್ರಮೆಯಲ್ಲಿದ್ದರು.

ವಿವಿಧ ಕ್ಷೇತ್ರ ತಜ್ಞರು, ವೈದ್ಯರು, ಎಂಜಿನಿಯರ್ ಸೇರಿದಂತೆ ಅನೇಕ ವೃತ್ತಿಪರರನ್ನು ಅಭ್ಯರ್ಥಿಗಳನ್ನಾಗಿಸಿದ ಪಿ.ಕೆ ತಮ್ಮನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಕೊಳ್ಳಲಿಲ್ಲ.

'ಜನ ಸುರಾಜ್ ಪಕ್ಷದ ಸೋಲಿಗೆ ಪಿ.ಕೆಯನ್ನು ಬಿಟ್ಟರೆ ಇತರರನ್ನು ದೂಷಿಸಲು ಆಗದು. ಇತರ ರಾಜಕೀಯ ಪಕ್ಷಗಳಿಗೆ ತಂತ್ರಗಳನ್ನು ರೂಪಿಸಿದ ವ್ಯಕ್ತಿ ತನ್ನದೇ ಪಕ್ಷಕ್ಕೆ ಸರಿಯಾದ ತಂತ್ರ ರೂಪಿಸುವಲ್ಲಿ ವಿಫಲರಾದರು' ಎಂದು ಹಿಂದಿ ನಿಯತಕಾಲಿಕೆಯ ಸಂಪಾದಕ ಗಿರಿಧರ್ ಝಾ ಪ್ರತಿಕ್ರಿಯಿಸಿದ್ದಾರೆ.

ಮರುಮತದಾನ ಇಲ್ಲದ ಚುನಾವಣೆ

ನವದೆಹಲಿ(ಪಿಟಿಐ): ಇದೇ ಮೊದಲ ಬಾರಿಗೆ ಬಿಹಾರ ವಿಧಾನಸಭೆ ಚುನಾವಣೆ ವೇಳೆ ಯಾವುದೇ ಕ್ಷೇತ್ರದಲ್ಲಿ ಮರುಮತದಾನ ನಡೆದಿಲ್ಲ ಹಾಗೂ ಮತದಾನ ದಿನದಂದು ಘರ್ಷಣೆ-ಹಿಂಸಾಚಾರದಿಂದಾಗಿ ಸಾವು ಸಂಭವಿಸಿಲ್ಲ.

1985ರಲ್ಲಿ ನಡೆದ ಚುನಾವಣೆ ಸಂದರ್ಭದಲ್ಲಿ, ಹಿಂಸಾಚಾರದಿಂದಾಗಿ 63 ಜನರು ಮೃತಪಟ್ಟಿದ್ದರು. 156 ಮತಗಟ್ಟೆಗಳಲ್ಲಿ ಮರುಮತದಾನಕ್ಕೆ ಆದೇಶಿಸಲಾಗಿತ್ತು ಎಂಬುದನ್ನು ಇವೇ ದತ್ತಾಂಶಗಳು ಹೇಳುತ್ತವೆ.

1990ರಲ್ಲಿ ಚುನಾವಣೆ ಸಂದರ್ಭದಲ್ಲಿ ನಡೆದ ಹಿಂಸಾಚಾರದಲ್ಲಿ 87 ಜನರು ಮೃತಪಟ್ಟಿದ್ದರು. ಆ ವರ್ಷ ವ್ಯಾಪಕ ಚುನಾವಣಾ ಅಕ್ರಮಗಳು ನಡೆದವು. ಹಿಂದೆಂದೂ ಕಂಡಿರದಷ್ಟು ಹಿಂಸಾಚಾರ ನಡೆದಿತ್ತು. ಈ ಕಾರಣಕ್ಕೆ, ಅಂದಿನ ಮುಖ್ಯ ಚುನಾವಣಾ ಆಯುಕ್ತ ಟಿ.ಎನ್.ಶೇಷನ್ ಅವರು ನಾಲ್ಕು ಬಾರಿ ಚುನಾವಣೆ ಮುಂದೂಡಿದ್ದರು. 2005ರಲ್ಲಿ 660 ಮತಗಟ್ಟೆಗಳಲ್ಲಿ ಮರುಮತದಾನ ನಡೆದಿತ್ತು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 editpage@prajavani.co.in

ಅಭಿಮತ

ಸುಭಾಷಿತ

ದಯೆಯೇ ತೃಪ್ತಿಯನ್ನು ತರುವ ಸತ್ಯ.

-ಖಲೀಲ್ ಗಿಬ್ರಾನ್

ಸಂಪಾದಕೀಯ

ಎನ್‌ಡಿಎಗೆ ಅಭೂತಪೂರ್ವ ಗೆಲುವು ಮಹಾಘಟಬಂಧನಕ್ಕೆ ಪಾಠ ಹಲವು

ದೇಶದ ಪ್ರಮುಖ ರಾಜ್ಯಗಳಲ್ಲಿ ಒಂದಾಗಿರುವ ಬಿಹಾರದಲ್ಲಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟವು (ಎನ್‌ಡಿಎ) ಅಭೂತಪೂರ್ವ ಗೆಲುವನ್ನು ಸಾಧಿಸಿದೆ. ಪ್ರತೀ ಐದರಲ್ಲಿ ನಾಲ್ಕರಷ್ಟು ಸ್ಥಾನಗಳನ್ನು ಈ ಮೈತ್ರಿಕೂಟವು ಗೆದ್ದಿರುವುದರಿಂದ ನಿತೀಶ್ ಕುಮಾರ್ ನೇತೃತ್ವದ ಸರ್ಕಾರವು ಮತ್ತೊಂದು ಅವಧಿಗೆ ಮುಂದುವರಿಯುವುದೂ ಖಚಿತವಾಗಿದೆ. ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ನೇತೃತ್ವದ ಮಹಾಘಟಬಂಧನವು ಅತ್ಯಂತ ಹೀನಾಯ ಸೋಲನ್ನು ಕಂಡಿದೆ. ಮಹಾಘಟಬಂಧನದ ಪ್ರಮುಖ ಪಕ್ಷಗಳಾದ ಆರ್‌ಜೆಡಿ ಹಾಗೂ ಕಾಂಗ್ರೆಸ್ ತೀವ್ರ ಹಿನ್ನಡೆಯನ್ನು ಅನುಭವಿಸಿದ್ದು, ಕಳೆದ ಬಾರಿ ಜಯಿಸಿದ್ದ ಸ್ಥಾನಗಳಲ್ಲಿ ಬಹುಪಾಲನ್ನು ಕಳೆದುಕೊಂಡಿವೆ. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಎನ್‌ಡಿಎಯ ಪ್ರಮುಖ ನಾಯಕರು ಪ್ರತಿಪಾದಿಸಿದ್ದಕ್ಕಿಂತಲೂ ದೊಡ್ಡ ಗೆಲುವು ಅವರ ಮೈತ್ರಿಕೂಟಕ್ಕೆ ದಕ್ಕಿದೆ. ಬಿಹಾರ ವಿಧಾನಸಭೆಯಲ್ಲಿ ಈ ಬಾರಿ, ಬಿಜೆಪಿಯು ಬಹುದೊಡ್ಡ ಪಕ್ಷವಾಗಿದೆ. ಮಿತ್ರಪಕ್ಷ ಬಿಜೆಪಿಯು ಹೆಚ್ಚಿನ ಸ್ಥಾನ ಪಡೆದಿದ್ದರೂ ಜನತಾ ದಳ (ಸಂಯುಕ್ತ–ಜೆಡಿಯು) ನಾಯಕ ನಿತೀಶ್ ಕುಮಾರ್ ಎನ್‌ಡಿಎಯ ವಿವಾದಾತೀತ ನಾಯಕರಾಗಿ ಹೊರಹೊಮ್ಮಿದ್ದಾರೆ. ಮುಖ್ಯಮಂತ್ರಿಯಾಗಿ ನಿತೀಶ್ ಅವರೇ ಮುಂದುವರಿದರೂ, ಎನ್‌ಡಿಎಯಲ್ಲಿ 'ಶಕ್ತಿಕೇಂದ್ರ'ದ ಸ್ಥಾನಪಲ್ಲಟವಾಗುವ ಲಕ್ಷಣಗಳು ಕೂಡ ಗೋಚರಿಸಿವೆ. ಜೆಡಿಯು ನಾಯಕನ ಆರೋಗ್ಯ ಕ್ಷೀಣಿಸಿರುವುದು ಮತ್ತು ಬಿಜೆಪಿಯ ಪ್ರಾಬಲ್ಯ ಹೆಚ್ಚಿರುವುದು ಇದಕ್ಕೆ ಕಾರಣ. ರಾಷ್ಟ್ರ ಮಟ್ಟದಲ್ಲೂ ಈ ಫಲಿತಾಂಶವು ಪರಿಣಾಮ ಬೀರುವ ಸಾಮರ್ಥ್ಯವನ್ನು ಹೊಂದಿದೆ. ಏಕೆಂದರೆ, ಮೋದಿ ನೇತೃತ್ವದ ಕೇಂದ್ರ ಸರ್ಕಾರದಲ್ಲಿ ಜೆಡಿಯು ಕೂಡ ಭಾಗಿಯಾಗಿದೆ ಮತ್ತು ಆ ಮೈತ್ರಿ ಮುಂದುವರಿಯಲು ಈ ಗೆಲುವು ದೊಡ್ಡ ಬೆಸುಗೆಯಾಗಲಿದೆ. ಮುಂಬರುವ ತಿಂಗಳುಗಳಲ್ಲಿ ಕೆಲವು ರಾಜ್ಯಗಳು ಚುನಾವಣೆ ಎದುರಿಸಲಿದ್ದು, ಗಾಳಿ ಎತ್ತ ಬೀಸುತ್ತಿದೆ ಎನ್ನುವುದಕ್ಕೂ ಈ ಫಲಿತಾಂಶ ಒಂದು ದಿಕ್ಸೂಚಿಯಾಗಿದೆ.

ಬಿಹಾರದಲ್ಲಿನ ಗೆಲುವು ಎನ್‌ಡಿಎ ಕಾರ್ಯತಂತ್ರ ಮತ್ತು ಸಂಘಟಿತ ಪ್ರಯತ್ನಕ್ಕೆ ಸಂದ ಗೆಲುವು. ಮಹಿಳಾ ಮತದಾರರು ನಿತೀಶ್ ನಾಯಕತ್ವಕ್ಕೆ ಬಲ ತುಂಬಿದ್ದಾರೆ.

ಬಿಹಾರದಲ್ಲಿ ಯಾವ ಆಡಳಿತ ವಿರೋಧಿ ಅಲೆಯೂ ಇರಲಿಲ್ಲ, ಬದಲಾಗಿ ಆಡಳಿತ ಪರವಾದ ಅಲೆಯೇ ಬೀಸುತ್ತಿತ್ತು ಎಂಬುದನ್ನೂ ಫಲಿತಾಂಶ ತೋರಿಸಿಕೊಟ್ಟಿದೆ. 'ಸುಶಾಸನ ಬಾಬು' ಎಂದೇ ಹೆಸರಾದ ನಿತೀಶ್ ಕುಮಾರ್ ಅವರು ಬಿಹಾರದಲ್ಲಿ ಅತ್ಯಂತ ಜನಪ್ರಿಯ ನಾಯಕರಾಗಿದ್ದಾರೆ ಎನ್ನುವುದು ಮತ್ತೊಮ್ಮೆ ನಿರೂಪಿತವಾಗಿದೆ. ಎನ್‌ಡಿಎಯ ಪ್ರಚಾರದ ಸಾರಥ್ಯವನ್ನು ವಹಿಸಿಕೊಂಡು ಗೆಲುವಿನ ದಡ ಸೇರಿಸಿದ ನಾಯಕ ಕೂಡ ಅವರಾಗಿದ್ದಾರೆ. ಮತದಾರರಲ್ಲಿ, ಅದರಲ್ಲೂ ಮಹಿಳಾ ಮತದಾರರ ವಲಯದಲ್ಲಿ, ಅವರು ಅತ್ಯಂತ ನೆಚ್ಚಿನ ನಾಯಕರಾಗಿದ್ದಾರೆ ಎನ್ನುವುದು ಸುಸ್ಪಷ್ಟವಾಗಿದೆ. ಮತದಾನದ ಪ್ರಮಾಣದಲ್ಲಿ ಭಾರೀ ಹೆಚ್ಚಳವಾಗಿದ್ದುದು, ಅದರಲ್ಲೂ ಮಹಿಳಾ ಮತದಾರರು ದೊಡ್ಡ ಸಂಖ್ಯೆಯಲ್ಲಿ ಮತದಾನ ಮಾಡಿದ್ದುದು, ಎನ್‌ಡಿಎ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿದೆ. ಮಹಿಳಾ ಕೇಂದ್ರಿತ ಯೋಜನೆಗಳನ್ನು ಹಾಕಿಕೊಂಡ ನಿತೀಶ್ ಕುಮಾರ್ ನೇತೃತ್ವದ ಸರ್ಕಾರವು 1.5 ಕೋಟಿ ಮಹಿಳೆಯರ ಖಾತೆಗೆ ಹಣ ವರ್ಗಾವಣೆ ಮಾಡಿದ್ದುದು (ಈ ಕ್ರಮ ವಿವಾದಕ್ಕೂ ಕಾರಣವಾಯಿತು) ಮತದಾನದ ಪ್ರವೃತ್ತಿಯ ಮೇಲೆ ಪ್ರಭಾವ ಬೀರಿದಂತಿದೆ. ಇತರ ರಾಜ್ಯಗಳಲ್ಲೂ ಈ ಮಾದರಿಯು ಫಲ ಕೊಟ್ಟಿರುವ ಉದಾಹರಣೆಗಳೂ ದೇಶದ ಮುಂದಿವೆ. ಕಲ್ಯಾಣ ಯೋಜನೆಗಳು, ಮೂಲಸೌಕರ್ಯ ಅಭಿವೃದ್ಧಿ ಮತ್ತು ಜನರ ಭದ್ರತೆ ಹಾಗೂ ಸುರಕ್ಷತೆಗೆ ಸಂಬಂಧಿಸಿದಂತೆ ಎನ್‌ಡಿಎ ನೀಡಿದ ಆಶ್ವಾಸನೆಗಳು ಮತದಾರರನ್ನು ಪ್ರಭಾವಿಸಿದಂತಿವೆ. ಚುನಾವಣೆಯಲ್ಲಿ ಜಾತಿ ಕೂಡ ಪ್ರಮುಖ ಅಂಶವಾಗಿದ್ದು, ಪ್ರಬಲ ಜಾತಿಗಳು, ಹಿಂದುಳಿದ ವರ್ಗಗಳು, ಅತೀ ಹಿಂದುಳಿದ ವರ್ಗಗಳು ಮತ್ತು ದಲಿತ ಅಭ್ಯರ್ಥಿಗಳ ಹದವಾದ ಮಿಶ್ರಣ ಕೂಡ ಆಡಳಿತಾರೂಢ ಮೈತ್ರಿಕೂಟದ ನೆರವಿಗೆ ಬಂದಿರುವುದು ಎದ್ದು ಕಾಣುತ್ತಿರುವ ಅಂಶ. ಎನ್‌ಡಿಎಯ ಎಲ್ಲ ಅಂಗಪಕ್ಷಗಳು ಪ್ರತೀ ಕ್ಷೇತ್ರದಲ್ಲಿ ಒಟ್ಟಾಗಿ ಕೆಲಸ ಮಾಡಿದರೆ, ಮಹಾಘಟಬಂಧನದ ಪಕ್ಷಗಳಲ್ಲಿ ಆ ಒಗ್ಗಟ್ಟು ಕಾಣದಿರುವುದು ಫಲಿತಾಂಶದಲ್ಲಿ ಪ್ರತಿಫಲನವಾಗಿದೆ.

ಮಹಾಘಟಬಂಧನವು ಅತ್ಯಂತ ಶೋಚನೀಯ ಪ್ರದರ್ಶನ ನೀಡಿರುವುದು, ಅದರ ಪ್ರಚಾರದ ಸ್ವರೂಪ, ವಿಷಯಗಳ ಆಯ್ಕೆ, ಚುನಾವಣೆ ತಂತ್ರ ಮತ್ತು ಒಗ್ಗಟ್ಟಿನ ಕುರಿತು ಹಲವು ಗಂಭೀರ ಪ್ರಶ್ನೆಗಳನ್ನು ಎತ್ತುವಂತೆ ಮಾಡಿದೆ. ಹನ್ನೆರಡು ಕ್ಷೇತ್ರಗಳಲ್ಲಿ ಮೈತ್ರಿಕೂಟದ ಪಕ್ಷಗಳ ನಡುವೆಯೇ 'ಸ್ನೇಹದ ಸವಾಲು' ಒಡ್ಡಲಾಗಿತ್ತು. ಚುನಾವಣೆಗೆ ಕೆಲವೇ ದಿನಗಳು ಬಾಕಿ ಇರುವವರೆಗೆ ತೇಜಸ್ವಿ ಯಾದವ್ ಅವರ ನಾಯಕತ್ವದ ಕುರಿತು ಮೈತ್ರಿಕೂಟದಲ್ಲಿ ಸ್ಪಷ್ಟ ಒಡಂಬಡಿಕೆ ಇರಲಿಲ್ಲ. ಈ ಮೈತ್ರಿಕೂಟ ನೀಡಿದ ಆಶ್ವಾಸನೆಗಳ ಕುರಿತು ಮತದಾರರಲ್ಲೂ ವಿಶ್ವಾಸ ಮೂಡಲಿಲ್ಲ ಎನ್ನುವುದು ವೇದ್ಯ. ಮಹಾಘಟಬಂಧನದ ದೌರ್ಬಲ್ಯಗಳನ್ನೇ ಎನ್‌ಡಿಎಯು ಯಶಸ್ಸಿನ ಮೆಟ್ಟಿಲುಗಳನ್ನಾಗಿ ಮಾಡಿಕೊಂಡಿದೆ. ಅಂದಹಾಗೆ, ಮಹಾಘಟಬಂಧನವು ತನ್ನ ತೀವ್ರ ಹಿನ್ನಡೆ ನಡುವೆಯೂ ಮತಗಳಿಕೆ ಪ್ರಮಾಣವನ್ನು ಕಳೆದ ಸಲದಷ್ಟು ಉಳಿಸಿಕೊಳ್ಳಲು ಯಶಸ್ವಿಯಾಗಿದೆ. ಆದರೆ, ಎನ್‌ಡಿಎಯು ಕಳೆದ ಸಲಕ್ಕಿಂತಲೂ ಈ ಬಾರಿ ಮತಗಳಿಕೆ ಪ್ರಮಾಣವನ್ನು ಹೆಚ್ಚಿಸಿಕೊಂಡಿರುವುದು ಗಮನಾರ್ಹ.

ಬಿಹಾರ: ಮೌನಕ್ರಾಂತಿಗೆ ಗೆಲುವು

ವಿಶ್ಲೇಷಣೆ

ದಿನೇಶ್ ಅಮಿನ್ ಮಟ್ಟು

> ಬಿಹಾರದಲ್ಲಿನ ಎನ್‌ಡಿಎ ಗೆಲುವಿನ ಹಿಂದೆ ನಿತೀಶ್ ವರ್ಚಸ್ಸು ಕೆಲಸ ಮಾಡಿದೆ. ಕೋಮುದ್ವೇಷಮುಕ್ತ ರಾಜಕಾರಣ ಹಾಗೂ ಒಬ್ಬನೇ ಮಗನನ್ನು ತಮ್ಮ ಉತ್ತರಾಧಿಕಾರಿಯನ್ನಾಗಿಸುವ ದೌರ್ಬಲ್ಯಕ್ಕೆ ಒಳಗಾಗದ ವಿವೇಕ ಅವರನ್ನು ಸಮಕಾಲೀನ ರಾಜಕಾರಣದಲ್ಲಿ ಭಿನ್ನವಾಗಿಸಿದೆ.

ಬಿಹಾರದ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಕೂಟಕ್ಕೆ ಗೆಲ್ಲಲು ಹಲವು ಕಾರಣಗಳಿದ್ದವು, ಸೋಲಲು ಕಾರಣಗಳು ಕಡಿಮೆ. ಮಹಾಘಟಬಂಧನಕ್ಕೆ ಸೋಲಲು ಹಲವು ಕಾರಣಗಳಿದ್ದವು, ಗೆಲ್ಲಲು ಕಾರಣಗಳು ಕಡಿಮೆ.

ಎನ್‌ಡಿಎ ಗೆಲುವಿಗೆ ಮೊದಲ ಕಾರಣ, ಮುಖ್ಯಮಂತ್ರಿ ನಿತೀಶ್ ಕುಮಾರ್ ಕಳೆದ ಮೂರು ದಶಕಗಳಿಂದ ಯೋಜಿತ ರೀತಿಯಲ್ಲಿ ಕಟ್ಟಿ ಬೆಳೆಸುತ್ತಾ ಬಂದಿರುವ ಅತಿಹಿಂದುಳಿದ ಜಾತಿ(ಇಬಿಸಿ)ಗಳು ಮತ್ತು ಮಹಿಳೆಯರ ಮತ ಬ್ಯಾಂಕ್. ನಿತೀಶ್ ಕುಮಾರ್ ಬಿಹಾರದಲ್ಲಿ ನಡೆಸಿರುವ ಸಾಮಾಜಿಕ ನ್ಯಾಯ ಹಂಚಿಕೆಯ ಮೌನಕ್ರಾಂತಿಯನ್ನು ಅರ್ಥ ಮಾಡಿಕೊಳ್ಳದೆ ಹೋದರೆ, ಕಳೆದ ಮೂರು ಚುನಾವಣೆಗಳಲ್ಲಿ ಅವರು ಆಡಳಿತ ವಿರೋಧಿ ಅಲೆಯನ್ನು ಎದುರಿಸಿ ಕೈವಶಮಾಡಿಕೊಂಡ ಗೆಲುವನ್ನು ಖಂಡಿತ ಅರ್ಥಮಾಡಿಕೊಳ್ಳಲು ಸಾಧ್ಯ ಇಲ್ಲ.

ಲಾಲು ಪ್ರಸಾದ್ ಯಾದವ್ ಅವರು ರಾಜ್ಯದ ಜನಸಂಖ್ಯೆಯಲ್ಲಿ ಶೇ 14ರಷ್ಟಿರುವ ಯಾದವರು ಮತ್ತು ಶೇ 18ರಷ್ಟಿರುವ ಮುಸ್ಲಿಮರನ್ನು ಒಳಗೊಂಡ ಎಂ–ವೈ ಸೂತ್ರವನ್ನು ಹೆಣೆದು ಪ್ರಾರಂಭದಿಂದಲೇ ಚುನಾವಣಾ ವಿಜಯದ ಮೆಟ್ಟಿಲುಗಳನ್ನು ಸರಸರನೇ ಮೇಲೇರುತ್ತಾ ಹೋದವರು. ಸಂಖ್ಯಾಬಲ ಇಲ್ಲದ ಹಿಂದುಳಿದ ಕುರ್ಮಿ ಸಮುದಾಯಕ್ಕೆ ಸೇರಿರುವ ತಮ್ಮಿಂದ ಲಾಲು ಜಾತಿಸೂತ್ರವನ್ನು ಭೇದಿಸಿ ಮುನ್ನಡೆಯಲು ಸಾಧ್ಯ ಇಲ್ಲ ಎನ್ನುವುದನ್ನು ಮನಗಂಡಿದ್ದ ನಿತೀಶ್ ಕಣ್ಣಿಟ್ಟದ್ದು ರಾಜ್ಯದ ಅತಿಹಿಂದುಳಿದ ಜಾತಿಗಳ ಮೇಲೆ.

ಬಿಹಾರದಲ್ಲಿ ಶೇ 63ರಷ್ಟಿರುವ ಹಿಂದುಳಿದ ಜಾತಿಗಳಲ್ಲಿ ಅತಿಹಿಂದುಳಿದ ಜಾತಿಗೆ ಸೇರಿರುವ 113 ಜಾತಿಗಳ ಒಟ್ಟು ಜನಸಂಖ್ಯಾ ಪ್ರಮಾಣ ಶೇ 36. ಯಾದವ್ (ಶೇ 14), ಕುರ್ಮಿ (ಶೇ 2.88), ಕೊಯಿರಿ (ಶೇ 4.21) ಮತ್ತಿತರ 30 ಬಲಾಢ್ಯ ಹಿಂದುಳಿದ ಜಾತಿಗಳ ಪ್ರಮಾಣ ಶೇ 27.12. ನಿತೀಶ್ ಕುಮಾರ್ 2005ರಲ್ಲಿ ಅಧಿಕಾರಕ್ಕೆ ಬಂದಾಗ ಮೊದಲು ಮಾಡಿದ ಕೆಲಸ, ಹಿಂದುಳಿದ ಜಾತಿಗಳಿಗಿದ್ದ ಶೇ 27ರಷ್ಟು ಮೀಸಲಾತಿಯನ್ನು ಒಡೆದು, ಹಿಂದುಳಿದ ಜಾತಿಗಳಿಗೆ ಶೇ 12 ಮತ್ತು ಅತಿ ಹಿಂದುಳಿದ ಜಾತಿಗಳಿಗೆ ಶೇ 18ರ ಪ್ರತ್ಯೇಕ ಮೀಸಲಾತಿಯನ್ನು ಕಲ್ಪಿಸಿದ್ದು. ಎರಡು ವರ್ಷಗಳ ಹಿಂದೆ ಇಬಿಸಿ ಮೀಸಲಾತಿಯನ್ನು ಶೇ 18ರಿಂದ 25ಕ್ಕೆ ಮತ್ತು ಹಿಂದುಳಿದ ಜಾತಿಗಳ ಮೀಸಲಾತಿಯನ್ನು ಶೇ 12ರಿಂದ 18ಕ್ಕೆ ಹೆಚ್ಚಿಸಿದರು. (ಇದು ಸುಪ್ರೀಂ ಕೋರ್ಟ್ ವಿಚಾರಣೆಯಲ್ಲಿದೆ).

ಇದರ ಜೊತೆಗೆ ನಿತೀಶ್ ಕುಮಾರ್ ಬಹಳ ಜತನದಿಂದ ಮಹಿಳಾ ಮತಬ್ಯಾಂಕನ್ನು ಸೃಷ್ಟಿಸಿದ್ದಾರೆ. ಸಂವಿಧಾನದ 73ನೇ ತಿದ್ದುಪಡಿ ಪ್ರಕಾರ ಬಿಹಾರದಲ್ಲಿಯೂ ಪಂಚಾಯತ್‌ಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಇತ್ತು. 2006ರಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ದೇಶದಲ್ಲಿಯೇ ಮೊದಲ ಬಾರಿ ಮಹಿಳೆಯರ ಮೀಸಲಾತಿಯನ್ನು ಶೇ 50ಕ್ಕೆ ಹೆಚ್ಚಿಸಿದ್ದರು. ಇದು ಅಂದಾಜು ಒಂದೂವರೆ ಲಕ್ಷ ಮಹಿಳೆಯರಿಗೆ ತಳಮಟ್ಟದಲ್ಲಿ ರಾಜಕೀಯ ಪ್ರಾತಿನಿಧ್ಯ ಕಲ್ಪಿಸಿದೆ.

ಮುಂದಿನ ದಿನಗಳಲ್ಲಿ ಮಹಿಳಾ ಮತಬ್ಯಾಂಕನ್ನು ವಿಸ್ತರಿಸಿದ ನಿತೀಶ್ 'ಜೀವಿಕಾ' ಎಂಬ ಸ್ವಸಹಾಯ ಗುಂಪನ್ನು ಸ್ಥಾಪಿಸಿ ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡುವ ಪ್ರಯತ್ನಮಾಡಿದರು. ವಿದ್ಯಾರ್ಥಿನಿಯರಿಗೆ ಸೈಕಲ್‌ಗಳನ್ನು ವಿತರಿಸಿದರು. ವೈಫಲ್ಯಗಳ ಆರೋಪಗಳೇನೇ ಇರಲಿ, ನಿತೀಶ್ ಜಾರಿಗೆ ತಂದಿರುವ ಸಾರಾಯಿ ನಿಷೇಧ ಕೂಡಾ ಮಹಿಳೆಯರ ಮೆಚ್ಚುಗೆಗೆ ಪಾತ್ರವಾದ ನಿರ್ಧಾರ. ಈ ಅತಿಹಿಂದುಳಿದ ಜಾತಿಗಳು ಮತ್ತು ಮಹಿಳೆಯರ ಮತಬ್ಯಾಂಕ್ ಕಳೆದ 20 ವರ್ಷಗಳಲ್ಲಿ ನಿತೀಶ್ ಕುಮಾರ್ ಅವರ ರಾಜಕೀಯಕ್ಕೆ ನಿರಂತರವಾಗಿ ಬಲವನ್ನು ತುಂಬುತ್ತಾ ಬಂದಿದೆ. ಚುನಾವಣಾಪೂರ್ವದಲ್ಲಿ ಆಮಿಷದ ರೂಪದಲ್ಲಿ ನೀಡಲಾದ ಹತ್ತು ಸಾವಿರ ರೂಪಾಯಿಗಳ 'ಉಡುಗೊರೆ' ಈ ಮಹಿಳಾ ಮತಬ್ಯಾಂಕಿನ ಬೆಂಬಲವನ್ನು ಗ್ಯಾರಂಟಿ ಮಾಡಿದೆ.

ಗೆಲುವಿನ ಎರಡನೇ ಕಾರಣ, ನಿರಾಯಾಸವಾಗಿ ಎನ್‌ಡಿಎ ಮಿತ್ರಪಕ್ಷಗಳ ನಡುವೆ ನಡೆದಿರುವ ಮತ ವರ್ಗಾವಣೆ. ಕಳೆದ ಚುನಾವಣೆಯಲ್ಲಿ ಎನ್‌ಡಿಎ ಕೂಟದಲ್ಲಿ ಇಲ್ಲದ ಎಲ್‌ಜೆಪಿ ಪ್ರಧಾನವಾಗಿ ಜೆಡಿಯುಗೆ ಇದಿರಾಗಿ ತನ್ನ ಅಭ್ಯರ್ಥಿಗಳನ್ನು ಸ್ಪರ್ಧೆಗಿಳಿಸಿ 28 ಕ್ಷೇತ್ರಗಳಲ್ಲಿ ಜೆಡಿಯು ಅಭ್ಯರ್ಥಿಗಳನ್ನು ಸೋಲಿಸಿತ್ತು. ಚಿರಾಗ್ ಪಾಸ್ವಾನ್ ಪ್ರತ್ಯೇಕವಾಗಿ ಸ್ಪರ್ಧಿಸಲು ಬಿಜೆಪಿ ನೀಡಿದ್ದ ಕುಮ್ಮಕ್ಕಿನಿಂದಾಗಿ ಜೆಡಿಯು ಮತ್ತು ಬಿಜೆಪಿ ನಡುವೆ ಕೂಡಾ ಮತಗಳ ವರ್ಗಾವಣೆಯಲ್ಲಿ ವ್ಯತ್ಯಾಸ ಉಂಟಾಗಿತ್ತು. ಈ ಬಾರಿ ಹಳೆಯ ತಪ್ಪನ್ನು ಬಿಜೆಪಿ ಮಾಡಿಲ್ಲ. ಬಿಜೆಪಿಯನ್ನು ಸಾಂಪ್ರದಾಯಿಕವಾಗಿ ಬೆಂಬಲಿಸುತ್ತಾ ಬಂದಿರುವ ಶೇ 15ರಷ್ಟಿರುವ ಬ್ರಾಹ್ಮಣ, ಭೂಮಿಹಾರ್, ರಜಪೂತಗಳನ್ನೊಳಗೊಂಡ ಮೇಲ್ಜಾತಿಗಳು ಈ ಚುನಾವಣೆಯಲ್ಲಿ ಜೆಡಿಯು ಮತ್ತು ಎಲ್‌ಜೆಪಿ ಪಕ್ಷಗಳ ಅಭ್ಯರ್ಥಿಗಳಿಗೂ ಮತ ನೀಡಿವೆ. ಇದೇ ರೀತಿ ನಿತೀಶ್ ಅವರ ಅತಿಹಿಂದುಳಿದ ಜಾತಿಗಳು ಬಿಜೆಪಿ ಮತ್ತು ಎಲ್‌ಜೆಪಿ ಪಕ್ಷಗಳ ಅಭ್ಯರ್ಥಿಗಳನ್ನು ಕೂಡಾ ಬೆಂಬಲಿಸಿವೆ. ಈ ಒಗ್ಗಟ್ಟನ್ನು ಫಲಿತಾಂಶದಲ್ಲಿ ಕಾಣಬಹುದಾಗಿದೆ.

ಮೂರನೆಯದಾಗಿ, 'ಸುಶಾಸನಬಾಬು' ಎಂಬ ಬಿರುದನ್ನು ನೀಡಿದ ನಿತೀಶ್ ಅವರ ಆಡಳಿತ. ಬಿಹಾರದಲ್ಲಿ ಹಿಂಸಾಚಾರ ಸಂಪೂರ್ಣವಾಗಿ ನಿಂತು ಶಾಂತಿ ಸ್ಥಾಪನೆಯಾಗಿದೆ ಎಂದು ಯಾರೂ ಹೇಳಲಾರರು. ಆದರೆ ಲಾಲು ಪ್ರಸಾದ್ ಅವರ ಕಾಲದಲ್ಲಿದ್ದಂತೆ ಅನಿಯಂತ್ರಿತವಾಗಿ ನಡೆಯುತ್ತಿಲ್ಲ. 2005ರಲ್ಲಿ ನಿತೀಶ್ ಕುಮಾರ್ ಮೊದಲ ಬಾರಿ ಅಧಿಕಾರಕ್ಕೆ ಬಂದಿದ್ದಾಗ 27 ಸಾವಿರ ಆರೋಪಿಗಳಿಗೆ ಶಿಕ್ಷೆ ಆಗಿತ್ತು. 'ಬಾಹುಬಲಿ'ಗಳಾಗಿದ್ದ ಶಹಾಬುದ್ದೀನ್, ಪಪ್ಪುಯಾದವ್, ಅನಂತ್ ಸಿಂಗ್, ಮುನ್ನಾಶುಕ್ಲಾ ಮೊದಲಾದವರು ಜೈಲು ಸೇರಿದ್ದರು. 20 ವರ್ಷಗಳ ಹಿಂದೆ ಆರು ಗಂಟೆಗೆ ಪಾಟ್ನಾದ ಬೀದಿಗಳು ನಿರ್ಜನವಾಗಿರುತ್ತಿದ್ದವು. ಜೈಲು ಸೇರಿದ್ದ ಕೆಲವು 'ಬಾಹುಬಲಿ'ಗಳು ಈ ಬಾರಿ ಎನ್‌ಡಿಎ ಅಭ್ಯರ್ಥಿಗಳಾಗಿದ್ದೂ, ಹಳೆಯ ಭಯಭೀತ ವಾತಾವರಣದಿಂದ ಬಿಹಾರ ಹೊರಬರುತ್ತಿರುವುದು ನಿಜ. ಚುನಾವಣಾ ಕಾಲದಲ್ಲಿಯೂ ಎಲ್ಲಿಯೂ ಹಿಂಸಾಚಾರ ನಡೆದಿಲ್ಲ ಎನ್ನುವುದು ಕೂಡಾ ಗಮನಿಸುವಂತಹದ್ದು.

ನಾಲ್ಕನೆಯದಾಗಿ, ವೈಯಕ್ತಿಕ ಮಟ್ಟದಲ್ಲಿ ನಿತೀಶ್ ಕುಮಾರ್ ಕಾಪಾಡಿಕೊಂಡು ಬಂದಿರುವ ಭ್ರಷ್ಟಾಚಾರದ ಕಳಂಕದಿಂದ ಮುಕ್ತವಾದ ಶುಭ್ರ ಇಮೇಜ್. ಭ್ರಷ್ಟಾಚಾರ ಎನ್ನುವುದು ಸಹಜ ನಡವಳಿಕೆಯಾಗಿರುವ ಬಿಹಾರದಲ್ಲಿ ಇಂತಹ ದೊಡ್ಡದೊಂದು ಇಮೇಜನ್ನು ಎರಡು ದಶಕಗಳ ಕಾಲ ಕಾಪಿಟ್ಟುಕೊಳ್ಳುವುದು ಸುಲಭದ ಕೆಲಸ ಅಲ್ಲ.

ಐದನೆಯದಾಗಿ, ನಿತೀಶ್ ಕುಮಾರ್ ಸೈದ್ಧಾಂತಿಕವಾಗಿ ಎಷ್ಟೇ ಪಲ್ಟಿ ಹೊಡೆದರೂ ಅವರಿಗೆ ಕೋಮುವಾದಿ ಎಂಬ ಹಣೆಪಟ್ಟಿ ಹಚ್ಚಲು ಅವರ ರಾಜಕೀಯ ವಿರೋಧಿಗಳಿಗೂ ಸಾಧ್ಯವಾಗಿಲ್ಲ. ಪಕ್ಕದ ಉತ್ತರ ಪ್ರದೇಶದಲ್ಲಿ ಬುಲ್ಡೋಜರ್‌ಗಳು ಕಂಡಕಂಡಲ್ಲಿ ದಾಳಿ ಮಾಡುತ್ತಿದ್ದರೂ, ಬಿಹಾರದಲ್ಲಿ ಕಳೆದ ಎರಡು ದಶಕಗಳಲ್ಲಿ ದೊಡ್ಡ ಮಟ್ಟದ ಕೋಮುಗಲಭೆಗಳು ನಡೆದಿಲ್ಲ. ಚುನಾವಣಾ ಪ್ರಚಾರದಲ್ಲಿ ಸ್ಥಾನದ ಶಿಷ್ಟಾಚಾರವನ್ನೂ ಮೀರಿ ಕೋಮುದ್ವೇಷ ಕಾರುವ ಪ್ರಧಾನಿ ನರೇಂದ್ರ ಮೋದಿಯವರ ಬಿಹಾರದ ಪ್ರಚಾರ ಭಾಷಣ 'ಅಸ್ಸಿ-ಬೀಸ್', 'ಸ್ಮಶಾನ-ಕಬರ್‌ಸ್ಥಾನ್' ಮೊದಲಾದ ಕೋಮು ಕಿಡಿನುಡಿಗಳಿಂದ ಮುಕ್ತವಾಗಿತ್ತು.

ಆರನೆಯದಾಗಿ, ವಂಶಾಡಳಿತದ ಆರೋಪದಿಂದಲೂ ನಿತೀಶ್ ಕುಮಾರ್ ಮುಕ್ತವಾಗಿದ್ದಾರೆ. ರಾಜಕೀಯವಾಗಿ ತಾವು ನಿರ್ಗಮನದ ಹಾದಿಯಲ್ಲಿದ್ದರೂ, ತನ್ನ ಒಬ್ಬನೇ ಮಗನನ್ನು ಚುನಾವಣೆಗೆ ಇಳಿಸಿ ಉತ್ತರಾಧಿಕಾರಿಯನ್ನಾಗಿ ಮಾಡುವ ದೌರ್ಬಲ್ಯಕ್ಕೆ ಕೂಡಾ ನಿತೀಶ್ ಬಲಿಯಾಗಲಿಲ್ಲ. ಕಳೆದ ನಾಲ್ಕು ದಶಕಗಳಲ್ಲಿ ದೇಶದಲ್ಲಿ ನಡೆದ ಎಲ್ಲ ಚುನಾವಣೆಗಳಲ್ಲಿ ಚರ್ಚೆಯಾಗಿರುವ ಪ್ರಮುಖ ವಿಷಯಗಳೆಂದರೆ– ಭ್ರಷ್ಟಾಚಾರ, ಕೋಮುವಾದ ಮತ್ತು ವಂಶಾಡಳಿತ ಎನ್ನುವುದನ್ನು ತಿಳಿದುಕೊಂಡರೆ, ಬಿಹಾರದ ಜನತೆ ಯಾಕೆ ನಿತೀಶ್ ಕುಮಾರ್ ಅವರನ್ನು ಇಷ್ಟಪಟ್ಟಿದ್ದಾರೆ ಎನ್ನುವುದು ಅರ್ಥವಾಗಬಹುದು.

ಎನ್‌ಡಿಎಗೆ ಇದಿರಾಗಿ ಸ್ಪರ್ಧಿಸಿರುವ ಮಹಾಘಟಬಂಧನದಲ್ಲಿ ಗೆಲ್ಲಲು ಕಾರಣಗಳು ಇರಲಿಲ್ಲ. ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ತನ್ನ ಮತಗಳ ನೆಲೆಯನ್ನು ವಿಸ್ತರಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಕಳೆದ ಬಾರಿ ಇಬಿಸಿಗಳಿಗೆ ಕೇವಲ 19 ಟಿಕೆಟ್ ನೀಡಿದ್ದ ತೇಜಸ್ವಿ ಯಾದವ್ ಈ ಬಾರಿ 33 ಟಿಕೆಟ್ ನೀಡಿದ್ದರೂ, ಇಬಿಸಿಗಳು ಅವರ ಕೈ ಹಿಡಿದಿಲ್ಲ. ಕೊನೆಗೂ ಆರ್‌ಜೆಡಿಯ ಬಲ ಹಳೆಯ ಎಂ–ವೈ ಸೂತ್ರಕ್ಕಷ್ಟೇ ಸೀಮಿತವಾಗಿದ್ದನ್ನು ಕಾಣಬಹುದು. ಮನೆಗೊಂದು ಸರ್ಕಾರಿ ಉದ್ಯೋಗದ ಭರವಸೆ ಯುವಜನರನ್ನು ಆಕರ್ಷಿಸಲು ವಿಫಲವಾಯಿತು. 3.40 ಲಕ್ಷ ಕೋಟಿ ರೂಪಾಯಿ ಬಜೆಟ್‌ನ ಬಿಹಾರ ರಾಜ್ಯದಲ್ಲಿ ಇಂತಹದ್ದೊಂದು ಭರವಸೆಯನ್ನು ಯಾರೂ ನಂಬುವ ಸ್ಥಿತಿಯಲ್ಲಿ ಇರಲಿಲ್ಲ.

ಇನ್ನು ಕಾಂಗ್ರೆಸ್ ಪಕ್ಷ, ಮತದಾನ ನಡೆಯುವ ಮೊದಲೇ ಸೋತುಹೋಗಿತ್ತು. ಸತತ ಸೋಲಿನಿಂದ ಪಕ್ಷ ಪಾಠ ಕಲಿತಿರುವ ಸೂಚನೆಗಳು ಈ ಬಾರಿಯೂ ಕಾಣಲಿಲ್ಲ. ಅಧಿಕಾರ ಕಳೆದುಕೊಂಡ ಕಳೆದ 30 ವರ್ಷಗಳ ಅವಧಿಯಲ್ಲಿ ಜನಪ್ರಿಯ ಸ್ಥಳೀಯ ನಾಯಕನೊಬ್ಬನನ್ನು ರಾಜ್ಯದಲ್ಲಿ ಬೆಳೆಸಲು ಕಾಂಗ್ರೆಸ್ ಪಕ್ಷಕ್ಕೆ ಸಾಧ್ಯವಾಗಿಲ್ಲ. ಹಿಂದುಳಿದ ಜಾತಿಗಳ ಮತಗಳ ನಿರ್ಣಾಯಕ ಪಾತ್ರದ ಅರಿವಿದ್ದರೂ, ತಮ್ಮ ಪಕ್ಷದಲ್ಲಿರುವ ಹಿಂದುಳಿದ ಜಾತಿಗೆ ಸೇರಿರುವ ಏಕೈಕ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಬಳಸಿಕೊಳ್ಳುವ ಯೋಚನೆಯನ್ನು ಯಾರೂ ಮಾಡಲಿಲ್ಲ. ಕರ್ನಾಟಕದಲ್ಲಿ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳ ಯಶಸ್ಸನ್ನು ಪ್ರಚಾರಕ್ಕೆ ಬಳಸಿಕೊಳ್ಳುವ ಪ್ರಯತ್ನವೂ ನಡೆಯಲಿಲ್ಲ.

ಗೆಲ್ಲಲಿಕ್ಕೆ ಬೇಕಾಗಿರುವ ಕಾರಣಗಳನ್ನು ನೀಡಲು ಸಾಧ್ಯವಾದಾಗ ಮಾತ್ರ ಸೋಲಿಗೆ ಕಾರಣಗಳನ್ನು ನೀಡುವ ಅಧಿಕಾರ ಇರುತ್ತದೆ.

ವಾಚಕರ ವಾಣಿ

ಹಸುರಲ್ಲಿ ಉಸಿರಾದ ಮಹಾತಾಯಿ ತಿಮ್ಮಕ್ಕ

ಮನುಷ್ಯನ ಬಾಳುವೆಯು ತನ್ನನ್ನು ಮೀರಿ ಲೋಕದ ಜನರನ್ನು ತಲುಪಿದಾಗಲೇ ಸಾರ್ಥಕವಾಗುತ್ತದೆ. ಇದೇ ಸಮಷ್ಟಿ ಚಿಂತನೆ. ತಮ್ಮ ಜೀವನಯಾನದಲ್ಲಿ ಸಮಷ್ಟಿ ಬದುಕನ್ನು ಬದುಕಿದವರು ಸಾಲುಮರದ ತಿಮ್ಮಕ್ಕ. ಮಮತೆ ತೋರಿಸಲು ಮಕ್ಕಳೇ ಬೇಕೆಂದಿಲ್ಲ. ಪ್ರಕೃತಿಯಲ್ಲಿ ಸರ್ವಪ್ರಯೋಜನಕಾರಿಯಾಗಿ ಬದುಕಬಲ್ಲ ಮರಗಳೂ ಮಕ್ಕಳಾಗಬಹುದು ಎಂದುಕೊಂಡು, ಮಕ್ಕಳಿಲ್ಲದ ಕೊರತೆಯನ್ನು ಪತಿಯೊಂದಿಗೆ ರಸ್ತೆಬದಿಯಲ್ಲಿ ಸಸಿ ನೆಡುವ ಮೂಲಕ ನೀಗಿಕೊಂಡರು. ಸಮಾಜಮುಖಿ ಕೆಲಸಗಳನ್ನು ಇರುವ ಸಾಮಾನ್ಯ ಅವಕಾಶದಲ್ಲಿಯೇ ನಿಭಾಯಿಸಬಹುದು ಎಂದು ತೋರಿಸಿಕೊಟ್ಟರು. ನಾವು ಬದುಕುತ್ತಿರುವ ವಾತಾವರಣಕ್ಕೆ ಪೂರಕವಾಗಿರುವುದನ್ನು ಮಾಡುವುದರಲ್ಲಿ ಎಂಥ ಹಿತವಿದೆಯಲ್ಲವೇ?

ಸುಮಾ ವೀಣಾ, ಹಾಸನ

ಹೆಣ್ಣುಮಕ್ಕಳಿಗೆ ಶೌಚಾಲಯ ಉಚಿತವಿರಲಿ

ಸಾರ್ವಜನಿಕ ಶೌಚಾಲಯಗಳಲ್ಲಿ ಹೆಣ್ಣುಮಕ್ಕಳಿಗೆ ₹5, ಗಂಡಸರಿಗೆ ₹3 ಸಂಗ್ರಹಿಸುವ; ಗಂಡಸರಿಗೆ ಮೂತ್ರ ವಿಸರ್ಜನೆಗೆ ಉಚಿತ ಎನ್ನುವ ಫಲಕ ನೋಡಿದಾಗ ಅಚ್ಚರಿಯಾಗುತ್ತದೆ. ಕೆಲವರು ಒಂದು ರೂಪಾಯಿಗೂ ಜಗಳ ತೆಗೆಯುತ್ತಾರೆ. ಹೆಣ್ಣುಮಕ್ಕಳಿಗೆ ಶೌಚಾಲಯಗಳಲ್ಲಿ ಉಚಿತ ಸೌಲಭ್ಯ ಕಲ್ಪಿಸುವ ಮೂಲಕ ಸರ್ಕಾರ ಮತ್ತೊಂದು ಗ್ಯಾರಂಟಿ ಘೋಷಿಸಲಿ. ಗಂಡಸರಿಗೆ ಶುಲ್ಕ ಹೆಚ್ಚು ಮಾಡಿದರೂ ಚಿಂತೆ ಇಲ್ಲ. ಆ ಹಣವನ್ನು ಶೌಚಾಲಯಗಳಲ್ಲಿ ಕೆಲಸ ನಿರ್ವಹಿಸುವ ವ್ಯಕ್ತಿಗೆ ನೀಡಿದರೆ ಸಮಾಜದಲ್ಲಿ ಆತನೂ ಮುಖ್ಯವಾಹಿನಿಗೆ ಬರಲು ಅನುಕೂಲವಾಗುತ್ತದೆ. ಅಲ್ಲಿ ಕೆಲಸ ನಿರ್ವಹಿಸುವ ಆಕೆ/ ಆತ ಆ ವಾಸನೆಯ ವಾತಾವರಣದಲ್ಲಿ ದೀರ್ಘ ಕಾಲ ಇರುವುದಿದೆಯಲ್ಲ, ಅದು ನಿಜಕ್ಕೂ ಔದಾರ್ಯವಂತ ಹೃದಯಗಳಿಗೆ ಮಾತ್ರ ಸಾಧ್ಯ. ಅಂಥವರನ್ನು ಗೌರವಿಸುವಂತಾಗಲಿ ಮತ್ತು ಹೆಣ್ಣುಮಕ್ಕಳಿಗೆ ಸ್ವಚ್ಛ ಪರಿಸರದ ಶೌಚಾಲಯ ಉಚಿತವಾಗಿ ಸಿಗುವಂತಾಗಲಿ.

ನ. ರವಿಕುಮಾರ, ಬೆಂಗಳೂರು

ಕೀಟ ಪ್ರಪಂಚಕ್ಕೂ ಕಾದಿದೆ ಅಪಾಯ

'ಜಿರಳೆ ಪಕೋಡ, ಗೆದ್ದಲು ಬರ್ಗರ್' ಸುದ್ದಿ (ಪ್ರ.ವಾ., ನ. 14) ಓದಿ ಅರೆಕ್ಷಣ ದಿಗ್ಭ್ರಮೆಯಾಯಿತು. ಮನುಷ್ಯನ ಜಿಹ್ವಾಚಾಪಲ್ಯಕ್ಕೆ ಕೀಟಗಳೂ ಬಲಿ ಆಗುವ ದಿನಗಳು ಆರಂಭಗೊಂಡವೇ? ನಾವೇನಾದರೂ ಚೀನಾ, ಜಪಾನ್‌ನಲ್ಲಿ ಇದ್ದೇವೆಯೇ ಎಂದು ಯೋಚಿಸುವಂತಾಯಿತು. ಪ್ರಾಣಿಸಂಕುಲಕ್ಕೆ ಅಪಾಯಕಾರಿ ಆಗಿರುವ ಮನುಷ್ಯ, ಕೀಟಪ್ರಪಂಚದ ಮೇಲೂ ದಾಳಿ ಆರಂಭಿಸಿದ ಎಂದರೆ ಅದು ಪ್ರಕೃತಿಯ ಮೇಲಿನ ಘೋರ ದಾಳಿಯೇ ಆಗಿದೆ.

ಶಾಂತಿನಾಥ ಕೆ. ಹೋತಪೇಟಿ, ಹುಬ್ಬಳ್ಳಿ

ರೈತನ ಕಣ್ಣೀರು ಹಾಕಿಸುವುದು ನ್ಯಾಯವಲ್ಲ

ಮುಧೋಳ ತಾಲ್ಲೂಕಿನಲ್ಲಿ ಕಬ್ಬು ಸಾಗಿಸುತ್ತಿದ್ದ 30ಕ್ಕೂ ಹೆಚ್ಚು ಟ್ರ್ಯಾಕ್ಟರ್‌ಗಳಿಗೆ ಹೋರಾಟಗಾರರು ಪೆಟ್ರೋಲ್ ಸುರಿದು ಬೆಂಕಿಹಚ್ಚಿರುವುದು ವಿಷಾದನೀಯ. ದೇಶದ ಬೆನ್ನೆಲುಬು ಎಂದು ಕರೆಯಿಸಿಕೊಳ್ಳುವ ರೈತ, ಎಂದಿಗೂ ಮತ್ತೊಬ್ಬ ರೈತನ ಬೆನ್ನೆಲುಬು ಮುರಿಯಬಾರದು. ಮತ್ತೊಬ್ಬ ರೈತನು ಬೆವರು ಸುರಿಸಿ ಕಷ್ಟಪಟ್ಟು ಬೆಳೆದ ಫಸಲನ್ನು ನಾಶ ಮಾಡುವ ಮೂಲಕ ಮಾಡುವ ಹೋರಾಟ ನ್ಯಾಯವಾದುದಲ್ಲ. ಸರ್ಕಾರಕ್ಕೆ ಮತ್ತು ಸಕ್ಕರೆ ಕಾರ್ಖಾನೆ ಮಾಲೀಕರಿಗೆ ಹೋರಾಟದಿಂದ ಬಿಸಿ ಮುಟ್ಟಿಸಬೇಕೇ ಹೊರತು, ನಮ್ಮಲ್ಲೇ ಇರುವ ಮತ್ತೊಬ್ಬ ರೈತನನ್ನು ಕಣ್ಣೀರು ಹಾಕಿಸುವುದು ಹೋರಾಟದ ನೀತಿಯಲ್ಲ.

ಅಂಬಿಕಾ ಬಿ.ಟಿ., ಹಾಸನ

ರಕ್ತದಲ್ಲಿ ಚಿತ್ರ: ಹುಚ್ಚಾಟ ಕೊನೆಯಾಗಲಿ

ಪ್ರೀತಿ ಪಾತ್ರರ ಚಿತ್ರಗಳನ್ನು ನಿಮ್ಮ ರಕ್ತದಿಂದಲೇ ಬಿಡಿಸಿಕೊಡುತ್ತೇವೆ; ನಮ್ಮ ವಿಳಾಸಕ್ಕೆ ಬನ್ನಿ ಎನ್ನುವ ಪ್ರಚಾರದ ಜಾಹೀರಾತನ್ನು ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ನೋಡಿದೆ. ಕೆಲವರು ತಮ್ಮವರಿಗೆ ಉಡುಗೊರೆ ನೀಡಲು ತಮ್ಮ ರಕ್ತ ನೀಡಿ ಚಿತ್ರರಚನೆ ಮಾಡಿಸಿಕೊಂಡು ಹೋಗುವ ಪರಿಪಾಠ ಬೆಳೆಯುತ್ತಿದೆ. ಪ್ರಪಂಚದಲ್ಲಿ ಕೃತಕವಾಗಿ ಉತ್ಪಾದಿಸಲು ಸಾಧ್ಯವಿಲ್ಲದ ವಸ್ತುವೆಂದರೆ ರಕ್ತ. ಮನುಷ್ಯನಿಗೆ ಆಪತ್ತಿನ ಸಮಯದಲ್ಲಿ ಅತೀ ಅವಶ್ಯಕವಾಗಿ ಬೇಕಾದ ರಕ್ತವನ್ನು ಹೀಗೆ ವ್ಯರ್ಥ ಮಾಡುವುದು ಖೇದಕರ. ಜನರಿಗೆ ರಕ್ತದಾನದ ಮಹತ್ವ ಕುರಿತು ಇನ್ನೂ ತಿಳಿವಳಿಕೆ ಮೂಡಿಲ್ಲ. ತಮ್ಮವರಿಗೆ ಚಿತ್ರ ನೀಡಬೇಕೆಂದುಕೊಂಡರೆ, ಅವರ ಹೆಸರಿನಲ್ಲಿ ರಕ್ತದಾನ ಮಾಡಲಿ. ಆ ರಕ್ತ ಇನ್ನೊಬ್ಬರ ಜೀವ ಉಳಿಸಲಿದೆ.

ರಾಜು ಬಿ. ಲಕ್ಕಂಪುರ, ಜಗಳೂರು

ಲಂಚ

ಸರಿಯಾಗಿ ಕೆಲಸ ಮಾಡದ
ಅಧಿಕಾರಿಗಳಿಗೆ ಮೈಸೂರಲ್ಲಿ
ಬಿಸಿ ಮುಟ್ಟಿಸಿದರಂತೆ ಸಿಎಂ!
ಹೌದು, ಕೆಲವರು ಕಚೇರಿಯಲ್ಲಿ
ಇರುತ್ತಾರೆ ಸದಾ ಬೆಚ್ಚಗೆ...
ಸಾರ್ವಜನಿಕರು ಕೂಡ,
ತಮ್ಮ ಕೆಲಸ-ಕಾರ್ಯಗಳಿಗಾಗಿ
ಮಾಡಲೇಬೇಕಂತೆ
ಅಂಥವರ 'ಕೈ' ಬೆಚ್ಚಗೆ!

ಮ.ಗು. ಬಸವಣ್ಣ, ಮೈಸೂರು

'ಉದ್ಯೋಗ ಕ್ರಾಂತಿ' ಆರಂಭ ಯಾವಾಗ?

ಕಳೆದ ಕೆಲವು ದಿನಗಳಿಂದ ರಾಜ್ಯದ ರಾಜಕೀಯ ಪಡಸಾಲೆಯಲ್ಲಿ 'ನವೆಂಬರ್ ಕ್ರಾಂತಿ'ಯು ಸಾಕಷ್ಟು ಸದ್ದು ಮಾಡಿತ್ತು. ಈಗ ಇದು ಸ್ವಲ್ಪಮಟ್ಟಿಗೆ ತಣ್ಣಗಾಗಿದೆ. ಜನಪ್ರತಿನಿಧಿಗಳು ಕೇವಲ ಅಧಿಕಾರಕ್ಕಾಗಿ ಕ್ರಾಂತಿ ನಡೆಸುವುದರಲ್ಲೇ ಮಗ್ನರಾಗಬಾರದು. ಯುವಜನರು ಉದ್ಯೋಗ ಇಲ್ಲದೆ ಕಂಗಾಲಾಗಿದ್ದಾರೆ. ಅಭಿವೃದ್ಧಿ ಕ್ರಾಂತಿಯ ಜೊತೆಗೆ, ಯುವಕರಿಗಾಗಿ ಉದ್ಯೋಗದ ಕ್ರಾಂತಿಗೂ ಸರ್ಕಾರ ಮುಂದಾಗಲಿ.

ಪೃಥ್ವಿ ಹೋಳ್ಕರ್, ಕಲಬುರಗಿ

ಜಾಲಡಬ್ಬಿ

ಮಕ್ಕಳ ಸಂಗದೊಳು...

ಮಕ್ಕಳೊಂದಿಗೆ ಕೆಲಸ ಮಾಡುವುದು ಅವರಿಗೆ ನಾವು ಮಾಡುವ ಉಪಕಾರ ಅಲ್ಲ. ಬದಲಿಗೆ ಮಕ್ಕಳು ನಮಗೆ ಮಾಡುವ ಮಹದುಪಕಾರ.

ಕಲಾಧರ್ ಎಸ್., ಶಿಕ್ಷಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಬಿಹಾರ ಫಲಿತಾಂಶ ಕಳೆದ ಎರಡೂವರೆ ವರ್ಷ ಯಾವುದೇ ಅಭಿವೃದ್ಧಿ ಮಾಡದ ರಾಜ್ಯದ ಕಾಂಗ್ರೆಸ್ ಆಡಳಿತಕ್ಕೆ ಎಚ್ಚರಿಕೆ ಗಂಟೆ. ಬಿಹಾರದಂತೆ ರಾಜ್ಯದಲ್ಲಿಯೂ ಕಾಂಗ್ರೆಸ್ ಗತಿ ಅಧೋಗತಿ ಆಗುತ್ತದೆ.

ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಬುಧವಾರ, 15-11-2000

• ನೀರು ಬಳಕೆದಾರರ ಸಹಕಾರ ಸಂಘ ಮಸೂದೆಗೆ ಒಪ್ಪಿಗೆ

ಬೆಂಗಳೂರು, ನ. 14– ರಾಜ್ಯದಾದ್ಯಂತ ನೀರು ಬಳಕೆದಾರರ ಸಹಕಾರ ಸಂಘಗಳನ್ನು ಅಸ್ತಿತ್ವಕ್ಕೆ ತರಲು ಅವಕಾಶ ಕಲ್ಪಿಸುವ ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ಮಸೂದೆಯನ್ನು ವಿಧಾನಸಭೆ ಅಂಗೀಕರಿಸಿತು.

ಈಗಾಗಲೇ, ಈ ಮಸೂದೆಯು ಸುಗ್ರೀವಾಜ್ಞೆ ರೂಪದಲ್ಲಿ ಜಾರಿಯಲ್ಲಿದೆ.

ಪ್ರತಿಯೊಬ್ಬ ಅಚ್ಚುಕಟ್ಟುದಾರನೂ (ನೀರಿನ ಬಳಕೆದಾರ) ಈ ಸಹಕಾರ ಸಂಘಗಳ ಸದಸ್ಯನಾಗುವ ಹಕ್ಕನ್ನು ಹೊಂದಿರುತ್ತಾನೆ. ಪರಿಶಿಷ್ಟ ಜಾತಿ ಮತ್ತು ವರ್ಗದ ಸದಸ್ಯರ ಷೇರು ಹಣವನ್ನು ಸರ್ಕಾರವೇ ತುಂಬುತ್ತದೆ ಎಂದು ಭಾರಿ ನೀರಾವರಿ ಸಚಿವ ಎಚ್.ಕೆ. ಪಾಟೀಲ ಅವರು ಮಾಹಿತಿ ನೀಡಿದರು.

• ಪಾಲಿಕೆ: ಕುರ್ಚಿಗಾಗಿ ಕಿತ್ತಾಟ

ಹುಬ್ಬಳ್ಳಿ, ನ. 14– ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸೇವೆಯಿಂದ ಈಗಾಗಲೇ ಬಿಡುಗಡೆ ಹೊಂದಿರುವ ಹಿಂದಿನ ಆರೋಗ್ಯಾಧಿಕಾರಿ ಡಾ. ಹೀರಾ ರಾಯ್ಕರ್ ಅವರು, ಮತ್ತೆ ಆರೋಗ್ಯಾಧಿಕಾರಿಯಾಗಿ ಅಧಿಕಾರ ವಹಿಸಿಕೊಳ್ಳುವ ಪ್ರಕರಣ ಎರಡನೆ ದಿನವಾದ ಇಂದೂ ಮುಂದುವರಿಯಿತು.

ಆರೋಗ್ಯಾಧಿಕಾರಿ ಹುದ್ದೆಯನ್ನು ವಹಿಸಿಕೊಳ್ಳಲು ಅನುಮತಿ ನೀಡುವವರೆಗೆ ತಾವು ವಿರಮಿಸುವುದಿಲ್ಲ ಎಂದು ಸ್ಪಷ್ಟವಾಗಿ ಪಾಲಿಕೆಯ ಆಯುಕ್ತರಿಗೆ ತಿಳಿಸಿರುವ ರಾಯ್ಕರ್ ಅವರು, ಈ ಹುದ್ದೆಯಲ್ಲಿ ಮುಂದುವರಿಯಲು ರಾಜ್ಯದ ಆಡಳಿತ ನ್ಯಾಯಮಂಡಳಿ ಆದೇಶದ ಬೆಂಬಲ ತಮಗಿದೆ ಎಂದು ಹೇಳಿಕೊಂಡಿದ್ದಾರೆ.

75 ವರ್ಷಗಳ ಹಿಂದೆ

ಬುಧವಾರ, 15-11-1950

• ಲ್ಹಾಸಾ ಕಮ್ಯುನಿಸ್ಟರ ಕೈವಶ: ಟಿಬೆಟ್ ಕದನ ಅಂತ್ಯ

ಕಾಲಿಂಪಾಂಗ್, ನ. 14– ಚೀಣಿ ನಾಯಕತ್ವದ ಟಿಬೆಟ್ ದೇಶೀಯ ಜನತಾ ಸೇನೆಗಳು ಲ್ಹಾಸಾ ಪ್ರವೇಶಿಸಿವೆ ಮತ್ತು ಕದನ ಮುಕ್ತಾಯವಾಗಿದೆ ಎಂದು ನಂಬಲರ್ಹ ವೃತ್ತಗಳಿಂದ ತಿಳಿದುಬಂದಿದೆ.

ಟಿಬೆಟ್ಟಿನ ಭವಿಷ್ಯತ್ ರಾಜಕೀಯ ಸ್ಥಾನಮಾನದ ಬಗ್ಗೆ ಚೀಣಿಯರ ಕರಡು ಯೋಜನೆಗಳನ್ನು ಚರ್ಚಿಸುತ್ತಾ, ದೀರ್ಘಾಧಿವೇಶನದಲ್ಲಿದ್ದ ಟಿಬೆಟ್ಟಿನ ರಾಷ್ಟ್ರೀಯ ಸಭೆಯು ಅಂಗೀಕರಿಸಲು ಕಡೆಯದಾಗಿ ನಿರ್ಧರಿಸಿದೆ.

ಚುರುಮುರಿ

ಹಾಲಿನಲ್ಲಿ ನೀರಿನ ಹೆಜ್ಜೆ!

• ಚಂದ್ರಕಾಂತ ವಡ್ಡು

'ಮೀನಿನ ಹೆಜ್ಜೆ ಗುರುತಿಸಬಹುದು, ಆದರೆ ನೀರಿನ ಹೆಜ್ಜೆ ಅಂದಾಜಿಸಲಾಗದು. ನಾನು ಈ ಮಾತನ್ನು ಬೈಟು ಕಾಫಿ ಮುಂದೆ ನಿಂತು ಹೇಳುತ್ತಿದ್ದೇನೆ' ಎಂದು ಥೇಟ್ ಜಮೀರ್ ಶೈಲಿಯಲ್ಲಿ ಘೋಷಿಸಿದ ಬದ್ರಿ.

'ಮೂರನೇ ಮಹಾಯುದ್ಧ ಅಂತ ಆದ್ರೆ ಅದು ನೀರಿಗಾಗಿಯೇ ಅಂತಾರೆ...' ಎಂದು ಕೊಟ್ರ ತನ್ನ ಮಾತನ್ನು ಸೇರಿಸಿದ.

'ಅದೇನೋ ಗೊತ್ತಿಲ್ಲ, ವಿಧಾನಸೌಧದ ಬ್ಯಾಂಕ್ವೆಟ್ 'ಹಾಲಿನಲ್ಲಿ ನೀರಿನ ಹೆಜ್ಜೆ' ಮೂಡಿರುವುದಂತೂ ನಿಜ'.

'ಅಂದ್ರೆ ಹಾಲುಮತ ನೀರುಮತ ಬೆರೆತಂತೆ, ಭಿನ್ನಮತ ತಣ್ಣಗಾದಂತೆ, ರಾಜಣ್ಣ ಕ್ರಾಂತಿ ಮರೆತಂತೆ...'

'ಅದೇನೇ ಇರಲಿ, ನೀರಿನ ಹೆಜ್ಜೆ ಪುಸ್ತಕದ ಕಿಕ್ಕರ್ ಸಾಲಿನ ಸೀಕ್ವೆನ್ಸ್ ತಪ್ಪೇ ತಪ್ಪು. 'ವಿವಾದ ಒಪ್ಪಂದ ತೀರ್ಪು' ಹೇಗಾಗುತ್ತದೆ? ಮೊದಲು ಅಂತಃಪುರದಲ್ಲಾದ ಹಸ್ತಾಂತರ ಒಪ್ಪಂದ, ನಂತರ ಬೆಂಬಲಿಗರ ಬಹಿರಂಗ ವಿವಾದ, ಕೊನೆಗೆ ಕಾಯ್ದಿರಿಸಿರುವ ಹೈಕಮಾಂಡ್ ತೀರ್ಪು ಬರಬೇಕು' ತಿಂಗಳೇಶನ ವಿವರಣೆ.

'ಅಬ್ಬಬ್ಬಾ... ಅಧಿಕಾರಕ್ಕೆ ಎಷ್ಟೊಂದು ಮಾರ್ಗಗಳು! ಸುರಂಗ ಮಾರ್ಗದ ನಂತರ ಈಗ ಜಲಮಾರ್ಗ ಹಿಡಿದಿರುವ ನಮ್ಮ ಬಂಡೆ ಸಾಹೇಬರು ಬಲ ಮಾರ್ಗವನ್ನೂ ಕಾಯ್ದಿರಿಸಿದ್ದಾರಂತೆ'.

'ರಾಜಕಾರಣಿಗಳಿಗೆ ಅಧಿಕಾರ ತಲುಪಲು ಅಗಣಿತ ಮಾರ್ಗಗಳೇನೋ ಸರಿ, ಜನರಿಗೆ ಸ್ವರ್ಗ ತಲುಪಲು ಮಾತ್ರ ಏಕೈಕ ಮಾರ್ಗ. ಅದರ ನಿರ್ಮಾತೃ ಕೂಡ ಅಧಿಕಾರಸ್ಥರೇ...'

'ವೀರಮಾರ್ಗ ಧೀರಮಾರ್ಗ ಗೊತ್ತಿತ್ತು, ಇದೀಗ ನೀರಮಾರ್ಗ ಕ್ಷೀರಮಾರ್ಗ ಗೊತ್ತಾಯ್ತು. ಇನ್ಯಾವುದಪ್ಪಾ ಸ್ವರ್ಗದ ಮಾರ್ಗ?'

'ಅದೇ... ಗುಂಡಿಗಳು ತುಂಬಿದ ನರಕ ರಸ್ತೆ ಮೂಲಕ ಸ್ವರ್ಗ ತಲಪುವ ಸುಲಭ ಮಾರ್ಗ'.

'ಹಾಗಾದರೆ 'ನೀರಿನ ಹೆಜ್ಜೆ' ಕೃತಿಕಾರರಿಂದ ಆಧುನಿಕ 'ಕವಿರಾಜಮಾರ್ಗ' ರಚನೆಯೂ ಆಗಲಿ' ತಿಂಗಳೇಶ ಆಶಾವಾದದ ಹೆಜ್ಜೆ ಇರಿಸಿದ.

ಸಂಗತ

ಬಿರ್ಸಾ: ಬುಡಕಟ್ಟುಗಳ ಏಕೀಕರಣದ ಶಿಲ್ಪಿ

ಆದಿವಾಸಿ ಬುಡಕಟ್ಟುಗಳ ಸ್ಫೂರ್ತಿಯ ಚಿಲುಮೆ ಬಿರ್ಸಾ ಮುಂಡಾ ಜನಿಸಿ 150 ವರ್ಷ ತುಂಬಿವೆ; ಆತನ ಬಲಿದಾನಕ್ಕೆ ಈಗ 125 ವರ್ಷ.

• ಅರುಣ್ ಜೋಳದಕೂಡ್ಲಿಗಿ

ಈ ದೇಶದ ದಲಿತ, ದಮನಿತ, ಅಸ್ಪೃಶ್ಯರಿಗೆ ಅಂಬೇಡ್ಕರ್ ಒಂದು ಶಕ್ತಿಯಾಗಿರುವಂತೆ, ಭಾರತದ ಆದಿವಾಸಿ ಬುಡಕಟ್ಟುಗಳ ಸ್ವಾಭಿಮಾನ ಮತ್ತು ಹೋರಾಟದ ಕಿಚ್ಚಿನ ಗುರುತು– ಬಿರ್ಸಾ ಮುಂಡಾ. ಜಾರ್ಖಂಡ್ ರಾಜ್ಯ ರಚನೆಯಾದ (ನ. 15, 2000) ನಂತರವಂತೂ ಆದಿವಾಸಿಗಳ ನಾಯಕನಾಗಿ ಬಿರ್ಸಾ ಮುಂಡಾ ದೊಡ್ಡಮಟ್ಟದಲ್ಲಿ ಮುನ್ನೆಲೆಗೆ ಬರತೊಡಗಿದ. ಭಾರತದ ಪಾರ್ಲಿಮೆಂಟ್ ಭವನದಲ್ಲಿ ಈತನ ಭಾವಚಿತ್ರವಿದೆ. ಅದು, ಅಲ್ಲಿರುವ ಆದಿವಾಸಿ ಸಮುದಾಯಕ್ಕೆ ಸಂಬಂಧಿಸಿದ ಏಕೈಕ ಪ್ರಾತಿನಿಧಿಕ ಭಾವಚಿತ್ರ.

ರಾಂಚಿ ಬಳಿಯ ಉಳಿಹಾಟು ಎಂಬ ಬುಡಕಟ್ಟು ಹಾಡಿಯಲ್ಲಿ ಸುಗನ ಮುಂಡಾ ಮತ್ತು ಕರ್ಮಿ ಹಾತು ಅವರ ಮಗನಾಗಿ ಬಿರ್ಸಾ ಜನಿಸಿದ್ದು ನವೆಂಬರ್ 15ರ 1875ರಂದು. ಸ್ವಾತಂತ್ರ್ಯ ಚಳವಳಿಯಲ್ಲಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ದುಃಸ್ವಪ್ನದಂತಿದ್ದ ಬಿರ್ಸಾ, 1900ರ ಜೂನ್ 9ರಂದು ರಾಂಚಿಯ ಕೇಂದ್ರ ಕಾರಾಗೃಹದಲ್ಲಿ ಬ್ರಿಟಿಷ್ ಪ್ರಭುತ್ವದಿಂದ ಹತ್ಯೆಗೊಳಗಾದ. ಆಗಿನ್ನೂ ಆತನಿಗೆ 25 ವರ್ಷ.

ಒಂದೆಡೆ ಬ್ರಿಟಿಷರು, ಅಪಾರ ಸಂಪತ್ತಿನ ಬೀಡಾಗಿದ್ದ ಭಾರತದ ಮಧ್ಯಭಾಗದಲ್ಲಿರುವ ಕಾಡುಗಳ ಮೇಲೆ ತಮ್ಮ ಪ್ರಭುತ್ವ ಸ್ಥಾಪಿಸಲು ಆದಿವಾಸಿಗಳನ್ನು ನಿಯಂತ್ರಿಸತೊಡಗಿದ್ದರು; ಮತ್ತೊಂದೆಡೆ, ಆದಿವಾಸಿಗಳನ್ನು ವ್ಯಾಪಾರಿಗಳು, ಲೇವಾದೇವಿಗಾರರು ಮತ್ತು ಜಮೀನ್ದಾರರು ಶೋಷಿಸುತ್ತಿದ್ದರು. ಇವರ ನಡುವೆ, ಮತಾಂತರಿಗಳು ಮತ್ತು ಧಾರ್ಮಿಕ ಮೂಲಭೂತವಾದಿಗಳು ಆದಿವಾಸಿಗಳನ್ನು ತಮ್ಮ ಧರ್ಮಕ್ಕೆ ಮತಾಂತರಿಸಲು ಮತ್ತು ತಮ್ಮ ಧರ್ಮದಲ್ಲಿ ಉಳಿಸಿಕೊಳ್ಳಲು ಸ್ಪರ್ಧೆ ನಡೆಸಿದ್ದರು. ಹೀಗೆ ಆದಿವಾಸಿಗಳ ಮೇಲೆ ಹಲವು ದಿಕ್ಕುಗಳಿಂದ ದಾಳಿಗಳು ಪ್ರಾರಂಭವಾದಾಗ, ವಿವಿಧ ಪ್ರದೇಶಗಳಲ್ಲಿ, ವಿವಿಧ ನಾಯಕರ ನೇತೃತ್ವದಲ್ಲಿ ಪ್ರತಿಭಟನೆಗಳು ಆರಂಭವಾದವು. ಇಂತಹ ಸಂದರ್ಭದಲ್ಲಿ ಓರ್ವ ರೈತ ಗುತ್ತಿಗೆದಾರನ ಮಗನಾದ ಬಿರ್ಸಾ ಮುಂಡಾ, ಆದಿವಾಸಿಗಳ ಗಟ್ಟಿ ಧ್ವನಿಯಾಗಿ ಮುನ್ನೆಲೆಗೆ ಬಂದ.

ಬಿರ್ಸಾ ತನ್ನನ್ನು ತಾನು ದೇವರ ಅವತಾರ ಎಂದು ಘೋಷಿಸಿಕೊಂಡ. ಪ್ರಕೃತಿಯನ್ನೇ ದೇವರು ಎಂಬ ಬುಡಕಟ್ಟುಗಳ ಆದಿಮ ನಂಬಿಕೆಯ ಬುನಾದಿಯ ಮೇಲೆ ಹೊಸ ಬುಡಕಟ್ಟು ಧರ್ಮವನ್ನು ಸ್ಥಾಪಿಸಿದ. ಪ್ರಕೃತಿಯೇ ದೇವರೆಂದೂ, ಸಮಾನ ಸಮಾಜವೇ ನೀತಿಯೆಂದು ಹೇಳುವುದರ ಜೊತೆಗೆ– ಸುಳ್ಳು, ವ್ಯಭಿಚಾರ, ಕಳ್ಳತನ, ಭಿಕ್ಷಾಟನೆ, ಕಪಟ, ಸ್ವಾರ್ಥಗಳು ನಿಷಿದ್ಧ ಎಂದು ಘೋಷಿಸಿದ. ಬಿರ್ಸಾ ಮುಂಡಾನ ಹೊಸ ಧರ್ಮದ ನೀತಿಗಳು ಆದಿವಾಸಿಗಳ ಸಂಸ್ಕೃತಿಯೊಂದಿಗೆ ಬೆಸೆದುಕೊಂಡಿದ್ದರಿಂದ, ಆತ ಬಹುಬೇಗ ಜನಪ್ರಿಯನಾದ. ಆತನನ್ನು 'ದೇವಮಾನವ' ಎಂದೂ, 'ಧರ್ತಿ ಅಬ್ಬಾ' (ಭೂಮಿಯ ತಂದೆ) ಎಂದೂ ಜನ ಕೊಂಡಾಡಿದರು. 1894ರ ಅಕ್ಟೋಬರ್ 1ರಂದು ಚೋಟಾ ನಾಗಪುರದಲ್ಲಿ ನಡೆದ ಆದಿವಾಸಿಗಳ ಬೃಹತ್ ಮೆರವಣಿಗೆಯಲ್ಲಿ 'ಉಳುವವನೇ ಭೂಮಿಯ ಒಡೆಯನಾಗಬೇಕು', 'ಬ್ರಿಟನ್ ಮಹಾರಾಣಿಯ ಆಡಳಿತವನ್ನು ಕೊನೆಗಾಣಿಸಬೇಕು' ಎಂದು ಬಿರ್ಸಾ ಗರ್ಜಿಸಿದ್ದ.

ಈ ಬುಡಕಟ್ಟು ಧೀರನ ಬಗ್ಗೆ ಇಪ್ಪತ್ತನೇ ಶತಮಾನದ ಉತ್ತರಾರ್ಧದಲ್ಲಿ ಸಂಶೋಧನೆಗಳು ಆರಂಭವಾದವು. 1940ರಲ್ಲಿ ಬಿಹಾರ ಸರ್ಕಾರ ಪ್ರಕಟಿಸಿದ 'ಸಂತಾಲರ ದಂಗೆ' ಕುರಿತ ಪುಸ್ತಕದಲ್ಲಿ ಮೊದಲ ಬಾರಿಗೆ ಬಿರ್ಸಾ ಮುಂಡಾನ ಬಗ್ಗೆ ಹೊರಜಗತ್ತಿಗೆ ತಿಳಿಯಿತು. ಬಿಹಾರದ ಬುಡಕಟ್ಟು ಸಂಶೋಧನಾ ಸಂಸ್ಥೆಯು ಎಸ್.ಪಿ. ಸಿನ್ಹಾ ಅವರ ಮೂಲಕ 'ಲೈಫ್ ಅಂಡ್ ಟೈಮ್ಸ್ ಆಫ್ ಬಿರ್ಸಾ ಭಗವಾನ್' (1964) ಕುರಿತ ಯೋಜನೆಯಲ್ಲಿ ಬಿರ್ಸಾನ ಬಗ್ಗೆ ಸಂಶೋಧನೆ ಮಾಡಿಸಿತು. ಇದೇ ಸಮಯದಲ್ಲಿ ಲಂಡನ್ ವಿಶ್ವವಿದ್ಯಾಲಯದಲ್ಲಿ ಕೆ. ಸುರೇಶ್ ಸಿಂಗ್, ಬಿರ್ಸಾ ಮುಂಡಾನ ಬಗ್ಗೆ ಸಂಶೋಧನೆ ಮಾಡಿ, ತಮ್ಮ ಕೃತಿಯನ್ನು 1966ರಲ್ಲಿ ಪ್ರಕಟಿಸಿದರು. ಅಂದಿನಿಂದ ಬಿರ್ಸಾ ಮುಂಡಾನ ಬದುಕಿನ ವಿದ್ಯಮಾನಗಳು ಮುನ್ನೆಲೆಗೆ ಬರುತ್ತಿವೆ.

ಸುರೇಶ್ ಸಿಂಗ್ ಅವರ ಸಂಶೋಧನೆಯನ್ನು ಆಧರಿಸಿ, ಮಹಾಶ್ವೇತಾದೇವಿ ಅವರು ಬರೆದ 'ಅರಣ್ಯೇ ಅಧಿಕಾರ್' ಕಾದಂಬರಿಗೆ 1977ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆಯಿತು. ಆ ಕಾದಂಬರಿಯನ್ನು ಜಿ. ಕುಮಾರಪ್ಪ ಮತ್ತು ಬಿ. ಸುಜ್ಞಾನ ಮೂರ್ತಿ ಕನ್ನಡಕ್ಕೆ ತಂದಿದ್ದಾರೆ. ಸಿನಿಮಾಗಳು, ಸಾಕ್ಷ್ಯಚಿತ್ರಗಳು, ಸಾಮಾಜಿಕ ಜಾಲತಾಣಗಳು ಕೂಡ ಬಿರ್ಸಾ ಮುಂಡಾನನ್ನು ಜನಪ್ರಿಯಗೊಳಿಸಿವೆ. ಬುಡಕಟ್ಟು ವ್ಯವಹಾರಗಳ ಸಚಿವಾಲಯ ನಿರ್ಮಿಸಿದ 'ಬಿರ್ಸಾ ಮುಂಡಾ', ದೂರದರ್ಶನ ನಿರ್ಮಿಸಿದ 'ಬಿರ್ಸಾ ಮುಂಡಾ: ದ ರಿಯಲ್ ಹೀರೊ' ಮತ್ತು ಪ್ರಸಾರ ಭಾರತಿ ತಯಾರಿಸಿದ 'ಬಿರ್ಸಾ ಮುಂಡಾ' ಸಾಕ್ಷ್ಯಚಿತ್ರ ಪ್ರಮುಖವಾದವು.

ಕರ್ನಾಟಕದಲ್ಲಿ ಟಿಪ್ಪು ಸುಲ್ತಾನನ ಬಗ್ಗೆ ಬಲಪಂಥೀಯ ಚರಿತ್ರೆಕಾರರು ಹುಟ್ಟುಹಾಕಿದ ಸುಳ್ಳುಗಳಂತೆ ಬಿರ್ಸಾ ಮುಂಡಾನ ಬಗ್ಗೆಯೂ ಅಪಪ್ರಚಾರಗಳು ನಡೆದಿವೆ. ಈಗಲೂ ಜಾರ್ಖಂಡ್ ರಾಜ್ಯದಲ್ಲಿ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಬುಡಕಟ್ಟುಗಳಲ್ಲಿ ಬಿರ್ಸಾನ ವಿರುದ್ಧದ ಪ್ರಚಾರವಿದೆ. ಎಲ್ಲ ಅಪಪ್ರಚಾರಗಳನ್ನೂ ಮೀರಿಯೂ ಬಿರ್ಸಾ ಮುಂಡಾ ಇಂದು ಇಡೀ ದೇಶದ ಬುಡಕಟ್ಟು ಯುವಜನರಿಗೆ ಸ್ಫೂರ್ತಿಯ ಚಿಲುಮೆ. ಹಾಗಾಗಿಯೇ ಬಿರ್ಸಾನ 150ನೇ ಜನ್ಮದಿನಾಚರಣೆ ಸಂದರ್ಭದಲ್ಲಿ ಭಾರತದ ಆದಿವಾಸಿ ಬುಡಕಟ್ಟುಗಳು ತಮ್ಮ ಹೋರಾಟದ ಸಂಗಾತಿಯನ್ನು ಸ್ಮರಿಸುತ್ತಿವೆ.

ಸ್ಥಳೀಯ ಸಂಸ್ಕೃತಿ ಮತ್ತು ಸ್ಮೃತಿಗಳ ಸಂರಕ್ಷಣೆಯ ದೃಷ್ಟಿಯಿಂದಲೂ ಬಿರ್ಸಾ ಮುಂಡಾ ಈಗಲೂ ಸಮಕಾಲೀನ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬೇಸಿಗೆಯಲ್ಲಿ ಹನಿ ಹನಿಗೂ ಹಾಹಾಕಾರ, ಮಳೆಗಾಲದಲ್ಲಿ ಪ್ರವಾಹ ಪರಿಸ್ಥಿತಿ

ಭಾರತದ ನಗರಗಳ ಜಲಸಂಕಷ್ಟ

• ಜೆ.ಹರ್ಷ

ಭಾರತದ ನಗರ ಪ್ರದೇಶಗಳ ಜಲ ಬಿಕ್ಕಟ್ಟು, ವೈಪರೀತ್ಯಗಳಿಗೆ ಮೂಲ ಹಾಗೂ ಅಂತಿಮ ಪರಿಹಾರ ಸಿಗಬೇಕು ಎಂದರೆ, ದೇಶದ ಅನೇಕ ರಾಜ್ಯಗಳಲ್ಲಿ ಒಂದು ನಗರದ ಬೆಳವಣಿಗೆಗೆ ಕೊಡುತ್ತಿರುವ ಅಪರಿಮಿತ ಪ್ರಾಮುಖ್ಯ ಮತ್ತು ಚಿಕ್ಕ ಚಿಕ್ಕ ಪಟ್ಟಣಗಳ ಅಭಿವೃದ್ಧಿಯ ನಿರ್ಲಕ್ಷ್ಯ- ಇವೆರಡಕ್ಕೂ ಕಡಿವಾಣ ಬೀಳಬೇಕು. ಒಂದೇ ನಗರಕ್ಕೆ ಹರಿದುಹೋಗುತ್ತಿರುವ ಅಪರಿಮಿತ ಹೂಡಿಕೆ, ಶ್ರೀಮಂತಿಕೆಯ ಕೇಂದ್ರೀಕರಣ ಮತ್ತು ಇದರ ಕಾರಣವಾಗಿ ಮಹಾನಗರಗಳ ಅನಿಯಂತ್ರಿತ 360 ಡಿಗ್ರಿಯ ವಿಸ್ತರಣೆ- ಇವೆಲ್ಲದರ ಕಡಿವಾಣವೇ ಮಹಾನಗರಗಳ ಮಹಾವೈಪರೀತ್ಯಗಳಾದ ಬರ/ಪ್ರವಾಹಗಳಿಗೆ ನೀಡಬಹುದಾದ ಮೂಲ ಚಿಕಿತ್ಸೆ

ನೀರು ಜೀವಸಂಕುಲದ ಅಮೃತ. ಸಕಲ ಚರಾಚರಗಳ ಅಳಿವು ಉಳಿವಿನ ಸಂಜೀವಿನಿ. ಆದರೆ, ಬೇಸಿಗೆ ಬಂತೆಂದರೆ ಈ ಸಂಜೀವಿನಿಗಾಗಿ ಭಾರತದ ಮಹಾನಗರಗಳಲ್ಲಿ ಹಾಹಾಕಾರ. ಮಳೆಗಾಲದಲ್ಲಿ ಅದೇ ನೀರಿನ ರುದ್ರನರ್ತನಕ್ಕೆ ನಲುಗಿ ಹೋಗುವವು ಈ ನಗರಗಳು. ನಮ್ಮ ಬೆಂಗಳೂರು ಇರಲಿ, ರಾಷ್ಟ್ರ ರಾಜಧಾನಿ ದೆಹಲಿಯಾಗಲಿ, ಮುಂಬೈ ಮಹಾನಗರಿಯಾಗಲಿ, ಕೋಲ್ಕತ್ತ ಅಥವಾ ಚೆನ್ನೈ ಇರಲಿ, ಬಹುತೇಕ ಎಲ್ಲ ಮಹಾನಗರಗಳೂ ಜಲಸಂಕಷ್ಟದ ಈ ಎರಡು ವೈಪರೀತ್ಯಗಳಿಂದ ಪ್ರತಿ ವರ್ಷ ನಲುಗಿ ಹೋಗುತ್ತಿವೆ.

ಒಂದೆಡೆ ನಗರಗಳನ್ನು ನಿತ್ಯ ಮುಳುಗಿಸುವ ಪ್ರವಾಹಗಳು, ಇನ್ನೊಂದೆಡೆ ಲಕ್ಷಾಂತರ ಜನರು ಹನಿ ನೀರಿಗೆ ಹೆಣಗಾಡುತ್ತಿರುವ ದೃಶ್ಯ- ಈ ವಿರೋಧಾಭಾಸವು ಮುಂಬೈ, ಬೆಂಗಳೂರು, ಚೆನ್ನೈ, ದೆಹಲಿ ಮತ್ತು ಕೋಲ್ಕತ್ತಾದಂತಹ ಮಹಾನಗರಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ಬೇಸಿಗೆಯಲ್ಲಿ ಟ್ಯಾಂಕರ್‌ಗಳ ಹಿಂದೆ ಸಾಲುಸಾಲು ನಿಂತ ಜನರು, ಮಳೆಗಾಲದಲ್ಲಿ ರಸ್ತೆಯನ್ನೇ ನದಿಯನ್ನಾಗಿ ಮಾಡಿರುವ ಪ್ರವಾಹಗಳು; ಈ 'ಹೈಡ್ರೊ-ಸ್ಕಿಜೋಫ್ರೀನಿಯಾ' ಎಂಬ ಜಲ ವಿಕೃತಿಯು ಮಹಾನಗರಗಳ ಅನಿಯಂತ್ರಿತ ಬೆಳವಣಿಗೆಯ ಪ್ರತಿಬಿಂಬವಾಗಿದೆ.

ಅಸಮಾನತೆಯ ಬೇರುಗಳು

ಮಾರ್ಗನ್ ಸ್ಟಾನ್ಲಿಯ ಆರ್ಥಿಕ ತಜ್ಞ ರುಚಿರ್ ಶರ್ಮಾ ಅವರು ತಮ್ಮ '10 ರೂಲ್ಸ್ ಆಫ್ ಸಕ್ಸಸ್‌ಫುಲ್ ನೇಷನ್ಸ್' ಪುಸ್ತಕದಲ್ಲಿ ರಾಷ್ಟ್ರಗಳ ಬೆಳವಣಿಗೆಯ ಅಸಮತೋಲನದ ಕುರಿತು ಎಚ್ಚರಿಸುತ್ತಾರೆ. ರಾಷ್ಟ್ರದ ಅಥವಾ ಒಂದು ಪ್ರದೇಶ/ರಾಜ್ಯದ ಮೊದಲ ಅತಿ ದೊಡ್ಡ ನಗರ ಮತ್ತು ಎರಡನೆಯ ದೊಡ್ಡ ನಗರದ ನಡುವಿನ ಅಗಾಧವಾದ ಆರ್ಥಿಕ ಅಸಮಾನತೆಯ ಪ್ರಮಾಣವು ದೇಶದ ಸಮತೋಲನದ ಪ್ರಗತಿಗೆ ಮಾರಕವಾಗಬಲ್ಲದು ಎಂಬುದನ್ನು ಅವರು ವಿವರಿಸುತ್ತಾರೆ.

ಉದಾಹರಣೆಗೆ, ಭಾರತದ ಸಿಲಿಕಾನ್ ವ್ಯಾಲಿ ಎಂದೇ ಪ್ರಶಂಸಿಸಲ್ಪಡುವ ನಮ್ಮ ಬೆಂಗಳೂರಿನ ಜನಸಂಖ್ಯೆ ಮೈಸೂರಿಗಿಂತ 10 ಪಟ್ಟು ಹೆಚ್ಚು. ಮುಂಬೈ ಜನಸಂಖ್ಯೆಯು ಪುಣೆಗಿಂತ 4 ಪಟ್ಟು ಜಾಸ್ತಿ. ಕೋಲ್ಕತ್ತ ಜನಸಂಖ್ಯೆ ಅಸನ್ಸೋಲ್‌ಗಿಂತ 10 ಪಟ್ಟು ಇದೆ. ಚೆನ್ನೈ ಮಹಾನಗರದ್ದು ಕೊಯಮತ್ತೂರಿಗಿಂತ 5 ರಷ್ಟು ಮತ್ತು 3 ಕೋಟಿಗಿಂತಲೂ ಹೆಚ್ಚು ಇರುವ ದೆಹಲಿಯು ಉತ್ತರ ಭಾರತದಲ್ಲಿ ಅಸಾಧಾರಣ ಜನಸಂಖ್ಯೆ ಹೊಂದಿದೆ. ಈ ಅಸಮಾನತೆಗಳು ಕೇವಲ ಜನಸಂಖ್ಯೆಯಲ್ಲಿ ಅಲ್ಲ, ಹೂಡಿಕೆಯಲ್ಲಿ, ಮೂಲಸೌಕರ್ಯದಲ್ಲಿ, ನೀರಿನ ಒತ್ತಡದಲ್ಲೂ ಕಾಣಿಸುತ್ತವೆ.

ರುಚಿರ್ ಶರ್ಮಾರ ಈ ಸಂಶೋಧನೆಯು ಭಾರತದ ಮಹಾನಗರ ಪ್ರದೇಶಗಳಲ್ಲಿನ ನೀರಿನ ವೈಪರೀತ್ಯಗಳಿಗೆ ಹಾಗೂ ಬಿಕ್ಕಟ್ಟಿನ ಪ್ರಮುಖ ಸುಳಿವನ್ನು ನೀಡುತ್ತದೆ.

ಅನಿಯಂತ್ರಿತ ನಗರ ವಿಸ್ತರಣೆ

ಪ್ರತಿ ವರ್ಷ ಬರ ಹಾಗೂ ಪ್ರವಾಹದಂತಹ ವೈಪರೀತ್ಯಗಳು ಬಂದು ಅಪ್ಪಳಿಸುತ್ತಿದ್ದರೂ ಇದರ ಬಗ್ಗೆ ಯಾವುದೇ ಕಾಳಜಿ ಇಲ್ಲದಂತೆ, ದೇಶದ ಮಹಾನಗರಗಳು ದಿಕ್ಕು ದೆಸೆಯಿಲ್ಲದೆ ಅಗಾಧವಾಗಿ ಬೆಳೆಯುತ್ತಾ ಹೋಗುತ್ತಿವೆ. ಆದರೆ, ಈ ಬೆಳವಣಿಗೆಯ ಅಂತ್ಯದ ಅರಿವು ಮಾತ್ರ ಯಾರಿಗೂ ಇಲ್ಲ. ಈ ಏಕಪಕ್ಷೀಯ ಬೆಳವಣಿಗೆ ಎಲ್ಲಿಯವರೆಗೆ ವಿಸ್ತರಿಸುತ್ತದೆ, ಹತ್ತಿರದ ಎಷ್ಟು ಪಟ್ಟಣಗಳನ್ನು ಕಬಳಿಸುತ್ತದೆ ಮತ್ತು ಇದೆಲ್ಲವೂ ಎಲ್ಲಿ ಕೊನೆಗೊಳ್ಳುತ್ತದೆ ಎಂಬುದು ಯಾರಿಗೂ ತಿಳಿದಿಲ್ಲ. ಮುಂಬೈ ನಗರವು ಈಗಾಗಲೇ ಠಾಣೆ ಜಿಲ್ಲೆಗೆ ಪ್ರವೇಶಿಸಿದೆ, ಬೆಂಗಳೂರು ನಗರ ಉತ್ತರದಲ್ಲಿ ತುಮಕೂರು, ಪಶ್ಚಿಮದಲ್ಲಿ ರಾಮನಗರ ಮತ್ತು ಪೂರ್ವದಲ್ಲಿ ಕೋಲಾರ ಹತ್ತಿರದ ಪಟ್ಟಣಗಳನ್ನು ಭಕ್ಷಿಸುವತ್ತ ಸಾಗಿದೆ. ದೇಶದ ಇತರೆ ಮಹಾನಗರಗಳು ಇದಕ್ಕೆ ಭಿನ್ನವಾಗಿಲ್ಲ.

ದೇಶದ ಮಹಾನಗರಗಳ ಈ ಗೊತ್ತು ಗುರಿ ಇಲ್ಲದ ವಿಸ್ತರಣೆಗೆ ಯಾವುದೇ ಮಿತಿಗಳಿಲ್ಲದಿರಬಹುದು, ಆದರೆ ಅದು ನೀರಿಗೆ ಮಾತ್ರ ಅನ್ವಯಿಸುವುದಿಲ್ಲ ಎನ್ನುವುದು ಬಹುತೇಕ ಮಂದಿಗೆ ಗೊತ್ತಿಲ್ಲ. ನದಿಗಳಿಗಾಗಲಿ ಅಥವಾ ಭೂಜಲಕ್ಕಾಗಲಿ ಒಂದು ಪರಿಮಿತಿ ಇದ್ದೇ ಇದೆ. ಉದಾಹರಣೆ, ಜಲಸಂಪನ್ಮೂಲ 'ವರುಣ'ನ ಅನುಗ್ರಹ ಮತ್ತು ಅನುಕಂಪದಲ್ಲಿದೆ. ಇದಲ್ಲದೆ ದೇಶದಾದ್ಯಂತ ಅನೇಕ ನ್ಯಾಯಮಂಡಳಿಗಳು ತಮ್ಮ ತೀರ್ಪುಗಳಿಂದ ರಾಜ್ಯಗಳಿಗೆ ಜಲ ಸಂಪನ್ಮೂಲವನ್ನು ಹಂಚಿಕೆಯ ಮೂಲಕ ಸೀಮಿತಗೊಳಿಸಿವೆ. ಆದುದರಿಂದ ನೀರನ್ನು ಮನಬಂದಂತೆ ಬಳಕೆ ಮಾಡುವಂತಿಲ್ಲ.

ಜಲಸಂಪನ್ಮೂಲಗಳಿಗೆ ಇಷ್ಟೆಲ್ಲಾ ನಿರ್ಬಂಧಗಳಿದ್ದರೂ ಕೆಲವರು ಸಾವಿರಾರು ಕಿಲೋಮೀಟರ್ ದೂರದ ನದಿಗಳಿಂದ ಮಹಾನಗರಗಳಿಗೆ ನೀರು ಹರಿಸುವ ಪ್ರಸ್ತಾವಗಳನ್ನು ಮುಂದಿಡುತ್ತಾರೆ. ಈ ಪ್ರಸ್ತಾವಗಳು ಕಾಗದದ ಮೇಲೆ ಆಕರ್ಷಕವಾಗಿ ಕಾಣುತ್ತವೆ. ಇದಕ್ಕೆ ತಗಲುವ ಆರ್ಥಿಕ ವೆಚ್ಚ, ತಾಂತ್ರಿಕ ತೊಂದರೆಗಳು, ನೀರಿನ ಸಂಘರ್ಷಗಳು ಹಾಗೂ ಪರಿಸರ ಹಾನಿ ಇವೆಲ್ಲವೂ ಇದರ ಸದುದ್ದೇಶಗಳನ್ನು ಮೀರುವ ಸಾಧ್ಯತೆಗಳಿವೆ.

ಇವೆಲ್ಲಕ್ಕಿಂತ, ಮಹಾನಗರಗಳು ಇನ್ನಷ್ಟು ಬೆಳೆದು, ಮತ್ತಷ್ಟು ನೀರಿಗಾಗಿ ಹಾಹಾಕಾರದ ಪರಿಸ್ಥಿತಿ ನಿರ್ಮಾಣವಾದರೆ ನೀರನ್ನು ದೇಶದ ಯಾವ ನದಿಯಿಂದ, ಇನ್ನೆಷ್ಟು ದೂರದಿಂದ ಮತ್ತು ಎಲ್ಲಿಯವರೆಗೆ ತರಬಹುದು ಎಂಬ ಅಂಶವನ್ನು ದೇಶದ ಜನರು ನಿರ್ಧರಿಸಬೇಕಿದೆ. ಉದಾಹರಣೆಗೆ, ಕೇವಲ 70 ಕಿ.ಮೀ. ದೂರದಲ್ಲಿರುವ ತುಮಕೂರಿನ ಹತ್ತಿರ ಬೆಳೆದ ಬೆಂಗಳೂರು, ಅಲ್ಲಿಗೇ ನಿಲ್ಲುತ್ತದೆ ಎಂಬುದಕ್ಕೆ ಖಾತರಿ ಏನು?

ಹಾಗಾಗಿ, ಜಲ ಸಂಕಷ್ಟದ ದೃಷ್ಟಿಯಿಂದ ಈ ದಿಕ್ಕು ದೆಸೆಯಿಲ್ಲದ ಅಸಮಾನತೆಯ ಬೆಳವಣಿಗೆಯನ್ನು ನಿಲ್ಲಿಸಲು ರಾಜಕೀಯ, ಆಡಳಿತ ಮತ್ತು ಯೋಜನಾ ತಂತ್ರಜ್ಞರು ಈಗಲಾದರೂ ಚಿಂತನೆ ಮಾಡಲೇಬೇಕಾಗಿದೆ.

ತಾತ್ಕಾಲಿಕ ಪರಿಹಾರಗಳು

ಭಾರತದ ಮಹಾನಗರ ಪ್ರದೇಶಗಳಲ್ಲಿನ ನೀರಿನ ವೈಪರೀತ್ಯಗಳಿಗೆ ಮೂಲ ಕಾರಣ ನಗರ ಪ್ರದೇಶಗಳ ಬಿರುಸಿನ ವಿಸ್ತರಣೆ, ಸ್ಫೋಟಗೊಳ್ಳುತ್ತಿರುವ ಜನಸಂಖ್ಯೆ, ಕ್ಷೀಣಿಸುತ್ತಿರುವ ಮೂಲಗಳು ಮತ್ತು ಶಿಥಿಲಗೊಂಡ ಒಳಚರಂಡಿಯ ಅವ್ಯವಸ್ಥೆ. ಇವುಗಳ ಮುಂದೆ ಬರ/ಪ್ರವಾಹಗಳಿಗೆ ಪರಿಹಾರಗಳೆಂದು ಹೇಳಲ್ಪಡುವ ಮಳೆನೀರು ಸಂಗ್ರಹ, ಅಂತರ್ಜಲ ಮರುಪೂರಣ, ಚಾವಣಿಯ ಮಳೆನೀರು ಸಂಗ್ರಹ, ತ್ಯಾಜ್ಯ ನೀರಿನ ಮರುಬಳಕೆ... ಮುಂತಾದವು ಕೇವಲ ತಾತ್ಕಾಲಿಕ ಪರಿಹಾರಗಳು. ಅಂದರೆ 'ಬ್ಯಾಂಡ್ ಏಡ್'ನಂತೆ. ಏಕೆಂದರೆ ಈ ಪರಿಹಾರಗಳು ಆಸ್ಪಿರಿನ್‌ನಂತೆ ನೋವನ್ನು ಮಾತ್ರ ಕಡಿಮೆ ಮಾಡುತ್ತವೆ; ಮೂಲ ರೋಗವನ್ನು ಗುಣಪಡಿಸುವುದಿಲ್ಲ.

ಭಾರತದ ನಗರ ಪ್ರದೇಶಗಳ ಜಲ ಬಿಕ್ಕಟ್ಟು, ವೈಪರೀತ್ಯಗಳಿಗೆ ಮೂಲ ಹಾಗೂ ಅಂತಿಮ ಪರಿಹಾರ ಸಿಗಬೇಕು ಎಂದರೆ, ದೇಶದ ಅನೇಕ ರಾಜ್ಯಗಳಲ್ಲಿ ಒಂದು ನಗರದ ಬೆಳವಣಿಗೆಗೆ ಕೊಡುತ್ತಿರುವ ಅಪರಿಮಿತ ಪ್ರಾಮುಖ್ಯ ಮತ್ತು ಚಿಕ್ಕ ಚಿಕ್ಕ ಪಟ್ಟಣಗಳ ಅಭಿವೃದ್ಧಿಯ ನಿರ್ಲಕ್ಷ್ಯ- ಇವೆರಡಕ್ಕೂ ಕಡಿವಾಣ ಬೀಳಬೇಕು.

ಒಂದೇ ನಗರಕ್ಕೆ ಹರಿದುಹೋಗುತ್ತಿರುವ ಅಪರಿಮಿತ ಹೂಡಿಕೆ, ಶ್ರೀಮಂತಿಕೆಯ ಕೇಂದ್ರೀಕರಣ ಮತ್ತು ಇದರ ಕಾರಣವಾಗಿ ಮಹಾನಗರಗಳ ಅನಿಯಂತ್ರಿತ 360 ಡಿಗ್ರಿಯ ವಿಸ್ತರಣೆ- ಇವೆಲ್ಲದರ ಕಡಿವಾಣವೇ ಮಹಾನಗರಗಳ ಮಹಾವೈಪರೀತ್ಯಗಳಾದ ಬರ/ಪ್ರವಾಹಗಳಿಗೆ ನೀಡಬಹುದಾದ ಮೂಲ ಚಿಕಿತ್ಸೆ. ಇದನ್ನು ನಿರ್ಲಕ್ಷಿಸಿ ತಾತ್ಕಾಲಿಕ 'ಬ್ಯಾಂಡ್ ಏಡ್' ಪರಿಹಾರಗಳನ್ನು ಅವಲಂಬಿಸಿದರೆ ಸಮಸ್ಯೆಯು ಪರಿಹಾರವಾಗುವ ಬದಲು ಮತ್ತಷ್ಟು ಜಟಿಲವಾಗುತ್ತದೆ.

ಪುನರ್ ವಿತರಣೆಯೇ ಪರಿಹಾರ

ಆದುದರಿಂದ ತುರ್ತಾಗಿ, ದೆಹಲಿ, ಮುಂಬೈ, ಬೆಂಗಳೂರು, ಕೋಲ್ಕತ್ತ ಮತ್ತು ಚೆನ್ನೈನಂತಹ ಮಹಾನಗರಗಳ ಸುತ್ತಮುತ್ತ ಇರುವ, ಹತ್ತಿರವಿರುವ ಸಣ್ಣ ನಗರಗಳಿಗೆ ದೇಶದ/ರಾಜ್ಯದ ಸಂಪತ್ತಿನ ಪುನರ್ ವಿತರಣೆಯಾಗಬೇಕಿದೆ. ಈ ಬಗ್ಗೆ ಆರ್ಥಿಕ ತಜ್ಞರು/ಯೋಜನೆ ರೂಪಿಸುವವರು ತುರ್ತುಗಮನ ಹರಿಸಬೇಕು. ನೈಸರ್ಗಿಕ ವಿಕೋಪಗಳನ್ನು ನಿಭಾಯಿಸುವ ಶಕ್ತಿಗನುಗುಣವಾಗಿ ಈ ಸಣ್ಣ ನಗರಗಳಿಗೆ ಹೂಡಿಕೆ, ಅಭಿವೃದ್ಧಿ ಮತ್ತು ಸಂಪತ್ತು ಪುನರ್ ವಿತರಣೆ ಮಾಡಬೇಕು. ಬೆಂಗಳೂರಿಗೆ ಬರುವ ಹೂಡಿಕೆಯ ಶೇಕಡ ಒಂದು ಭಾಗವನ್ನಾದರೂ ತುಮಕೂರು, ರಾಮನಗರ, ಹಾಸನ, ಮಂಡ್ಯದಂತಹ ಸಣ್ಣ ನಗರಗಳಿಗೆ ವಿತರಿಸಲು ಚಿಂತನೆ ಮಾಡಬೇಕು.

ಹಾಗೆ ಮಹಾನಗರಗಳ ಕಡೆ ಹೊರಟಿರುವ ಮತ್ತು ಜಲ ಬಿಕ್ಕಟ್ಟಿಗೆ ಕಾರಣವಾಗುತ್ತಿರುವ ಜನರ ವಲಸೆಯನ್ನು ಸಣ್ಣ ನಗರಗಳ ಕಡೆ ತಿರುಗಿಸಬೇಕಿದೆ. ಭಾರತದ ಮಹಾನಗರಗಳ ಹೈಡ್ರೊ-ಸ್ಕಿಜೋಫ್ರೀನಿಯಾದ ಸಮಸ್ಯೆಗಳಾದ ಬೇಸಿಗೆಯ ಕೊರತೆ ಮತ್ತು ಮುಂಗಾರಿನ ಪ್ರವಾಹ ಇವುಗಳನ್ನು ನಿವಾರಿಸಲು ಇರುವ ಏಕೈಕ ಸಂಭಾವ್ಯ ಮಾರ್ಗ ಇದು.

ಲೇಖಕ: ಬೆಂಗಳೂರಿನಲ್ಲಿರುವ ಕೇಂದ್ರ ಜಲ ಆಯೋಗದ ನಿರ್ದೇಶಕ

(ಈ ಬರಹದಲ್ಲಿರುವುದು ಲೇಖಕರ ವೈಯಕ್ತಿಕ ಅಭಿಪ್ರಾಯಗಳು)



ನೀರು ಸಂಜೀವಿನಿಯೂ ಹೌದು, ಮರೀಚಿಕೆಯೂ ಹೌದು

ಭಾರತದ ಮಹಾನಗರಗಳ ಅಸಹಜ ಜನಸಂಖ್ಯೆ, ಅಡ್ಡಾದಿಡ್ಡಿ ವಿಸ್ತೀರ್ಣ ಹಾಗೂ ಹೂಡಿಕೆಯ ಫಲಿತಾಂಶವೇ ಈ ಎಲ್ಲ ಜಲಸಂಕಷ್ಟಗಳಿಗೆ ಪ್ರಮುಖ ಕಾರಣ. ಹಾಗೆ ನೀರಿನ ಬೇಡಿಕೆಯ ಮೇಲಿನ ಇವೆಲ್ಲದರ ಪರಿಣಾಮವನ್ನು ಒಮ್ಮೆ ನೋಡೋಣ: 2015ರಲ್ಲಿ ದೆಹಲಿಯಲ್ಲಿ ಸುಮಾರು 4,760 ಎಂಎಲ್‌ಡಿ ನೀರಿನ ಬೇಡಿಕೆಯಿದ್ದರೆ ಪೂರೈಕೆ ಮಾತ್ರ 3,546 ಎಂಎಲ್‌ಡಿ ಇತ್ತು. ಎರಡರ ನಡುವೆ ಸುಮಾರು 1,000 ಎಂಎಲ್‌ಡಿಯಷ್ಟು ಅಂತರವಿತ್ತು; ಇವತ್ತಿನ ದಿನ, ಕೋಲ್ಕತ್ತ ಸುಮಾರು 1,875 ಎಂಎಲ್‌ಡಿ ನೀರಿನ ಬೇಡಿಕೆಯನ್ನು ಹೊಂದಿದೆ ಮತ್ತು ಸೋರಿಕೆ, ಕಳ್ಳತನ ಮತ್ತು ವಿತರಣಾ ಅಂತರವನ್ನು ಪರಿಗಣಿಸಿದರೆ ಸುಮಾರು 400 ಎಂಎಲ್‌ಡಿ ಕೊರತೆ ಕಾಣುತ್ತದೆ. ಚೆನ್ನೈ ನಗರ ಪ್ರದೇಶದ ನೀರಿನ ಬೇಡಿಕೆ 1,850 ಎಂಎಲ್‌ಡಿ ಆಗಿದ್ದು, ಪೂರೈಕೆ ಮಾತ್ರ 1,510 ಎಂಎಲ್‌ಡಿ. ಇದರಿಂದ ಸುಮಾರು 300 ಎಂಎಲ್‌ಡಿ ಕೊರತೆ ಇದೆ. ಮುಂದಿನ ವರ್ಷ (2026) ನಮ್ಮ ಬೆಂಗಳೂರು ನಗರ ಪ್ರದೇಶದ ಬೇಡಿಕೆ ಮತ್ತು ಪೂರೈಕೆ ಕ್ರಮವಾಗಿ 3,437 ಎಂಎಲ್‌ಡಿ ಮತ್ತು 2,235 ಎಂಎಲ್‌ಡಿ ಇರಲಿದ್ದು, ಇನ್ನೂ 1,262 ಎಂಎಲ್‌ಡಿಯಷ್ಟು ಕೊರತೆ ಉಂಟಾಗಲಿದೆ. ಇದರಿಂದ ಆತಂಕಕಾರಿ ಪರಿಸ್ಥಿತಿ ನಿರ್ಮಾಣವಾಗಲಿದೆ.

ಈ ಅಂಕಿಅಂಶಗಳು, ನಗರಗಳಲ್ಲಿನ ಬೆಳವಣಿಗೆಗೆ ಸಂಬಂಧಿಸಿದ, ಪ್ರಜ್ಞಾಪೂರ್ವಕ ನೀತಿಗಳ ಕೊರತೆಯ ಪ್ರತಿರೂಪಗಳಾಗಿವೆ.

ಅಸಮಾನತೆಯ ಬೆಳವಣಿಗೆ ಬದಲಾವಣೆ ಅಗತ್ಯ

ಮುಂಗಾರು ಈಗ ತಾನೇ ಮುಗಿದಿದೆ, ಹಿಂಗಾರು ಆರಂಭವಾಗಿದೆ. ಬೇಸಿಗೆ ಮುಂದಿದೆ. ಬೇಸಿಗೆಯಲ್ಲಿ ಜಲಕ್ಷಾಮಕ್ಕೆ ಒಳಗಾಗಿದ್ದ ಮುಂಬೈ, ಚೆನ್ನೈ, ಬೆಂಗಳೂರು ಮತ್ತು ಹೈದರಾಬಾದ್ ನಗರಗಳು ಮುಂಗಾರಿನ ನಂತರ ಈಗ ಪುನಃ ಹಿಂಗಾರಿನ ಪ್ರವಾಹದ ಬಿಕ್ಕಟ್ಟನ್ನು ಎದುರಿಸುವ ಅಪಾಯವಿದೆ. ನಂತರ ಬೇಸಿಗೆ– ನೀರಿಗೆ ಪುನಃ ಹಾಹಾಕಾರ. ಇದು ಎಚ್ಚರಿಕೆಯ ಗಂಟೆ ಮತ್ತು ನೀತಿನಿರೂಪಕರಿಗೆ ಆಪತ್ಕಾಲದ ಕರೆಯಾಗಿದೆ. 'ಅದೇ ರಾಗ ಅದೇ ಹಾಡು' ಎಂಬಂತೆ ಪ್ರತಿವರ್ಷವೂ ಬಂದೆರಗುವ ಈ ಹಾಹಾಕಾರದ ಪುನರಾವರ್ತಿತ ಪ್ರದರ್ಶನ ನಿಲ್ಲಿಸಬೇಕಾದರೆ, ನಾವೆಲ್ಲರೂ ಮಹಾನಗರಗಳ ವಿನ್ಯಾಸದ ದಿಕ್ಕು ಬದಲಿಸಲೇಬೇಕಿದೆ.

ಆದುದರಿಂದ ಜಲ ಹಾಗೂ ಆರ್ಥಿಕ ತಜ್ಞರು/ಯೋಜಕರು (ಮತ್ತು ನಾವು/ನೀವು) ಜೊತೆಗೂಡಿ ದೇಶದ ನಗರ/ಪಟ್ಟಣಗಳ ಈ ಆರ್ಥಿಕ ಅಸಮಾನತೆಯನ್ನು, ಏಕಪಕ್ಷೀಯ ಬೆಳವಣಿಗೆಯನ್ನು ಎಷ್ಟು ಬೇಗ ಅರಿತು ಬದಲಾಯಿಸುವೆವೋ, ಅಷ್ಟು ಬೇಗ ಮಹಾನಗರಗಳ ಬೆನ್ನತ್ತಿರುವ ಹೈಡ್ರೊ-ಸ್ಕಿಜೋಫ್ರೀನಿಯಾ ಅಂದರೆ ಈ ನೀರಿನ ಹಾಹಾಕಾರ/ಪ್ರವಾಹಗಳ ಅವಳಿ ಬಿಕ್ಕಟಿಗೆ ಅಂತಿಮ ತೆರೆ ಎಳೆಯಬಹುದಾಗಿದೆ.



ನಾಡಿಗೆ ಪರಿಚಯಿಸಿದ್ದ 'ಪ್ರಜಾವಾಣಿ'

ತಿಮ್ಮಕ್ಕ ಅವರನ್ನು ನಾಡಿಗೆ ಪರಿಚಯಿಸಿದ ಕೀರ್ತಿ 'ಪ್ರಜಾವಾಣಿ'ಯದ್ದು. ಪತ್ರಿಕೆಯ ಸಾಪ್ತಾಹಿಕ ಪುರವಣಿಯಲ್ಲಿ 1994ರ ಜೂನ್ 19ರಲ್ಲಿ 'ಸಾಲುಮರಗಳ ಸಂಗಾತಿ ತಿಮ್ಮಕ್ಕ' ಎಂಬ ಚಿತ್ರಬರಹ ಪ್ರಕಟವಾಗಿತ್ತು. ಪತ್ರಿಕೆಯ ನೆಲಮಂಗಲ ತಾಲ್ಲೂಕಿನ ಅರೆಕಾಲಿಕ ವರದಿಗಾರರಾಗಿದ್ದ ಎಂ.ವಿ. ನೆಗಳೂರು ಅವರು ಬರೆದ ಈ ಚಿತ್ರಬರಹವು, ಮುಂದೆ ತಿಮ್ಮಕ್ಕ ಅವರ ಖ್ಯಾತಿಯನ್ನು ರಾಜ್ಯ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದಿತ್ತು.

ಮರಗಳ ಮಹಾತಾಯಿ

• ಓದೇಶ ಸಕಲೇಶಪುರ



ಕಲೆ: ಗುರು ನಾವಳ್ಳಿ

ಮಕ್ಕಳಿಲ್ಲದ ದಂಪತಿ ಏನು ಮಾಡಬಹುದು? ಹೀಗೊಂದು ಪ್ರಶ್ನೆಗೆ ತಕ್ಷಣವೇ ಹೊಳೆಯಬಹುದಾದ ಉತ್ತರಗಳು ಎರಡು. ಹಿಂದಿನ ಕಾಲದಲ್ಲಿ ತಮ್ಮ ಬಂಧು–ಬಳಗದಲ್ಲೇ ಒಬ್ಬರ ಮಗುವನ್ನು ದತ್ತು ಪಡೆದು ಸಾಕಿ ಮಕ್ಕಳಿಲ್ಲದ ಕೊರತೆ ನೀಗಿಸಿಕೊಳ್ಳುತ್ತಿದ್ದರು. ಆಧುನಿಕ ಕಾಲಘಟ್ಟದಲ್ಲಾದರೆ ಕೃತಕ ಗರ್ಭಧಾರಣೆ (ಐವಿಎಫ್) ಮೂಲಕ ಮಗು ಪಡೆಯುತ್ತಾರೆ.

ಆದರೆ, ಮಾಗಡಿ ತಾಲ್ಲೂಕಿನ ಕುದೂರು ಹೋಬಳಿಯ ಹುಲಿಕಲ್ ಗ್ರಾಮದ ಬಿಕ್ಕಲು ಚಿಕ್ಕಯ್ಯ ಮತ್ತು ತಿಮ್ಮಕ್ಕ ದಂಪತಿ ಆರಿಸಿಕೊಂಡ ಮಾರ್ಗ ಭಿನ್ನವಾದುದು. 'ಮಕ್ಕಳ ಯೋಗ ಇಲ್ಲದವರು' ಎಂಬ ಕುಹಕದ ಮಾತುಗಳಿಗೆ ಕಿವಿಗೊಡದ ದಂಪತಿ, ನಿತ್ಯ ಸಾವಿರಾರು ಜನ ಓಡಾಡುವ ತಮ್ಮೂರಿನ ರಸ್ತೆಯ ಎರಡೂ ಬದಿಯಲ್ಲಿ ಗಿಡಗಳನ್ನು ನೆಟ್ಟರು. ಅವುಗಳನ್ನೇ ತಮ್ಮ ಮಕ್ಕಳೆಂದು ಭಾವಿಸಿದರು.

ಮಕ್ಕಳಂತೆ ಆ ಗಿಡಗಳನ್ನು ಆರೈಕೆ ಮಾಡಿದರು. ಕಿಲೋಮೀಟರ್ ದೂರವಿದ್ದರೂ ಲೆಕ್ಕಿಸದೆ ಬಿಂದಿಗೆಯಲ್ಲಿ ನೀರು ತಂದು ಪೋಷಿಸಿದರು. ದನಕರುಗಳಿಗೆ ಆಹಾರವಾಗದಂತೆ ಸುತ್ತಲೂ ಬೇಲಿ ಹಾಕಿ ಜೋಪಾನ ಮಾಡಿದರು. ಆರಂಭದಲ್ಲಿ ಕೆಲವೇ ಗಿಡಗಳನ್ನು ಬೆಳೆಸುವುದರಿಂದ ಶುರುವಾದ ದಂಪತಿಯ ಈ ಕಾಯಕ, ಮುಂದೆ 400 ಗಿಡಗಳನ್ನು ಬೆಳೆಸುವವರೆಗೆ ಸಾಗಿತು.

ಪತಿ ಸಾವಿನ ಬಳಿಕ ಗಿಡಗಳನ್ನು ಜೋಪಾನ ಮಾಡಿಕೊಂಡು ಬಂದ ತಿಮ್ಮಕ್ಕ, ಮುಂದೆ 'ಸಾಲುಮರದ ತಿಮ್ಮಕ್ಕ' ಎಂದೇ ಹೆಸರಾದರು. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಹುಲಿಕಲ್‌ನಿಂದ ಕುದೂರುವರೆಗೆ ದಂಪತಿ ನೆಟ್ಟಿದ್ದ ಗಿಡಗಳೀಗ ಹೆಮ್ಮರಗಳಾಗಿವೆ. ನಿತ್ಯ ಓಡಾಡುವವರಿಗೆ ನೆರಳಿನ ಆಸರೆಯಾಗಿವೆ. ಬಾನೆತ್ತರ ಬೆಳೆದಿರುವ ಮರಗಳಂತೆ ತಿಮ್ಮಕ್ಕ ಅವರ ಹೆಸರೂ ವಿಶ್ವಮಟ್ಟಕ್ಕೆ ಪಸರಿಸಿದೆ.

ತಿಮ್ಮಕ್ಕ ಅವರ ಊರು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಕಕ್ಕೇನಹಳ್ಳಿ. 1911 ಜೂನ್ 30ರಂದು ಜನಿಸಿದ್ದ ಅವರನ್ನು ಹುಲಿಕಲ್‌ನ ಚಿಕ್ಕಯ್ಯ ಅವರಿಗೆ ಮದುವೆ ಮಾಡಿ ಕೊಡಲಾಗಿತ್ತು. ಬದುಕಿಗಾಗಿ ಪತಿ ದನ ಕಾಯುತ್ತಿದ್ದರು. ತಿಮ್ಮಕ್ಕ ಕೂಲಿ ಮಾಡುತ್ತಿದ್ದರು. ಪತಿ ಚಿಕ್ಕಯ್ಯ 1991ರಲ್ಲಿ ನಿಧನರಾದರೂ ತಿಮ್ಮಕ್ಕ ಗಿಡಗಳನ್ನು ಕಾಪಾಡಿಕೊಂಡು ಬಂದಿದ್ದರು. ರೆಂಬೆ–ಕೊಂಬೆ ಕಡಿಯುವವರ ವಿರುದ್ಧ ಹೋರಾಡಿ ಉಳಿಸಿಕೊಂಡು ಬಂದಿದ್ದರು.

ಊರುಗೋಲಾಗಿದ್ದ ಉಮೇಶ್: ತಿಮ್ಮಕ್ಕ ಅವರ ಪರಿಸರ ಕಾಯಕದಿಂದ ಪ್ರೇರಿತರಾಗಿ ಅವರಂತೆಯೇ ಗಿಡ ನೆಟ್ಟು ಪೋಷಿಸುತ್ತಿದ್ದ ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಬಳ್ಳೂರು ಉಮೇಶ್ ಅವರನ್ನು ತಿಮ್ಮಕ್ಕ ದತ್ತುಪುತ್ರನಾಗಿ ಸ್ವೀಕರಿಸಿದರು. ಅಜ್ಜಿಗೆ ಊರುಗೋಲಾಗಿದ್ದ ಉಮೇಶ್, ಅವರ ಎಲ್ಲಾ ಜವಾಬ್ದಾರಿಗಳನ್ನು ವಹಿಸಿಕೊಂಡಿದ್ದರು. ಬಳ್ಳೂರು ಮತ್ತು ಬೆಂಗಳೂರಿನಲ್ಲೂ ವಾಸವಾಗಿದ್ದ ತಿಮ್ಮಕ್ಕ, ಮಹಾಲಯ ಅಮವಾಸ್ಯೆ ದಿನ ತಮ್ಮ ಪತಿ ಚಿಕ್ಕಯ್ಯ ಅವರ ಸಮಾಧಿಗೆ ಪೂಜೆ ಸಲ್ಲಿಸಲು ಹಾಗೂ ಹುಲಿಕಲ್ ಗ್ರಾಮ ದೇವತೆಯ ಜಾತ್ರಾ ಮಹೋತ್ಸವಕ್ಕೆ ತಪ್ಪದೇ ಉಮೇಶ್ ಅವರೊಂದಿಗೆ ಬಂದು ಹೋಗುತ್ತಿದ್ದರು.

ರಾಷ್ಟ್ರಪತಿಗೆ ಆಶೀರ್ವದಿಸಿದ್ದರು: ತಿಮ್ಮಕ್ಕ ಅವರು 2019ರಲ್ಲಿ ಪ್ರತಿಷ್ಠಿತ 'ಪದ್ಮಶ್ರೀ' ಪುರಸ್ಕಾರಕ್ಕೆ ಆಯ್ಕೆಯಾಗಿದ್ದರು. ತಮಗೆ ಪ್ರಶಸ್ತಿ ಪ್ರದಾನ ಮಾಡಿದ ಅಂದಿನ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರಿಗೆ ತಿಮ್ಮಕ್ಕ ಅವರು ಆಶೀರ್ವಾದ ಮಾಡಿದ್ದರು. ಈ ಘಟನೆಯು ದೇಶದ ಗಮನ ಸೆಳೆದಿತ್ತು.

ತಿಮ್ಮಕ್ಕನ ಸಾಧನೆ ವಿಶ್ವದೆತ್ತರಕ್ಕೆ ಬೆಳೆದಿದ್ದರೂ, ಅವರ ಊರಾದ ಹುಲಿಕಲ್‌ನಲ್ಲಿ ಹೆರಿಗೆ ಆಸ್ಪತ್ರೆ ನಿರ್ಮಾಣವಾಗಬೇಕು ಎಂಬ ಅವರ ಬಹುದಿನಗಳ ಕನಸು ಮಾತ್ರ ಈಡೇರಲಿಲ್ಲ.

ಸಾಲು ಸಾಲು ಪ್ರಶಸ್ತಿಗಳು: ತಿಮ್ಮಕ್ಕ ಸಾಧನೆಗೆ ರಾಜ್ಯ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರಶಸ್ತಿಗಳು ಬಂದಿವೆ.

ಪದ್ಮಶ್ರೀ ಪುರಸ್ಕಾರ, ಕರ್ನಾಟಕ ಕಲ್ಪವಲ್ಲಿ ಪ್ರಶಸ್ತಿ, ಗಾಡ್ ಫ್ರೀ ಫಿಲಿಪ್ಸ್ ಧೈರ್ಯ ಪ್ರಶಸ್ತಿ, ವೀತರೋಗಿನ್ ಪ್ರಶಸ್ತಿ, ಕರ್ನಾಟಕ ಕೇಂದ್ರೀಯ ವಿವಿಯ ಗೌರವ ಡಾಕ್ಟರೇಟ್, ಆರ್ಟ್ ಆಫ್ ಲಿವಿಂಗ್‌ನ ವಿಶಾಲಾಕ್ಷಿ ಪ್ರಶಸ್ತಿ, ಮಹಿಳಾರತ್ನ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ–ಪುರಸ್ಕಾರಗಳು ಅವರ ಮುಡಿಗೇರಿವೆ. 2016ರಲ್ಲಿ ಬಿಬಿಸಿ ಸುದ್ದಿವಾಹಿನಿ ನಡೆಸಿದ ಜಗತ್ತಿನ 100 ಪ್ರಭಾವಿ ಮಹಿಳೆಯರ ಸಮೀಕ್ಷೆಯಲ್ಲಿ ತಿಮ್ಮಕ್ಕ ಸ್ಥಾನ ಪಡೆದಿದ್ದರು.

ಸಾಲುಮರದ ತಿಮ್ಮಕ್ಕ ನಿಧನ

ಒಂದನೇ ಪುಟದಿಂದ...

ಎರಡು ವರ್ಷದ ಹಿಂದೆಯೇ ಅವರಿಗೆ ಲಘು ಹೃದಯಾಘಾತವಾಗಿತ್ತು. ನಂತರ ಚಿಕಿತ್ಸೆ ಕೊಡಿಸಲಾಗಿತ್ತು. ಎರಡು ತಿಂಗಳ ಹಿಂದೆಯೂ ಅನಾರೋಗ್ಯದಿಂದ ಆಸ್ಪತ್ರೆ ಸೇರಿ ಚೇತರಿಸಿಕೊಂಡಿದ್ದರು.

ತಿಮ್ಮಕ್ಕ ಮತ್ತು ಚಿಕ್ಕಯ್ಯ ದಂಪತಿಗೆ ಮಕ್ಕಳಿರಲಿಲ್ಲ. ಆ ಕೊರಗು ಮರೆಯಲು ತಮ್ಮೂರಿನ ರಸ್ತೆ ಬದಿ ಗಿಡಗಳನ್ನು ನೆಟ್ಟರು. ಅವುಗಳನ್ನೇ ತಮ್ಮ ಮಕ್ಕಳೆಂದು ನಿತ್ಯ ನೀರು ಹಾಕಿ, ದನಕರು ತಿನ್ನದಂತೆ ನೋಡಿಕೊಂಡು ಪೋಷಿಸಿದರು. ಆ ಗಿಡಗಳೀಗ ದೊಡ್ಡ ಮರಗಳಾಗಿ ಬೆಳೆದು ನಿಂತಿವೆ.

ಗಿಡಗಳನ್ನು ಮಕ್ಕಳಂತೆ ಕಂಡು ಪೋಷಿಸಿ ಬೆಳೆಸಿದ್ದ ತಿಮ್ಮಕ್ಕ ಅವರ ಸಾಧನೆಗೆ 1995ರಲ್ಲಿ ರಾಷ್ಟ್ರೀಯ ಪೌರ ಪ್ರಶಸ್ತಿ ಸಂದಿದೆ. 1997ರಲ್ಲಿ ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಹಾಗೂ ನಾಡೋಜ ಪ್ರಶಸ್ತಿಗೂ ಭಾಜನರಾಗಿದ್ದಾರೆ.

ಇಂದು ಅಂತಿಮ ದರ್ಶನ: ತಿಮ್ಮಕ್ಕ ಅವರ ಪಾರ್ಥಿವ ಶರೀರವನ್ನು ಬೆಂಗಳೂರಿನಿಂದ ಹುಲಿಕಲ್ ಗ್ರಾಮಕ್ಕೆ ಶುಕ್ರವಾರ ಸಂಜೆ ತಂದು ಸಾರ್ವಜನಿಕ ದರ್ಶನಕ್ಕೆ ಇರಿಸಲಾಗಿತ್ತು. ಗ್ರಾಮಸ್ಥರು, ಕುಟುಂಬ ಸದಸ್ಯರು ಅಂತಿಮ ದರ್ಶನ ಪಡೆದರು. ಅಲ್ಲಿಂದ ತಿಮ್ಮಕ್ಕ ಅವರ ಸಾಕುಮಗ ಉಮೇಶ್ ಹುಟ್ಟೂರು ಹಾಸನ ಜಿಲ್ಲೆ ಬೇಲೂರಿನ ಬಳ್ಳೂರು ಗ್ರಾಮಕ್ಕೆ ಕೊಂಡೊಯ್ದು, ರಾತ್ರಿ ಸಾರ್ವಜನಿಕ ದರ್ಶನಕ್ಕೆ ಇಡಲಾಗಿತ್ತು. ಶನಿವಾರ ಬೆಳಿಗ್ಗೆ ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ.

ಕಲಾ ಗ್ರಾಮದಲ್ಲಿ ಅಂತ್ಯಕ್ರಿಯೆ

ಬೆಂಗಳೂರು: ಸಾಲುಮರದ ತಿಮ್ಮಕ್ಕ ಅವರ ಪಾರ್ಥೀವ ಶರೀರದ ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 12ಕ್ಕೆ ಜ್ಞಾನಭಾರತಿಯ ಕಲಾ ಗ್ರಾಮದ ಆವರಣದಲ್ಲಿ ನಡೆಯಲಿದೆ.

'ಕಲಾಗ್ರಾಮದ ಆವರಣದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿಸಲು ಮುಖ್ಯಮಂತ್ರಿ ಸೂಚಿಸಿದ್ದಾರೆ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಿಮ್ಮಕ್ಕ ಅವರ ಪಾರ್ಥೀವ ಶರೀರವನ್ನು ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಬೆಳಿಗ್ಗೆ 7.30 ರಿಂದ 10.30 ರವರೆಗೆ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇಡಲಾಗುವುದು ಎಂದೂ ಅವರು ಹೇಳಿದ್ದಾರೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

15 ನವೆಂಬರ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಏಕಾದಶಿ ಗಂ. 26-38 ನಕ್ಷತ್ರ: ಉತ್ತರಫಲ್ಗುನಿ ಗಂ 23-35 ಯೋಗ: ವೈಧೃತಿ ಗಂ. 6-26 ಕರಣ: ಬವ ಗಂ. 13-41 ತುಲಾ ಮಾಸದ 29 ನೇ ದಿನ. ಮಳೆ ನಕ್ಷತ್ರ : ವಿಶಾಖ 3 ನೇ ಪಾದ. ರಾಹುಕಾಲ : ಬೆಳಿಗ್ಗೆ -9ರಿಂದ 10-30 , ಸೂರ್ಯೋದಯ : 06-33 ಸೂರ್ಯಾಸ್ತ : 05-57, ಮುಸ್ಲಿಂ ದಿನಾಂಕ : 23 ಜುಮಾದುಲ್ಲಾವಲ್, ದಿನ ವಿಶೇಷ : ಉತ್ಪನ್ನ ಏಕಾದಶಿ, ಅದೃಷ್ಟ ಸಂಖ್ಯೆ : 5, 9

ಮೇಷ: ಮನೆಯನ್ನು ಶುಚಿಗೊಳಿಸುವ ಕೆಲಸವನ್ನು ಮುಂದೆ ಹಾಕುವುದು ಸೂಕ್ತವಲ್ಲ. ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಸ್ವೀಕರಿಸುವ ಉತ್ತಮ ಅವಕಾಶಗಳು ಎದುರಾಗಲಿವೆ.

ವೃಷಭ: ನಿಮ್ಮದೇ ಕ್ಷೇತ್ರದಲ್ಲಿನ ಸವಾಲುಗಳನ್ನು ಇತರರಿಗಿಂತ ವಿಭಿನ್ನವಾಗಿ ಪರಿಣಿತರಾದ ನೀವು ಲೀಲಾಜಾಲವಾಗಿ ಎದುರಿಸುವಿರಿ. ಉತ್ಸಾಹದಿಂದ ಕೆಲಸ ಆರಂಭಿಸಿದಲ್ಲಿ ಸಮಸ್ಯೆಗಳು ಪರಿಹಾರಗೊಳ್ಳಲಿವೆ.

ಮಿಥುನ: ಮಿತ್ರರಿಂದ ಸಹಾಯ ಪಡೆಯುವುದು ಮಾತ್ರವಲ್ಲದೆ ಅವರ ಕಷ್ಟ ಕಾಲದಲ್ಲಿ ಸಹಾಯ ಮಾಡಲು ನೀವು ಸರ್ವಸನ್ನದ್ಧರಾಗಿ ಇರಬೇಕಾಗುತ್ತದೆ. ನಿಮ್ಮ ಮಾತುಗಳಿಗೆ ತೀಕ್ಷ್ಣ ಪ್ರತಿಕ್ರಿಯೆ ವ್ಯಕ್ತವಾಗುವುದು.

ಕರ್ಕಾಟಕ: ರೈತರಿಗೆ ಅದರಲ್ಲೂ ತೆಂಗಿನಕಾಯಿ ಬೆಳೆಗಾರರಿಗೆ ತಮ್ಮ ಬೆಳೆಗೆ ಅಧಿಕ ಬೆಲೆ ಕಂಡು ಬರುತ್ತದೆ. ಕುಟುಂಬದ ಹಿರಿಯರ ಆರೋಗ್ಯದ ವಿಷಯದಲ್ಲಿ ವಿಶೇಷ ಕಾಳಜಿವಹಿಸಿ. ಕಷ್ಟಗಳು ಎದುರಾಗಬಹುದು.

ಸಿಂಹ: ಸ್ವಂತ ಉದ್ಯೋಗಿಗಳಿಗೆ ವೃತ್ತಿಯಲ್ಲಿ ಲಾಭವಾಗುವುದು. ನೀವಾಗಿಯೇ ಅದರ ಫಲವನ್ನು ನಿರೀಕ್ಷಿಸಬೇಡಿ. ಉತ್ತಮ ಹಂತದಲ್ಲಿರುವ ಕಟ್ಟಡ ನಿರ್ಮಾಣವನ್ನು ಅನಿವಾರ್ಯ ಕಾರಣಗಳಿಂದ ನಿಲ್ಲಿಸುವಿರಿ.

ಕನ್ಯಾ: ಮಾರಣಾಂತಿಕವಾದ ಕಾಯಿಲೆಗಳಿಗೆ ಒಳಗಾಗುವಂಥ ಆಹಾರ ಪದಾರ್ಥಗಳು ಜೀವನಕ್ರಮದಲ್ಲಿ ಇದೆಯೇ ಎಂದು ಕಂಡುಕೊಳ್ಳಿರಿ. ವೃತ್ತಿಯಲ್ಲಿ ನಿರ್ಧಾರ ತೆಗೆದುಕೊಳ್ಳುವ ಸಮಯದಲ್ಲಿ ದುಡುಕಬೇಡಿ.

ತುಲಾ: ಹಿಂದಿನ ದಿನದ ವಿಶೇಷ ಕಾರ್ಯಕ್ರಮದಲ್ಲಿ ಮಾಡಿದ ಭೋಜನವು ಅಡ್ಡಪರಿಣಾಮ ತೋರಿಸುವ ಸಾಧ್ಯತೆ ಇದೆ. ಕಾರ್ಯನಿಮಿತ್ತವಾಗಿ ಪ್ರಯಾಣ ಮಾಡಬಹುದು.

ವೃಶ್ಚಿಕ: ವೈಯಕ್ತಿಕ ಸಮಸ್ಯೆಗಳು ಏನೇ ಇದ್ದರೂ, ಮೊದಲ ಆದ್ಯತೆ ವೃತ್ತಿ ವಿಷಯಗಳಿಗೆ ಮಾತ್ರ ಇರಲಿ. ನೆರೆ-ಹೊರೆಯವರೊಂದಿಗಿನ ವ್ಯಾವಹಾರಿಕ ಸಂಬಂಧದಲ್ಲಿ ಸಣ್ಣ ಪುಟ್ಟ ವಿಚಾರಗಳಿಗೆ ಭಿನ್ನಾಭಿಪ್ರಾಯ ಮೂಡಬಹುದು.

ಧನು: ಸ್ಥಾನಮಾನದಲ್ಲಿ ಬೇರೆಯವರು ಪಡುವ ಈರ್ಷ್ಯೆಯನ್ನು ಕಳೆದುಕೊಳ್ಳಲು ಉತ್ತಮವಾದ ಸನ್ನಿವೇಶ ಉಂಟಾಗುವುದು. ವ್ಯಾಪಾರ ಹಾಗೂ ವಾಣಿಜ್ಯದ ಸುಧಾರಣೆಗೆ ಸಾಕಷ್ಟು ಅಡೆತಡೆಗಳು ಒದಗಿ ಬರಲಿವೆ.

ಮಕರ: ಅಪೇಕ್ಷೆ ಪಟ್ಟಿದ್ದ ಹೊಸ ಉದ್ಯೋಗವನ್ನು ಸಂಪಾದಿಸುವಲ್ಲಿ ರಾಜಕೀಯ ವ್ಯಕ್ತಿಗಳ ಮೂಲಕ ಯಶಸ್ಸು ಗಳಿಸುವಿರಿ. ಗೃಹಸ್ಥಾಶ್ರಮದಲ್ಲಿ ವಿರಕ್ತತೆ ಅನ್ಯರಿಗೆ ಬೇಜವಾಬ್ದಾರಿ ಎಂದು ಅನ್ನಿಸಬಹುದು.

ಕುಂಭ: ಕೈಗೊಂಡ ಕೆಲಸಗಳು ಭಾಗಶಃ ಆರ್ಥಿಕ ದುಸ್ಥಿತಿಯಿಂದಾಗಿ ವಿಳಂಬವಾಗುವ ರೀತಿಯಲ್ಲಿ ಕಾಣಲಿವೆ. ಕೆಲಸಗಳನ್ನು ಸಾಧಿಸಿಕೊಳ್ಳಲೇ ಬೇಕಿದ್ದರೆ ಅವಿರತ ಶ್ರಮ ಅಗತ್ಯ ಮತ್ತು ಅನಿವಾರ್ಯ.

ಮೀನ: ಮನರಂಜನೆಗಾಗಿ ತಮಾಷೆಯ ಮಾತುಗಳನ್ನಾಡುವಾಗ ಗುಪ್ತವಾದ ಸಂಗತಿಗಳು ಬಯಲಾಗಬಹುದು. ತೀವ್ರ ಪ್ರತಿಸ್ಪರ್ಧಿಯನ್ನು ಭೇಟಿ ಮಾಡುವ ಅವಕಾಶ ಬರಲಿದೆ. ಜಿಜ್ಞಾಸಿಗಳಿಗೆ ಸಹಪಟು ಸಿಗುತ್ತಾರೆ.

ಪದಬಂಧ 6224

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮನಸ್ಸಿನಲ್ಲಿ ಹುಟ್ಟಿದವನು ಮಜದಲ್ಲಿದ್ದಾನೆ! (4)
3.ನಕ್ಷತ್ರಗಳ ಗುಂಪು (4)
5.ಪ್ರಾಮಾಣಿಕತೆ ಹೀಗೆ ವ್ಯಕ್ತವಾಗಿದೆ (3)
6.ದಿಗಂತ ರೇಖೆಯಿದು (3)
8.ಅನುಕರಣೆಗೆ ಯೋಗ್ಯವಾದುದು (3)
9.ಹಿತ್ತಲಲ್ಲಿ ಒಣಹಾಕಿರುವ ತೆಳುವಾದ ಸೀರೆ (3)
10.ಜಗಳಕ್ಕೊಂದು ಪರ್ಯಾಯ ಪದ (3)
12.ಬದಿಯಲ್ಲಿರುವ ಜೈನ ದೇವಾಲಯ (3)
14.ದೇವಾಲಯದ ಸಭಾಮಂಟಪ (4)
15.ಸರ ಧರಿಸಿಕೊಂಡೇ ಮಾಡಿದ ವ್ಯಾಯಾಮ! (4)

ಮೇಲಿಂದ ಕೆಳಕ್ಕೆ

1.ಅಂತರಂಗದ ಪ್ರೇರಣೆ (4)
2.ಹೆತ್ತವಳು ಇಲ್ಲಿದ್ದಾಳೆ (3)
3.ಕತ್ತು ಚಾಚುತ್ತಾ ತೋರಿಸಿದ ಶಕ್ತಿ (3)
4.ತರಾತುರಿಯಲ್ಲಿ ಖರೀದಿಸಿರುವ ಕಲಾಬತ್ತು (4)
7.ಜಲ ತರುವಾಗಿನ ಕ್ಲಿಷ್ಟತೆ (3)
8. ಮನಸ್ಸಿಗೆ ತಾಗುವಂತದ್ದು (3)
9.ಈ ಪರಿ ಕಾಣಿಸಿದ ವಸ್ತ್ರ (4)
11.ಹತ್ತು ಎನ್ನುತ್ತಲೇ ಹೂಡಿರುವ ಸಂಚು! (4)
12.ನಂಟರ ಸಮೂಹ (3)
13.ತಾರೀಕು ಇಲ್ಲಿ ನಮೂದಾಗಿದೆ (3)



6223ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕರ್ತವ್ಯಪಥ್ 2.ಸಾಕ್ಷರ 4.ಕರ 5.ಗದಗ 7.ಜನ 8.ಮರಣಸಂಕಟ 10.ಹಂತ 12.ಕಣ್ಣು 13.ಬಸವಕಲ್ಯಾಣ 16.ಕುಲ 17.ಪದಕ 19.ವನ 20.ಮಯೂರ 21.ನವೀಕರಣ

ಮೇಲಿಂದ ಕೆಳಕ್ಕೆ: 1.ಕರಗ 2.ಸಾರ 3.ರದನ 4.ಕದೂಸಂ 6.ಗಮ 7.ಜಟಕ 9.ಣರಕ 11.ತಬಲ 14.ವಸನ 15.ಣಪ 16.ಕುಗ್ರಾಮ 18.ಕಲ್ಯಾಣ 19.ವರ

ಸುಡೊಕು 6608

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5			8		1	9		2
							3	
3		1	2		9		5	6
	1	7			8	3		
				2				4
8		3	9				6	
1			7		2	4		3
		8		4			1	
	3		1		5		7	8

6607 ಸುಡೊಕು

4	9	6	3	7	8	5	2	1
8	5	3	2	1	9	4	7	6
1	7	2	4	6	5	3	9	8
6	1	9	7	2	3	8	4	5
2	8	7	5	4	6	9	1	3
3	4	5	8	9	1	2	6	7
5	6	4	9	3	7	1	8	2
7	2	8	1	5	4	6	3	9
9	3	1	6	8	2	7	5	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,879
ಇಂದಿನ ಅಂತ್ಯ: 25,910
ದಿನದ ಗರಿಷ್ಠ: 25,940
↑ 30

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು
100 ಕ್ಕೆ ₹645
12 ಕ್ಕೆ ₹84
ಮೈಸೂರು: 100 ಕ್ಕೆ ₹648

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹183
ಆರ್‌ಎಸ್‌ಎಸ್-5 ₹178
ಗುಡ್ ಲಾಟ್ ₹165

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹555-746
ದ್ವಿತಳಿ (ಬಿ.ವಿ) ₹500-845

ಮುದ್ರಮನೆ ಕಾಫಿ (50 ಕೆಜಿಗೆ)
ಎಪಿ ₹28250
ಎಸಿ ₹15540
ಆರ್‌ಪಿ ₹18900
ಆರ್‌ಸಿ ₹10640

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹16500-19800
ತುಮಕೂರು ₹17100-23000

ಮುಂಬೈ ಧಾರಣೆ (ಶೇಂಗಾ)

14-11-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7800-7900
ದಪ್ಪ ಗುಜರಾತ್ (ಹೊಸ)	8900-9000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1540 (1500)
ಒಂದು ವಾರದ ಡೆಲಿವರಿ	1535 (1495)
ಪಾಮ್ ವಾರದ ಡೆಲಿವರಿ	1253 (1258)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1400)
ಚಿನ್ನ–ಬೆಳ್ಳಿ (ಜಿಎಸ್‌ಟಿ ಸೇರಿ)	
ಅಪರಂಜಿ ಚಿನ್ನ 10 ಗ್ರಾಂ	1,22,000 (1,26,000)
ಬೆಳ್ಳಿ ಕೆ.ಜಿಗೆ	1,55,000 (1,62,200)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿ.)

ಶೇಂಗಾ (ರಿಫೈನ್ಡ್)	₹1530 (1490)
ಸೋಯಾ (ರಿಫೈನ್ಡ್)	₹1270 (1275)
ಸೂರ್ಯಕಾಂತಿ (ರಿಫೈನ್ಡ್)	₹1470 (1480)
ಪಾಮೋಲಿನ್	₹1255 (1260)

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1200-2400
ಮಧ್ಯಮ	₹600-1200
ಸಣ್ಣ	₹200-600

1.6 ಕೋಟಿ ಟನ್ ಅಡುಗೆ ಎಣ್ಣೆ ಆಮದು

2024–25ರ ತೈಲ ಮಾರುಕಟ್ಟೆ ವರ್ಷದಲ್ಲಿ ₹1.61 ಲಕ್ಷ ಕೋಟಿ ಮೌಲ್ಯದ ಎಣ್ಣೆ ಆಮದು: ಎಸ್‌ಇಎ

ನವದೆಹಲಿ (ಪಿಟಿಐ): 2024–25ರ ತೈಲ ಮಾರುಕಟ್ಟೆ ವರ್ಷದಲ್ಲಿ (ನವೆಂಬರ್‌ನಿಂದ ಅಕ್ಟೋಬರ್) ದೇಶಕ್ಕೆ 1.6 ಕೋಟಿ ಟನ್ ಅಡುಗೆ ಎಣ್ಣೆ ಆಮದಾಗಿದೆ. ಇದು ಹಣಕಾಸಿನ ಮೌಲ್ಯದಲ್ಲಿ ₹1.61 ಲಕ್ಷ ಕೋಟಿಯಷ್ಟಾಗಿದೆ ಎಂದು ಭಾರತೀಯ ಎಣ್ಣೆ ಗಿರಣಿ ಮಾಲೀಕರ ಸಂಘ (ಎಸ್‌ಇಎ) ತಿಳಿಸಿದೆ.

2023–24ರ ತೈಲ ಮಾರುಕಟ್ಟೆ ವರ್ಷದಲ್ಲಿ 1.59 ಕೋಟಿ ಟನ್ ಅಡುಗೆ ಎಣ್ಣೆ ಆಮದಾಗಿತ್ತು. ಇದರ ಮೌಲ್ಯ ₹1.32 ಲಕ್ಷ ಕೋಟಿಯಷ್ಟಾಗಿತ್ತು. ಜಾಗತಿಕ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆ ಬೆಲೆ ಹೆಚ್ಚಳವಾಗಿದೆ. ಇದರಿಂದ ಆಮದು ಮಾಡಿಕೊಂಡ ಅಡುಗೆ ಎಣ್ಣೆಯ ಬೆಲೆ, ಹಣಕಾಸಿನ ಮೌಲ್ಯದಲ್ಲಿ ಶೇ 22ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಪೂರೈಕೆ ಮತ್ತು ಬೇಡಿಕೆಯ ನಡುವಿನ ಅಂತರವನ್ನು ಕಡಿಮೆ ಮಾಡಲು, ಭಾರತವು 1990ರ ದಶಕದಿಂದಲೂ ಎಣ್ಣೆ ಆಮದು ಮಾಡಿಕೊಳ್ಳುತ್ತಿದೆ. ಆರಂಭಿಕ ಅವಧಿಯಲ್ಲಿ, ಆಮದು ಪ್ರಮಾಣವು ತುಂಬಾ ಕಡಿಮೆ ಇತ್ತು. ಆದರೆ, ಕಳೆದ 20 ವರ್ಷಗಳಲ್ಲಿ (2004-05ರಿಂದ 2024-25), ಆಮದು ಪ್ರಮಾಣವು 2 ಪಟ್ಟು ಹೆಚ್ಚಾಗಿದ್ದರೆ, ಆಮದು ವೆಚ್ಚವು ಸುಮಾರು 15 ಪಟ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

2022–23ರ ಮಾರುಕಟ್ಟೆ ವರ್ಷದಲ್ಲಿ 1.64 ಕೋಟಿ ಟನ್, 2021–22ರಲ್ಲಿ 1.40 ಕೋಟಿ ಟನ್ ಮತ್ತು 2020–21ರಲ್ಲಿ 1.31 ಕೋಟಿ ಟನ್ ಆಮದಾಗಿತ್ತು.

2024–25ರ ತೈಲ ಮಾರುಕಟ್ಟೆ ವರ್ಷದಲ್ಲಿ 17.37 ಲಕ್ಷ ಟನ್ ರಿಫೈನ್ಡ್ ಎಣ್ಣೆ ಆಮದಾಗಿದೆ. 2023–24ರ ಇದೇ ಅವಧಿಯಲ್ಲಿ 19.31 ಲಕ್ಷ ಟನ್ ಆಮದಾಗಿತ್ತು. 2015–16ರಲ್ಲಿ ಸೋಯಾಬಿನ್ ಎಣ್ಣೆ ಆಮದು 42.3 ಲಕ್ಷ ಟನ್‌ನಷ್ಟಿತ್ತು. ಅದು 2024–25ರ ವೇಳೆಗೆ 54.7 ಲಕ್ಷ ಟನ್‌ಗೆ ಏರಿಕೆಯಾಗಿದೆ. ತಾಳೆ ಎಣ್ಣೆ ಆಮದು 90 ಲಕ್ಷ ಟನ್‌ನಿಂದ 75.8 ಲಕ್ಷ ಟನ್‌ಗೆ ಇಳಿದಿದೆ ಎಂದು ತಿಳಿಸಿದೆ.

ಭಾರತವು ಇಂಡೊನೇಷ್ಯಾ ಮತ್ತು ಮಲೇಷ್ಯಾದಿಂದ ತಾಳೆ ಎಣ್ಣೆ ಆಮದು ಮಾಡಿಕೊಳ್ಳುತ್ತದೆ. ಅರ್ಜೆಂಟೀನಾ ಮತ್ತು ಬ್ರೆಜಿಲ್‌ನಿಂದ ಸೋಯಾಬಿನ್ ಎಣ್ಣೆ ಆಮದಾಗುತ್ತದೆ.

ಸಗಟು ಹಣದುಬ್ಬರ ಇಳಿಕೆ

ನವದೆಹಲಿ (ಪಿಟಿಐ): ಜಿಎಸ್‌ಟಿ ಇಳಿಕೆಯಿಂದ ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧಾರಿತ ಹಣದುಬ್ಬರ ದರವು ಅಕ್ಟೋಬರ್ ತಿಂಗಳಿನಲ್ಲಿ ಶೇ (–) 1.21ಕ್ಕೆ ಇಳಿಕೆ ಆಗಿದೆ. ಇದು 27 ತಿಂಗಳದ ಕನಿಷ್ಠ ಮಟ್ಟವಾಗಿದೆ.

ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಶೇ 2.75ರಷ್ಟು ಸಗಟು ಹಣದುಬ್ಬರ ದಾಖಲಾಗಿತ್ತು. ಈ ವರ್ಷದ ಸೆಪ್ಟೆಂಬರ್‌ನಲ್ಲಿ ಶೇ 0.13ರಷ್ಟಿತ್ತು ಎಂದು ಸರ್ಕಾರದ ಅಂಕಿ–ಅಂಶಗಳು ಶುಕ್ರವಾರ ತಿಳಿಸಿದೆ.

ಆಹಾರ ಪದಾರ್ಥಗಳ ಬೆಲೆ ಇಳಿಕೆಯಾಗಿದೆ. ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸೇರಿ ಹಲವು ವಸ್ತುಗಳ ಬೆಲೆ ಕಡಿಮೆಯಾಗಿದೆ. ಇದರಿಂದ ಅಕ್ಟೋಬರ್ ತಿಂಗಳಿನಲ್ಲಿ ಹಣದುಬ್ಬರ ಪ್ರಮಾಣ ತಗ್ಗಿದೆ ಎಂದು ಕೇಂದ್ರ ಕೈಗಾರಿಕಾ ಸಚಿವಾಲಯ ತಿಳಿಸಿದೆ.

ಆಹಾರ ಪದಾರ್ಥಗಳ ಬೆಲೆ ಶೇ 8.31ರಷ್ಟು ಇಳಿಕೆ ಆಗಿದೆ. ಈರುಳ್ಳಿ, ಆಲೂಗೆಡ್ಡೆ, ತರಕಾರಿಗಳು, ದ್ವಿದಳ ಧಾನ್ಯಗಳು ಬೆಲೆ ಸಹ ಕಡಿಮೆ ಆಗಿದೆ.

ತಯಾರಿಕಾ ವಲಯದ ಉತ್ಪನ್ನಗಳ ಹಣದುಬ್ಬರ ಸೆಪ್ಟೆಂಬರ್‌ನಲ್ಲಿ ಶೇ 2.33ರಷ್ಟಿತ್ತು. ಅದು ಅಕ್ಟೋಬರ್‌ನಲ್ಲಿ ಶೇ 1.54ಕ್ಕೆ ಇಳಿದಿದೆ. ಇಂಧನ ಮತ್ತು ವಿದ್ಯುತ್ ಹಣದುಬ್ಬರ ಶೇ 2.58ರಿಂದ ಶೇ 2.55ಕ್ಕೆ ಇಳಿದಿದೆ.

ಸೆಪ್ಟೆಂಬರ್ 22ರಿಂದ ಜಾರಿಗೆ ಬಂದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಇಳಿಕೆಯಿಂದ ಸರಕುಗಳ ಬೆಲೆ ಕಡಿಮೆ ಆಯಿತು. ಇದು ಸಗಟು ಮತ್ತು ಚಿಲ್ಲರೆ ಹಣದುಬ್ಬರ ಇಳಿಕೆಗೆ ಪ್ರಮುಖ ಕಾರಣವಾಗಿದೆ. ಅಕ್ಟೋಬರ್‌ನಲ್ಲಿ ಚಿಲ್ಲರೆ ಹಣದುಬ್ಬರ ಶೇ 0.25ರಷ್ಟು ದಾಖಲಾಗಿದೆ. ಇದು ದಶಕದ ಕನಿಷ್ಠ ಮಟ್ಟವಾಗಿದೆ ಎಂದು ತಿಳಿಸಿದೆ.

ಸುದ್ದಿ 2 ನಿಮಿಷ

ಬೆಳ್ಳಿ ದರ ₹4,200 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿಕೆ ಆಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹1,500 ಇಳಿಕೆಯಾಗಿ, ₹1,29,400ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5ರಷ್ಟು ಪರಿಶುದ್ಧತೆ) ಬೆಲೆ ಇಷ್ಟೇ ಪ್ರಮಾಣದಲ್ಲಿ ಕಡಿಮೆಯಾಗಿ, ₹1,28,800 ಆಗಿದೆ.

ಕೆ.ಜಿ ಬೆಳ್ಳಿ ಧಾರಣೆ ₹4,200 ಕಡಿಮೆಯಾಗಿ, ₹1,64,800ರಷ್ಟಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಕುಸಿದು ಏರಿಕೆ ಕಂಡ ಸೂಚ್ಯಂಕ: ಎಫ್‌ಎಂಸಿಜಿ, ಬ್ಯಾಂಕಿಂಗ್ ಮತ್ತು ದೂರಸಂಪರ್ಕ ವಲಯದ ಕಂಪನಿಗಳ ಷೇರು ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರ ವಹಿವಾಟಿನಲ್ಲಿ ಅಲ್ಪ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 84 ಅಂಶ ಹೆಚ್ಚಳವಾಗಿ, 84,562ಕ್ಕೆ ವಹಿವಾಟು ಕೊನೆಗೊಂಡಿದೆ.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 30 ಅಂಶ ಹೆಚ್ಚಳವಾಗಿ, 25,910ಕ್ಕೆ ಅಂತ್ಯಗೊಂಡಿದೆ. ವಹಿವಾಟಿನ ವೇಳೆ ಬಿಎಸ್‌ಇ 449 ಅಂಶ ಮತ್ತು ನಿಫ್ಟಿ 138 ಅಂಶ ಇಳಿಕೆ ಆಗಿತ್ತು.

ಟಾಟಾ ಮೋಟರ್ಸ್ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಟಾಟಾ ಮೋಟರ್ಸ್‌ನ ಅಂಗ ಸಂಸ್ಥೆಯಾದ ಟಾಟಾ ಮೋಟರ್ಸ್ ಪ್ಯಾಸೆಂಜರ್ ವೆಹಿಕಲ್ಸ್ ಲಿಮಿಟೆಡ್ (ಟಿಎಂಪಿವಿಎಲ್) ₹76,248 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹3,521 ಕೋಟಿ ಲಾಭ ಗಳಿಸಿತ್ತು ಎಂದು ಕಂಪನಿ ಷೇರುಪೇಟೆಗೆ ಶುಕ್ರವಾರ ತಿಳಿಸಿದೆ.

ಒಟ್ಟು ವರಮಾನವು ₹72,349 ಕೋಟಿಯಷ್ಟಾಗಿದೆ. ಕಳೆದ ಬಾರಿ ₹83,656 ಕೋಟಿಯಷ್ಟಿತ್ತು ಎಂದು ತಿಳಿಸಿದೆ.

ಅಡಿಕೆ ಧಾರಣೆ

ಚಿತ್ರದುರ್ಗ		ಹೊಸತು	53009-61509	ರಾಶಿ	48899-57099
ಕೆಂಪುಗೋಟು	30600-31000	ರಾಶಿ	47669-60169	ತಟ್ಟಿಬೆಟ್ಟೆ	30199-47049
ಪುತ್ತೂರು		ಸರಕು	60009-97896	**ಶಿರಸಿ**	
ಕೋಕ	20000-31500	**ಸಿದ್ದಾಪುರ**		ಬೆಟ್ಟೆ	40109-52099
ಹೊಸತು	26000-37000	ಬಿಳಿಗೋಟು	27619-36509	ಬಿಳಿಗೋಟು	28199-38499
ಶಿವಮೊಗ್ಗ		ಚಾಲಿ	41555-48519	ಚಾಲಿ	44299-49498
ಬೆಟ್ಟೆ	65009-74269	ಕೋಕ	20219-32699	ಕೆಂಪುಗೋಟು	25399-35699
ಗೊರಬಲು	22199-42199	ಕೆಂಪುಗೋಟು	31799-33199	ರಾಶಿ	56098-59199

ಪಿಎಂ–ಕಿಸಾನ್ ನಿಧಿ ಬಿಡುಗಡೆ 19ರಂದು

ನವದೆಹಲಿ (ಪಿಟಿಐ): ಪಿಎಂ–ಕಿಸಾನ್ ಯೋಜನೆಯ 21ನೇ ಕಂತನ್ನು ಪ್ರಧಾನಿ ನರೇಂದ್ರ ಮೋದಿ ಅವರು, ನವೆಂಬರ್ 19ರಂದು ಬಿಡುಗಡೆ ಮಾಡಲಿದ್ದಾರೆ.

ಈ ಯೋಜನೆಯಡಿ ಪ್ರತಿ ಫಲಾನುಭವಿಗೆ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಂ–ಕಿಸಾನ್) ಯೋಜನೆಯಡಿ ವಾರ್ಷಿಕ ₹6 ಸಾವಿರ ನೀಡಲಾಗುತ್ತದೆ. ಪ್ರತಿ ನಾಲ್ಕು ತಿಂಗಳಿಗೆ ಮೂರು ಬಾರಿ ರೈತರಿಗೆ ₹2 ಸಾವಿರವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಗುತ್ತದೆ.

ಬಿಹಾರ ಚುನಾವಣೆ: ಮಹಾಮೈತ್ರಿಕೂಟದ ಸೀಟುಗಳ ಸಂಖ್ಯೆಯಲ್ಲಿ ಗಣನೀಯ ಕುಸಿತ

ಮತ ಪ್ರಮಾಣ ಉಳಿದರೂ ಸಾಧನೆ ಹೀನಾಯ

ಪ್ರಜಾವಾಣಿ ವಾರ್ತೆ





ನವದೆಹಲಿ: ಆರ್‌ಜೆಡಿಗೆ ಯಾದವ–ಮುಸ್ಲಿಂ (ಎಂ–ವೈ) ಮತಗಳೇ ಪ್ರಮುಖ ಆಸರೆ. ಶೇ 17ರಷ್ಟಿರುವ ಮುಸ್ಲಿಂ ಹಾಗೂ ಶೇ 13ರಷ್ಟಿರುವ ಯಾದವರು ಆರ್‌ಜೆಡಿಯ ಪಾರಂಪರಿಕ ಮತದಾರರು. ಮೈತ್ರಿಕೂಟದಲ್ಲಿರುವ ಕಾಂಗ್ರೆಸ್ ಹಾಗೂ ಇತರ ಪಕ್ಷಗಳಿಗೂ ಅವರೇ ಮತ ಬ್ಯಾಂಕ್. ಮಹಾಮೈತ್ರಿಕೂಟವು ಕಳೆದ ಬಾರಿ ಗಳಿಸಿದಷ್ಟೇ ಮತಗಳನ್ನು ಪಡೆದಿದೆ. ಆದರೆ, ಸೀಟುಗಳ ಸಂಖ್ಯೆ ಗಣನೀಯವಾಗಿ ಕುಸಿದಿದೆ. ಇನ್ನೊಂದೆಡೆ, ಎನ್‌ಡಿಎ ಮೈತ್ರಿಕೂಟದ ಮತ ಪ್ರಮಾಣವು ಕಳೆದ ಸಲಕ್ಕಿಂತ ಶೇ 10ರಷ್ಟು ಜಾಸ್ತಿ ಆಗಿದೆ. ಯಾದವೇತರ ಪ್ರಬಲ ಜಾತಿಗಳು, ಅತಿ ಹಿಂದುಳಿದ ಜಾತಿಗಳು (ಇಬಿಸಿ) ಹಾಗೂ ದಲಿತರ ಮತ ಸಮೀಕರಣದಿಂದ ಮೈತ್ರಿಕೂಟ ಅಭೂತಪೂರ್ವ ಜಯ ಪಡೆದಿದೆ. ರಾಜ್ಯದಲ್ಲಿ ಶೇ 36ರಷ್ಟಿರುವ ಇಬಿಸಿ ಮತದಾರರು ದಶಕಗಳಿಂದ ನಿತೀಶ್ ತೆಕ್ಕೆಯಲ್ಲಿದ್ದಾರೆ. 2020ರಲ್ಲಿ ಜೆಡಿಯು ಮತಗಳನ್ನು ಗಣನೀಯ ಪ್ರಮಾಣದಲ್ಲಿ ಕಸಿದು ಪಕ್ಷವನ್ನು 43 ಸ್ಥಾನಕ್ಕೆ ಇಳಿಸಿದ್ದ ಚಿರಾಗ್ ಪಾಸ್ವಾನ್ ಮೈತ್ರಿಕೂಟಕ್ಕೆ ಬಂದಿದ್ದು ಇಡೀ ಸಮೀಕರಣವನ್ನೇ ಬದಲಿಸಿತು. ಕಳೆದ ಬಾರಿ ಮೂರು ಸ್ಥಾನಗಳನ್ನು ಗೆದ್ದಿದ್ದ ಎಲ್‌ಜೆಪಿ ಈ ಬಾರಿ 19 ಸ್ಥಾನಗಳನ್ನು ಗೆದ್ದು ಬೀಗಿತು. ಮಿತ್ರ ಪಕ್ಷಗಳ ಅಭ್ಯರ್ಥಿಗಳ ಗೆಲುವಿಗೆ ಗಣನೀಯ ಕೊಡುಗೆ ನೀಡಿತು. ಉಪೇಂದ್ರ ಕುಶ್ವಾಹ ಅವರು ಕುಶ್ವಾಹ ಮತಗಳನ್ನು ಹಾಗೂ ಪಾಸ್ವಾನ್ ಮತ್ತು ಜಿತನ್ ರಾಮ್ ಮಾಂಜಿ ಅವರು ದಲಿತ ಮತಗಳನ್ನು ದೊಡ್ಡ ಪ್ರಮಾಣದಲ್ಲಿ ಮೈತ್ರಿಕೂಟಕ್ಕೆ ಸೆಳೆದರು. ಫಲವಾಗಿ ಗ್ರಾಮೀಣ ಬಿಹಾರದಲ್ಲಿ ಬಹುತೇಕ ಕ್ಷೇತ್ರ ಗಳನ್ನು ಗೆದ್ದಿತು. ಯಾದವ–ಮುಸ್ಲಿಂ ಬಾಹುಳ್ಯದ ಕ್ಷೇತ್ರಗಳಿಗೂ ಲಗ್ಗೆ ಇಟ್ಟಿತು.

2020ರ ಚುನಾವಣೆಯಲ್ಲಿ ಯುವ ಜನರ ಕಣ್ಮಣಿ ಆಗಿದ್ದ ತೇಜಸ್ವಿ ಯಾದವ್ ಅವರು ಈ ಚುನಾವಣೆಯಲ್ಲಿ ಗೆದ್ದದ್ದೇ ಏದುಸಿರು ಬಿಟ್ಟು. ಮನೆಯಲ್ಲಿ ಒಬ್ಬರಿಗೆ ಸರ್ಕಾರಿ ಉದ್ಯೋಗ, ಪುಕ್ಕಟೆ ವಿದ್ಯುತ್‌ನಂತಹ ಅವರ ಗ್ಯಾರಂಟಿಗಳು ಮನ ಗೆಲ್ಲುವಲ್ಲಿ ವಿಫಲವಾದವು. ಈಗಿರುವ ಸರ್ಕಾರವೇ ಮನ ಖುಷಿ ಪಡುವಷ್ಟು ಗ್ಯಾರಂಟಿಗಳನ್ನು ನೀಡಿರುವಾಗ ತೇಜಸ್ವಿ ಅವರ ಘೋಷಣೆಗಳು ಮತದಾರರಿಗೆ ಆಕರ್ಷಕವಾಗಿ ಕಾಣಲಿಲ್ಲ. 143 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಆರ್‌ಜೆಡಿಯು 69 ಕ್ಷೇತ್ರಗಳಲ್ಲಿ ಮುಸ್ಲಿಂ ಅಭ್ಯರ್ಥಿಗಳಿಗೆ ಟಿಕೆಟ್ ನೀಡಿತು. ಇದು ಸಹ ಜಾತಿ ಸಮೀಕರಣಕ್ಕೆ ಹೊಡೆತ ನೀಡಿತು.

ಸೀಟು ಹಂಚಿಕೆ, ಅಭ್ಯರ್ಥಿಗಳ ಆಯ್ಕೆಯನ್ನು ಸಲೀಸಾಗಿ ಮುಗಿಸಿದ್ದ ಎನ್‌ಡಿಎ ಮೈತ್ರಿಕೂಟವು ಚುನಾವಣೆಗೆ ಮುನ್ನವೇ ಅರ್ಧ ಗೆದ್ದಾಗಿತ್ತು. ನಾಮಪತ್ರ ಸಲ್ಲಿಸುವ ಕೊನೆಯ ಕ್ಷಣದ ವರೆಗೂ ಸೀಟು ಹಂಚಿಕೆ ಅಂತಿಮಗೊಳಿಸದೆ ಪರಸ್ಪರ ಕಚ್ಚಾಡುತ್ತಲೇ ಇದ್ದ ಮಹಾಮೈತ್ರಿಕೂಟದ ಭವಿಷ್ಯ ಆಗಲೇ ನಿರ್ಧಾರವಾಗಿತ್ತು. ಫ್ರೆಂಡ್ಲಿ ಫೈಟ್ ಹೆಸರಿನಲ್ಲಿ ವಿಪಕ್ಷ ಕೂಟವು ಮತ್ತಷ್ಟು ಗೊಂದಲ ಸೃಷ್ಟಿಸಿ ಎನ್‌ಡಿಎ ಮೈತ್ರಿಕೂಟದ ಗೆಲುವನ್ನು ಸರಾಗಗೊಳಿಸಿತು. 2020ರಲ್ಲಿ ಕಳಪೆ ಸಾಧನೆ ಮಾಡಿದ ಮೈತ್ರಿಕೂಟವನ್ನು ಅಧಿಕಾರ ವಂಚಿತರನ್ನಾಗಿ ಮಾಡಿದ್ದ ಕಾಂಗ್ರೆಸ್ ಈ ಸಲ ಪಾತಾಳಕ್ಕೆ ಕುಸಿಯಿತು.

37 ಹರೆಯದ ತೇಜಸ್ವಿಗೆ ಸರಿಸಾಟಿಯಾಗಿ 75ರ ಹರೆಯದ ನಿತೀಶ್ 84 ರ‍್ಯಾಲಿಗಳಲ್ಲಿ ಭಾಗವಹಿಸಿ ತಮ್ಮ ಮತ ಬ್ಯಾಂಕ್ ಅನ್ನು ಮತ್ತಷ್ಟು ಭದ್ರಗೊಳಿಸಿದರು. ಪ್ರಧಾನಿ ಮೋದಿ, ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಕೇಂದ್ರ ಸಚಿವ ಅಮಿತ್ ಶಾ ಮುಂತಾದ ನಾಯಕರು ಪ್ರಚಾರ ಕಣದಲ್ಲಿ ದೂಳೆಬ್ಬಿಸಿದರು. ಇದಕ್ಕೆ ಹೋಲಿಸಿದರೆ, ಚುನಾವಣೆಗೆ ಒಂದು ವಾರ ಇರುವಾಗ ರಾಹುಲ್ ಅವರು ಬಿಹಾರದ ಪ್ರಚಾರ ಕಣಕ್ಕೆ ಧುಮುಕಿದರು. ಜೋಡೆತ್ತಿನಂತೆ ಸಾಗಬೇಕಿತ್ತ ರಾಹುಲ್–ತೇಜಸ್ವಿ ಅಂತರ ಕಾಯ್ದುಕೊಂಡು ತಮ್ಮ ನಡುವಿನ ಭಿನ್ನಮತವನ್ನು ಬಹಿರಂಗಪಡಿಸಿದರು.

ಭೂಮಿಗೆ ಮರಳಿದ ಚೀನಾದ ಗಗನಯಾನಿಗಳು

ಬೀಜಿಂಗ್, ಚೀನಾ (ಪಿಟಿಐ): ವ್ಯೋಮನೌಕೆಯು ಅಂತರಿಕ್ಷದ ಅವಶೇಷಗಳಿಗೆ ಡಿಕ್ಕಿ ಹೊಡೆದಿದ್ದರಿಂದ ಭೂಮಿಗೆ ಬರಲು ವಿಳಂಬವಾಗಿದ್ದ ಚೀನಾದ ಗಗನಯಾನಿಗಳು ಶುಕ್ರವಾರ ಸುರಕ್ಷಿತವಾಗಿ ಬಂದಿಳಿದಿದ್ದಾರೆ.

‘ಶೆಂಝೌ-14 ಬಾಹ್ಯಾಕಾಶ ನೌಕೆಯ ಮೂಲಕ ಚೆನ್ ಡಾಂಗ್, ಚೆನ್ ಝೊಂಗುರಿ ಹಾಗೂ ವಾಂಗ್ ಜಿ ಅವರು ಉತ್ತರ ಚೀನಾದ ಡಾಂಗ್‌ಫೆಂಗ್ ನಿಲ್ದಾಣಕ್ಕೆ ಬಂದಿಳಿದರು’ ಎಂದು ಚೀನಾದ ಮಾನವಸಹಿತ ಬಾಹ್ಯಾಕಾಶ ಸಂಸ್ಥೆ (ಸಿಎಂಎಸ್‌ಎ) ತಿಳಿಸಿದೆ.

‘ನವೆಂಬರ್ 5ರಂದೇ ಈ ಮೂವರು ಗಗನಯಾನಿಗಳು ಭೂಮಿಗೆ ಮರಳಬೇಕಿತ್ತು. ಅಂತರಿಕ್ಷದಲ್ಲಿ ವ್ಯೋಮನೌಕೆಗೆ ಕೊನೆಯ ಹಂತದಲ್ಲಿ ಅವಶೇಷಗಳು ಡಿಕ್ಕಿ ಹೊಡೆದಿದ್ದರಿಂದ ಸಣ್ಣದಾಗಿ ಬಿರುಕು ಕಾಣಿಸಿಕೊಂಡಿತ್ತು. ಹೀಗಾಗಿ, ಪ್ರಯಾಣವನ್ನು ಮುಂದೂಡಲಾಗಿತ್ತು. ನಂತರ ಅವುಗಳನ್ನು ಸರಿಪಡಿಸಿದ ನಂತರ, ಅವರು ವ್ಯೋಮನೌಕೆಯಲ್ಲಿ ಬಂದಿಳಿದರು’ ಎಂದು ಸಿಎಂಎಸ್‌ಎ ತನ್ನ ಪ್ರಕಟಣೆಯಲ್ಲಿ ವಿವರಿಸಿದೆ.

2011ರಲ್ಲಿ ಬಾಹ್ಯಾಕಾಶ ನಿಲ್ದಾಣ ನಿರ್ಮಾಣ ಮಾಡಿದ ಬಳಿಕ ಇದೇ ಮೊದಲ ಬಾರಿ ಈ ಸಮಸ್ಯೆ ತಲೆದೋರಿತ್ತು. ಈ ನಿಲ್ದಾಣದಲ್ಲಿ ಮೂವರು ಗಗನಯಾನಿಗಳಿಗೆ ಏಕಕಾಲಕ್ಕೆ ಉಳಿಯುವ ವ್ಯವಸ್ಥೆ ಮಾಡಲಾಗಿದೆ. ಪ್ರತಿ ಆರು ತಿಂಗಳಿಗೊಮ್ಮೆ ಬೇರೆ ಗಗನಯಾನಿಗಳನ್ನು ಚೀನಾವು ಅಲ್ಲಿಗೆ ಕಳುಹಿಸಿಕೊಡುತ್ತದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

5ನೇ ವರ್ಷದ ಚಿರಸ್ಮರಣೆ

ಶ್ರೀಮತಿ ಅಕ್ಕಯ್ಯಮ್ಮ
ಬಿ.ಸಿ.ಗೋಪಾಲಕೃಷ್ಣರವರ ಧರ್ಮಪತ್ನಿ,
ಕಾಟನ್‌ಪೇಟೆ, ಬೆಂಗಳೂರು.
ನಿಧನ: 15–11–2020
ನೀವು ನಮ್ಮನ್ನಗಲಿ ಇಂದಿಗೆ 5 ವರ್ಷಗಳು, ನಿಮ್ಮ ಪ್ರೀತಿ, ಆದರ್ಶಗಳೇ ನಮಗೆ ದಾರಿದೀಪ, ಸದಾ ನಿಮ್ಮ ನೆನಪಿನಲ್ಲಿರುವ..
ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು,
ಚರಣ್‌ಗ್ರೂಪ್ಸ್, ದಾಸನಪುರ, ಬೆಂಗಳೂರು.

ಫ್ಲಿಪ್‌ಕಾರ್ಟ್: ಮಾರಾಟಗಾರರಿಗೆ ಶುಲ್ಕ ವಿನಾಯಿತಿ

ನವದೆಹಲಿ (ಪಿಟಿಐ): ಇ-ಕಾಮರ್ಸ್ ಕಂಪನಿ ಫ್ಲಿಪ್‌ಕಾರ್ಟ್, ತನ್ನ ವೇದಿಕೆಯ ಮೂಲಕ ₹1 ಸಾವಿರಕ್ಕಿಂತ ಕಡಿಮೆ ಬೆಲೆ ಹೊಂದಿರುವ ಎಲ್ಲ ರೀತಿಯ ಉತ್ಪನ್ನಗಳನ್ನು ಮಾರಾಟ ಮಾಡುವ ಅರ್ಹ ಮಾರಾಟಗಾರರಿಗೆ ಪೂರ್ಣ ಶುಲ್ಕ ವಿನಾಯಿತಿ ನೀಡಿದೆ.

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ (ಎಂಎಸ್‌ಎಂಇ) ಬೆಂಬಲ ನೀಡಲು, ಉತ್ಪನ್ನಗಳು ಗ್ರಾಹಕರಿಗೆ ದೊರೆಯುವಂತೆ ಮಾಡುವ ಉದ್ದೇಶದಿಂದ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಕಂಪನಿ ಶುಕ್ರವಾರ ಹೇಳಿದೆ.

ಈ ಮಾದರಿಯು ಫ್ಲಿಪ್‌ಕಾರ್ಟ್ ಸಮೂಹದ ಶಾಪ್ಸಿಗೆ ಕೂಡ ಅನ್ವಯ ಆಗಲಿದೆ. ಇಲ್ಲಿ ಎಲ್ಲ ಉತ್ಪನ್ನಗಳಿಗೆ (ದರ ಲೆಕ್ಕಿಸದೆ) ಶುಲ್ಕ ವಿನಾಯಿತಿ ಇರಲಿದೆ ಎಂದು ತಿಳಿಸಿದೆ.

ಉತ್ತರ ಪ್ರದೇಶ ರಾಜಕೀಯ: ಬಿಹಾರ ಫಲಿತಾಂಶ ಪರಿಣಾಮ ಬೀರಬಹುದೇ?

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಯು ಪ್ರಮುಖ ಅಂಗಪಕ್ಷಗಳಾಗಿರುವ ಎನ್‌ಡಿಎ ಭರ್ಜರಿ ಜಯಗಳಿಸಿ, ಅಧಿಕಾರದ ಚುಕ್ಕಾಣಿ ಹಿಡಿಯಲಿದೆ. ಇದರ ಬೆನ್ನಲ್ಲೇ, ಈ ಚುನಾವಣೆಯ ಫಲಿತಾಂಶ ನೆರೆಯ ಉತ್ತರ ಪ್ರದೇಶದ ರಾಜಕೀಯದ ಪರಿಣಾಮ ಬೀರಲಿದೆಯೇ ಎಂಬ ಚರ್ಚೆಗಳು ಶುರುವಾಗಿವೆ.

2027ರಲ್ಲಿ ಉತ್ತರ ಪ್ರದೇಶ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಹೀಗಾಗಿ, ರಾಜಕೀಯ ಮೊಗಸಾಲೆಯಲ್ಲಿ ಇಂತಹ ಚರ್ಚೆಗಳು ನಡೆಯುವುದಕ್ಕೆ ಹಲವು ಕಾರಣಗಳೂ ಇವೆ. ಬಿಹಾರ ಮತ್ತು ಉತ್ತರ ಪ್ರದೇಶ ರಾಜ್ಯಗಳು ಗಡಿಯನ್ನು ಮಾತ್ರ ಹಂಚಿಕೊಳ್ಳುವುದಿಲ್ಲ, ಅಲ್ಲಿನ ಭಾಷೆ, ಸಂಸ್ಕೃತಿ ಹಾಗೂ ಆಹಾರ ಪದ್ಧತಿಯಲ್ಲಿ ಸಾಕಷ್ಟು ಸಾಮ್ಯತೆಯೂ ಇದೆ.

ರಾಜಕೀಯ ವಿಷಯಕ್ಕೆ ಬಂದಾಗ ಈ ರಾಜ್ಯಗಳ ನಡುವೆ ಭಾರಿ ವ್ಯತ್ಯಾಸದ ಇದೆ.

ಕಳೆದ ವರ್ಷ ನಡೆದ ಲೋಕಸಭಾ ಚುನಾವಣೆಯಲ್ಲಿ ಬಿಹಾರದಲ್ಲಿ ಎನ್‌ಡಿಎ ಹೆಚ್ಚು ಸ್ಥಾನಗಳನ್ನು ಗೆದ್ದಿತ್ತು. ಉತ್ತರ ಪ್ರದೇಶದಲ್ಲಿ ಮಾತ್ರ ಬಿಜೆಪಿಯ ಲೆಕ್ಕಾಚಾರ ತಲೆ ಕೆಳಗಾಯಿತು. ಕಾಂಗ್ರೆಸ್ ಹಾಗೂ ಆರ್‌ಜೆಡಿ ಉತ್ತಮ ಸಾಧನೆ ಮಾಡಿದ್ದವು.

ಬಿಹಾರದಲ್ಲಿ ಫಲ ಕೊಟ್ಟ ತಂತ್ರವೇನು?: ಬಿಹಾರದಲ್ಲಿ ಯಾದವೇತರ ಒಬಿಸಿ ಹಾಗೂ ಮಹಾದಲಿತರು ನಿತೀಶ್ ಕುಮಾರ್ ಅವರಲ್ಲಿ ಅಚಲ ನಿಷ್ಠೆ ತೋರುತ್ತಾ ಬಂದಿದ್ದಾರೆ. ಇದರಿಂದ ಜೆಡಿಯುಗೆ ಶೇ 15ರಿಂದ ಶೇ20ರಷ್ಟು ಮತಗಳು ಸಿಗುತ್ತವೆ. ಬಿಜೆಪಿ ಸಖ್ಯದಿಂದಾಗಿ ಪ್ರಬಲ ಜಾತಿಗಳ ಮತಗಳು ಕೂಡ ಎನ್‌ಡಿಎ ಮೈತ್ರಿಕೂಟದ ಪಾಲಾಗುತ್ತವೆ. ಇದರಿಂದ ಎನ್‌ಡಿಎ ಮತ ಪ್ರಮಾಣ ಶೇ30ರ ಗಡಿ ದಾಟುವುದು ಕಷ್ಟವಾಗದು.

ಯಾದವೇತರರ ವಿಚಾರ ಬಂದಾಗ, ಉತ್ತರ ಪ್ರದೇಶದಲ್ಲಿನ ಪರಿಸ್ಥಿತಿಯೇ ಬೇರೆ. ಈ ಸಮುದಾಯಗಳ ಮತಗಳು ಬಿಎಸ್‌ಪಿ, ಎಸ್‌ಪಿ ಹಾಗೂ ಬಿಜೆಪಿ ನಡುವೆ ಹಂಚಿಹೋಗಿವೆ. ಕಳೆದ ಎರಡು ಚುನಾವಣೆಗಳಲ್ಲಿ ಮಾಯಾವತಿ ನೇತೃತ್ವದ ಬಿಎಸ್‌ಪಿ ಕಳಪೆ ಸಾಧನೆ ದಾಖಲಿಸಿದೆ. ಹೀಗಾಗಿ, ಈ ಸಮುದಾಯಗಳ ಮತ ಸೆಳೆಯಲು ಅಖಿಲೇಶ್ ಮತ್ತು ಯೋಗಿ ಆದಿತ್ಯನಾಥ ನಡುವೆ ನೇರ ಸ್ಪರ್ಧೆ ಇದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ, ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅವರ ಕೆಲಸಕ್ಕೆ ಮನೆಕೆಲಸ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರುವವರು ಅಥವಾ ಇಲ್ಲದಿರುವವರು, ಉಚಿತ ಊಟ ವಸತಿ ಸಂಬಳ 15,000/- ರಿಂದ 20,000/- ESI, PF, ಫೆಡರಲ್ ಬ್ಯಾಂಕ್‌ನಿಂದ 10ಲಕ್ಷ ಇನ್ಸೂರೆನ್ಸ್, ಸೌಲಭ್ಯ ವಿದ್ಯುತ್, ಬೆಂಗಳೂರು-76. ತಕ್ಷಣ ಸಂಪರ್ಕಿಸಿ: 9008835841, 9606385001.

Marketing & Sales

WANTED SALES Rep for Surgical Industry. Must Travel across State's. Ph +91-9560096877 / 9448992997, email : info.albat@gmail.com

Part-Time Jobs

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000-25000/- 7th, 10th, Any Degree. 8095043191

ಪ್ರವಾಸ

Travel Agencies

6 ದಿನಗಳು ದುಬೈ, 6 ದಿನಗಳು ಶ್ರೀಲಂಕಾ, 7 ದಿನಗಳು ಜಪಾನ್, 16 ದಿನಗಳು ಯುಕೆ & ಯುರೋಪ್ 7/11 ದಿನಗಳು ಸಿಂಗಾಪುರ್ ಮಲೇಷಿಯಾ & ಥೈಲ್ಯಾಂಡ್, ಭೂತಾನ್ ಟ್ರಾವೆಲ್. 9844037295

Travel

22.12.2025 ಶಿರಡಿ ಮತ್ತು ಮಹಾರಾಷ್ಟ್ರ 5 ಜ್ಯೋತಿರ್ಲಿಂಗಗಳ ಪ್ರವಾಸ 22.12.2025 ಗುರುವಾಯೂರು, ಮುನ್ನಾರ್, ಆಲೆಪ್ಪಿ, ತಿರುವನಂತಪುರ, ಕನ್ಯಾಕುಮಾರಿ, ರಾಮೇಶ್ವರಂ ಕಾಶಿ ಹಾಗೂ ಪ್ರಯಾಗ ಟೂರ್ (ಹಾಸನ/ಬೆಂಗಳೂರು). 9845035349, 9482435755

ಉದ್ಯೋಗಾವಕಾಶ

ಟಿವಿಎಸ್ ಟ್ರೈನಿಯಾಗಿ ಡಿಪ್ಲೋಮಾ, ಐಟಿಐ ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಗೆ ಅನುಗುಣವಾಗಿ) ವಸತಿ ಲಭ್ಯವಿದೆ. 9035710381

ಪುಲ್ವಾಮ: ಉಮರ್ ಮನೆ ನೆಲಸಮ

ಪ್ರಜಾವಾಣಿ ವಾರ್ತೆ

ಶ್ರೀನಗರ: ದೆಹಲಿಯ ಕೆಂಪುಕೋಟೆ ಸಮೀಪ ನಡೆದ ಪ್ರಬಲ ಸ್ಫೋಟ ಪ್ರಕರಣದ ಪ್ರಮುಖ ಆರೋಪಿ ಡಾ. ಉಮರ್ ನಬಿಯ ಪುಲ್ವಾಮದಲ್ಲಿನ ಮನೆಯನ್ನು ಭದ್ರತಾ ಪಡೆಗಳು ನಿಯಂತ್ರಿತ ಸ್ಫೋಟಕ ಬಳಸಿ ನೆಲಸಮಗೊಳಿಸಿವೆ.

ಸ್ಫೋಟಗೊಂಡ ಹುಂಡೈ ಐ20 ಕಾರನ್ನು ಚಲಾಯಿಸುತ್ತಿದ್ದ ವ್ಯಕ್ತಿ ಉಮರ್ ಎಂಬುದನ್ನು ತನಿಖಾಧಿಕಾರಿಗಳು ಗುರುವಾರ ದೃಢಪಡಿಸಿದ್ದರು. ಕಾರಿನಲ್ಲಿ ದೊರೆತ ಛಿದ್ರಗೊಂಡ ದೇಹದ ಭಾಗಗಳು ಉಮರ್‌ನದ್ದೇ ಎಂಬುದು ಆತನ ತಾಯಿಯ ಡಿಎನ್‌ಎ ಹೊಂದಾಣಿಕೆಯಿಂದ ಖಚಿತವಾದ ಬೆನ್ನಲ್ಲೇ ಈ ಕಾರ್ಯಾಚರಣೆ ನಡೆಸಲಾಗಿದೆ.

ಎರಡು ಅಂತಸ್ತಿನ ಮನೆ: ಕೋಯಿಲ್ ಗ್ರಾಮದಲ್ಲಿನ ಎರಡು ಅಂತಸ್ತಿನ ಮನೆಯನ್ನು ಗುರುವಾರ ಮಧ್ಯರಾತ್ರಿ ಮತ್ತು ಶುಕ್ರವಾರ ನಸುಕಿನಲ್ಲಿ ಕೆಡವಲಾಯಿತು. ಕಾರ್ಯಾಚರಣೆಗೆ ಅಡೆತಡೆ ಆಗದಂತೆ ಗ್ರಾಮದಲ್ಲಿ ಹೆಚ್ಚುವರಿ ಭದ್ರತೆ ಕಲ್ಪಿಸಿ, ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಭದ್ರತಾ ಪಡೆಗಳು ತೆಗೆದುಕೊಂಡಿದ್ದವು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಪ್ರತಿಭಾನ್ವಿತ ವ್ಯಕ್ತಿಯಾಗಿದ್ದ ಉಮರ್, ಉತ್ತಮ ಶೈಕ್ಷಣಿಕ ಹಿನ್ನೆಲೆ ಹೊಂದಿದ್ದ ವೈದ್ಯನಾಗಿದ್ದ. ಆದರೆ ಎರಡು ವರ್ಷಗಳಿಂದ ಆತ ಮೂಲಭೂತ ವಾದದತ್ತ ವಾಲಿದ್ದ. ಅದಕ್ಕೆ ಸಂಬಂಧಿಸಿದ ಗುಂಪುಗಳ ಜತೆ ಸಂಪರ್ಕ ದಲ್ಲಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಅವರು ಹೇಳಿದ್ದಾರೆ.

ಉಗ್ರರ ಜಾಲದ ವಿರುದ್ಧ ಕಠಿಣ ಕ್ರಮ: ಈ ವರ್ಷ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ನಡೆಸಿದ ಭೀಕರ ದಾಳಿಯಲ್ಲಿ 25 ಪ್ರವಾಸಿಗರು ಮೃತಪಟ್ಟ ನಂತರದಿಂದ ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕ ಜಾಲದ ವಿರುದ್ಧ ಭದ್ರತಾ ಪಡೆಗಳು ಈ ರೀತಿಯ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ.

ಪಹಲ್ಗಾಮ್ ದಾಳಿಯ ಬಳಿಕ ಭದ್ರತಾ ಪಡೆಗಳು ದಕ್ಷಿಣ ಕಾಶ್ಮೀರದಾದ್ಯಂತ ವ್ಯಾಪಕ ಭಯೋತ್ಪಾದಕ ನಿಗ್ರಹ ಕಾರ್ಯಾಚರಣೆಗೆ ಚಾಲನೆ ನೀಡಿದ್ದರು. 2025ರ ಮೇ ಬಳಿಕ ಪುಲ್ವಾಮ, ಶೋಪಿಯಾನ್, ಕುಲ್ಗಾಂಗಳಲ್ಲಿ ಡಜನ್‌ಗೂ ಹೆಚ್ಚು ಮನೆಗಳನ್ನು ನೆಲಸಮ ಗೊಳಿಸಲಾಗಿದೆ. ಶಂಕಿತ ಉಗ್ರರಿಗೆ ಆಶ್ರಯ ನೀಡಿದ್ದ, ಅವರಿಗೆ ಸರಕು ಸರಂಜಾಮುಗಳನ್ನು ಒದಗಿಸಿದ್ದ ಅಥವಾ ಸಾರಿಗೆ ಸೌಕರ್ಯ ಕಲ್ಪಿಸಿದ್ದ ಆರೋಪಿಗಳ ಮನೆಗಳನ್ನು ಗುರಿಯಾಗಿಸಿ ಈ ಕಾರ್ಯಾಚರಣೆಗಳನ್ನು ನಡೆಸಲಾಗಿತ್ತು.

ಬಿಹಾರವಿಡೀ ‘ನಿಮೋ’ ಸುನಾಮಿ

ಒಂದನೇ ಪುಟದಿಂದ...

ಚುನಾವಣಾ ಆಯೋಗ ನಡೆಸಿದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಹಾಗೂ ಮತಕಳ್ಳತನದ ವಿರುದ್ಧದ ಕಾಂಗ್ರೆಸ್ ಹೋರಾಟಗಳು ಮತದಾರರ ಮನಸ್ಸನ್ನು ಗೆಲ್ಲುವಲ್ಲಿ ವಿಫಲವಾಗಿವೆ. ಚುನಾವಣಾ ಪೂರ್ವದಲ್ಲಿ ಜಾರಿಗೆ ತಂದ ಕಲ್ಯಾಣ ಕಾರ್ಯಕ್ರಮಗಳು ಮೂರನೇ ಎರಡರಷ್ಟು ಬಹುಮತವನ್ನು ಎನ್‌ಡಿಎ ಮೈತ್ರಿಕೂಟಕ್ಕೆ ತಂದುಕೊಟ್ಟಿವೆ. ಚುನಾವಣೆಗೆ ಕೆಲವೇ ದಿನಗಳು ಇರುವಾಗ ಸರ್ಕಾರದ ಖಜಾನೆಯಿಂದ ₹10 ಸಾವಿರ ‘ಗ್ಯಾರಂಟಿ’ ಪಡೆದ ಮಹಿಳಾ ಮತದಾರರು ಮೈತ್ರಿಕೂಟವನ್ನು ಗೆಲ್ಲಿಸಿದರು. ‘ಸುಶಾಸನ ಬಾಬು’ವಿನ ಯೋಜನೆಗಳು ಮೈತ್ರಿಕೂಟದ ದೈತ್ಯ ಗೆಲುವಿಗೆ ಕಾರಣವಾಗಿದೆ. ‘ಮತ ಕಳವು ಝೆನ್–ಜಿಗಳ ಹಕ್ಕನ್ನು ಮೊಟಕುಗೊಳಿಸಲಿದೆ’ ಎಂಬ ರಾಹುಲ್ ಅವರ ಮಾತುಗಳು ಮತಗಳಾಗಿ ಪರಿವರ್ತನೆ ಹೊಂದಲಿಲ್ಲ. ಹೊಸ ಮತದಾರರು ಎನ್‌ಡಿಎ ಮೇಲೆ ವಿಶ್ವಾಸ ಇಟ್ಟರು.

‘ಡಬಲ್ ಎಂಜಿನ್ ಸರ್ಕಾರ’ ಎಂಬ ಸಂಕಥನವು ಮೈತ್ರಿಗೆ ಭರಪೂರ ಮತಗಳನ್ನು ತಂದುಕೊಟ್ಟಿದೆ. ಬಡವರೇ ಹೆಚ್ಚಿನ ಸಂಖ್ಯೆಯಲ್ಲಿರುವ ಹಿಂದುಳಿದ ರಾಜ್ಯಕ್ಕೆ ಕೇಂದ್ರದ ಎನ್‌ಡಿಎ ಸರ್ಕಾರವು ಕಳೆದ ಒಂದೂವರೆ ವರ್ಷಗಳಲ್ಲಿ ಒಂದು ಲಕ್ಷ ಕೋಟಿಗೂ ಅಧಿಕ ಮೊತ್ತದ ಯೋಜನೆಗಳನ್ನು ನೀಡಿ ಚುನಾವಣಾ ಕಣ ಸಜ್ಜುಗೊಳಿಸಿದ್ದನ್ನು ಇಲ್ಲಿ ನೆನಪಿಸಬಹುದು.

ಈ ಹಿಂದೆ ನಿತೀಶ್ ತಮ್ಮ ಮಿತ್ರಪಕ್ಷ ಬಿಜೆಪಿಯನ್ನು ಅಂಕೆಯಲ್ಲಿಟ್ಟುಕೊಂಡಿದ್ದರು. ಮಹಾಮೈತ್ರಿಕೂಟ ತೊರೆದು ಬಿಜೆಪಿಯ ಗೆಳೆತನಕ್ಕೆ ಮರಳಿದ ನಂತರ ನಿತೀಶ್ ಅವರನ್ನು ಕೇಸರಿ ಪಕ್ಷ ತನ್ನ ಅಂಕೆಯಲ್ಲಿ ಇರಿಸಿಕೊಂಡಿದೆ. 101 ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಶೇ 90 ಸ್ಟ್ರೈಕ್ ರೇಟ್‌ನಲ್ಲಿ ಬಿಜೆಪಿ ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಮುಂದಿನ ಚುನಾವಣೆಗಳಲ್ಲಿ ತನ್ನ ಶಕ್ತಿಯನ್ನೇ ನೆಚ್ಚಲು ನಿರ್ಧರಿಸಿರುವ ಕೇಸರಿ ಪಕ್ಷ, ಅದಕ್ಕಾಗಿ ನೆಲವನ್ನು ‘ಫಲವತ್ತು’ ಮಾಡಿಕೊಂಡಿದೆ. ಪದೇ ಪದೇ ಮೈತ್ರಿಕೂಟ ಬದಲಿಸಿ ‘ಪಲ್ಟು ಕುಮಾರ್’ ಎಂಬ ಹಣೆಪಟ್ಟಿ ಹೊತ್ತಿರುವ ನಿತೀಶ್ ಅವರು ಅತ್ತಿತ್ತ ಹೊರಳಾಡದಂತಹ ಸನ್ನಿವೇಶ ಸೃಷ್ಟಿಯಾಗಿದೆ.

ಮೋದಿ ಅವರ ಮಾತುಗಳನ್ನು ಮತದಾರರು ಕಣ್ಣುಮುಚ್ಚಿ ನಂಬುತ್ತಾರೆ ಎಂಬುದನ್ನು ಈ ಚುನಾವಣೆ ಮತ್ತೊಮ್ಮೆ ಸಾಬೀತುಪಡಿಸಿದೆ. ಗೆಲುವಿನ ಅಂಚು ತಲುಪಿ ತಿಣುಕಾಡುವ ಮೈತ್ರಿ ಸರ್ಕಾರಗಳನ್ನು ಅವರು ಗೆಲ್ಲಿಸಬಲ್ಲರು ಎಂಬುದನ್ನು ಈ ಫಲಿತಾಂಶ ರುಜುವಾತುಪಡಿಸಿದೆ. ಆರ್‌ಜೆಡಿ ಅಧಿಕಾರಕ್ಕೆ ಬಂದರೆ ಜಂಗಲ್ ರಾಜ್ ಮರಳಲಿದೆ ಎಂಬ ಭಾವನೆಯನ್ನು ಜನರ ಮತದಲ್ಲಿ ಬಿತ್ತುವಲ್ಲಿ ಮೋದಿ ಯಶಸ್ವಿಯಾದರು. ಜಾತಿ ಕಲಹದ ನಾಡಿನಲ್ಲಿ ಬಿತ್ತಿದ ಈ ಬೀಜವು ಮೈತ್ರಿಕೂಟಕ್ಕೆ ನಿರೀಕ್ಷೆಗೆ ಮೀರಿದ ಫಸಲನ್ನು ತಂದುಕೊಟ್ಟಿದೆ. ಹಿಂದುತ್ವದ ಹೆಸರಿನ ಧ್ರುವೀಕರಣವೇ ಬಿಜೆಪಿ ಕೂಟಕ್ಕೆ ಚುನಾವಣೆಗಳನ್ನು ಗೆಲ್ಲಿಸಿಕೊಡುವ ಬಹುಮುಖ್ಯ ಅಂಶ ಎಂಬುದನ್ನು ಈ ಬಾರಿಯ ಫಲಿತಾಂಶವು ಮತ್ತೊಮ್ಮೆ ಸಾಬೀತು ಮಾಡಿದೆ.

ಕಾಂಗ್ರೆಸ್ ಭವಿಷ್ಯವೇನು?

ಒಂದು ಕಾಲದಲ್ಲಿ ಬಿಹಾರವನ್ನು ಆಳಿದ್ದ ಕಾಂಗ್ರೆಸ್ ಪಕ್ಷವು ಈ ಚುನಾವಣೆಯಲ್ಲಿ ಒಂದಂಕಿ ಸ್ಥಾನಗಳನ್ನು ಪಡೆದು ತತ್ತರಿಸಿಹೋಗಿದೆ. ತಳ ಮಟ್ಟದಲ್ಲಿ ಆಮೂಲಾಗ್ರವಾಗಿ ಪಕ್ಷ ಸಂಘಟಿಸದಿದ್ದರೆ ರಾಹುಲ್ ಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷದ ಭವಿಷ್ಯ ಕಡುಕಠಿಣವಾಗಿರಲಿದೆ ಎಂದು ಎಂಬ ಸ್ಪಷ್ಟ ಸಂದೇಶವನ್ನು ಈ ಚುನಾವಣೆ ರವಾನಿಸಿದೆ.

ದೇಶದ ಪ್ರಮುಖ ಪ್ರತಿಪಕ್ಷವಾಗಿರುವ ಕಾಂಗ್ರೆಸ್, ಈಗ ಕರ್ನಾಟಕ, ತೆಲಂಗಾಣ ಹಾಗೂ ಹಿಮಾಚಲ ಪ್ರದೇಶದಲ್ಲಿ ಮಾತ್ರ ಅಧಿಕಾರದಲ್ಲಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ಗಮನಾರ್ಹ ಸಾಧನೆ ಮಾಡಿದ್ದ ಪಕ್ಷವು ಆ ಬಳಿಕ ನಡೆದ 10 ವಿಧಾನಸಭಾ ಚುನಾವಣೆಗಳಲ್ಲಿ ಸ್ವತಂತ್ರವಾಗಿ ಎಲ್ಲಿಯೂ ಗೆದ್ದಿಲ್ಲ. ಎಂಟರಲ್ಲಿ ದಯನೀಯವಾಗಿ ಸೋತಿದೆ. ಜಮ್ಮು ಮತ್ತು ಕಾಶ್ಮೀರ, ಜಾರ್ಖಂಡ್‌ನಲ್ಲಿ ಗೆದ್ದಿರುವುದು ಮಿತ್ರ ಪಕ್ಷಗಳ ಊರುಗೋಲಿನ ನೆರವಿನಿಂದ.

ಲೋಕಸಭಾ ಚುನಾವಣೆಯ ಬಳಿಕ ರಾಹುಲ್ ಅವರ ‘ಸಂವಿಧಾನ ಉಳಿಸಿ’ ಕಸುವು ಕಳೆದುಕೊಂಡಿದೆ. ದೇಶದಾದ್ಯಂತ ಜಾತಿ ಗಣತಿ ನಡೆಸಬೇಕೆಂಬ ಅವರ ಹೋರಾಟ ಮತಗಳನ್ನು ತಂದುಕೊಟ್ಟಿಲ್ಲ. ಬಿಹಾರ ಚುನಾವಣೆಗೆ ಮುನ್ನ ಆರಂಭಿಸಿದ ‘ಮತ ಕಳವು’ ಅಭಿಯಾನ ಜನರಲ್ಲಿ ಜಾಗೃತಿ ಮೂಡಿಸಿದೆ ಅಷ್ಟೇ, ಮತಗಳಾಗಿ ಪರಿವರ್ತನೆಯಾಗಿಲ್ಲ.

ಬಿಹಾರದಲ್ಲಿ ಪಕ್ಷ ಪುನಶ್ಚೇತನಗೊಳಿಸಲು ರಾಹುಲ್ ಅವರು ಆಗಸ್ಟ್ ತಿಂಗಳಲ್ಲಿ ಮತ ಅಧಿಕಾರ ಯಾತ್ರೆ ನಡೆಸಿ ಸಂಚಲನ ಸೃಷ್ಟಿಸಿದರು. ನಾಯಕರು ಹಾಗೂ ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿದರು. ಆ ಬಳಿಕ ವಿದೇಶ ಯಾತ್ರೆಗಳಲ್ಲಿ ತಲ್ಲೀನರಾದರು. ಸೀಟು ಹಂಚಿಕೆ ಸಂದರ್ಭದಲ್ಲಿ ಮೈತ್ರಿಕೂಟದ ನಾಯಕರ ಕೈಗೇ ಸಿಗಲಿಲ್ಲ. ಮತ್ತೆ ಬಿಹಾರದತ್ತ ಮುಖ ಮಾಡಿದ್ದು ಮೊದಲ ಹಂತದ ಮತದಾನಕ್ಕೆ ಒಂದು ವಾರ ಇರುವಾಗ. ಪುರುಸೊತ್ತು ಇದ್ದಾಗ ರಾಜಕಾರಣ ಮಾಡುವ ಇಂತಹ ಧೋರಣೆ ಕಾಂಗ್ರೆಸ್ ಪಕ್ಷವನ್ನು ರಾಷ್ಟ್ರ ಮಟ್ಟದಲ್ಲಿ ಇನ್ನಷ್ಟು ಅಪ್ರಸ್ತುತಗೊಳಿಸಬಹುದು. ಪಕ್ಷದ ಪುನಶ್ಚೇತನದ ಮೇಲೆ ಅದು ಕರಿ ಛಾಯೆ ಬೀರಬಹುದು.

ಬಿಜೆಪಿ ಅಧ್ಯಕ್ಷರ ನೇಮಕ ಇನ್ನು ಸಲೀಸು

ಬಿಹಾರದಲ್ಲಿ ಗೆದ್ದು ಬೀಗಿರುವ ಬಿಜೆಪಿಯು ಇನ್ನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ನೇಮಕದ ಕಡೆಗೆ ಗಮನ ಹರಿಸುವುದು ಖಚಿತ. ಒಂದು ವರ್ಷದಿಂದ ನನೆಗುದಿಗೆ ಬಿದ್ದಿರುವ ಈ ಪ್ರಕ್ರಿಯೆಗೆ ವೇಗ ಸಿಗುವ ಸಾಧ್ಯತೆ ಇದೆ. ಅದಕ್ಕೂ ಮುನ್ನ ಕರ್ನಾಟಕ, ಉತ್ತರ ಪ್ರದೇಶ, ರಾಜಸ್ಥಾನ ರಾಜ್ಯಗಳಿಗೆ ಅಧ್ಯಕ್ಷರ ನೇಮಕ ಪ್ರಕ್ರಿಯೆ ಕಡೆಗೆ ಗಮನ ಹರಿಸುವ ಸಂಭವ ಇದೆ.

ಮಹಾಮೈತ್ರಿಗೆ ಓವೈಸಿ ಹೊಡೆತ

24 ಕ್ಷೇತ್ರಗಳಿರುವ ಸೀಮಾಂಚಲ ಪ್ರದೇಶದಲ್ಲಿ ಅಸಾದುದ್ದೀನ್ ಓವೈಸಿ ಅವರ ಎಐಎಂಐಎಂ ಪಕ್ಷವು ಐದು ಕ್ಷೇತ್ರಗಳಲ್ಲಿ ಜಯ ಸಾಧಿಸಿತು. ಒಂದು ಡಜನ್ ಕ್ಷೇತ್ರಗಳಲ್ಲಿ ಮಹಾಮೈತ್ರಿ ಅಭ್ಯರ್ಥಿಗಳ ಸೋಲಿಗೆ ಕಾರಣವಾಯಿತು.

ಆರ್‌ಜೆಡಿ ನೇತೃತ್ವದ ಮಹಾಮೈತ್ರಿಗೆ ಪಾರಂಪರಿಕವಾಗಿ ಸೀಮಾಂಚಲ ಪ್ರದೇಶ ಭದ್ರ ಕೋಟೆ. 2020ರ ಚುನಾವಣೆಯಲ್ಲಿ ಓವೈಸಿ ಅವರ ಪಕ್ಷವು ಮಹಾಮೈತ್ರಿಯ ಕೋಟೆಗೆ ಪ್ರವೇಶಿಸಿ ವಿಪಕ್ಷಗಳ ಕೂಟಕ್ಕೆ ಹೊಡೆತ ನೀಡಿತ್ತು. ಈ ಸಲ ಅದಕ್ಕಿಂತ ತೀವ್ರ ಹಾನಿ ಮಾಡಿದೆ. ರಾಜ್ಯದಲ್ಲಿ 28 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಪಕ್ಷವು ಹಲವು ಕಡೆಗಳಲ್ಲಿ ಮಹಾಮೈತ್ರಿಯ ಮತಗಳಿಗೆ ಕನ್ನ ಹಾಕಿತು.

ಬಿಹಾರದಲ್ಲಿ ಅತೀ ಹೆಚ್ಚು ಮುಸ್ಲಿಂ ಜನಸಂಖ್ಯೆ ಇರುವುದು ನೇಪಾಳ ಹಾಗೂ ಪಶ್ಚಿಮ ಬಂಗಾಳ ಗಡಿಯಲ್ಲಿರುವ ಸೀಮಾಂಚಲ ಸೀಮೆಯಲ್ಲಿ. ಕಿಶನ್‌ಗಂಜ್, ಅರಾರಿಯಾ, ಕತಿಹಾರ್ ಮತ್ತು ಪೂರ್ಣಿಯಾ ಒಳಗೊಂಡ ನಾಲ್ಕು ಜಿಲ್ಲೆಗಳಲ್ಲಿ ಈ ಸಲ ಮಹಾಮೈತ್ರಿಗೆ ಸಿಕ್ಕಿದ್ದು ಮೂರು ಸೀಟುಗಳಷ್ಟೇ. ಓವೈಸಿ ಪಕ್ಷವು ತ್ರಿಕೋನ ಸ್ಪರ್ಧೆಯನ್ನು ಹುಟ್ಟು ಹಾಕಿದ್ದರಿಂದ ಎನ್‌ಡಿಎ ಮೈತ್ರಿಕೂಟಕ್ಕೆ ಅನುಕೂಲವಾಯಿತು. ಆರ್‌ಜೆಡಿ ಹಾಗೂ ಕಾಂಗ್ರೆಸ್‌ನ ಉನ್ನತ ನಾಯಕರು ಸೋಲು ಕಂಡರು. ಇದೀಗ ಓವೈಸಿ ಅವರು 2027ರ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯ ಕಡೆಗೆ ದೃಷ್ಟಿ ನೆಟ್ಟಿದ್ದಾರೆ.

ಕಷ್ಟಪಟ್ಟ ನೆಲಗಳಲ್ಲಿ ಪ್ರಚಂಡ ದಿಗ್ವಿಜಯ

2017ರ ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ತಿಣುಕಾಡಿ ಗೆದ್ದಿತ್ತು. 2022ರ ಚುನಾವಣೆಯಲ್ಲಿ ಮೂರನೇ ಎರಡಷ್ಟು ಬಹುಮತ ಗಳಿಸಿತ್ತು. ಮಧ್ಯಪ್ರದೇಶದಲ್ಲಿ ಸತತ ನಾಲ್ಕನೆಯ ಸಲ ಗೆಲ್ಲಲು ಕಮಲ ಪಾಳಯವು 2018ರಲ್ಲಿ ಕಡೆಯ ಗಳಿಗೆಯ ತನಕ ವೀರೋಚಿತ ಹೋರಾಟ ನಡೆಸಿತ್ತು. 2023ರಲ್ಲಿ ಅಭೂತಪೂರ್ವ ಗೆಲುವು ಸಾಧಿಸಿತ್ತು. ಮಹಾರಾಷ್ಟ್ರದಲ್ಲಿ 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಮೈತ್ರಿಕೂಟವು ಕಳಪೆ ಸಾಧನೆ ಮಾಡಿತ್ತು. ಬಳಿಕ ನಡೆದ ವಿಧಾನಸಭಾ ಚುನಾವಣೆಯಲ್ಲಿ ವಿಪಕ್ಷ ಮೈತ್ರಿಕೂಟವನ್ನು ಗುಡಿಸಿ ಹಾಕಿತ್ತು. ಛತ್ತೀಸಗಢ ಹಾಗೂ ದೆಹಲಿ ವಿಧಾನಸಭಾ ಚುನಾವಣೆಗಳಲ್ಲೂ ಇಂತಹುದೇ ಫಲಿತಾಂಶ ಬಂದಿತ್ತು. ಇದೀಗ ಬಿಹಾರದ ಸರದಿ. 2020ರ ಚುನಾವಣೆಯಲ್ಲಿ ಗೆಲುವಿಗೆ ಏದುಸಿರು ಬಿಟ್ಟಿದ್ದ ಎನ್‌ಡಿಎ ಮೈತ್ರಿಕೂಟವು ಈ ಬಾರಿ ಪ್ರತಿಪಕ್ಷವನ್ನು ನಾಮಾವಶೇಷ ಮಾಡಿದೆ. ಅಧಿಕಾರಕ್ಕೇರಲು ಕಷ್ಟ ಪಟ್ಟ ನೆಲಗಳಲ್ಲಿ ಮತ್ತೆ ಭರ್ಜರಿ ಗೆಲುವು ಸಾಧಿಸುವ ಹೊಸ ಹವ್ಯಾಸ ಬಿಜೆಪಿಯದ್ದು. ಬಿಜೆಪಿ ನಾಯಕರಿಗೆ ಗೆಲುವೊಂದೇ ಮಂತ್ರ.

ಜಸ್‌ಪ್ರೀತ್ ಬೂಮ್ರಾ ಬೌಲಿಂಗ್ ಬೆರಗು

ಸಾಧಾರಣ ಮೊತ್ತಕ್ಕೆ ಕುಸಿದ ದಕ್ಷಿಣ ಆಫ್ರಿಕಾ; ಸಿರಾಜ್, ಕುಲದೀಪ್ ಕೈಚಳಕ

• ಮಧು ಜವಳಿ

ಕೋಲ್ಕತ್ತ: ಬಹಳ ದಿನಗಳ ನಂತರ ಜಸ್‌ಪ್ರೀತ್ ಬೂಮ್ರಾ ಅವರ ವೈಭವ ಕಣ್ಮನ ಸೆಳೆಯಿತು. ಅವರು ಈಡನ್ ಗಾರ್ಡನ್‌ನಲ್ಲಿ ಐದು ವಿಕೆಟ್ ಗೊಂಚಲು ಗಳಿಸಿದರು.

ಈ ವರ್ಷದ ಆರಂಭದಲ್ಲಿ ಅವರು ಬೆನ್ನಿನ ಶಸ್ತ್ರಚಿಕಿತ್ಸೆಯಿಂದ ಚೇತರಿಸಿಕೊಂಡು ಮೈದಾನಕ್ಕೆ ಮರಳಿದ ನಂತರ ಅವರ ಸುತ್ತ 'ಕಾರ್ಯೋತ್ತಡ ನಿರ್ವಹಣೆ' ಸೂತ್ರವು ಸುತ್ತುತ್ತಿದೆ. 31 ವರ್ಷದ ಬೂಮ್ರಾ ಅವರಿಗೆ ನಿಯಮಿತ ವಿಶ್ರಾಂತಿ ನೀಡುವ ಜೊತೆಗೆ ಪ್ರಮುಖ ಪಂದ್ಯಗಳಲ್ಲಿ ಮಾತ್ರ ಕಣಕ್ಕಿಳಿಸಲಾಗುತ್ತಿದೆ. ಅವರನ್ನು ಜತನದಿಂದ ಕಾಪಿಟ್ಟುಕೊಳ್ಳಲಾಗುತ್ತಿದೆ. ಆದರೆ ಲಭಿಸುವ ಅವಕಾಶಗಳಲ್ಲಿ ಶ್ರೇಷ್ಠ ಪ್ರದರ್ಶನ ನೀಡುವುದು ಬೂಮ್ರಾ ಅವರಂತಹ ಉತ್ತಮ ಆಟಗಾರನಿಗಷ್ಟೇ ಸಾಧ್ಯ.

ಶುಕ್ರವಾರ ಆರಂಭವಾದ ಮೊದಲ ಟೆಸ್ಟ್ ಪಂದ್ಯದಲ್ಲಿ ಬೂಮ್ರಾ (27ಕ್ಕೆ5) ಬಿರುಗಾಳಿಗೆ ದಕ್ಷಿಣ ಆಫ್ರಿಕಾ ಪಡೆ ತತ್ತರಿಸಿತು. 51ನೇ ಟೆಸ್ಟ್ ಪಂದ್ಯವಾಡಿದ ಗುಜರಾತ್ ವೇಗಿ 16ನೇ ಪಂಚಗೊಂಚಲು ಸಾಧನೆ ಮಾಡಿದರು. ಅವರಿಗೆ ಮೊಹಮ್ಮದ್ ಸಿರಾಜ್ (47ಕ್ಕೆ2) ಮತ್ತು ಸ್ಪಿನ್ನರ್ ಕುಲದೀಪ್ ಯಾದವ್ (36ಕ್ಕೆ2) ಜೊತೆ ನೀಡಿದರು. ಇದರಿಂದಾಗಿ ಪ್ರವಾಸಿ ಪಡೆಯು 55 ಓವರ್‌ಗಳಲ್ಲಿ 159 ರನ್ ಗಳಿಸಿತು.

ಇದಕ್ಕುತ್ತರವಾಗಿ ಇನಿಂಗ್ಸ್ ಆರಂಭಿಸಿದ ಆತಿಥೇಯ ತಂಡದ ಯಶಸ್ವಿ ಜೈಸ್ವಾಲ್ (12 ರನ್) ಅವರ ವಿಕೆಟ್ ಎಡಗೈ ವೇಗಿ ಮಾರ್ಕೊ ಯಾನ್ಸೆನ್ ಅವರ ಪಾಲಾಯಿತು. ಮಂದಬೆಳಕಿನ ಕಾರಣಕ್ಕೆ ಪಂದ್ಯ ಸ್ಥಗಿತವಾದಾಗ ತಂಡವು 1 ವಿಕೆಟ್‌ಗೆ 37 ರನ್ ಗಳಿಸಿತ್ತು. ಕೆ.ಎಲ್. ರಾಹುಲ್ (ಬ್ಯಾಟಿಂಗ್ 13) ಮತ್ತು ವಾಷಿಂಗ್ಟನ್ ಸುಂದರ್ (ಬ್ಯಾಟಿಂಗ್ 6) ಕ್ರೀಸ್‌ನಲ್ಲಿದ್ದಾರೆ.

ಬೌಲರ್‌ಗಳಿಗೆ ಒಂದಷ್ಟು ನೆರವಾಗುವ ಲಕ್ಷಣಗಳಿದ್ದ ಪಿಚ್‌ನಲ್ಲಿ ಸೀಮ್ ಚಲನೆ ವೇಗಿಗಳಿಗೆ ಖುಷಿ ಕೊಟ್ಟರೆ. ಚೆಂಡು ತಿರುವು ಪಡೆಯುವ ಲಕ್ಷಣಗಳು ಸ್ಪಿನ್ನರ್‌ಗಳಿಗೆ ವಿಶ್ವಾಸ ಕುದುರಿಸಿದ್ದವು. ವೇಗಿಗಳು ರಿವರ್ಸ್ ಸ್ವಿಂಗ್ ಕೂಡ ಪ್ರಯೋಗಿಸಿ ಯಶಸ್ವಿಯಾದರು. ಆದರೆ ಬ್ಯಾಟರ್‌ಗಳು ಆಡದಷ್ಟು ಕೆಟ್ಟ ಪಿಚ್ ಅದಾಗಿರಲಿಲ್ಲ.

ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು.

ಇನಿಂಗ್ಸ್‌ನ ಮೊದಲ 50 ನಿಮಿಷಗಳ ಕಾಲ, ದಕ್ಷಿಣ ಆಫ್ರಿಕಾದ ಆರಂಭಿಕ ಜೋಡಿ ಏಡನ್ ಮರ್ಕರಂ ಮತ್ತು ರಿಯಾನ್ ರಿಕೆಲ್ಟನ್ ಅವರು ಬೂಮ್ರಾ ಮತ್ತು ಸಿರಾಜ್ ಇಬ್ಬರನ್ನೂ ಆತ್ಮವಿಶ್ವಾಸದಿಂದ ಎದುರಿಸಿದರು. ಅವರು ಬೂಮ್ರಾ ಎಸೆತಗಳನ್ನು ಎಚ್ಚರಿಕೆ ಹಾಗೂ ಏಕಾಗ್ರತೆಯಿಂದ ಆಡಿದರು. ಇವರಿಬ್ಬರೂ ಸಿರಾಜ್ ಅವರನ್ನು ದಂಡಿಸಿದರು. ಅವರ ಮೊದಲ ಮೂರು ಓವರ್‌ಗಳಲ್ಲಿ 25 ರನ್ ಗಳಿಸಿದರು.

ನಾಯಕ ಶುಭಮನ್ ಗಿಲ್ ಕಣಕ್ಕಿಳಿಸಿದ ಸ್ಪಿನ್ನರ್‌ಗಳಾದ ಅಕ್ಷರ್ ಪಟೇಲ್, ರವೀಂದ್ರ ಜಡೇಜ ಅವರ ಎಸೆತಗಳಲ್ಲಿ ಬ್ಯಾಟರ್‌ಗಳು ಮೂರು ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದರು. ಮೊದಲ ವಿಕೆಟ್ ಗಳಿಸುವ ಭಾರತದ ಬೌಲರ್‌ಗಳ ಪ್ರಯತ್ನ ನಿರಂತರವಾಗಿತ್ತು.

ಕ್ರೀಡಾಂಗಣದಲ್ಲಿ ಸೇರಿದ್ದ 36 ಸಾವಿರ ಪ್ರೇಕ್ಷಕರು ಕಾದಿದ್ದ ಕ್ಷಣ ಬಂದೇಬಿಟ್ಟಿತು. ಬೂಮ್ರಾ ಎಸೆತದ ವೇಗವನ್ನು ಅರಿಯುವಲ್ಲಿ ಎಡವಿದ ರಿಕೆಲ್ಟನ್ ಕ್ಲೀನ್‌ಬೌಲ್ಡ್ ಆದರು. ತಮ್ಮ ಇನ್ನೊಂದು ಓವರ್‌ನಲ್ಲಿ ಮರ್ಕರಂ ಅವರಿಗೂ ಪೆವಿಲಿಯನ್ ದಾರಿ ತೋರಿಸಿದರು. ಅವರ ಸ್ವಿಂಗ್ ಎಸೆತವನ್ನು ಕೆಣಕಿದ ಮರ್ಕರಂ (31 ರನ್) ಕೀಪರ್ ರಿಷಭ್ ಪಂತ್ ಡೈವ್ ಮಾಡಿ ಪಡೆದ ಕ್ಯಾಚ್‌ಗೆ ನಿರ್ಗಮಿಸಿದರು. ಈ ಎರಡು ವಿಕೆಟ್‌ಗಳ ಪತನವು ಭಾರತದ ಪಾಳೆಯದಲ್ಲಿ ಹುರುಪು ಮೂಡಿಸಿದವು. ಬೌಲರ್‌ಗಳ ಪಾರುಪತ್ಯ ಆರಂಭವಾಯಿತು.

ಸ್ಪಿನ್ನರ್ ಕುಲದೀಪ್ ಯಾದವ್ ಸ್ಪಿನ್ ಬಲೆಗೆ ಪ್ರವಾಸಿ ತಂಡದ ನಾಯಕ ತೆಂಬಾ ಬವುಮಾ ಬಿದ್ದರು. ಒಂದು ಕಡೆಯಿಂದ ಬೂಮ್ರಾ ಅವರ ಇನ್‌ಸ್ವಿಂಗಿಂಗ್ ಯಾರ್ಕರ್, ಲೆಂಗ್ತ್ ಎಸೆತಗಳು ಬೆಂಕಿಯುಂಡೆಗಳಂತೆ ಅಪ್ಪಳಿಸಿದವು. ಇನ್ನೊಂದೆಡೆ ಸಿರಾಜ್ ಅವರ ನಿಖರ ದಾಳಿ ರಂಗೇರಿತು. ಕುಲದೀಪ್ ಮತ್ತುಳಿದ ಸ್ಪಿನ್ನರ್‌ಗಳೂ ಪ್ರಭಾವಿಗಳಾದರು. ಇದರಿಂದಾಗಿ ದಕ್ಷಿಣ ಆಫ್ರಿಕಾ ಬ್ಯಾಟರ್‌ಗಳು ಸಾಧಾರಣ ಮೊತ್ತಕ್ಕೆ ಕುಸಿದರು.

ಅತಿಹೆಚ್ಚು 5 ವಿಕೆಟ್ ಗೊಂಚಲು ಪಡೆದ ಭಾರತೀಯರು

ಬೌಲರ್	ಪಂದ್ಯ	5 ವಿಕೆಟ್ ಸಾಧನೆ
ಆರ್.ಅಶ್ವಿನ್	106	37
ಅನಿಲ್ ಕುಂಬ್ಳೆ	132	35
ಹರ್ಭಜನ್ ಸಿಂಗ್	103	25
ಕಪಿಲ್ ದೇವ್	131	23
ಬೂಮ್ರಾ	51	16

ವಿಕೆಟ್ ಪಡೆದ ಜಸ್‌ಪ್ರೀತ್ ಬೂಮ್ರಾ ಅವರನ್ನು ಸಹ ಆಟಗಾರರು ಅಭಿನಂದಿಸಿದರು ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್

ದಕ್ಷಿಣ ಆಫ್ರಿಕಾ: 159 (55 ಓವರ್‌ಗಳಲ್ಲಿ)

ಮರ್ಕರಂ ಸಿ ಪಂತ್ ಬಿ ಬೂಮ್ರಾ 31 (48ಎ, 4x5, 6x1)
ರಿಕೆಲ್ಟನ್ ಬಿ ಬೂಮ್ರಾ 23 (22ಎ, 4x4)
ಮಲ್ದರ್ ಎಲ್‌ಬಿಡಬ್ಲ್ಯು ಕುಲದೀಪ್ 24 (51ಎ, 4x3)
ಬವುಮಾ ಸಿ ಜುರೇಲ್ ಬಿ ಕುಲದೀಪ್ 3 (11ಎ)
ಟೋನಿ ಎಲ್‌ಬಿಡಬ್ಲ್ಯು ಬಿ ಬೂಮ್ರಾ 24 (55ಎ, 4x1, 6x1)
ಟ್ರಿಸ್ಟನ್ ಔಟಾಗದೇ 15 (74ಎ, 4x1)
ವೆರೆಯಿನ್ ಎಲ್‌ಬಿಡಬ್ಲ್ಯು ಬಿ ಸಿರಾಜ್ 16 (36ಎ, 4x2)
ಯಾನ್ಸೆನ್ ಬಿ ಸಿರಾಜ್ 0 (3ಎ)
ಕಾರ್ಬಿನ್ ಎಲ್‌ಬಿಡಬ್ಲ್ಯು ಬಿ ಅಕ್ಷರ್ 3 (23ಎ)
ಸಿಮೊನ್ ಬಿ ಬೂಮ್ರಾ 5 (5ಎ, 4x1)
ಮಹಾರಾಜ್ ಎಲ್‌ಬಿಡಬ್ಲ್ಯು ಬಿ ಬೂಮ್ರಾ 0 (3ಎ)
ಇತರೆ: 15 (ಬೈ 8, ಲೆಗ್‌ಬೈ 4, ನೋಬಾಲ್ 1, ವೈಡ್ 2)
ವಿಕೆಟ್ ಪತನ: 1-57 (ರಿಯಾನ್ ರಿಕೆಲ್ಟನ್, 10.3), 2-62 (ಏಡನ್ ಮರ್ಕರಂ, 12.1), 3-71 (ತೆಂಬಾ ಬವುಮಾ, 15.6), 4-114 (ವಿಯಾನ್ ಮಲ್ದರ್, 29.5), 5-120 (ಟೋನಿ ಡಿ ಝೊರ್ಜಿ, 32.3), 6-146 (ಕೈಲ್ ವೆರೆಯಿನ್, 44.1), 7-147 (ಮಾರ್ಕೊ ಯಾನ್ಸೆನ್, 44.4), 8-154 (ಕಾರ್ಬಿನ್ ಬಾಷ್, 51.6), 9-159 (ಸಿಮೊನ್ ಹಾರ್ಮರ್, 54.3), 10-159 (ಕೇಶವ್ ಮಹಾರಾಜ್, 54.6)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 14–5–27–5, ಮೊಹಮ್ಮದ್ ಸಿರಾಜ್ 12–0–47–2, ಅಕ್ಷರ್ ಪಟೇಲ್ 6–2–21–1, ಕುಲದೀಪ್ ಯಾದವ್ 14–1–36–2, ರವೀಂದ್ರ ಜಡೇಜ 8–2–13–0, ವಾಷಿಂಗ್ಟನ್ ಸುಂದರ್ 1–0–3–0

ಭಾರತ: 1 ವಿಕೆಟ್‌ಗೆ 37 (20 ಓವರ್‌ಗಳಲ್ಲಿ)

ಜೈಸ್ವಾಲ್ ಬಿ ಯಾನ್ಸೆನ್ 12 (27ಎ, 4x3)
ರಾಹುಲ್ ಔಟಾಗದೇ 13 (59ಎ, 4x2)
ವಾಷಿಂಗ್ಟನ್ ಸುಂದರ್ ಔಟಾಗದೇ 6 (38ಎ)
ಇತರೆ: 6 (ಲೆಗ್‌ಬೈ 2, ನೋಬಾಲ್ 4)
ವಿಕೆಟ್ ಪತನ: 1–18 (ಯಶಸ್ವಿ ಜೈಸ್ವಾಲ್, 6.6)
ಬೌಲಿಂಗ್: ಮಾರ್ಕೊ ಯಾನ್ಸೆನ್ 6–2–11–1, ವಿಯಾನ್ ಮಲ್ದರ್ 5–1–15–0, ಕೇಶವ ಮಹಾರಾಜ್ 5–1–8–0, ಕಾರ್ಬಿನ್ ಬಾಷ್ 3–2–1–0, ಸಿಮೊನ್ ಹಾರ್ಮರ್ 1–1–0–0

ಚೆಸ್ ವಿಶ್ವಕಪ್: ಫೆಡರಿಕ್ ವಿರುದ್ಧ ಸಿಂಧರೋವ್‌ಗೆ ಗೆಲುವು

ಡ್ರಾ ಆಟಗಳಲ್ಲಿ ಹರಿಕೃಷ್ಣ, ಅರ್ಜುನ್

ಪಣಜಿ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಅರ್ಜುನ್ ಇರಿಗೇಶಿ ಅವರು ವಿಶ್ವಕಪ್ ಚೆಸ್ ಟೂರ್ನಿಯ ಐದನೇ ಸುತ್ತಿನ ಮೊದಲ ಕ್ಲಾಸಿಕಲ್ ಆಟದಲ್ಲಿ ಅಮೆರಿಕದ ಪ್ರಬಲ ಆಟಗಾರ ಲೆವೊನ್ ಅರೋನಿಯನ್ ಜೊತೆ ಡ್ರಾ ಮಾಡಿಕೊಂಡರು. ಕಣದಲ್ಲಿರುವ ಭಾರತದ ಇನ್ನೊಬ್ಬ ಆಟಗಾರ ಪೆಂಟಾಲ ಹರಿಕೃಷ್ಣ ಅವರೂ ಮೆಕ್ಸಿಕೊದ ಜೋಸ್ ಎಡ್ವರ್ಡೊ ಮಾರ್ಟಿನೆಝ್ ಜೊತೆ ಪಾಯಿಂಟ್ ಹಂಚಿಕೊಂಡರು.

ನಿರೀಕ್ಷೆ ಮೀರಿ ಐದನೇ ಸುತ್ತು ತಲುಪಿರುವ ಹರಿಕೃಷ್ಣ ಬಿಳಿ ಕಾಯಿಗಳಲ್ಲಿ ಆಡಿದ ಜೋಸ್ ಮಾರ್ಟಿನೆಝ್ ಎದುರು ಎಚ್ಚರಿಕೆಯ ಆಟಕ್ಕೆ ಆದ್ಯತೆ ನೀಡಿದರು. ಮೆಕ್ಸಿಕೊದ 26 ವರ್ಷ ವಯಸ್ಸಿನ ಆಟಗಾರ ಈ ಟೂರ್ನಿಯಲ್ಲಿ ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್, ಸರ್ಬಿಯಾದ ಅಲೆಕ್ಸಿ ಸರನ ಅವರನ್ನು ಹೊರದೂಡಿದ್ದರು. ಆದರೆ ಈ ಟೂರ್ನಿಯಲ್ಲಿ ಅಷ್ಟೇ ಉತ್ತಮವಾಗಿ ಆಡುತ್ತಿರುವ 39 ವರ್ಷ ವಯಸ್ಸಿನ ಹರಿಕೃಷ್ಣ ಅವರಿಗೆ ಡ್ರಾ ಮಾಡುವುದು ಕಷ್ಟವಾಗಲಿಲ್ಲ. ಪಂದ್ಯ 41 ನಡೆಗಳನ್ನು ಕಂಡಿತು.

ಇರಿಗೇಶಿ ಅವರು ಎರಡು ಬಾರಿಯ ವಿಶ್ವಕಪ್ ವಿಜೇತರಾದ ಅರೋನಿಯನ್ ಅವರ ಮೇಲೆ ಒತ್ತಡ ಹೇರಲು ಸಾಕಷ್ಟು ಪ್ರಯತ್ನ ಹಾಕಿದರು. ಆದರೆ ಅರ್ಮೇನಿಯಾ ಮೂಲದ ಅಮೆರಿಕದ ಆಟಗಾರ ಅಷ್ಟೇ ಜಾಗರೂಕತೆಯಿಂದ ಆಡಿದರು. ಕೊನೆಯಲ್ಲಿ ಅರ್ಜುನ್ ಬಳಿ ಒಂದು ಕಾಲಾಳು ಹೆಚ್ಚುವರಿಯಿದ್ದರೂ ಅದು ಉಪಯೋಗಕ್ಕೆ ಬರುವಂತಿರಲಿಲ್ಲ.

206 ಆಟಗಾರರಿದ್ದ ಈ ಟೂರ್ನಿಯಲ್ಲಿ ಈಗ 16 ಆಟಗಾರರು ಉಳಿದಿದ್ದು, ಅವರು ರಿಸ್ಕ್ ತೆಗೆದುಕೊಳ್ಳಲು ಬಯಸಲಿಲ್ಲ. ಎಂಟು ಆಟಗಳಲ್ಲಿ ಒಂದರಲ್ಲಷ್ಟೇ ಸೋಲು–ಗೆಲುವು ನಿರ್ಧಾರವಾಯಿತು. ಉಜ್ಬೇಕ್ ಆಟಗಾರ ಜಾವೊಖಿರ್ ಸಿಂಧರೋವ್ ಅವರು ಜರ್ಮನಿಯ ಫೆಡರಿಕ್ ಅವರನ್ನು ಸೋಲಿಸಿದರು.

ರಷ್ಯದ ಆಂಡ್ರಿ ಎಸಿಪೆಂಕೊ– ಅಲೆಕ್ಸಿ ಗ್ರೆಬ್ನೆವ್ ನಡುವಣ, ಜರ್ಮನಿಯ ಅಲೆಕ್ಸಾಂಡರ್ ಡೊನ್ಚೆಂಕೊ ಮತ್ತು ವಿಯೆಟ್ನಾಮಿನ ಲೀಮ್ ಲೆ ಕ್ವಾಂಗ್ ನಡುವಣ, ಅರ್ಮೇನಿಯಾದ ಗೇಬ್ರಿಯಲ್ ಸರ್ಗೆಸಿಯಾನ್– ಉಜ್ಬೇಕಿಸ್ತಾನದ ನದಿರ್ಬೆಕ್ ಯಾಕುಬೊಯೆವ್ ನಡುವಣ ಆಟಗಳೂ ಡ್ರಾ ಆದವು.

ಅಮೆರಿಕದ ಸ್ಯಾಮ್ ಶಂಕ್ಲಾಂಡ್ ಮತ್ತು ಡೇನಿಯಲ್ ದುಬೋವ್ (ರಷ್ಯಾ) ಸಹ ಆಟವನ್ನು ಡ್ರಾ ಮಾಡಿಕೊಂಡರು.

ಅರೋನಿಯನ್ (ಎಡ) ಜೊತೆ ಆಡಿದ ಅರ್ಜುನ್ ಇರಿಗೇಶಿ ಫಿಡೆ ವೆಬ್‌ಸೈಟ್ ಚಿತ್ರ

ಆಟಗಾರರ ತಾಲೀಮು

ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಹುಬ್ಬಳ್ಳಿಯ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಕರ್ನಾಟಕ ಹಾಗೂ ಚಂಡೀಗಢ ತಂಡಗಳ ನಡುವೆ ಭಾನುವಾರ ರಣಜಿ ಪಂದ್ಯ ಆರಂಭವಾಗಲಿದ್ದು, ಕರ್ನಾಟಕ ತಂಡದ ಆಟಗಾರರು ಶುಕ್ರವಾರ ಅಭ್ಯಾಸ ನಡೆಸಿದರು.

ಶರವೇಗದ ಶತಕ 'ವೈಭವ'

ದೋಹಾ (ಪಿಟಿಐ): ಹದಿನಾಲ್ಕು ವರ್ಷದ ವೈಭವ್ ಸೂರ್ಯವಂಶಿ 32 ಎಸೆತಗಳಲ್ಲಿ ಶತಕ ಗಳಿಸಿದರು. ಆ ಮೂಲಕ ಟಿ20 ಕ್ರಿಕೆಟ್‌ನಲ್ಲಿ ಅತಿವೇಗದ ಶತಕ ಹೊಡೆದ ಎರಡನೇ ಭಾರತೀಯ ಬ್ಯಾಟರ್ ಆದರು.

ಇಲ್ಲಿ ನಡೆಯುತ್ತಿರುವ ಏಷ್ಯಾ ಕಪ್ ರೈಸಿಂಗ್ ಸ್ಟಾರ್ಸ್ ಕ್ರಿಕೆಟ್ ಟೂರ್ನಿಯಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ವೈಭವ್ ಸ್ಫೋಟಕ ಶೈಲಿಯ ಬ್ಯಾಟಿಂಗ್‌ನಿಂದ ಭಾರತ ಎ ತಂಡವು 148 ರನ್‌ಗಳಿಂದ ಯುನೈಟೆಡ್ ಅರಬ್ ಎಮಿರೇಟ್ಸ್ ಎ ತಂಡದ ಎದುರು ಗೆದ್ದಿತು.

ವೈಭವ್ 15 ಸಿಕ್ಸರ್ ಮತ್ತು 11 ಬೌಂಡರಿಗಳನ್ನು ಗಳಿಸಿದರು. ಒಟ್ಟು 42 ಎಸೆತಗಳಲ್ಲಿ 144 ರನ್ ಹೊಡೆದರು.

2018ರಲ್ಲಿ ರಿಷಭ್ ಪಂತ್ ಅವರು ದೆಹಲಿ ತಂಡದ ಪರ ಹಿಮಾಚಲ ಪ್ರದೇಶ ಎದುರು 32 ಎಸೆತಗಳಲ್ಲಿ ಶತಕ ಬಾರಿಸಿದ್ದರು. ಈ ದಾಖಲೆಯನ್ನು ವೈಭವ್ ಅವರು ಸರಿಗಟ್ಟಿದ್ದಾರೆ. ಟಿ20 ಮಾದರಿಯಲ್ಲಿ ಶರವೇಗದ ಶತಕ ಹೊಡೆದವರ ಪಟ್ಟಿಯಲ್ಲಿ ಅಭಿಷೇಕ್ ಶರ್ಮಾ ಮತ್ತು ಗುಜರಾತ್‌ನ ಊರ್ವಿಲ್ ಪಟೇಲ್ ಜಂಟಿ ಅಗ್ರಸ್ಥಾನದಲ್ಲಿದ್ದಾರೆ. ಅವರು 28 ಎಸೆತಗಳಲ್ಲಿ ಶತಕ ದಾಖಲಿಸಿದ್ದಾರೆ.

ತಂಡದ ನಾಯಕ ಜಿತೇಶ್ ಶರ್ಮಾ ಅವರು 32 ಎಸೆತಗಳಲ್ಲಿ 83 ರನ್ ಗಳಿಸಿದರು. 8 ಬೌಂಡರಿ ಮತ್ತು 6 ಸಿಕ್ಸರ್ ಅದರಲ್ಲಿ ಸೇರಿದ್ದವು. ಅವರ ಆಟದ ಬಲದಿಂದ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 297 ರನ್ ಗಳಿಸಿತು. ಅದಕ್ಕುತ್ತರವಾಗಿ ಯುಎಇ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 149 ರನ್ ಗಳಿಸಿ ಶರಣಾಯಿತು.

ಸಂಕ್ಷಿಪ್ತ ಸ್ಕೋರು: ಭಾರತ ಎ: 20 ಓವರ್‌ಗಳಲ್ಲಿ 4ಕ್ಕೆ297 (ವೈಭವ್ ಸೂರ್ಯವಂಶಿ 144, ನಮನ್ ಧೀರ್ 34, ಜಿತೇಶ್ ಶರ್ಮಾ ಔಟಾಗದೇ 83, ಮೊಹಮ್ಮದ್ ಫರಾಜುದ್ದೀನ್ 64ಕ್ಕೆ1, ಅಯಾನ್ ಖಾನ್ 42ಕ್ಕೆ1, ಮೊಹಮ್ಮದ್ ಅರ್ಫಾನ್ 57ಕ್ಕೆ1) ಯುಎಇ: 20 ಓವರ್‌ಗಳಲ್ಲಿ 7ಕ್ಕೆ149 (ಶೋಯಬ್ ಖಾನ್ 63, ಸೈಯದ್ ಹೈದರ್ 20, ಮೊಹಮ್ಮದ್ ಅರ್ಫಾನ್ 26, ಗುರ್ಜನ್‌ಪ್ರೀತ್ ಸಿಂಗ್ 18ಕ್ಕೆ3, ಹರ್ಷ ದುಬೆ 12ಕ್ಕೆ2) ಫಲಿತಾಂಶ: ಭಾರತ ಎ ತಂಡಕ್ಕೆ 148 ರನ್ ಜಯ. ಪಂದ್ಯದ ಆಟಗಾರ: ವೈಭವ್ ಸೂರ್ಯವಂಶಿ

ವೈಭವ್ ಸೂರ್ಯವಂಶಿ

ಭಾರತ ತಂಡಕ್ಕೆ ರೋಹಿತ್ ಸಾರಥ್ಯ

ನವದೆಹಲಿ (ಪಿಟಿಐ): ಡ್ರ್ಯಾಗ್‌ಫ್ಲಿಕರ್ ರೋಹಿತ್ ಅವರು ಇದೇ 28ರಿಂದ ಡಿಸೆಂಬರ್ 10ರವರೆಗೆ ತಮಿಳುನಾಡಿನಲ್ಲಿ ನಡೆಯಲಿರುವ ಎಫ್‌ಐಎಚ್ ವಿಶ್ವಕಪ್ ಟೂರ್ನಿಯಲ್ಲಿ ಭಾರತ ಜೂನಿಯರ್ ಪುರುಷರ ತಂಡವನ್ನು ಮುನ್ನಡೆಸಲಿದ್ದಾರೆ.

ಟೂರ್ನಿಗಾಗಿ ಹಾಕಿ ಇಂಡಿಯಾ ಶುಕ್ರವಾರ 18 ಸದಸ್ಯರ ತಂಡವನ್ನು ಪ್ರಕಟಿಸಿದೆ. ಭಾರತ ತಂಡದ ಮಾಜಿ ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್ ಮಾರ್ಗದರ್ಶನದ ಆತಿಥೇಯ ತಂಡವು ಬಿ ಗುಂಪಿನಲ್ಲಿ ಸ್ಥಾನ ಪಡೆದಿದೆ.

ಚಿಲಿ, ಸ್ವಿಟ್ಜರ್ಲೆಂಡ್ ಮತ್ತು ಒಮಾನ್ ತಂಡಗಳು ಇದೇ ಗುಂಪಿನಲ್ಲಿವೆ. ಪಾಕಿಸ್ತಾನಕ್ಕೆ ಬದಲಿಯಾಗಿ ಒಮಾನ್ ತಂಡ ಅವಕಾಶ ಪಡೆದಿದೆ.

'ವಿಶ್ವಕಪ್ ಪೂರ್ವಸಿದ್ಧತಾ ಹಂತದಲ್ಲಿ ಅಂತರರಾಷ್ಟ್ರೀಯ ಪಂದ್ಯಗಳ ಅನುಭವ ಹೊಂದಿದ್ದರೂ, ಬೆಂಗಳೂರಿನ ಸಾಯ್ ಕ್ಯಾಂಪಸ್‌ನಲ್ಲಿ ಸೀನಿಯರ್ ರಾಷ್ಟ್ರೀಯ ತಂಡದೊಂದಿಗೆ ಸಾಕಷ್ಟು ಪಂದ್ಯಗಳನ್ನು ಆಡಿ ಜೂನಿಯರ್ ತಂಡವನ್ನು ಸಜ್ಜುಗೊಳಿಸಿದ್ದೇವೆ' ಎಂದು ಶ್ರೀಜೇಶ್ ಹೇಳಿದ್ದಾರೆ.

ತಂಡ ಹೀಗಿದೆ: ಗೋಲ್‌ಕೀಪರ್‌ಗಳು: ಬಿಕ್ರಮ್‌ಜಿತ್ ಸಿಂಗ್, ಪ್ರಿನ್ಸ್‌ದೀಪ್ ಸಿಂಗ್.ಡಿಫೆಂಡರ್‌ಗಳು: ರೋಹಿತ್, ಅಮೀರ್ ಅಲಿ, ಅನ್ಮೋಲ್ ಎಕ್ಕಾ, ತಲೇಂ ಪ್ರಿಯೋಬರ್ತಾ, ಸುನಿಲ್ ಪಾಲಾಕ್ಷಪ್ಪ ಬೆನ್ನೂರು, ಶಾರದಾನಂದ್ ತಿವಾರಿ.

ಮಿಡ್‌ಫೀಲ್ಡರ್‌ಗಳು: ಅಂಕಿತ್ ಪಾಲ್, ಅದ್ರೋಹಿತ್ ಎಕ್ಕಾ, ತೌನೋಜಮ್ ಲುವಾಂಗ್, ಮನ್‌ಮೀತ್ ಸಿಂಗ್, ರೋಸನ್ ಕುಜೂರ್, ಗುರ್‌ಜೋತ್ ಸಿಂಗ್.

ಫಾರ್ವರ್ಡ್‌ಗಳು: ಸೌರಭ್ ಆನಂದ್ ಕುಶ್ವಾಹ, ಅರ್ಷ್‌ದೀಪ್ ಸಿಂಗ್, ಅಜಿತ್ ಯಾದವ್, ದಿಲ್‌ರಾಜ್ ಸಿಂಗ್.

ವಿಶ್ವ ಶೂಟಿಂಗ್: ಇಶಾಗೆ ಕಂಚಿನ ಪದಕ

ಕೈರೊ (ಪಿಟಿಐ): ಭಾರತದ ಅನುಭವಿ ಶೂಟರ್ ಇಶಾ ಸಿಂಗ್ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವ ಚಾಂಪಿಯನ್‌ಷಿಪ್‌ನ ಮಹಿಳೆಯರ 25 ಮೀ. ಸ್ಪೋರ್ಟ್ ಪಿಸ್ತೂಲ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದರು. ಆದರೆ, ಒಲಿಂಪಿಕ್ಸ್ ಅವಳಿ ಪದಕ ವಿಜೇತೆ ಮನು ಭಾಕರ್ ನಿರಾಸೆ ಮೂಡಿಸಿದರು.

26 ವರ್ಷದ ಇಶಾ ಅವರಿಗೆ ಇದು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ವೈಯಕ್ತಿಕ ಪದಕವಾಗಿದೆ. ಶುಕ್ರವಾರ ಫೈನಲ್ ಸ್ಪರ್ಧೆಯಲ್ಲಿ 30 ಅಂಕಗಳೊಂದಿಗೆ ಇಶಾ ಮೂರನೇ ಸ್ಥಾನ ಗಳಿಸಿದರು. ಹಾಲಿ ಒಲಿಂಪಿಕ್ ಚಾಂಪಿಯನ್, ಕೊರಿಯಾದ ಯಾಂಗ್ ಜಿಯಿನ್ (40 ಅಂಕ) ಚಿನ್ನದ ಸಾಧನೆ ಮಾಡಿದರೆ, ಚೀನಾದ ಯಾವೊ ಕಿಯಾನ್ಕ್ಸನ್ (38) ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ಮನು ಐದನೇ ಸ್ಥಾನದೊಂದಿಗೆ ಅಭಿಯಾನ ಮುಗಿಸಿದರು.

ಮೂರು ಚಿನ್ನ, ಐದು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕ ಗೆದ್ದ ಭಾರತ ಪದಕ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ.

ಜೂನಿಯರ್ ವಾಟರ್ ಪೋಲೊ ಇಂದಿನಿಂದ

ಬೆಂಗಳೂರು: ಕರ್ನಾಟಕ ಈಜು ಸಂಸ್ಥೆಯು 'ಎನ್‌ಆರ್‌ಜೆ ರಾಜ್ಯ ಜೂನಿಯರ್ ವಾಟರ್ ಪೋಲೊ ಚಾಂಪಿಯನ್‌ಷಿಪ್' ಅನ್ನು ಶನಿವಾರ ಮತ್ತು ಭಾನುವಾರ (ನ. 14& 15) ಮೈಸೂರಿನಲ್ಲಿ ಆಯೋಜಿಸುತ್ತಿದೆ.

ಮೈಸೂರು ವಿಶ್ವವಿದ್ಯಾಲಯದ ಆವರಣದಲ್ಲಿನ ಈಜುಕೊಳದಲ್ಲಿ ಸ್ಪರ್ಧೆಗಳು ನಡೆಯಲಿದ್ದು, ರಾಜ್ಯದ ವಿವಿಧ ಕ್ಲಬ್‌ಗಳ 9 ತಂಡಗಳು ಭಾಗವಹಿಸಲಿವೆ.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಕ್ಯೂಪಿಎಲ್ ಆಟಗಾರ್ತಿಯರು ಶುಕ್ರವಾರ ನಿಧನರಾದ ಸಾಲುಮರದ ತಿಮ್ಮಕ್ಕ ಅವರಿಗೆ ಮೌನಾಚರಣೆ ಮೂಲಕ ಸಂತಾಪ ಸೂಚಿಸಿದರು

ಕ್ಯೂಪಿಎಲ್: ಕ್ರೀಡೋತ್ಸವಕ್ಕೆ ಇಂದು ತೆರೆ

ವೃಕ್ಷಮಾತೆಗೆ 'ಕ್ವೀನ್ಸ್' ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಕ್ರವಾರ ನಿಧನರಾದ 'ವೃಕ್ಷಮಾತೆ', ಪದ್ಮಶ್ರೀ ಪುರಸ್ಕೃತ ಸಾಲುಮರದ ತಿಮ್ಮಕ್ಕ ಅವರಿಗೆ ಕ್ವೀನ್ಸ್ ಪ್ರೀಮಿಯರ್ ಲೀಗ್ (ಕ್ಯೂಪಿಎಲ್) ಕ್ರೀಡೋತ್ಸವದಲ್ಲಿ ಗೌರವ ನಮನ ಸಲ್ಲಿಸಲಾಯಿತು.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಸ್ಪರ್ಧೆಗಳ ನಡುವೆ ಆಟಗಾರ್ತಿಯರು ಮೌನಾಚರಣೆ ನಡೆಸಿ ಸಂತಾಪ ಸೂಚಿಸಿದರು. ಜೊತೆಗೆ, ತಿಮ್ಮಕ್ಕ ಅವರ ಸ್ಮರಣಾರ್ಥವಾಗಿ ಕ್ರೀಡಾಂಗಣದ ಆವರಣದಲ್ಲಿ ಸಸಿಗಳನ್ನು ನೆಡಲಾಯಿತು.

ನಟರಾದ ಉಗ್ರಂ ಮಂಜು, ಮನೋಜ್ ರವಿಚಂದ್ರನ್ ಹಾಗೂ ಚಲನಚಿತ್ರ ನಿರ್ಮಾಪಕ ಸಂತೋಷ್ ಕುಮಾರ್ ಕೆ.ಸಿ. ಅವರು ಐದನೇ ದಿನವಾದ ಶುಕ್ರವಾರ ವಿಶೇಷ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಲಗೋರಿ, ಕ್ರಿಕೆಟ್, ಚೆಸ್, ಲೂಡೊ, ಕೇರಂ ಹಾಗೂ ಹಗ್ಗ ಜಗ್ಗಾಟ ಸ್ಪರ್ಧೆಯ ಅರ್ಹತಾ ಸುತ್ತಿನ ಪಂದ್ಯಗಳು ಮುಕ್ತಾಯಗೊಂಡಿದ್ದು, ಶನಿವಾರ ಫೈನಲ್ ಪಂದ್ಯಗಳು ನಡೆಯಲಿವೆ. ಸ್ಟಾರ್ ನಾಯಕಿಯರ ತಂಡಗಳು ಪ್ರಶಸ್ತಿಗಾಗಿ ಕಠಿಣ ಪೈಪೋಟಿ ಒಡ್ಡಲು ಸಿದ್ಧವಾಗಿವೆ.

ಟೂರ್ನಿಯ ಪ್ರಚಾರ ರಾಯಭಾರಿ, ನಟಿ ರಮ್ಯಾ ಅವರು ಸಮಾರೋಪ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಪಂದ್ಯ ವೀಕ್ಷಣೆಗೆ ಅಭಿಮಾನಿಗಳು ಅಪಾರ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಸೆಮಿಗೆ ಲಕ್ಷ್ಯ ಸೇನ್

ಕುಮಾಮೊಟೊ, ಜಪಾನ್ (ಪಿಟಿಐ): ಭಾರತದ ಅಗ್ರಕ್ರಮಾಂಕದ ಆಟಗಾರ ಲಕ್ಷ್ಯ ಸೇನ್ ಅವರು ಜಪಾನ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದರು.

ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಲಕ್ಷ್ಯ ಅವರು 21–13, 21–17ರಿಂದ ಮಾಜಿ ವಿಶ್ವ ಚಾಂಪಿಯನ್, ಸಿಂಗಪುರದ ಲೊಹ್ ಕೀನ್ ಯೆವ್ ಅವರಿಗೆ ಆಘಾತ ನೀಡಿದರು.

ಲಕ್ಷ್ಯ ಅವರು ಯೆವ್ ಅವರನ್ನು ಈವರೆಗೆ 10 ಸಲ ಎದುರಿಸಿದ್ದಾರೆ. ಅದರಲ್ಲಿ 7 ಬಾರಿ ಗೆದ್ದಿದ್ದಾರೆ. ನಾಲ್ಕರ ಘಟ್ಟದಲ್ಲಿ ಲಕ್ಷ್ಯ ಅವರು ವಿಶ್ವ ಕ್ರಮಾಂಕದಲ್ಲಿ 13ನೇ ಸ್ಥಾನದಲ್ಲಿರುವ ಜಪಾನಿನ ಕೆಂಟಾ ನಿಶಿಮೊಟೊ ವಿರುದ್ಧ ಆಡಲಿದ್ದಾರೆ.

ಅಮನ್, ನೇಹಾ ಮೇಲಿನ ಅಮಾನತು ಹಿಂಪಡೆದ ಭಾರತ ಕುಸ್ತಿ ಫೆಡರೇಷನ್

ನವದೆಹಲಿ (ಪಿಟಿಐ): ಝಾಗ್ರೆಬ್ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ತಮ್ಮ ತೂಕ ಕಾಪಾಡಿಕೊಳ್ಳಲು ವಿಫಲರಾಗಿದ್ದ ಅಮನ್ ಸೆಹ್ರಾವತ್ ಮೇಲೆ ವಿಧಿಸಿದ್ದ ಅಮಾನತು ಕ್ರಮವನ್ನು ಭಾರತ ಕುಸ್ತಿ ಫೆಡರೇಷನ್ ಶುಕ್ರವಾರ ಹಿಂಪಡೆದಿದೆ.

ಸೆಪ್ಟೆಂಬರ್‌ನಲ್ಲಿ ನಡೆದ ಈ ಚಾಂಪಿಯನ್‌ಷಿಪ್‌ನ 57 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿದ್ದ ಅಮನ್ ಅವರು ಸ್ಪರ್ಧೆಯ ದಿನ 1.7 ಕೆ.ಜಿ. ಹೆಚ್ಚು ತೂಗಿದ್ದರು. ಇದರಿಂದ ತಂಡ ಮುಜುಗರ ಅನುಭವಿಸಬೇಕಾಯಿತು. ಹೀಗಾಗಿ, ಸೆ. 23 ರಿಂದ ಆರಂಭವಾಗುವಂತೆ ಒಂದು ವರ್ಷದ ಅಮಾನತು ವಿಧಿಸಲಾಗಿತ್ತು.

20 ವರ್ಷದೊಳಗಿನವರ ವಿಶ್ವಚಾಂಪಿಯನ್‌ಷಿಪ್‌ನಲ್ಲಿ 600 ಗ್ರಾಂ ತೂಕ ಹೆಚ್ಚು ಇದ್ದ ಕಾರಣ ಅನರ್ಹಗೊಂಡಿದ್ದ ಮಹಿಳಾ ಕುಸ್ತಿಪಟು ನೇಹಾ ಸಂಗ್ವಾನ್ ಅವರ ಮೇಲಿನ ಅಮಾನತನ್ನೂ ಡಬ್ಲ್ಯುಎಫ್‌ಐ ಹಿಂಪಡೆದಿದೆ. ಹೀಗಾಗಿ, ಈ ಇಬ್ಬರೂ ಕುಸ್ತಿಪಟುಗಳು ಮುಂಬರುವ ಪ್ರೊ ಕುಸ್ತಿ ಲೀಗ್‌ನ ಹರಾಜಿನಲ್ಲಿ ಪಾಲ್ಗೊಳ್ಳಲು ಅವಕಾಶ ಸಿಕ್ಕಂತಾಗಿದೆ.

ಪ್ರಜಾವಾಣಿ
ದೀಪಾವಳಿ ವಿಶೇಷಾಂಕ 2025
ಮಾರುಕಟ್ಟೆಯಲ್ಲಿ ಲಭ್ಯ ₹60
ಯುದ್ಧ...ಮಾಸದ ಗಾಯ
ವಿಷಯ ಪರಿಣತರ ಒಳನೋಟವುಳ್ಳ ಲೇಖನಗಳು
ಬಹುಮಾನಿತ ಕಥೆ ಮತ್ತು ಕವಿತೆಗಳ ಓದಿನ ಖುಷಿ
ಸಿನಿಮಾ ರೀಲ್ಸ್ ಲೋಕದಲ್ಲಿ ವಿಹಾರ
ವೈವಿಧ್ಯಮಯ ಲೇಖನಗಳ ಗುಚ್ಛ

▸ ವರ್ಷ ಭವಿಷ್ಯದ ಮುನ್ನೋಟ
▸ ಬಿಡುವಿನ ಓದಿಗಾಗಿ ಮತ್ತಷ್ಟು ಬರಹಗಳು
ಪ್ರತಿಗಳಿಗಾಗಿ ಸಂಪರ್ಕಿಸಿ
•ಬೆಂಗಳೂರು : 45557199/219 •ಮೈಸೂರು : 2420532/129 •ಹುಬ್ಬಳ್ಳಿ: 2372081/516
•ಮಂಗಳೂರು : 2215852/2218334 •ಕಲಬುರಗಿ : 255539/221808 •ದಾವಣಗೆರೆ : 230846/255048
•ಕರ್ನಾಟಕ: 9008366666

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

Jr. EXECUTIVE - CIRCULATION

Work Location : Across Karnataka
Experience : 4+ years of experience in sales and possess excellent interpersonal skills.
Skills : Sales or Circulation of newspapers.
Qualification : Minimum PUC/12th
Job Purpose :
- Achieve circulation target, promote and monitor publication in the assigned region.
- Formulate and implement various market strategies.
- Distributes and explains circulation instructions and changes to distributors and dealers.
- Managing escalations.
- Early morning reporting on field is mandatory.
- Two-wheeler is mandatory.

Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

MANAGER - CIRCULATION

Work Location : Across Karnataka
No. Of Position : 4
Experience : 8+ years of experience in sales and possess excellent interpersonal skills.
Skills : Sales or Circulation of newspapers.
Qualification : Any Graduate
Job Purpose :
- Achieve circulation target, promote and monitor publication in the assigned region.
- Formulate and implement various market strategies.
- Distributes and explains circulation instructions and changes to distributors and dealers and investigates and adjusts dealer complaints.
- Early morning reporting on field is mandatory.
- Two-wheeler is mandatory.

Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

ಸ್ಲೊವೇನಿಯಾಕ್ಕೆ ಮಣಿದ ನೆದರ್ಲೆಂಡ್ಸ್

ಜೀನ್ ಕಿಂಗ್ ಕಪ್ 'ಜಿ' ಗುಂಪಿನ ಪ್ಲೇ ಆಫ್ ಪಂದ್ಯದಲ್ಲಿ 2–1 ಗೆಲುವು

ಸ್ಲೊವೇನಿಯಾದ ಕಾಯಾ ಯುವಾನ್ ಅವರ ಆಟದ ವೈಖರಿ ಚಿತ್ರ: ವಿ. ಪುಷ್ಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಾರಾ ಝಿದಾನ್ಸೆಕ್ ಮತ್ತು ಕಾಯಾ ಯುವಾನ್ ಅವರು ಸಿಂಗಲ್ಸ್ ಹಣಾಹಣಿಗಳಲ್ಲಿ ಪಡೆದ ಗೆಲುವುಗಳ ನೆರವಿನಿಂದ ಸ್ಲೊವೇನಿಯಾ ತಂಡ, ಶುಕ್ರವಾರ ಆರಂಭವಾದ ಜೀನ್ ಕಿಂಗ್ ಕಪ್ 'ಜಿ' ಗುಂಪಿನ ಪ್ಲೇ ಆಫ್ ಮೊದಲ ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡವನ್ನು 2–1 ರಿಂದ ಸೋಲಿಸಿತು.

ಕಬ್ಬನ್ ಪಾರ್ಕ್‌ನ ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆದ ಮೊದಲ ಸಿಂಗಲ್ಸ್‌ನಲ್ಲಿ, 2021ರ ಫ್ರೆಂಚ್ ಓಪನ್ ಸೆಮಿಫೈನಲಿಸ್ಟ್ ತಮಾರಾ ಝಿದಾನ್ಸೆಕ್ 6–1, 7–6 (8/6) ರಿಂದ ಡಚ್ ಆಟಗಾರ್ತಿ ಅರಂಟ್ಸ್ಕಾ ರೂಸ್ ಅವರನ್ನು ಸೋಲಿಸಿದರು.

ಹೊನಲು ಬೆಳಕಿನಡಿ ನಡೆದ ಎರಡನೇ ಸಿಂಗಲ್ಸ್‌ನಲ್ಲಿ, 98ನೇ ಕ್ರಮಾಂಕದ ಆಟಗಾರ್ತಿ ಕಾಯಾ ಯುವಾನ್ 7–6 (5), 4–6, 6–3 ರಿಂದ ವಿಶ್ವ ಕ್ರಮಾಂಕದಲ್ಲಿ 87ನೇ ಸ್ಥಾನದಲ್ಲಿರುವ ಸುಝಾನ್ ಲಮೆನ್ಸ್ ಅವರನ್ನು ಸೋಲಿಸಿ ತಂಡಕ್ಕೆ ಗೆಲುವಿನ ಮುನ್ನಡೆ ಒದಗಿಸಿದರು. 2 ಗಂಟೆ 34 ನಿಮಿಷ ನಡೆದ ಪಂದ್ಯ ಪ್ರೇಕ್ಷಕರನ್ನು ರಂಜಿಸಿತು.

ಮಹತ್ವ ಕಳೆದುಕೊಂಡ ಡಬಲ್ಸ್ ಪಂದ್ಯದಲ್ಲಿ ದಲೀಲಾ ಜಕೊಪೊವಿಕ್– ನಿಕಾ ರಾಡಿಸಿಕ್ ಜೋಡಿ 4–6, 0–6 ಅಂತರದಲ್ಲಿ ನೆದರ್ಲೆಂಡ್ಸ್‌ನ ಲಮೆನ್ಸ್ ಮತ್ತು ಡೆಮಿ ಶುರ್ಸ್‌ ಅವರಿಗೆ ಮಣಿಯಿತು.

26 ವರ್ಷ ವಯಸ್ಸಿನ ಲಮೆನ್ಸ್– ಕಾಯಾ ನಡುವಣ ಪಂದ್ಯ ದಿನದ ಆಕರ್ಷಣೆಯಾಯಿತು. ಮೊದಲ ಸೆಟ್‌ನ ಒಂದು ಹಂತದಲ್ಲಿ 5–2 ಮುನ್ನಡೆ ಪಡೆದಿದ್ದ ಲಮೆನ್ಸ್ ಸೆಟ್ ಗೆಲ್ಲುವಂತೆ ಕಂಡಿದ್ದರು. ಆದರೆ ನಂತರ ಅವರು ಸ್ವಯಂಕೃತ ತಪ್ಪುಗಳನ್ನು ಎಸಗಿದರು. 9ನೇ ಗೇಮ್‌ನಲ್ಲಂತೂ ಅವರು ಮೂರು ಸತತ ಡಬಲ್ ಫಾಲ್ಟ್‌ಗಳನ್ನು ಎಸಗಿದ್ದರಿಂದ ಕಾಯಾ ಯುವಾನ್ ಬ್ರೇಕ್ ಪಡೆದು ಹಿನ್ನಡೆಯನ್ನು 4–5ಕ್ಕೆ ಇಳಿಸಿದರು. ಪೈಪೋಟಿಯಿಂದ ಕೂಡಿದ್ದ ಟೈಬ್ರೇಕರ್‌ನಲ್ಲೂ ಡಚ್ ಆಟಗಾರ್ತಿ ನಿರ್ಣಾಯಕ ವೇಳೆ ಮತ್ತೆ ಎರಡು ಡಬಲ್ ಫಾಲ್ಟ್ ಮಾಡಿದರು.

ಆದರೆ ಡಚ್ ಆಟಗಾರ್ತಿ ಎರಡನೇ ಸೆಟ್‌ನಲ್ಲಿ ಗೆದ್ದು ಪಂದ್ಯವನ್ನು ನಿರ್ಣಾಯಕ ಸೆಟ್‌ಗೆ ವಿಸ್ತರಿಸಿದರು. ಇದರಲ್ಲಿ ಕಾಯಾ ಯುವಾನ್ ಅವರು ಲಮೆನ್ಸ್ ಅವರ ತಪ್ಪುಗಳ ಲಾಭ ಪಡೆದರು. ದೀರ್ಘ ರ್‍ಯಾಲಿಗಳನ್ನು ಆಡಿ ಎದುರಾಳಿ ತಪ್ಪು ಮಾಡಲು ಪ್ರೇರೇಪಿಸಿದರು. 6–3 ರಲ್ಲಿ ಸೆಟ್ ಹಾಗೂ ಆ ಮೂಲಕ ಪಂದ್ಯ ಗೆದ್ದು ಸ್ಲೊವೇನಿಯಾಕ್ಕೆ 2–0 ಗೆಲುವಿನ ಮುನ್ನಡೆ ನೀಡಿದರು.

ಭಾರತಕ್ಕೆ 'ಮಾಡು–ಮಡಿ ಪಂದ್ಯ'

ಭಾರತ ತಂಡ ಶನಿವಾರ ನಡೆಯುವ ಪಂದ್ಯದಲ್ಲಿ ಸ್ಲೊವೇನಿಯಾ ತಂಡವನ್ನು ಎದುರಿಸಲಿದೆ. ಸ್ಲೊವೇನಿಯಾ ಮೊದಲ ಹಣಾಹಣಿ ಗೆದ್ದಿರುವ ಕಾರಣ, ಭಾರತ ತಂಡಕ್ಕೆ ತನ್ನ ಮೊದಲ ಪಂದ್ಯ ಮಾಡು– ಮಡಿ ಪಂದ್ಯವಾಗಿದೆ. ಒಂದೊಮ್ಮೆ ಭಾರತ ಗೆಲ್ಲದೇ ಹೋದಲ್ಲಿ, ಭಾನುವಾರ ನಡೆಯಲಿರುವ ಭಾರತ–ನೆದರ್ಲೆಂಡ್ಸ್ ಅಂತಿಮ ಪಂದ್ಯವು ಮಹತ್ವ ಕಳೆದುಕೊಳ್ಳಲಿದೆ.

ಇಶಾ ಕರ್ನಾಟಕದ ಮೊದಲ ಮಹಿಳಾ ಗ್ರ್ಯಾಂಡ್‌ಮಾಸ್ಟರ್

ಪ್ರಜಾವಾಣಿ ವಾರ್ತೆ

ಮಹಿಳಾ ಗ್ರ್ಯಾಂಡ್ ಮಾಸ್ಟರ್ ಇಶಾ ಶರ್ಮಾ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿಯ ಇಶಾ ಶರ್ಮಾ ಅವರು ಕರ್ನಾಟಕದ ಮೊದಲ ಮಹಿಳಾ ಗ್ರ್ಯಾಂಡ್‌ಮಾಸ್ಟರ್ ಎಂಬ ಗೌರವಕ್ಕೆ ಪಾತ್ರರಾದರು. ಸರ್ಬಿಯಾದ ಸುಬೊಟಿಕಾದಲ್ಲಿ ನಡೆದ ಐಎಂ ಸರ್ಕಿಟ್ ಟೂರ್ನಿಯಲ್ಲಿ ಅವರು ಶುಕ್ರವಾರ ಮೂರನೇ ಡಬ್ಲ್ಯುಜಿಎಂ ನಾರ್ಮ್ ಪಡೆದು ಅಗತ್ಯವಿದ್ದ ಅರ್ಹತೆ ಪೂರೈಸಿದರು.

ಡಬ್ಲ್ಯುಜಿಎಂ 'ಟೈಟಲ್' ಪಡೆಯಲು ಆಟಗಾರ್ತಿಯೊಬ್ಬರು ಮೂರು ನಾರ್ಮ್‌ಗಳ ಜೊತೆ 2300 ಫಿಡೆ ರೇಟಿಂಗ್ ಗಳಿಸಬೇಕಾಗುತ್ತದೆ. ಅವರು 2022ರ ಆಗಸ್ಟ್‌ನಲ್ಲೇ ಈ ರೇಟಿಂಗ್ ಪೂರೈಸಿದ್ದರು.

2022ರಲ್ಲಿ ಸ್ಲೊವಾಕಿಯಾದಲ್ಲಿ ಅವರು ಮೊದಲ ನಾರ್ಮ್ ಪಡೆದಿದ್ದರು. ಮರುವರ್ಷ ಮೊರಾಕೊದಲ್ಲಿ ಎರಡನೇ ಡಬ್ಲ್ಯುಜಿಎಂ ನಾರ್ಮ್‌ ಗಳಿಸಿದ್ದರು.

2019ರಲ್ಲಿ ಅವರು ಮಹಿಳಾ ಐಎಂ (ಡಬ್ಲ್ಯುಐಎಂ) ಆಗಿದ್ದರು. ಈ ಸಾಧನೆಗೆ ಪಾತ್ರರಾಗಿದ್ದ ರಾಜ್ಯದ ಮೊದಲಿಗರಾಗಿದ್ದರು.

'ಇದಕ್ಕಾಗಿ ಐದು ವರ್ಷಗಳಿಂದ ಶ್ರಮ ಹಾಕಿದ್ದೆ. ಈಗ ಸಾಕಾರಗೊಂಡಿರುವುದು ಸಂತಸಕ್ಕಿಂತ ನಿರಾಳತೆ ನೀಡಿದೆ' ಎಂದು ಇಶಾ ಸರ್ಬಿಯಾದಿಂದ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಇಶಾ ಅವರು ಈ ವರ್ಷ ಚೆಸ್ ಆಟಗಾರ ಐಎಂ ಶರಣ್ ರಾವ್ ಅವರನ್ನು ವಿವಾಹವಾಗಿದ್ದಾರೆ. ಮಂಗಳೂರಿನಲ್ಲಿರುವ ಶರಣ್ ಅವರ ರಾವ್ ಚೆಸ್ ಅಕಾಡೆಮಿಯಲ್ಲಿ ಇಶಾ ಮುಖ್ಯ ಕೋಚ್ ಆಗಿದ್ದಾರೆ.

'ಆಟಕ್ಕಿಂತಲೂ ಈಗ ತರಬೇತಿ ನೀಡುವತ್ತ ಹೆಚ್ಚಿನ ಗಮನ ನೀಡುತ್ತಿದ್ದೇನೆ' ಎಂದೂ ಅವರು ಹೇಳಿದರು.

ಏಷ್ಯನ್ ಆರ್ಚರಿ: ಅಂಕಿತಾ, ಧೀರಜ್‌ಗೆ ಚಿನ್ನದ ಪದಕ

ಧೀರಜ್ ಬೊಮ್ಮದೇವರ

ಢಾಕಾ (ಪಿಟಿಐ): ಭಾರತದ ಬಿಲ್ಗಾರರಾದ ಅಂಕಿತಾ ಭಕತ್ ಮತ್ತು ಧೀರಜ್ ಬೊಮ್ಮದೇವರ ಅವರು ಶುಕ್ರವಾರ ನಡೆದ ಏಷ್ಯನ್ ಆರ್ಚರಿ ಚಾಂಪಿಯನ್‌ಷಿಪ್‌ನ ರಿಕರ್ವ್ ವೈಯಕ್ತಿಕ ಸ್ಪರ್ಧೆಯಲ್ಲಿ ಚಿನ್ನದ ಸಾಧನೆ ಮಾಡಿದರು.

27 ವರ್ಷದ ಅಂಕಿತಾ ಮಹಿಳೆಯರ ವಿಭಾಗದ ಫೈನಲ್‌ನಲ್ಲಿ 7–3 ಅಂತರದಿಂದ ಪ್ಯಾರಿಸ್ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತೆ, ದಕ್ಷಿಣ ಕೊರಿಯಾದ ನಾಮ್ ಸುಹಿಯೋನ್ ಅವರಿಗೆ ಆಘಾತ ನೀಡಿದರು. ಪುರುಷರ ವಿಭಾಗದಲ್ಲಿ ಪ್ರಶಸ್ತಿ ಸುತ್ತಿನಲ್ಲಿ ಧೀರಜ್ 6–2ರಿಂದ ಸ್ವದೇಶದ ರಾಹುಲ್ ಅವರನ್ನು ಮಣಿಸಿದರು.

ಅಂಕಿತಾ ಸೆಮಿಫೈನಲ್‌ನಲ್ಲಿ ಸ್ವದೇಶದ ಅನುಭವಿ ದೀಪಿಕಾ ಅವರನ್ನು ಸೋಲಿಸಿದ್ದರು. 5–5 ಅಂಕಗಳಿಂದ ಸಮಬಲ ಸಾಧಿಸಿದ ಬಳಿಕ ಶೂಟ್ ಆಫ್‌ನಲ್ಲೂ ಪಾಯಿಂಟ್ಸ್ (9) ಸಮನಾಯಿತು. ಆದರೆ, ಅಂಕಿತಾ ಅವರ ಬಾಣವು ಹೆಚ್ಚು ನಿಖರವಾಗಿದ್ದರಿಂದ ಅವರು ಫೈನಲ್‌ಗೆ ಮುನ್ನಡೆದರು.

ಐದು ಬಾರಿಯ ಒಲಿಂಪಿಯನ್ ದೀಪಿಕಾ ಕುಮಾರಿ ಕಂಚಿನ ಪದಕ ಗೆದ್ದುಕೊಂಡರು. ಕಂಚಿನ ಪ್ಲೇ ಆಫ್ ಸುತ್ತಿನಲ್ಲಿ ಸ್ವದೇಶದ ಸಂಗೀತಾ ಅವರನ್ನು ಶೂಟ್ ಆಫ್‌ನಲ್ಲಿ (6–5) ಮಣಿಸಿದರು.

ಸೆಮಿಫೈನಲ್‌ನಲ್ಲಿ ಮೊದಲ ಸೆಟ್ ಕಳೆದುಕೊಂಡಿದ್ದ ಧೀರಜ್ ನಂತರ ಲಯ ಕಂಡುಕೊಂಡು 6–2ರಿಂದ ಕೊರಿಯಾದ ಅನುಭವಿ ಆಟಗಾರ ಜಾಂಗ್ ಚೆಹ್ವಾನ್ ಅವರನ್ನು ಸೋಲಿಸಿದ್ದರು.

ಭಾರತವು ಆರು ಚಿನ್ನ, ಮೂರು ಬೆಳ್ಳಿ ಮತ್ತು ಒಂದು ಕಂಚು ಸೇರಿ ಒಟ್ಟು 10 ಪದಕಗಳೊಂದಿಗೆ ಅಭಿಯಾನವನ್ನು ಮುಗಿಸಿತು.

ಪ್ರಜಾವಾಣಿ ಶನಿವಾರ • ನವೆಂಬರ್ 15, 2025

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

REAL ESTATE SELLING

Sites

Anjanapura

BDA RESIDENTIAL and Commercial Anjanapura BDA, Narayananagara, BCMC, Judicial, Vakil Garden, Kanakapura Road 30x40, 40x60, 50x80. 9916592400

ANJANAPURA BDA Site For Sale, 1ST Block 20x30, W/F Price 65 Lakhs Negotioble 9740150364/8884707773

Banashankari

BDA RESIDENTIAL and Prime Commercial Banashankari 6th Stage, Banashankari 5th Stage, Uttarahalli, Rajarajeshwarinagara, 30x40, 40x60, 50x80. 9916592400

BANASHANKARI 6TH Stage BDA Site's 50x80 NF 7th Block, 40x60 3rd Block EF, 30x40 2nd Block: 9845146725/ 9741466369

Electronic City

KHB Sites Surya City Near Jigani
STRRA & BMRDA APPROVED PLOTS
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

Jayanagar

JAYANAGAR, RR-NAGAR Commercial & Residential Property Sal 40x60, 45x90 North East West South: 9845075792/ 9880600899

PRIME COMMERCIAL Buildings & Sites- High Rental Returns Jayanagar, JP Nagar, HSR, Koramangala, Yelahanka, RMV, Banashankari, RR Nagar, Kanakapura Road & Central Bangalore. 9916592400

SITE FOR SALE

Individual E-Khata residential sites for sale in Bidadi — just 10 minutes from Challaghatta Metro Station and only 50 meters from the Highway. Ready for registration and construction. **PH 9606342643**

J P Nagar

"J.P.NAGAR, SRINIDHI LAYOUT 30x51 Residential Site, East Facing, BBMP A Katha, Full White. Direct Owner: 9845249799/ 9845088449"

Kengeri

DIRECT OWNER 30x40 BDA W/F Corner Site Sale, Kengeri Satellite Town,near Surana College. 9742681666/ 9886634578

Kanakapura Road

BCC LAYOUT 30X50,G+3 House 4.60Cr,50x60, Price 14000/-BSK 6th Stage,3rd Block 40x60, Price 14000/- 8904210201

Kempegowda Layout

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

KEMPEGOWDA LAYOUT 6th Block, C-Sector, 30x40 West Facing, Site No. 688 Price 9000/- Negotiable: 9845793121

Multiple Locations

SELLING/ BUYING HOUSES, SITES:30x40 40x60 FLATS, COMMERCIAL, Jayanagar, JP.Nagar BASAVANAGUDI Kanakapura Road, BANASHANKARI, BTM HSR. CALL 7760019494

Nagarabhavi

"NAGARBHAVI/ VISHVESHWARAIAH / KEMPEGOWDA LAYOUT 30x40,40x60 OR ANY MEASUREMENT SITES REQUIRED`& AVAILABLE PREFERABLY OWNER/`ALLOTTE SITES. 9845268611"

Rajarajeshwari Nagar

"IDEAL HOMES 74x100 Measurement East- South Corner Site for Sale Owner Meeting. Contact: 'Kiran'- 9901057383"

INTERNATIONAL SCHOOL

WANTS TO PURCHASE
LAND 10/15 ACRES
Between KANNUR JUNCTION / BAGLUR.
Immediate Settlement.
OWNERS CONTACT
IRSHADS PROPERTY MATTERS
98451-01260/ 98458-41310

CONSTRUCTION MATERIALS FOR SALE

Large quantity of used construction materials in good conditions. Such as Shuttering Plate, Jacks, Spans, Cuplock scafolding & Machinery such as 1Bag, 2, 3 & 4 Bag Mixers, Mini Batching plant and D.G.Sets of Capacity 40 KVA, 82.50 KVA & 160 KVA. Tractor Mounted 16 KVA D.G. set, passenger hoist 40 mts height for sale.
Contact: 6360605636 / 8431164733

IDEAL HOMES 43x45, 43x47 with old house, 46x60 for sale vasavi Estates 9880127399

Vishweshwariah Layout

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

BDA SITE SALE VISHVESHWARAIAH LAYOUT 6TH BLOCK 30X40 WEST NEAR OXFORD COLLEGE 40X60 NEAR KLE COLLEGE: 8892901567

SMV LAYOUT 7th 30x40, Opposite RTO South 2nd Block West. 1674, Near 100ft Road: 9902956166

BDA SITE for Sale 30x40, South face, Vishweshwaraiah layout 4th Block near Ring Road. Price 15.000/- sqft. Contact Owner: 9731076255

Mangaluru

COMMERCIAL SPACES Available for Lease/ Sale in Mangalore. All sizes Available from 400sqft. to 10,000sqft. and above. Call: 9845607727

Hebbal

HEBBAL 30X35 House Sale, Ground 1 BHK, Two Carparking, 1st 2 BHK, 2nd 2 BHK 9845623970/ 9739400838

Mysore

MYSORE BDA (MUDA) Site For Sale, Dattagalli 3rd Stage 823 Sqft Site No.55 East- South Corner: 9845729728

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

House

Banashankari

BANASHANKARI 2ND Stage Sale 35x55 Beautiful 4 BHK House Near Devagiri Temple Rs.9cr Negotiable Shivu: 9880004149.

Jayanagar

SALE 1420SQFT site with excellent condition 22sqr 4BHK Duplex Bunglow in Byrasandra (Jayanagar 1st Block_East) 3.60_crores Negotiable. 9845397832 Brokers Excuse.

Kanakapura Road

SITE SALE 50X60 A-Katha Yalachenalli Near Metro Station Kanakapura Main Road Per Sqft 13500/-: 9342197377

Nagarabhavi

NAGARABHAVI RENT Independent Triplex 4BHK Luxurious House Lift. 4-Car-Parks Borewell Master Bedrooms 1.1 Lakhs: 9036207777

RHCS LAYOUT A BLOCK, NAGARABHAVI 30x50 NEW DUPLEX HOUSE 5 BHK SALE, NORTH DOOR. 9980409820.

R T Nagar

R.T.NAGAR GANESHA BLOCK Sale Residential Building 4 Floors 2 BHK Lift, Borewell, Granite Flooring: 9481801053

Vidyaranyapura

4-STORY HOUSE FOR SALE in Ramchandrapura, Jalahalli (Post) Bangalore 13. Size: 20X30. Built area 2700 Sqft: 1,75,00,000/- 9880450523.

Konanakunte

NORTH EAST CORNER DUPLEX HOUSE For SALE in KONANAKUNTE 40x28 SITE CLOSE TO METRO STATION. 7829185866.

Flat

Jayanagar

JAYANAGAR, BASAVANGUDI, Banashankari, Bannerghatta Road 3, 4 & 5 BHK Flats for Sale: 9845075792/ 9880600899

JAYANAGAR 2ND Block, Brand New 3BHK Apartment For Sale, 4th Floor, 2480 SqFt: 9845075792

J P Nagar

Flat for Sale
2/3 Bedroom
in Majestic Fortune Apartment
JP Nagar 7th Phase
Majestic Fortune Apartment, J.P Nagar 7th Phase Ready to move. Contact: 90191 63704 / 93412 28681

Kanakapura Road

INVESTMENT PROPERTIES AVAILABLE FOR SALE NEAR METRO STATIONS, KANAKAPURA ROAD. SARAKKI HOMES: 9663676464

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

R T Nagar

2 BHK Semi-furnished Flat near White House very good location, First Floor for Sale. Price 65 Lakhs. Ph:- 9845575731.

Commercial Building

Domlur

COMMERCIAL BUILDING for sale with rent 11 lakhs ,site 5000 sft BUA 17000 sft Agents excuse 9845440436

Commerical

Malleshwaram

SALE 1900SQFT Showroom Space Basement, Excellent visibility, Clear titles 3.60 Crores, 6th Cross Malleshwaram. 9844111183.

Multiple Locations

COMMERCIAL TENANTED Properties For Sale Indiranagar Kammanahalli Whitefield CBD Price 1Cr to 10Cr Call "FALCON" 9845447868/ 9845061345

Seshadripuram

COMMERCIAL SPACE- For SALE Embassy Center, No. 213, 2nd Floor, Kumara Park East, Bengaluru- 560001 Area: 515 Sqft Prime Location Ideal for Office Contact: 6366514777/ 9448684033

Farm House/ Land/ Resorts

Dobaspet

MANAGED FARM Land- For SALE Whispering Hills, Dobaspet, Plot No. 17 Total Area: 6,578 Sqft Peaceful Environment Perfect for Weekend Home Contact: 6366514777/ 9448684033

Magadi Road

MAGADI MAIN ROAD AND DODDAHALADAMARA MAIN ROAD FACING 20-GUNTA CORNER LAND SALE 3.25 CRORE: 9342552428

REAL ESTATE BUYING

Industrial & Factory

Whitefield

REQUIRE INDUSTRIAL Land/ Outright Purchase -in Devasandra/ Whitefield/ Mahadevapura/ Doddanakundi /1to3 acres/ MNC Client. Blumefield Industrial Realty and Projects Pvt Ltd 9900570439

Sites

Multiple Locations

ADELIE INTERNATIONAL PRESCHOOL is expanding across Bangalore! We are looking for bungalows independent houses villas or commercial buildings with built-up area of 2500 sft to 10000 sft, ideally suited for preschool setup– preferably in good location on main road with garden space and open area. Preferred Locations: RR Nagar Yelahanka Bannerghatta Road Kanakapura Road North Bangalore HBR layout HSR Layout Sarjapura Indiranagar Koramangala. Additionally, Adelie International Preschool is open to taking over existing preschools. Property owners interested in offering their premises on long lease or institutions looking for takeover opportunity may please contact: info@eduweft.com Sumanth Narayan: 9606353036

Nagarabhavi

WANTED BDA SITE 30x40, 40x60, 50x80 NAGARABHAVI RHCS LAYOUT, MPM, VISHWESWARAIAH LAYOUT, KEMPEGOWDA Layout. 9008418631.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

Bareshell
5000 Sqft
Office Space
For Rent
Available in 2nd Floor, in Majestic Terraces Building in Electronic City Phase-1. Contact: 98440 23523

Flats

2 BHK
North Facing
Fully Furnished
Flat for Rent
in Majestic Fortune Apartment
2 BHK North Facing Fully Furnished Flat for Rent in Majestic Fortune Apartment Contact: 93412 28681

BUSINESS

Business Offers

Finance

MSME LOANS Available for any startups companies And Existing Running companies Available for Manufacturing Units, Shops, Establishments Etc Contact- 7204995189

General

OFFERING SOCIAL Media Marketing Services to Boost your brand in Digital / Social Media. 8898924110

PERSONAL

Change of Name

WE RAJESH B & Poornima K, No.221, Bindu Amulya Apartments, Muddinapalya Main Road, Anjana Nagar, Bangalore – 560 091 here by declare that our son name has to be change Evansh Raj R in his birth certificate DOB 03/02/2020 Registration no 803162/B/B/2020/023004. Our son's correct name is UDAYAA PARRTHA Vide affidavit dated 18/10/2025 Sworn before notary B.Chaitra

CHANGE OF NAME
I, **NYIMA BHUTTI P,** residing at House No. S-3, Tibetan Settlement, Kollegal Taluk, Odeyarapalya, Huttur, Chamarajnagar-571457, Karnataka, India, have changed my name to **NYIMA BHUTI** vide affidavit dated 12.11.2025 before notary B.M. Chandrashekar. Bengaluru. Henceforth I shall be called **NYIMA BHUTI** only

WE RAJESH B & Poornima K, No.221, Bindu Amulya Apartments, Muddinapalya Main Road, Anjana Nagar, Bangalore – 560 091 here by declare that our son name has to be change Ekansh Raj R in his birth certificate DOB 03/02/2020 Registration no 803162/B/B/2020/023006. Our son's correct name is JISHNU TEJA Vide affidavit dated 18/10/2025 sworn before notary B.Chaitra

CHANGE OF NAME
I, **Naveena Subramanyam,** residing at # 216, 19th Cross, R.T. Nagar, 1st Block, Bengaluru-560032, have changed my name to **NAVEENA GANJUR SUBRAMANYAM** vide affidavit dated 13.11.2025 before notary Meera Hassan, Bengaluru.

CHANGE OF NAME
I, **Anuradha Ramachandran @ Anuradha Ramchandran,** residing at No.33, Lakshmi Vihara, 6th and 7th Cross, B K Residency, Doddakammanahalli, Gottigere, Bengaluru-560 083, declare that the above names pertain to me only & henceforth I shall be known as **ANURADHA RAMACHANDRAN** vide affidavit dated 13.11.2025 before notary Pushpavathi B.S, Bengaluru.

CHANGE OF NAME
I, **UMA DESHAPANDE,** residing at D-1105, Wing-2, KHB Platinum, Near Shirke Bus Stop, Kengeri Satellite Town, Bengaluru - 60, have changed my name to **SHUBHA S MELMURI** vide affidavit dated 12-11-2025 sworn before Notary Surekha V, Bengaluru. Henceforth I shall be called **SHUBHA S MELMURI** only.

ARUNAKUMARI PRAKSH, Naganayakanakote, Samethanahalli, Hosakote, Bengaluru-67, Have changed my name to R. ARUNAKUMARI. vide affidavit dated- 14/11/2025

CHANGE OF NAME
I, **Manzar Ahmed Khan,** residing at # C001, Nakshatra Apartment, Opposite Sidhartha PU College, 7th Cross, Lingarajpuram, Bengaluru - 560084, have changed my minor daughter's name from **AIRAH FARYAL KHAN** to **AMEERA KHAN** vide affidavit dated 14-11-2025 before notary L. Gopalakrishnan, Bengaluru.

GIREESHA YELIYUR VENKATESHAIAH #5-8-1, 1st Main, 7th Cross, Govindrajnagar, Vijaynagar, Bengaluru-40, Have changed my name to GIRISH Y.V. vide affidavit dated- 13/11/2025

CHANGE OF NAME
I, **Vani, Vani Ramachandran @ Vani Ramchandran,** residing at No.33, Lakshmi Vihara, 6th and 7th Cross, B K Residency, Doddakammanahalli, Gottigere, Bengaluru-560 083, declare that the above names pertain to me only & henceforth I shall be known as **VANI RAMACHANDRAN** vide affidavit dated 13.11.2025 before notary Pushpavathi B.S, Bengaluru.

PUBLIC NOTICE

ಸಾರ್ವಜನಿಕ ಅಧಿಸೂಚನೆ (PUBLIC NOTICE)

ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳ (KIADB) ಯವರು ಮೊದಲು **M/s. Dhariwal Industrial Pvt. Ltd.** (ಹಿಂದಿನ M/s. Dhariwal Industrial Limited) ಕಂಪನಿಗೆ ಕೆಳಕಂಡ ಕೈಗಾರಿಕಾ ಪ್ಲಾಟುಗಳನ್ನು ಹಂಚಿಕೆ ಮಾಡಿದ್ದರು. ನಂತರ, ಬಾಂಬೆ ಹೈಕೋರ್ಟ್‌ನ 28.08.2024 ರ ಆದೇಶದನ್ವಯ, Companies Act, 1956 ರ ಕಲಂಗಳು 391 ರಿಂದ 394 ಹಾಗೂ 100 ರಿಂದ 103ಗಳ ಅಡಿಯಲ್ಲಿ ಅನುಮೋದಿಸಲ್ಪಟ್ಟ ನಿರ್ವಹಣಾ ಯೋಜನೆಯ ಮೂಲಕ, Company Petition Nos. 301, 302, 303, 304, 305, 306, 191, 192, 193, 194, 195 &196 all of the year 2014. ಈ ಆಸ್ತಿಗಳನ್ನು ನಮ್ಮ ಕ್ಲೈಂಟ್‌ಗಳು M/s. R.M.D. Foods & Beverages (P) Ltd., S.No.210, 15ನೇ ಮಹಡಿ, "Manikchand Skyone", Final Plot No.72A, Pune – 411006 ಇವರಿಗೆ ಹಂಚಿಕೆ ಮಾಡಲಾಗಿದೆ.

ನಮ್ಮ ಕ್ಲೈಂಟ್‌ಗಳು M/s. R.M.D. Foods & Beverages (P) Ltd. ಅವರ ಪರವಾಗಿ ಈ ಮೂಲಕ ಕೆಳಗಿನ ಪ್ಲಾಟುಗಳಗೆ ಸಂಬಂಧಿಸಿದ ಮೂಲ ದಾಖಲೆಗಳು ಕಳೆದುಹೋಗಿವೆ. / ಕಾಣೆಯಾಗಿವೆ ಎಂದು ಸಾರ್ವಜನಿಕರಿಗೆ ತಿಳಸಲಾಗುತ್ತದೆ. ಹೆಚ್ಚಿನ ಹುಡುಕಾಟದ ಬಳಿಕವೂ ಅವು ಪತ್ತೆಯಾಗಿಲ್ಲ.

ಪ್ಲಾಟು ಸಂಖ್ಯೆ	ದಾಖಲೆಗಳ ವಿವರ	ದಿನಾಂಕ	KIADB ಡಾಕ್ಯುಮೆಂಟ್ ಸಂಖ್ಯೆ
34-A, B & C	1. ಸ್ವಾಧೀನ ಪ್ರಮಾಣಪತ್ರ 2. ಲೀಸ್–ಕಮ್–ಮಾರಾಟ ಒಪ್ಪಂದ 3. ಮಾರಾಟ ಡೀಡ್	09.04.2009, 07.09.2009, 16.11.2015	Doc. Nos. 3357/2009-10, 6440/2015-16
34-D	1. ಸ್ವಾಧೀನ ಪ್ರಮಾಣಪತ್ರ 2. ಲೀಸ್–ಕಮ್–ಮಾರಾಟ ಒಪ್ಪಂದ 3. ಮಾರಾಟ ಡೀಡ್	09.04.2009, 07.09.2009, 29.11.2014	Doc. Nos. 3355/2009-10, 7477/2014-15
34-E	1. ಸ್ವಾಧೀನ ಪ್ರಮಾಣಪತ್ರ 2. ಲೀಸ್–ಕಮ್–ಮಾರಾಟ ಒಪ್ಪಂದ 3. ಮಾರಾಟ ಡೀಡ್	09.04.2009, 07.09.2009, 16.10.2014	Doc. Nos. 3358/2009-10, 6019/2014-15
34-E1	1. ಸ್ವಾಧೀನ ಪ್ರಮಾಣಪತ್ರ 2. ಲೀಸ್–ಕಮ್–ಮಾರಾಟ ಒಪ್ಪಂದ	23.03.2011, 09.06.2011	Doc. No. 1269/2011-12,

ಯಾರು ಈ ಪ್ಲಾಟುಗಳ ಅಥವಾ ಮೇಲಿನ ದಾಖಲೆಗಳ ಕುರಿತು ಹಕ್ಕು, ಆಕ್ಷೇಪಣೆ ಅಥವಾ ಆಸಕ್ತಿ ಹೊಂದಿದ್ದರೆ, ಅವರು ಈ ಅಧಿಸೂಚನೆಯ ಪ್ರಕಟಣೆ ದಿನಾಂಕದಿಂದ 15 (ಹದಿನೈದು) ದಿನಗಳ ಒಳಗೆ ಲಿಖಿತ ಆಕ್ಷೇಪಣೆಗಳನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು. ಯಾವುದೇ ಆಕ್ಷೇಪಣೆ ಅಥವಾ ದಾವೆ ಲಭಿಸದಿದ್ದಲ್ಲಿ, ಯಾವುದೇ ಹಕ್ಕು ಅಸ್ತಿತ್ವದಲ್ಲಿಲ್ಲ ಎಂದು ಪರಿಗಣಿಸಿ KIADB ಅಥವಾ ಸಂಬಂಧಪಟ್ಟ ಅಧಿಕಾರಿಗಳಿಂದ ನಕಲಿ ದಾಖಲೆಗಳನ್ನು ಪಡೆಯುವ ಪ್ರಕ್ರಿಯೆ ಕೈಗೊಳ್ಳಲಾಗುತ್ತದೆ.

ದಾಖಲೆಗಳನ್ನು ಯಾರಾದರೂ ಪತ್ತೆಹಚ್ಚಿದರೆ ಅಥವಾ ತಮ್ಮ ವಶದಲ್ಲಿಟ್ಟುಕೊಂಡಿದ್ದರೆ, ಅವುಗಳನ್ನು ಹಿಂತಿರುಗಿಸಿದವರಿಗೆ ಸೂಕ್ತ ಬಹುಮಾನ ನೀಡಲಾಗುವುದು.

ಎಂ.ಆರ್. ನಾರಾಯಣ್ & ಕಂಪನಿ
ವಕೀಲರು,
ಸಂಖ್ಯೆ 768, 34ನೇ ಕ್ರಾಸ್, 9ನೇ ಮುಖ್ಯರಸ್ತೆ. 4ನೇ ಬ್ಲಾಕ್, ಜಯನಗರ, ಬೆಂಗಳೂರು ಪಿನ್–560 011
ಮೊ. 9448359935

DH Classifieds More value, more impact
ಪ್ರಜಾವಾಣಿ
PUBLIC NOTICE
www.dhclassifieds.com
BOOK NOW
BOOK YOUR PUBLIC NOTICE ADS IN DH ALL + PRAJAVANI BENGALURU CITY, ON ALL DAYS
@ 550/-* PER SQCM
*Conditions apply
For more details contact:
+91 9886213331 | +91 9845114560
+91 9731810277

DH ಪ್ರಜಾವಾಣಿ
https://dhclassifieds.com
Book your Ad in 4 Easy Steps --Select Category-- Book ad
1 Select Category 2 Publication & Date 3 Compose Your Ad 4 Payment

ಖರೀದಿಸಿ ಅಥವಾ ಮಾರಾಟ ಮಾಡಿ
ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಿಂದ ಕೇವಲ ನಾಲ್ಕೇ ಕ್ಲಿಕ್ ಗಳಲ್ಲಿ
ಸುಲಭವಾಗಿ ಖರೀದಿಸಿ, ಮಾರಾಟ ಮಾಡಿ ಅಥವಾ ಉದ್ಯೋಗ ನೇಮಕಾತಿ ಮಾಡಿಕೊಳ್ಳಿ! ಯಾವುದೇ ಸೇವೆ ಪಡೆಯಬೇಕೆ, ವಸ್ತು ಖರೀದಿಸಬೇಕೆ, ಆಸ್ತಿ ಮಾರಾಟ ಮಾಡಬೇಕೆ ಅಥವಾ ಸೂಕ್ತ ಅಭ್ಯರ್ಥಿಗಳೊಂದಿಗೆ ಸಂಪರ್ಕ ಸಾಧಿಸಬೇಕೆ?
ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ದಿನಪತ್ರಿಕೆಗಳಾದ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿಯಲ್ಲಿ ವರ್ಗೀಕೃತ ಜಾಹೀರಾತು ನೀಡುವ ಮೂಲಕ ಖರೀದಿದಾರರು, ಸೇವೆಗಳು ಅಥವಾ ಪ್ರತಿಭಾವಂತರೊಂದಿಗೆ ಸುಲಲಿತವಾಗಿ ಸಂಪರ್ಕ ಹೊಂದಿರಿ. ರಾಜ್ಯದಾದ್ಯಂತ ಸೂಕ್ತರಾದವರೊಂದಿಗೆ ಸಂಪರ್ಕ ಸಾಧಿಸಲು ಸಮರ್ಥ ವೇದಿಕೆ ಡೆಕ್ಕನ್ ಹೆರಾಲ್ಡ್ & ಪ್ರಜಾವಾಣಿ ವರ್ಗೀಕೃತ ಜಾಹೀರಾತು!
• ತಕ್ಷಣವೇ ಜಾಹೀರಾತು ಪ್ರಕಟಣೆ ಹಾಗೂ ಸರಾಗ ಬ್ರೌಸಿಂಗ್
• ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಖರೀದಿ ಹಾಗೂ ಮಾರಾಟ
• ಸರಳ, ಸುರಕ್ಷಿತ ಹಾಗೂ ಸುಗಮ ಪ್ರಕ್ರಿಯೆ
• ಕರ್ನಾಟಕದಾದ್ಯಂತ ಸೂಕ್ತರಾದವರನ್ನು ತಲುಪಿ
ಈಗ ಬುಕ್ ಮಾಡಿ. ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ ಹಾಗೂ ಅತ್ಯುತ್ತಮ ವ್ಯವಹಾರವನ್ನು ಇಂದೇ ನಿಮ್ಮದಾಗಿಸಿಕೊಳ್ಳಿ!

DH Classifieds More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-*
FOR 15 WORDS

www.dhclassifieds.com
BOOK NOW
*Conditions apply
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಡಿಎಸ್-ಮ್ಯಾಕ್ಸ್ ಪ್ರಾಪರ್ಟೀಸ್

JOY OF LIVING

DS MAX ®



LUXURIOUS 2, 3 & 4-BHK
APARTMENTS

Where every home is a perfect blend of Ambience, Aesthetic, and Assurance

₹60 L - 2 Cr*

Visit our website or talk to our advisors for the complete portfolio.

www.dsmaxproperties.com

+91 8880 758 758

2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1250/304/PR/251024/007179 WHITEFIELD (G+14) 10 MINS HOPEFARM METRO ₹ 72.34 L - 1.30 Cr*	PRM/KA/RERA/1250/301/PR/251024/007178 YELAHANKA (G+14) 5 MINS. RAJANUKUNTE ₹ 49.36 - 88.53 Lakhs*	PRM/KA/RERA/1251/310/PR/151223/006489 BANASHANKARI (G+3) OPP. NPS SCHOOL (3 & 4-BHK) ₹ 1.34 - 2.17 Cr*	PRM/KA/RERA/1251/310/PR/210324/006724 SILKBOARD (G+14) NEAR SINGASANDRA METRO ₹ 83.97 L - 1.31 Cr*	PRM/KA/RERA/1251/308/PR/160824/006972 HOSA ROAD METRO (G+4) NEAR ELECTRONIC CITY ₹ 67.92 L - 1.34 Cr*	PRM/KA/RERA/1251/308/PR/160824/006973 BANNERGHATTA RD (G+14) NEAR KOPPA GATE ₹ 56.64 - 82.18 Lakhs*
PRM/KA/RERA/1251/310/PR/150223/005721 MYSORE ROAD (G+14) NEAR CHALLAGHATTA METRO ₹ 61.76 - 87.47 Lakhs*	PRM/KA/RERA/1251/309/PR/060923/006244 TUMKUR ROAD (G+9) 10 MINS. MADAVARA METRO ₹ 80.30 L- 1.01 Cr*	PRM/KA/RERA/1251/308/PR/280222/004739 CHANDAPURA (G+3) 10 MINS. ELECTRONIC CITY ₹ 60.30 - 98.70 Lakhs*	PRM/KA/RERA/1251/308/PR/290122/004660 SARJAPURA (G+4) SARJAPUR - ATTIBELE RD ₹ 63.60 - 83.25 Lakhs*	PRM/KA/RERA/1250/304/PR/150224/006622 WHITEFIELD (G+14) ON SOUKYA ROAD ₹ 60.84 L - 1.06 Cr*	PRM/KA/RERA/1251/472/PR/250225/007524 AIRPORT ROAD (G+14) NR. PRESTIGE TECH CLOUD IT PARK ₹ 72.02 L - 1.21 Cr*

ಡಿಎಸ್ ಮ್ಯಾಕ್ಸ್

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

*T & C Apply

CREDAI BENGALURU

FACILITY MANAGEMENT SERVICES

We Manage and Maintain Your Apartment

9164 022 000

INTERIORS



We design and style your home.

9164 056 000

REFER A DS-MAX HOME

Refer a buyer to earn big

9164 043 000

REFER A LAND TO DS-MAX

Offer a Land, Get a Home.

8880 463 463

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331